ಪ್ರಬುದ್ಧ ಕರ್ಣಾಟಕ

ಸಂಪುಟ ೪೩—ಸಂಚಿಕೆ ೩

೧೬೯

ಪ್ಲವ ಸಂವತ್ಸರ

ಆಶ್ವಯುಜ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೧

50

ವಿಷಯಸೂಚಿಕೆ

(A

Prabuddha Karnataka Vol-43, Sl-3

BVP05118

BVP-2368

20/9/18

30/317

BVP05118

ಪ್ರಬುದ್ಧ ಕರ್ಣಾಟಕ

ಪ್ಲವ ಸಂವತ್ಸರ ೧೬೯ ಆಶ್ವಯುಜ ಸಂಚಿಕೆ

ಬರಿ ಕುವೆಂಪು

ಅಥವಾ

ಹೆಸರಿಲ್ಲದ ತಂಪು

ದೂರ ದೂರ ದೂರ
ಮನುಜರಿಂದ ದೂರ
ಕಾಡು ಮಲೆಯ ನೆತ್ತಿಗೇರ
ಬಾರ, ಮನವೆ, ಬಾರ !

ಕರುಬರಿರುವ ಊರ
ತೊರೆದು ದೂರ ದೂರ
ಕಾಡೊಳ್ಳಿತು ಬಾರ,
ಓ ಮನವೆ, ಬಾರ !

ಉಲಿವ ಪಕ್ಷಿ ಸಂಗ ;
ಝೋಂಕರಿಸುವ ಭೃಂಗ ;
ಅಧಿಕಾರದ ಕಾಟ
ಸೋಂಕದಮೃತದೂಟ ! . . . ದೂರ . . .

ಅಕ್ಷಯ ವಸ್ತ್ರ

(ಕಳೆದ ಸಂಚಿಕೆಯಿಂದ ಮುಂದುವರಿದುದು)

೩

ತೆಲುಗು ಕವಿ ನನ್ನಯ್ಯನ ಕಾಲದಿಂದ ಈಚೆಗೆ, ತಮಿಳು ಹಾಗೂ ಕನ್ನಡ ಭಾರತದಲ್ಲಿ ಕಂಡುಬರುವ, ವಸ್ತ್ರಾಪಹರಣ ಪ್ರಸಂಗದಲ್ಲಿ ಶ್ರೀ ಕೃಷ್ಣನು ಪಾಂಚಾಲಿಗೆ ಅಕ್ಷಯವಸ್ತ್ರವನ್ನು ಕರುಣಿಸಿದ ವಿಷಯ, ಬೇರೆ ಬೇರೆಯ ರೂಪಗಳನ್ನು ತಾಳಿಕೊಂಡು ಯಾವಾಗ ಮೂಲ ಭಾರತವನ್ನು ಸೇರಿಕೊಂಡಿತೋ ಹೇಳಲು ಬಾರದು. ತಮಿಳು ಹಾಗೂ ಕನ್ನಡ ಭಾರತದಲ್ಲಿರುವ ಕೃಷ್ಣಸ್ತುತಿಯು ಮತ್ತು ಅಕ್ಷಯವಸ್ತ್ರದ ಪ್ರಸಂಗ ಮೊದಮೊದಲು ಆಯಾ ಕವಿಗಳ ಸ್ವಂತ ಸೃಷ್ಟಿಯೇ ಆಗಿದ್ದು, ಮೂಲ ಭಾರತದ ಪ್ರಕ್ಷೇಪಗಳಿಗೆ ಸ್ಫೂರ್ತಿಯಾಯಿತೋ, ಅಥವಾ ಇವಕ್ಕೂ ಮೊದಲೇ ಮೂಲಭಾರತದಲ್ಲಿ ಪ್ರಕ್ಷಿಪ್ತವಾದ ಭಾಗಗಳಿಂದ ಈ ಕವಿಗಳು ಪ್ರಭಾವಿತರಾದರೋ, ಇಲ್ಲವೆ ಈ ಎಲ್ಲದಕ್ಕೂ ಆಕರವಾದ, ಸಹೃದಯ ಸೃಷ್ಟಿಯಾದ ಹಲವು ಕತೆಗಳೇನಾದರೂ ಹುಟ್ಟಿಕೊಂಡು ತಮ್ಮ ಪ್ರಭಾವವನ್ನು ಬೀರಿದುವೋ ಹೇಳುವುದು ಕಷ್ಟ. ಆದರೆ ಈ ಪ್ರಕ್ಷಿಪ್ತಗಳನ್ನು ನಿವಾರಿಸಿ, ವಸ್ತ್ರಾಪಹರಣ ಪ್ರಸಂಗದ ಮೂಲಪಾಠ ವಾಸ್ತವವಾಗಿ ಇಷ್ಟೇ ಇರಬಹುದೆಂದು, ಪರಿಷ್ಕರಿಸಿ ಪ್ರಕಟಿಸಿರುವ ಭಾಂಡಾರ್ಕರ್ ಪ್ರಾಚ್ಯ ಸಂಶೋಧನ ಸಂಸ್ಥೆಯ ಪಾಠ ಹೀಗಿದೆ :

ತತೋ ದುಃಶಾಸನೋ ರಾಜನ್ ದ್ರೌಪದ್ಯಾ ವಸನಂ ಬಲಾತ್
ಸಭಾಮಧ್ಯೇ ಸಮಾಕ್ಷಿಪ್ಯ ವ್ಯಪಕ್ರಷ್ಟುಂ ಪ್ರಚಕ್ರಮೇ ೨–೬೧–೪೦

ಆಕೃಷ್ಯಮಾಣೇ ವಸನೇ ದ್ರೌಪದ್ಯಾಸ್ತು ವಿಶಾಂ ಪತೇ
ತದ್ರೂಪಮಪರಂ ವಸ್ತ್ರಂ ಪ್ರಾದುರಾಸೀತ್ ಅನೇಕಶಃ ೨–೬೧–೪೧

ತತೋ ಹಲಹಲಾಶಬ್ದ ಸ್ತತ್ರಾಸೀತ್ ಘೋರನಿಸ್ವನಃ
ತದದ್ಭುತತಮಂ ಲೋಕೇ ವೀಕ್ಷ್ಯ ಸರ್ವ ಮಹೀಕ್ಷಿತಾಮ್ ೨–೬೧-೪೨

"ಅನಂತರ ದುಶ್ಶಾಸನನು ಸಭಾಮಧ್ಯಕ್ಕೆ ದ್ರೌಪದಿಯನ್ನೆಳೆತಂದು ಬಲಾತ್ಕಾರವಾಗಿ ಅವಳ ಸೀರೆಯನ್ನು ಸೆಳೆಯಲು ಪ್ರಾರಂಭಿಸಿದನು. ಹಾಗೆ ಅವಳ ವಸ್ತ್ರವನ್ನು ಅವನು ಸೆಳೆದಂತೆಲ್ಲಾ ಅದೇ ಪ್ರಕಾರವಾದ ವಸ್ತ್ರಗಳು ಅನೇಕಾನೇಕವಾಗಿ ಬಂದುವು. ಆಗ 'ಅದ್ಭುತತಮ'ವಾದ ಆ ದೃಶ್ಯವನ್ನು ನೋಡಿ ಸರ್ವಮಹೀಪಾಲರಲ್ಲಿ ಕೋಲಾಹಲ ಉಂಟಾಯಿತು.''

ಇಷ್ಟೊಂದು ಸಂಕ್ಷಿಪ್ತವಾಗಿ, ಸಶಕ್ತವಾಗಿ ಈ 'ಅದ್ಭುತತಮ'ವಾದ ಪ್ರಸಂಗ ಚಿತ್ರಿತವಾಗಿದೆ. ಆದರೆ ದ್ರೌಪದಿಯ ವಸ್ತ್ರ ಹೀಗೆ ಅಕ್ಷಯವಾದ ಅದ್ಭುತಕ್ಕೆ

ದೈವೀಕಾರಣವೊಂದನ್ನು ಸ್ಥಾಪಿಸುವ ಸಲುವಾಗಿ, ದ್ರೌಪದಿ ಶ್ರೀ ಕೃಷ್ಣನನ್ನು ಕುರಿತು ಪ್ರಾರ್ಥಿಸಿದಂತೆಯೂ, ಆತ ಅವಳಿಗೆ ಅಕ್ಷಯವಸ್ತ್ರದಿಂದ ಕೃಪೆಮಾಡಿ ದಂತೆಯೂ, ಎಷ್ಟೋ ಪ್ರಕ್ಷೇಪ ಪಾಠಗಳು ದೊರೆತಿವೆ. ಸಂಶೋಧನ ಸಮಿತಿಯವರು ಆ ಪಾಠಾಂತರಗಳನ್ನೆಲ್ಲಾ ಅಡಿಟಿಪ್ಪಣಿಯಾಗಿ ಕೊಟ್ಟಿದ್ದಾರೆ. ಬಹುಮಟ್ಟಿಗೆ ದಕ್ಷಿಣದ ಪ್ರತಿಗಳಿಂದ ದೊರಕಿರುವ ಈ ಪ್ರಕ್ಷೇಪ ಭಾಗಗಳು, ವಸ್ತುವಿನಲ್ಲಿ ಏಕರೂಪತೆಯನ್ನು ಹೊಂದಿದ್ದರೂ, ನಿರೂಪಣೆಯಲ್ಲಿ ಬೇರೆ ಬೇರೆಯಾಗಿರುವುದರಿಂದ, ಒಂದರಂತೆ ಮತ್ತೊಂದು ಇಲ್ಲದಿರುವುದರಿಂದ ಇವು ಬೇರೆ ಬೇರೆಯ ಕಾಲದಲ್ಲಿ ಬೇರೆ ಬೇರೆಯವರುಗಳಿಂದ ರಚಿತವಾಗಿ ಪ್ರಕ್ಷಿಪ್ತವಾದುವು ಎನ್ನುವ ವಿಷಯ ಖಚಿತವಾಗುತ್ತದೆ. ಈ ಒಂದು ಪ್ರಸಂಗವನ್ನು ಕುರಿತು ಪ್ರಕ್ಷೇಪಕಾರರ ಬುದ್ಧಿ ಎಷ್ಟು ವೈವಿಧ್ಯಮಯವಾಗಿ ಕೆಲಸಮಾಡಿದೆ ಎನ್ನುವುದು ತುಂಬ ಸ್ವಾರಸ್ಯವಾದ ವಿಚಾರ.

ಈ ಪ್ರಕ್ಷೇಪಗಳಲ್ಲಿ ಪ್ರಧಾನವಾದ ಅಂಶ, ಕೃಷ್ಣನನ್ನು ಕುರಿತು ದ್ರೌಪದಿ ಮಾಡಿದ ಪ್ರಾರ್ಥನೆ. ಅವುಗಳೂ ಕೂಡ ಒಂದರಂತೆ ಮತ್ತೊಂದಿಲ್ಲ. ಯಾವಾಗ ದುಶ್ಶಾಸನ ದ್ರೌಪದಿಯ ಸೀರೆಗೆ ಕೈಹಾಕಿ ಸೆಳೆಯಲು ಮೊದಲುಮಾಡಿದನೋ, ಆಗಲೇ ಆ ಸುಸಂದರ್ಭದಲ್ಲೇ ಪ್ರಕ್ಷೇಪಕಾರರಿಗೆ ದ್ರೌಪದಿಯ ಬಾಯಿಂದ ಶ್ರೀಕೃಷ್ಣನ ಪ್ರಾರ್ಥನೆಯನ್ನು ಮಾಡಿಸಲು ಅವಕಾಶ ದೊರೆತಂತಾಯಿತು. ಯಾವಾಗ "ತತೋ ದುಃಶಾಸನೋ ರಾಜನ್ ದ್ರೌಪದ್ಯಾವಸನಂ ಬಲಾತ್ । ಸಭಾಮಧ್ಯೇ ಸಮಾಕ್ಷಿಪ್ಯ ವ್ಯಪಕ್ರಷ್ಟುಂ ಪ್ರಚಕ್ರಮೇ । "—ಎಂಬ ಮಾತು ಮುಗಿಯಿತೋ, ಅಲ್ಲಿಯೇ ಪ್ರಕ್ಷೇಪಕಾರರಿಂದ ದ್ರೌಪದಿಯ ಪ್ರಾರ್ಥನೆ ಮೊದಲಾಯಿತು—

ಆಕೃಷ್ಯಮಾಣೇ ವಸನೇ ದ್ರೌಪದ್ಯಾ ಚಿಂತಿತೋ ಹರಿಃ

ಎಂಬ ಪೀಠಿಕೆಯೊಂದಿಗೆ—

೫೪೩ : ಗೋವಿಂದ ದ್ವಾರಕಾವಾಸಿನ್ ಕೃಷ್ಣ ಗೋಪೀ ಜನಪ್ರಿಯ
ಕೌರವೈಃ ಪರಿಭೂತಾಂ ಮಾಂ ಕಿಂ ನ ಜಾನಾಸಿ ಕೇಶವ
ಹೇ ನಾಥ ಹೇ ರಮಾನಾಥ ವ್ರಜನಾಥಾರ್ತಿನಾಶನ
ಕೌರವಾರ್ಣವ ಮಗ್ನಾಂ ಮಾಂ ಉದ್ಧರಸ್ವ ಜನಾರ್ದನ
ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಭಾವನ
ಪ್ರಪನ್ನಾಂ ಪಾಹಿ ಗೋವಿಂದ ಕುರುಮಧ್ಯೇಽವಸೀದತೀಮ್
ಇತ್ಯನು ಸ್ಮೃತ್ಯ ಕೃಷ್ಣಂ ಸಾ ಹರಿಂ ತ್ರಿಭುವನೇಶ್ವರಂ
ಪ್ರಾರುದತ್ ದುಃಖಿತಾ ರಾಜನ್ ಮುಖಮಾಚ್ಛಾದ್ಯ ಭಾಮಿನೀ

ಹೀಗೆಂದು ದುಃಖಿತೆಯಾದ ದ್ರೌಪದಿಯ ಪ್ರಾರ್ಥನೆ ಹರಿದಿದೆ. ಇಂತಹ ಹಲವು

ಪ್ರಾರ್ಥನೆಯ ಪಾಠಗಳ ಪಲ್ಲವಿ ಬೇರೆ ಬೇರೆಯ ಸ್ವರಗಳಿಂದ ಇದೇ ಆಗಿದೆ.[1] ಯಾವಾಗ ಮುಖವನ್ನು ಮುಚ್ಚಿಕೊಂಡು ಭಾಮಿನಿ ಹೀಗೆ ಪ್ರಾರ್ಥಿಸಿದಳೋ ಆಗ—

೫೪೩ : ಯಾಜ್ಞಸೇನ್ಯಾ ವಚಃ ಶ್ರುತ್ವಾ ಕೃಷ್ಣೋ ಗಹ್ವರಿತೋಽಭವತ್
ತ್ಯಕ್ತ್ವಾ ಶಯ್ಯಾಸನಂ ಪದ್ಭ್ಯಾಂ ಕೃಪಾಲುಃ ಕೃಪಯಾಭ್ಯಗಾತ್

"ಯಾಜ್ಞಸೇನಿಯ ಈ ಮಾತನ್ನು ಕೇಳಿ ಕೃಷ್ಣನು ಕಳವಳಗೊಂಡವನಾಗಿ ಶಯ್ಯಾಸನವನ್ನು ಬಿಟ್ಟು ಎದ್ದು ಕೃಪಾಲುವು ದಯಮಾಡಿಸಿದನು." ಎಂದರೆ ಕೃಷ್ಣ ದ್ವಾರಕಾವತಿಯಲ್ಲಿ, ಮಲಗಿದ್ದವನೆದ್ದು, ದ್ರೌಪದಿಯಿದ್ದಲ್ಲಿಗೆ ನಡೆದು ಕೊಂಡು ಬರುವ ಕೃಪೆಮಾಡಿದನು. ಈ ಪಾಠದ ಪ್ರಕಾರ, ಕೃಷ್ಣನು ಕೌರವನ ಸಭೆಗೇ ಬಂದು ಅಲ್ಲಿ ಕೃಪೆಮಾಡಿದನೋ, ದ್ವಾರಕೆಯಲ್ಲಿದ್ದೇ ಕೃಪೆಮಾಡಿದನೋ.

---

[1] ಇನ್ನು ಹಲವು ಪಾಠಗಳು ಹೀಗಿವೆ :

೫೪೫ : ಸಾ ತತ್ಕಾಲೇ ತು ಗೋವಿಂದೇ ವಿನಿವೇಶಿತ ಮಾನಸಾ
ತ್ರಾಹಿ ಮಾಂ ಕೃಷ್ಣ ಕೃಷ್ಣೇತಿ ದುಃಖಾದೇತದುದಾಹೃತವಮ್

[ಆ ಕಾಲದಲ್ಲಿ ದ್ರೌಪದಿಯು ಗೋವಿಂದನಲ್ಲಿರಿಸಲ್ಪಟ್ಟ ಮನಸ್ಸುಳ್ಳವಳಾಗಿ ಕೃಷ್ಣ, ಕೃಷ್ಣ ಕಾಪಾಡು ಎಂದು ಹೇಳಿದಳು.]

೫೪೬ : ತ್ವಯಾ ಸಿಂಹೇನ ನಾಥೇನ ರಕ್ಷ್ಯಮಾಣಾಮನಾಥವತ್
ಚಕರ್ಷ ವಸನಂ ಪಾಪಃ ಕುರುಣಾಂ ಸನ್ನಿಧೌ ಮಮ

[ಸಿಂಹಸದೃಶನಾದ ನಾಥನಾದ ನಿನ್ನಿಂದ ರಕ್ಷಿಸಲ್ಪಡತಕ್ಕವಳಾದ ನನ್ನ ವಸ್ತ್ರವನ್ನು ಈ ಪಾಪಿಯು ಕುರುಗಳ ಸನ್ನಿಧಿಯಲ್ಲಿ ಸೆಳೆದನು].

೫೪೭ : ಆಕೃಷ್ಯಮಾಣೇ ವಸನೇ ವಿಲಲಾಪ ಸುದುಃಖಿತ
ಗೋವಿಂದೇತಿ ಸಮಾಭಾಷ್ಯ ಕೃಷ್ಣೇತಿಚ ಪುನಃ ಪುನಃ
ಶಂಖ ಚಕ್ರ ಗದಾಪಾಣೇ ದ್ವಾರಕಾನಿಲಯಾಚ್ಯುತ
ಗೋವಿಂದ ಪುಂಡರೀಕಾಕ್ಷ ರಕ್ಷ ಮಾಂ ಶರಣಾಗತಾಮ್

[ವಸನವನ್ನೆಳೆಯಲ್ಪಟ್ಟ ಆ ದ್ರೌಪದಿಯು ಸುದುಃಖಿತಳಾಗಿ ಶಂಖಚಕ್ರಗದಾಪಾಣಿಯೇ, ಗೋವಿಂದ, ಇತ್ಯಾದಿಯಾಗಿ ಪುನಃ ಪುನಃ ತನ್ನನ್ನು ಕಾಪಾಡಬೇಕೆಂದು ಪ್ರಾರ್ಥಿಸಿದಳು.]

೫೪೯ : ಮನಸಾ ಚಿಂತಯಾಮಾಸ ದೇವಂ ನಾರಾಯಣಂ ಪ್ರಭುಂ
ಆಪತ್ಸ್ವಭಯದಂ ಕೃಷ್ಣಂ ಲೋಕಾನಾಂ ಪ್ರಪಿತಾಮಹಂ

[ಆಪತ್ತಿನಲ್ಲಿ ಅಭಯವನ್ನು ನೀಡುವಂಥಾ ಲೋಕಕ್ಕೇ ಪ್ರಪಿತಾಮಹನಾದ ನಾರಾಯಣ ನನ್ನು ಮನಸ್ಸಿನಲ್ಲಿ ಚಿಂತಿಸಿದಳು.]

೫೫೦ : ಹಾ ಕೃಷ್ಣ ದ್ವಾರಕಾವಾಸಿನ್ ಕ್ವಾಸಿ ಯಾದವನಂದನ
ಇಮಾಂ ಅವಸ್ಥಾಂ ಸಂಪ್ರಾಪ್ತಾಮನಾಥಾಂ ಕಿಮುಪೇಕ್ಷ್ಯಸೇ

[ಹಾ ಕೃಷ್ಣ ದ್ವಾರಕಾವಾಸಿ, ಯದುನಂದನ ಎಲ್ಲಿರುವೆ. ನನಗೆ ಇಂಥಾ ಅವಸ್ಥೆ ಪ್ರಾಪ್ತ ವಾಯಿತು, ಏಕೆ ಉಪೇಕ್ಷಿಸುವೆ ?]

ತಿಳಿಯದು. ಒಂದು ವೇಳೆ ಬಂದರೂ ಅದೃಶ್ಯನಾಗಿ ಬಂದ ಎಂದು ಊಹಿಸ ಬಹುದು. “ಗಹ್ವರಿತೋ ಅಭವತ್” ಎಂದರೆ “ಅದೃಶ್ಯನಾಗಿ” ಎಂದೂ ಅರ್ಥ ವಾಗುತ್ತದೆ; ಕಳವಳಗೊಂಡವನಾಗಿ ಎಂದೂ ಅರ್ಥವಾಗುತ್ತದೆ. ಶ್ರೀಕೃಷ್ಣನು ಕೃಪೆಮಾಡಿದ ವಿಷಯವನ್ನು ಪ್ರಸ್ತಾಪಿಸುವ ಮತ್ತೊಂದು ಪಾಠದಲ್ಲಿ—

೫೪೪ : ಕೃಷ್ಣಂ ಚ ಜಿಷ್ಣುಂ ಚ ಹರಿಂ ನರಂ ಚ
ತ್ರಾಣಾಯ ವಿಕ್ರೋಶತಿ ಯಾಜ್ಞಸೇನೀ
ತತಸ್ತು ಧರ್ಮೋಽಂತರಿತೋ. ಮಹಾತ್ಮಾ
ಸಮಾವೃಣೋತ್ತಾಂ ವಿವಿಧ ವಸ್ತ್ರ ಪೂಗಃ

“ಹೇ ಕೃಷ್ಣ, ಹೇ ಜಿಷ್ಣು, ಹೇ ಹರಿ, ಹೇ ನರ, ಕಾಪಾಡಿ ಎಂದು ದ್ರೌಪದಿಯು ಕೂಗಿಕೊಳ್ಳಲಾಗಿ, ಧರ್ಮದೇವತೆಯಾದ ಆ ಮಹಾತ್ಮನು [ಕೃಷ್ಣನು] ಅದೃಶ್ಯ ನಾಗಿದ್ದುಕೊಂಡು ವಿವಿಧ ವಸ್ತ್ರ ಸಮೂಹಗಳಿಂದ ದ್ರೌಪದಿಯನ್ನು ಮುಚ್ಚಿದನು” ಎನ್ನುವಲ್ಲಿ ಶ್ರೀಕೃಷ್ಣನು ಅದೃಶ್ಯನಾಗಿದ್ದುಕೊಂಡೇ ಕೃಪೆಮಾಡಿದನು ಎಂಬ ವಿಷಯ ಸ್ಪಷ್ಟವಾಗಿದೆ.[1]

ವಿಷಯ ಇಲ್ಲಿಗೇ ನಿಲ್ಲಲಿಲ್ಲ; ಅದರಲ್ಲೂ ಪ್ರಶ್ನೆ-ಉಪಪ್ರಶ್ನೆಗಳನ್ನೆತ್ತಿಕೊಂಡು, ಉತ್ತರದ ಮೂಲಕ ರಂಜಿಸಲು ಹೊರಟಿದಾರೆ ಪ್ರಕ್ಷೇಪಕಾರರು. ದ್ರೌಪದಿ

---

1 ವಸ್ತ್ರಾಪಹರಣ ಪ್ರಸಂಗದಲ್ಲಿ, ದ್ರೌಪದಿಯ ಪ್ರಾರ್ಥನೆಯ ಹಾಗೂ ಕೃಷ್ಣನು ಕೃಪೆ ಮಾಡಿದ ಪ್ರಕ್ಷೇಪ ಭಾಗಗಳಿಗೂ, ಕನ್ನಡ ಭಾರತದಲ್ಲಿ ಈ ವಿಷಯವನ್ನು ಕುರಿತ ಭಾಗಗಳಿಗೂ ಯಾವ ಸಂಬಂಧವೂ ಇಲ್ಲದಿರುವುದು ಬಹು ಸ್ವಾರಸ್ಯವಾದ ಸಂಗತಿ. “ಕೃಷ್ಣನು ದ್ವಾರಕೆಯಲ್ಲಿ ಮಲಗಿದ್ದನು, ದ್ರೌಪದಿಯ ಕರೆಯನ್ನಾಲಿಸಿ ಕಳವಳದಿಂದ ದಯಮಾಡಿಸಿ ಕೃಪೆಮಾಡಿದನು” ಎಂದು ಸಂಸ್ಕೃತ ಭಾರತದ ಪ್ರಕ್ಷೇಪಗಳು ಹೇಳಿದರೆ, “ಕೃಷ್ಣನು ರುಕ್ಮಿಣಿ ಸತ್ಯಭಾಮೆಯ ರೊಂದಿಗೆ ಲೆತ್ತವಾಡುತ್ತಿದ್ದನೆಂದೂ, ದ್ರೌಪದಿಯ ಹುಯ್ಯಲನ್ನು ಕೇಳಿ, ಕುಳಿತಲ್ಲಿಂದಲೇ ಸೀರೆ ಅಕ್ಷಯವಾಗಲೆಂದನೆಂದೂ”—ಕುಮಾರವ್ಯಾಸನು ಹೇಳುತ್ತಾನೆ. ಈ ಎರಡೂ ಒಂದ ಕ್ಕೊಂದಕ್ಕೆ ಸಂಬಂಧವಿಲ್ಲದ ಪ್ರತ್ಯೇಕ ಕಥನಗಳು. ಬಹುಶಃ ಈ ಭಾಗ ಕುಮಾರವ್ಯಾಸನ ಸ್ವಂತ ಸೃಷ್ಟಿಯೇ ಇರಬೇಕೆನ್ನಲು ಅಡ್ಡಿಯಿಲ್ಲ. ಆದರೆ, ಮೂಲಭಾರತದ ಮತ್ತೊಂದು ಪಾಠದಲ್ಲಿ “ಧರ್ಮರೂಪಿಯಾದ ಆ ಮಹಾತ್ಮನಾದ ಕೃಷ್ಣನು, **ಅದೃಶ್ಯನಾಗಿದ್ದು**ಕೊಂಡು ದ್ರೌಪದಿ ಯನ್ನು ವಿವಿಧ ವಸ್ತ್ರಗಳಿಂದ ಮುಚ್ಚಿದನು[೫೪೪]” ಎಂಬ ಮಾತು, “ನೀಲಮೇಘಶ್ಯಾಮನು ದ್ರೌಪದಿಯ ಮನಸ್ಸಿನಲ್ಲೇ ಕಾಣಿಸಿಕೊಂಡು, **ಇತರರಿಗೆ ಅದೃಶ್ಯನಾಗಿ** ಕರುಣೆ ಮಾಡಿದನು”— ಎನ್ನುವ ವಿಲ್ಲಿಪುತ್ತೂರ್ ಅವರ ಭಾರತದ ಪಾಠದೊಂದಿಗೆ ಬಹುಮಟ್ಟಿಗೆ ಹೊಂದಿಕೊಳ್ಳುವುದು, ಗಮನಿಸಬೇಕಾದ ಸಂಗತಿ. ವಿಲ್ಲಿಪುತ್ತೂರ್ ಅವರಲ್ಲಿ, ಕೃಷ್ಣನು ಅದೃಶ್ಯನಾಗಿದ್ದುದು ಉಳಿದವರ ಪಾಲಿಗೆ; ದ್ರೌಪದಿಯ ಪಾಲಿಗಲ್ಲ ಎಂಬ ವಿವರಣೆಯಿದೆ. ಮೂಲಭಾರತದ ಪ್ರಕ್ಷಿಪ್ತ ಪಾಠದಿಂದ, ವಿಲ್ಲಿಪುತ್ತೂರ್ ಅವರ ಪಾಠ ಪ್ರಭಾವಿತವಾಯಿತೋ, ಅಥವಾ ವಿಲ್ಲಿಪುತ್ತೂರ್ ಅವರ ಪಾಠದಿಂದ, ಮೂಲದ ಪಾಠಗಳ ಮೇಲೆ ಪ್ರಭಾವ ಬಿತ್ತೋ ಸಾಧಿಸುವುದು ಕಷ್ಟ. ನಾರಣಪ್ಪನಲ್ಲಿ ಬರುವ ಕೃಷ್ಣಸ್ತುತಿಯೂ, ಹಾಗೂ ಕೃಷ್ಣನ ಕೃಪೆಯ ಪ್ರಸಂಗವೂ, ನಾರಣಪ್ಪನದೇ ಸ್ವಂತ ಸೃಷ್ಟಿ—ಎನ್ನಿಸುತ್ತದೆ.

ಕೃಷ್ಣನನ್ನೇ ಏಕೆ ಸ್ಮರಿಸಿರಬಹುದು ಎಂಬ ಪ್ರಶ್ನೆ ಯಾರೋ ಒಬ್ಬರಲ್ಲಿ ಎದ್ದಂತೆ ತೋರುತ್ತದೆ. ಸರಿ, ಉತ್ತರವೂ ಸಿದ್ಧವಾಯಿತು, ದ್ರೌಪದಿಯ ಬಾಯಲ್ಲೇ:—

೫೪೮ : ಜ್ಞಾತಂ ಮಯಾ ವಸಿಷ್ಠೇನ ಪುರಾಗೀತಂ ಮಹಾತ್ಮನಾ
ಮಹತ್ಯಾಪದಿ ಸಂಪ್ರಾಪ್ತೇ ಸ್ಮರ್ತವ್ಯೋ ಭಗವಾನ್ ಹರಿಃ

"ಮಹದಾಪತ್ಕಾಲದಲ್ಲಿ ಭಗವಾನ್ ಹರಿಯನ್ನು ಸ್ಮರಿಸತಕ್ಕದ್ದು ಎಂದು ಹಿಂದೆ ಮಹಾತ್ಮರಾದ ವಸಿಷ್ಠರು ಹೇಳಿದ್ದು ಸ್ಮರಣೆಗೆ ಬಂದಿತು"—ದ್ರೌಪದಿ ಹೀಗೆಂದು ಕೊಂಡು ಕೃಷ್ಣನನ್ನು ಸ್ಮರಿಸಿದಳೆಂದು ಪ್ರಕ್ಷೇಪಕಾರರ ಭಾವನೆ ಇರಬೇಕು! ಹಾಗಿದ್ದರೆ ಇದೆಷ್ಟು ಕೃತಕ ಎನ್ನುವುದು ಮೇಲುನೋಟಕ್ಕೇ ಕಾಣಿಸಿಕೊಳ್ಳುತ್ತದೆ. ಅಷ್ಟೇ ಅಲ್ಲ ಮೂಲಭಾರತದಲ್ಲಿ, ದುಶ್ಶಾಸನ ಸೆಳೆದಂತೆಲ್ಲಾ, ಅದೇ ಪ್ರಕಾರವಾದ ಅನೇಕ ವಸ್ತ್ರಗಳು ಕಾಣಿಸಿಕೊಂಡವು [ತದ್ರೂಪಮಪರಂ ವಸ್ತ್ರಂ ಪ್ರಾದುರಾಸೀತ್ ಅನೇಕಶಃ]—ಎಂಬ ಸಂಗತಿಯನ್ನು, ಇನ್ನೂ ರಂಜಿಸಲು ತೊಡಗಿ, 'ಅನೇಕಶಃ' ಎಂದರೆ ಎಷ್ಟಿರಬಹುದು ಎಂದು ಲೆಕ್ಕಹಾಕಿ—

೫೫೨ : ಅಷ್ಟೋತ್ತರ ಶತಂ ಯಾವದ್ವಸನಂ ಪ್ರಚಕರ್ಷ ಹ

'ನೂರಾ ಎಂಟು ವಸನಗಳತನಕವೂ [ದುಶ್ಶಾಸನನು] ಬಟ್ಟೆಯನ್ನು ಸೆಳೆದನು!' —ಎನ್ನುತ್ತದೆ ಒಂದು ಪಾಠ. ಇದು ಕೆಲಸವಿಲ್ಲದ ಅಲಸಬುದ್ಧಿಯ ಕಾಗುಣಿತ! ದುಶ್ಶಾಸನ ಎಳೆದದ್ದು ನೂರಾ ಎಂಟು ಸೀರೆಗಳು—ಎಂದುಕೊಂಡು ತೃಪ್ತಿಪಟ್ಟು ಕೊಂಡು ಈ ಬುದ್ಧಿ, ಈ ನೂರಾ ಎಂಟು ಬಟ್ಟೆಗಳೂ ಒಂದೇ ವರ್ಣದವಿರಲಾರವು; ಮೂಲ ಭಾರತದ ಕವಿ ಸುಮ್ಮನೆ ಒಂದೇ ಬಗೆಯ ಇನ್ನೊಂದು ವಸ್ತ್ರ [ತದ್ರೂಪ ಮಪರಂ ವಸ್ತ್ರ] ಎಂದುಬಿಟ್ಟ; ಆದರೆ ಭಗವಾನ್ ಕೃಷ್ಣನ ಮಹಿಮೆಗೆ, ಆ ಬಟ್ಟೆಗಳನ್ನು ವಿವಿಧ ವರ್ಣರಂಜಿತವನ್ನಾಗಿಸುವುದು ಅಸಾಧ್ಯವೇ—ಎಂಬ ಯೋಚನೆಯಲ್ಲಿ—

೫೫೪ : ನಾನಾರಾಗವಿರಾಗಾಣಿ ವಸನಾನ್ಯಥ ವೈ ಪ್ರಭೋ
ಪ್ರಾದುರ್ಭವಂತಿ ಶತಶೋ ಧರ್ಮಸ್ಯ ಪರಿಪಾಲನಾತ್

'ಬಳಿಕ ಹೇ ಜನಮೇಜಯನೇ, ನಾನಾವರ್ಣಗಳಿಂದ ಕೂಡಿದ ನೂರಾರು ವಸನ ಗಳುಂಟಾಗುತ್ತವೆ—ಅದೂ ಧರ್ಮದ ಪರಿಪಾಲನೆಗಾಗಿ'[1]—ಎಂಬ ವಿವರಣೆಯನ್ನು ನೀಡಿದೆ. ಹೀಗಾಗಿ ಇಲ್ಲಿ ದ್ರೌಪದಿಯ ಸೀರೆಗಳ ಸಂಖ್ಯೆಯೂ ಏರಿದೆ; ಬಣ್ಣವೂ ಏರಿದೆ! ಒಟ್ಟಿನಲ್ಲಿ ವಸ್ತ್ರ ಅಕ್ಷಯವಾದ 'ಅದ್ಭುತ'ವನ್ನು, ರಮ್ಯವನ್ನಾಗಿಸಲು,

1 "ಅನೇಕ ವರ್ಣಗಳುಳ್ಳ ಸಾವಿರಾರು ಹೊಸ ವಸ್ತ್ರಗಳು ಬೆಳೆದುವು"—ಎಂಬ ಮಾತು ವಿಲ್ಲಿಪುತ್ತೂರ್ ಅವರ ತಮಿಳು ಭಾರತದ ಈ ಸಂದರ್ಭದ ಭಾಗದಲ್ಲಿ ಬಂದಿರುವುದೂ ಗಮನಾರ್ಹವಾಗಿದೆ.

ದೈವೀಕೃಪೆಯ ಹಿನ್ನೆಲೆಯೊಂದನ್ನು ಒದಗಿಸಲು ನಮ್ಮ ಪ್ರಕ್ಷಿಪ್ತಕಾರರು ನಡೆಸಿರುವ ಪ್ರಯೋಗಗಳು ಎಷ್ಟೊಂದಿವೆ!

ಇಂಥದೊಂದು ಪ್ರಾರ್ಥನೆ ದ್ರೌಪದಿಯ ಬಾಯಿಂದ ಬಂದಿತೆಂದು ಸಾಧಿಸಲು ಪ್ರಕ್ಷೇಪಕಾರರಿಗೆ ಅಲ್ಲಲ್ಲಿ ಸಾಕಷ್ಟು ಅವಕಾಶಗಳೂ ಒದಗಿವೆ; ಅದರ ಜೊತೆಗೆ ಅವರ ಆತುರವೂ ಎದ್ದು ಕಾಣುತ್ತದೆ. ವಸ್ತ್ರಾಪಹರಣಕ್ಕಿಂತ ಹಿಂದೆಯೇ ಬರುವ ಕೇಶಾಪಕರ್ಷಣದ ಪ್ರಸಂಗದಲ್ಲಿಯೇ ಇದನ್ನು ಗುರುತಿಸಬಹುದು. ಕೃಷ್ಣೆಯ ಕೃಷ್ಣ ಕೇಶವನ್ನು ಹಿಡಿಬೆಳೆದು ದುಶ್ಶಾಸನನು ಸಭೆಗೆ ತರುವ ಸಂದರ್ಭದಲ್ಲಿ ದ್ರೌಪದಿ ಅವನನ್ನು ಕುರಿತು "ನಾನು ರಜಸ್ವಲೆ, ಏಕವಸ್ತ್ರೆ, ನನ್ನನ್ನು ಹೀಗೆ ಸಭೆಗೆ ಎಳೆದೊಯ್ಯುವುದು ಸಲ್ಲದೋ ಅನಾರ್ಯ"—ಎನ್ನುತ್ತಾಳೆ. ಅದಕ್ಕೆ ಉತ್ತರವಾಗಿ ಆತ—

ಕೃಷ್ಣಂ ಚ ಜಿಷ್ಣುಂ ಚ ಹರಿಂ ನರಂ ಚ
ತ್ರಾಣಾಯ ವಿಕ್ರೋಶ ನಯಾಮಿ ಹಿ ತ್ವಾಮ್ [೨–೬೦–೨೬ರ ಉತ್ತರಾರ್ಧ]

'ಕೃಷ್ಣ, ಜಿಷ್ಣು, ಹರಿ, ನರ—ನೀವೆಲ್ಲಾ ಬಂದು ಕಾಪಾಡಿ ಎಂದು ನೀನು ಅರಚಿಕೋ ನಾನು ನಿನ್ನನ್ನು ಬಿಡುವುದಿಲ್ಲ' ಎನ್ನುತ್ತಾನೆ. ದುಶ್ಶಾಸನ ಕೊಟ್ಟ ಈ ಒಂದು ಸೂಚನೆಯೇ ಸಾಕು ನಮ್ಮ ಪ್ರಕ್ಷೇಪಕಾರರಿಗೆ! ದ್ರೌಪದಿಯ ಬಾಯಿಂದ ಕೃಷ್ಣಸ್ತುತಿಯನ್ನು ಮಾಡಿಸಲು ನಾನು ಮುಂದೆ ತಾನು ಮುಂದೆ ಎಂದು ಬಂದಿದ್ದಾರೆ. ಇದರ ಜೊತೆಗೆ ಮುಂದೆ, ದ್ರೌಪದಿಯೇ ಉದ್ಯೋಗಪರ್ವದಲ್ಲಿ ಶ್ರೀಕೃಷ್ಣನು ಕೌರವನ ಕಡೆಗೆ ಸಂಧಾನಕ್ಕಾಗಿ ಹೊರಟ ಸಮಯದಲ್ಲಿ, ತನಗೆ ಹಿಂದೆ ಕೌರವರಿಂದಾದ ಪರಾಭವಗಳನ್ನು ನೆನೆಯುತ್ತಾ, ಹಿಂದೆ ಆಪತ್ಕಾಲದಲ್ಲಿ—

ನಿರಾಮರ್ಷೇಷ್ವಚೇಷ್ಟೇಷು ಪ್ರೇಕ್ಷಮಾಣೇಷು ಪಾಂಡುಷು
ತ್ರಾಹಿ ಮಾಮಿತಿಗೋವಿಂದ ಮನಸಾ ಕಾಂಕ್ಷಿತೋಽಸ್ಮಿ ಮೇ
ಯತ್ರ ಮಾಂ ಭಗವಾನ್ ರಾಜಾ ಶ್ವಶುರೋ ವಾಕ್ಯಮಬ್ರವೀತ್
ವರಂ ವೃಣೀಷ್ವ ಪಾಂಚಾಲೀ ವರಾರ್ಹಸಿ ಮತಾಸಿ ಮೇ
[ಉದ್ಯೋಗ ಪರ್ವ : ೫–೮೦–೨೬, ೨೭]

"ಪಾಂಡವರು ಇದನ್ನೆಲ್ಲಾ ನೋಡುತ್ತಾ ಶಾಂತರಾಗಿ ನಿಶ್ಚೇಷ್ಟರಾಗಿ ಕುಳಿತಿರುವಾಗ ನಾನು 'ಗೋವಿಂದಾ ನನ್ನನ್ನು ಕಾಪಾಡು,' ಎಂದು ನಾನು ಮನಸ್ಸಿನಲ್ಲಿಯೇ ಪ್ರಾರ್ಥಿಸಿದೆ. ಆಗ ಮಹಾತ್ಮನಾದ ನನ್ನ ಮಾವನಾದ ಧೃತರಾಷ್ಟ್ರನು ನನ್ನನ್ನು ಏನು ವರಬೇಕೋ ಕೇಳಿಕೋ ಎಂದನು"—ಎನ್ನುತ್ತಾಳೆ. ಈ ಸಂದರ್ಭದಲ್ಲಿ, ದ್ರೌಪದಿ ತಾನು ಹಿಂದೆ ಗೋವಿಂದನನ್ನು ಆ ವಸ್ತ್ರಾಪಹರಣ ಕಾಲದಲ್ಲಿ ಪ್ರಾರ್ಥಿಸಿದ್ದುಂಟು ಎಂದು ಹೇಳಿದ ಮಾತಷ್ಟೇ ಸಾಕು, ಪ್ರಕ್ಷೇಪಕಾರರಿಗೆ ಸಾಕಷ್ಟು ಸ್ಫೂರ್ತಿಯನ್ನು ನೀಡಿರಬೇಕು. ಆದರೆ ತೀರ ಆತುರದ ಪ್ರವೃತ್ತಿಯ ಪ್ರಕ್ಷೇಪಕಾರನೊಬ್ಬ

ಈ ಸಂದರ್ಭವನ್ನು ಬಿಟ್ಟರೆ ಮತ್ತೆ ಅವಕಾಶ ಸಿಗದು ಎಂಬಂತೆ, ಕೇಶಾಪಕರ್ಷಣೆಯ ಪ್ರಸಂಗದಲ್ಲಿ ಯಾವಾಗ ದುಶ್ಶಾಸನನು "ಕೃಷ್ಣ, ಹರಿ, ಜಿಷ್ಣು, ನರ—ಬಂದು ಕಾಪಾಡಿ ಎಂದು ನೀನು ಅರಚಿಕೋ, ನಾನು ನಿನ್ನನ್ನು ಬಿಡುವುದಿಲ್ಲ"—ಎಂದನೋ, ಆ ಕೂಡಲೇ ದ್ರೌಪದಿಯ ಬಾಯಲ್ಲಿ—

೫೩೫ : ಗೋವಿಂದ ದ್ವಾರಕಾವಾಸ ಕೃಷ್ಣ ಗೋಪೀಜನಪ್ರಿಯ
ಕುರುಭಿಃ ಪರಿಭೂತಾಂ ಮಾಂ ಕಿಂ ನ ಜಾನಾಸಿ ಕೇಶವ
ಮಹಿಷೀ ಪಾಂಡು ಪುತ್ರಾಣಾಂ ಅಜಮೀಢಕುಲೇ ವಧೂಃ
ಸಾಹಂ ಕೇಶಗ್ರಹಂ ಪ್ರಾಪ್ತಾ ತ್ವಯಿ ಜೀವತಿ ಕೇಶವ

ಹೀಗೆಂದು ಪ್ರಾರ್ಥನೆ ಹೊಮ್ಮಿತೆಂದು ತನ್ನ ಕೈಚಳಕವನ್ನು ಸೇರಿಸಿದ್ದಾನೆ. ಇದೇ ಪದ್ಯವೇ ಮುಂದೆ ವಸ್ತ್ರಾಪಹರಣದ ಸಂದರ್ಭದ ಮೊದಲಲ್ಲೇ ಮತ್ತೆ [೫೪೨] ಪುನರಾವೃತ್ತಿಗೊಂಡಿದೆ. ಈ ಪದ್ಯದಲ್ಲಿ 'ಸಾಹಂ ಕೇಶಗ್ರಹಂ ಪ್ರಾಪ್ತಾ ತ್ವಯಿ ಜೀವತಿಕೇಶವ'—ಎನ್ನುವ ಇಡೀ ವಾಕ್ಯವೇ,

ಸಾಹಂ ಕೇಶಗ್ರಹಂ ಪ್ರಾಪ್ತಾ ಪರಿಕ್ಲಿಷ್ಟಾ ಸಭಾಂ ಗತಾ
ಪಶ್ಯತಾಂ ಪಾಂಡು ಪುತ್ರಾಣಾಂ **ತ್ವಯಿ ಜೀವತಿ ಕೇಶವ**
[ಉದ್ಯೋಗ ಪರ್ವ: ೫-೮೦-೨೪]

ಎಂದು ಉದ್ಯೋಗ ಪರ್ವದಲ್ಲಿ ದ್ರೌಪದಿ ಕೃಷ್ಣನನ್ನು ಕುರಿತು ಹೇಳಿದ ಶ್ಲೋಕದ ಮೊದಲ ಪಾದದ ಪೂರ್ವಾರ್ಧವನ್ನೂ, ಎರಡನೇ ಪಾದದ ಉತ್ತರಾರ್ಧವನ್ನೂ ಪೋಣಿಸಿ ಮಾಡಿದುದು ಎಂದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲ, ಹಿಂದೆ ಉದಾಹರಿಸಿದ—

"ಕೃಷ್ಣಂ ಚ ಜಿಷ್ಣುಂ ಚ ಹರಿಂ ನರಂ ಚ
ತ್ರಾಣಾಯ ವಿಕ್ರೋಶ ನಯಾಮಿ ಹಿ ತ್ವಾಮ್
[ಸಭಾ.—೨-೬೦-೨೬]

ಎಂಬ ಪದ್ಯದ ಸಾಮಗ್ರಿಯನ್ನೆ ಬಳಸಿಕೊಂಡು—

೫೪೪ : ಕೃಷ್ಣಂ ಚ ಜಿಷ್ಣುಂ ಚ ಹರಿಂ ನರಂ ಚ
ತ್ರಾಣಾಯ ವಿಕ್ರೋಶತಿ ಯಾಜ್ಞಸೇನೀ
ತತಸ್ತು ಧರ್ಮೋಽಂತರಿತೋ ಮಹಾತ್ಮಾ
ಸಮಾವೃಣೋತ್ತಾಂ ವಿವಿಧ ವಸ್ತ್ರಪೂಗಃ

ಎಂದು ವಸ್ತ್ರಾಪಹರಣ ಪ್ರಸಂಗದಲ್ಲಿ [೨-೬೧-೪೦ರ ನಂತರ] ಕೃಷ್ಣ ದ್ರೌಪದಿಗೆ ವಸ್ತ್ರದಾನ ಮಾಡಿದ ರೀತಿಯನ್ನು ಪ್ರಕ್ಷೇಪಕಾರರು ವರ್ಣಿಸಿದ್ದಾರೆ. ಅಂತೆಯೇ ಪ್ರಕ್ಷೇಪ ಭಾಗವೆಂದು ಹಿಂದೆ ಹೇಳಲಾದ ಕೃಷ್ಣಸ್ತುತಿಯೊಂದರಲ್ಲಿ [೫೪೩] ಬರುವ

'ಕೌರವಾರ್ಣವ ಮಗ್ನಾಂ ಮಾಂ ಉದ್ಧರಸ್ವ ಜನಾರ್ದನ'—ಎಂಬ ಈ ಮಾತಿನಲ್ಲಿರುವ ಸಮುದ್ರದ ರೂಪಕ ವಾಸ್ತವವಾಗಿ ಮುಂದೆ ಬರುವ ಶ್ಲೋಕವೊಂದರಿಂದ ಪ್ರೇರಿತವಾದಂತೆ ತೋರುತ್ತದೆ. ದ್ರೌಪದಿ ಧೃತರಾಷ್ಟ್ರನಿಂದ ವರವನ್ನು ಪಡೆದು ಪಾಂಡವರನ್ನು ದಾಸ್ಯದಿಂದ ವಿಮೋಚನೆಗೊಳಿಸಿದಾಗ, ಕರ್ಣನು—

> ಅಪ್ಲವೇಽಂಭಸಿ ಮಗ್ನಾನಾಮ್ ಅಪ್ರತಿಷ್ಠೇ ನಿಮಜ್ಜತಾಮ್
> ಪಾಂಚಾಲೀ ಪಾಂಡುಪುತ್ರಾಣಾಮ್ ನೌರೇಷಾ ಪಾರಗಾಭವತ್ [ಸಭಾ.— ೨-೬೪-೩]

'ದಾಟಲಾಗದ ಕಡಲಿನಲ್ಲಿ ಮುಳುಗಿದವರಂತೆ, ಅಪ್ರತಿಷ್ಠೆಯಲ್ಲಿ ಮುಳುಗಿಹೋದ ಪಾಂಡುಪುತ್ರರನ್ನು ದ್ರೌಪದಿ ನೌಕೆಯಂತೆ ಪಾರುಗಾಣಿಸಿದಳು'—ಎನ್ನುತ್ತಾನೆ. ವಾಸ್ತವವಾಗಿ ಇಲ್ಲಿ ಬಂದಿರುವ ಸಮುದ್ರ ರೂಪಕವೇ ಹಿಂದೆ ಪ್ರಕ್ಷೇಪದಲ್ಲಿ 'ಕೌರವಾರ್ಣವ'ದಲ್ಲಿ ಪಾಂಡವರೂ ದ್ರೌಪದಿಯೂ ಮುಳುಗಿದ ಪರಿಯನ್ನು ಹೇಳುವ ರೀತಿಯಾಗಿದೆ. ಒಟ್ಟಿನಲ್ಲಿ ಈ ಪ್ರಕ್ಷೇಪಗಳು ಹೇಗೆ ಎಷ್ಟರ ಮಟ್ಟಿಗೆ ಮೂಲ ಭಾರತದ ಭಾಷಾಸಾಮಗ್ರಿಯನ್ನೇ ಬಹುಮಟ್ಟಿಗೆ ಬಳಸಿಕೊಂಡು, ಆಯಾ ಕಥಾ ಸಂದರ್ಭಗಳಿಗೆ ಹೊಂದಿಕೊಳ್ಳುವಂತೆ ರಚಿತವಾಗಿ, ಕತೆಯೊಂದಿಗೆ ತಮ್ಮ ಎಳೆಗಳನ್ನು ಸೇರಿಸಿ ಬೆರೆಯಲು ಪ್ರಯತ್ನಿಸುತ್ತವೆ ಎಂಬುದು ಗಮನಾರ್ಹವಾದ ಸಂಗತಿ. ಎಷ್ಟೋ ಸಲ, "ಈ ಪ್ರಕ್ಷಿಪ್ತಗಳನ್ನು ವಾಸ್ತವವಾಗಿ ಪ್ರಕ್ಷಿಪ್ತಗಳೆಂದು ಸಾಧಿಸಿ ತೋರಿಸುವುದೂ ಕಷ್ಟ. ಮಹಾಕಾವ್ಯದ ಛಂದಸ್ಸು ಅನುಕರಣಸಾಧ್ಯವಾದದ್ದರಿಂದಲೋ, ಇಲ್ಲಿನ ವ್ಯಾಕರಣ ಹೇಗೆಂದರೆ ಹಾಗೆ ಒಗ್ಗಿಕೊಳ್ಳುವುದರಿಂದಲೂ, ಇಲ್ಲಿನ ಶೈಲಿ ಸುಲಭವಾಗಿ ವರ್ಗೀಕರಿಸಲು ಸಾಧ್ಯವಲ್ಲದುದಾಗಿರುವುದರಿಂದಲೂ, ಇಂಥ ಪ್ರಕ್ಷೇಪ ಭಾಗಗಳನ್ನು ಬಹು ಚತುರತೆಯಿಂದಲೂ, ಯುಕ್ತಿಯಿಂದಲೂ ಮಾಡಿ ಸೇರಿಸಿರುವುದುಂಟು."[1] ನಮ್ಮ ದೇಶದ ಯಾವ ಮಹಾಕೃತಿಗಳಿಗೂ, ಈ ಅವಶ್ಯಕರ್ಮ ಅಥವಾ ಸಂಸ್ಕಾರ ತಪ್ಪಿದ್ದಲ್ಲ. ಹಾಗೆ ಮಹಾಭಾರತದಲ್ಲೂ ಆಗಿದೆ. ಮಹಾಭಾರತದ ತುಂಬ ಇಂಥ ಎಷ್ಟೋ ಪ್ರಕ್ಷೇಪಗಳಿವೆ. "ಹಾಗೆಂದ ಮಾತ್ರಕ್ಕೆ ಅದು ಆ ಪ್ರಕ್ಷೇಪಗಳನ್ನು ಅಲ್ಲಗಳೆಯುವ ಅಥವಾ ಖಂಡಿಸುವ ಮಾತಲ್ಲ. ಪ್ರಕ್ಷೇಪಗಳ ಈ ಪರಂಪರೆ ನಮ್ಮಲ್ಲಿ ಕ್ರಮಾನುಗತವಾದುದೂ, ಅನಿವಾರ್ಯವಾದುದೂ, ವಿಶಾಲಾರ್ಥದಲ್ಲಿ ನೋಡಿದರೆ ನ್ಯಾಯವಾದುದೂ ಆಗಿದೆ. ಮಹಾಕಾವ್ಯವೊಂದು ಯಾವುದೇ ಪ್ರಗತಿಪರವಾದ ಜನ ಜೀವನದ ಪ್ರಾಣಶಕ್ತಿಯಾಗಿ ಮುಂದುವರಿಯಬೇಕಾದರೆ, ಅದು ಹೀಗೆ ನಿಧಾನವಾಗಿ ವ್ಯತ್ಯಸ್ತವಾಗುತ್ತಲೇ ಇರಬೇಕು. ಕೃತಿಯೊಂದರಲ್ಲಿ ಈ ಬಗೆಯ ಹಲವು ಭಾಗ ನಷ್ಟವಾಗುವ, ಹಲವು ಭಾಗ ಪುಷ್ಟ

---

[1] Sukthankar memorial Edition: Edited by P. K. Gode, Vol–I, Critical studies in Mahabharatha. V. S. Sukthankar: Prolegomena, page 126, 127, 128.

ವಾಗುವ ಕ್ರಿಯೆ ನಡೆಯುತ್ತಿರುವುದು, ಆ ಪುಸ್ತಕ ಕೇವಲ ಧೂಳಿಡಿದ ಕಪಾಟಿನಲ್ಲಿ ಕೊಳೆಯುವ ಪುಸ್ತಕವಲ್ಲ, ಅದು ಜೀವನಕ್ಕೆ ಸದಾ ಸ್ಫೂರ್ತಿದಾಯಕವೂ ಮಾರ್ಗ ದರ್ಶಕವೂ ಆದ ಕೃತಿ—ಎನ್ನುವುದರ ಬಹಿರಂಗ ಸೂಚನೆ ಮಾತ್ರ. ಬಹುಶಃ ಇವು ಮಹಾಭಾರತವನ್ನು, ಇತರ ಎಷ್ಟೋ ಸಹೋದರ ಕೃತಿಗಳಂತೆ ವಿಸ್ಮೃತಿಯ ಕಗ್ಗವಿಯಲ್ಲಿ ಬಿದ್ದುಹೋಗದಂತೆ, ತಡೆದು ಬದುಕಿಸಿರುವ ಸ್ಪರ್ಶಗಳೆನ್ನಬೇಕು.''[1]

೪

ದ್ರೌಪದೀ ವಸ್ತ್ರಾಪಹರಣ ಸಂದರ್ಭದಲ್ಲಿ, ಶ್ರೀ ಕೃಷ್ಣನ ಕೃಪೆ ಅಕ್ಷಯ ವಸ್ತ್ರವನ್ನು ಕರುಣಿಸಿದ ಈ ಪ್ರಸಂಗ, ವಾಸ್ತವವಾಗಿ ಪ್ರಕ್ಷೇಪಕಾರರ ಕೈವಾಡ ಎನ್ನುವುದನ್ನು ಆಯಾ ಪ್ರಕ್ಷೇಪಗಳೇ ಬಿಚ್ಚಿ ತೋರಿಸುತ್ತವೆ. ಇದರ ಜೊತೆಗೆ ಮಹಾಭಾರತದಲ್ಲಿ ಬೇರೆ ಬೇರೆಯ ಕಡೆಗಳಲ್ಲಿ ಈ ಪ್ರಸಂಗವನ್ನು ಹೆಸರಿಸುವ ಹಲವು ಸಂದರ್ಭಗಳೂ, ಕೃಷ್ಣನ ಕೃಪೆಯ ಬಗೆಗೆ, ಅದು ಕೇವಲ ಪ್ರಕ್ಷಿಪ್ತವೆಂಬ ವಿಷಯ ವನ್ನೆ ದೃಢಪಡಿಸುತ್ತವೆ. ಉದಾಹರಣೆಗೆ ಅರಣ್ಯಪರ್ವದ ಈ ಪ್ರಸಂಗವೇ ಸಾಕ್ಷಿ: ಯಾವಾಗ ಪಾಂಡವರು ಅನುದ್ಯೂತದಲ್ಲಿ ಸೋತು, ತಮ್ಮ ರಾಜ್ಯ ಕೋಶಗಳನ್ನು ಕೌರವರಿಗೆ ತೆತ್ತು, ಹನ್ನೆರಡುವರ್ಷ ವನವಾಸದ ಹಾಗೂ ಒಂದು ವರ್ಷ ಅಜ್ಞಾತ ವಾಸದ ನಿಯಮವನ್ನು ಒಪ್ಪಿಕೊಂಡು ಅರಣ್ಯವನ್ನು ಪ್ರವೇಶಿಸಿದ ಮೊದಲ ದಿನಗಳಲ್ಲಿಯೇ, ಕೃಷ್ಣನು ಕಾಡುಪಾಲಾದ ಪಾಂಡವರ ದುರವಸ್ಥೆಯ ಸುದ್ದಿಯನ್ನು ಕೇಳಿ, ಅವರಿದ್ದಲ್ಲಿಗೆ ಬಂದು ಅವರ ಪಾಡಿಗಾಗಿ ವಿಷಾದಿಸುತ್ತಾನೆ. ಆಗ ದ್ರೌಪದಿ ತನಗೆ ತುಂಬಿದ ಸಭೆಯಲ್ಲಿ, ರಜಸ್ವಲೆಯೂ ಏಕವಸ್ತ್ರೆಯೂ ಆದ ತನ್ನನ್ನು ದುಶ್ಯಾಸನನು ಎಳೆದಾಡಿದ ಪರಿಯನ್ನು ಕೃಷ್ಣನ ಮುಂದೆ ತೋಡಿಕೊಳ್ಳುತ್ತಾಳೆ.[2] ಆದರೆ ಆ ಸಂದರ್ಭದಲ್ಲಿ ತನ್ನ ಮಾನ ಹೇಗೆ ರಕ್ಷಿತವಾಯಿತು? ತನ್ನ ಸೀರೆ ಅಕ್ಷಯ ವಾಗಿ ಅದ್ಭುತವೊಂದು ನಡೆದು ತನ್ನ ಮಾನ ಉಳಿಯಿತೆಂದಾಗಲಿ, ಶ್ರೀ ಕೃಷ್ಣನ ಕೃಪೆ ತನಗೆ ಒದಗಿತೆಂದಾಗಲಿ ಹೇಳುವುದೇ ಇಲ್ಲ! ಒಂದು ವೇಳೆ ಕೃಷ್ಣನ ಕೃಪೆಯಿಂದ ಅವಳಿಗೆ ಅಕ್ಷಯವಸ್ತ್ರ ಪ್ರಾಪ್ತಿಯಾಗಿದ್ದಲ್ಲಿ, ಇಲ್ಲಿ ದ್ರೌಪದಿ ಕೃಷ್ಣನನ್ನು ಕಂಡ ಒಡನೆಯೇ ತನ್ನ ಮಾನಸಂರಕ್ಷಣೆಮಾಡಿದ ಈ ಮಹಾನುಭಾವನಿಗೆ ತನ್ನ ಕೃತಜ್ಞತೆಗಳನ್ನು ಸಮರ್ಪಿಸದೆ ಇರುತ್ತಿದ್ದಳೆ? ಅಂಥದೊಂದು ದುರ್ಘಟನೆ

---

1 ಅಲ್ಲೇ.

2 ಸ್ತ್ರೀ ಧರ್ಮಿಣೀ ವೇಪಮಾನಾ ರುಧಿರೇಣ ಸಮುಕ್ಷಿತಾ
ಏಕವಸ್ತ್ರಾ ವಿಕೃಷ್ಟಾಸ್ಮಿ ದುಃಖಿತಾ ಕುರು ಸಂಸದಿ
ರಾಜಮಧ್ಯೇ ಸಭಾಯಾಂತು ರಜಸಾಭಿಸಮೀರಿತಾವರ್
ದೃಷ್ಟ್ವಾ ಚ ಮಾಂ ಧಾರ್ತರಾಷ್ಟ್ರಾಃ ಪ್ರಹಸನ್ ಪಾಪ ಚೇತಸಃ
ದಾಸೀಭಾವೇನ ಭೋಕ್ತುಂ ಮಾಮೀಷುಸ್ತೇ ಮಧುಸೂದನ
ಜೀವತ್ಸು ಪಾಂಡುಪುತ್ರೇಷು ಪಾಂಚಾಲೇಷ್ವಥ ವೃಷ್ಣಿಷು
[ಅರಣ್ಯಪರ್ವ: I, ೩–೧೩–೫೪, ೫೫, ೫೬.]

ನಡೆದ ಹೊಸತರಲ್ಲೇ, ಕೃಷ್ಣನನ್ನು ಕಂಡಾಗ ದ್ರೌಪದಿ ಇಂಥ ಒಂದು ಉಪಕಾರ ಸ್ಮರಣೆಯ ಮಾತನ್ನು ಹೇಳದೆ ಬಿಟ್ಟಳೆಂದರೆ, ಮಹಾಕವಿಯೊಬ್ಬ ಮನುಷ್ಯ ಸಹಜ ವಾದ, ಬಹು ಮುಖ್ಯವಾದ ನಡವಳಿಕೆಯೊಂದನ್ನು ಬೇಕೆಂದೇ ಕೈಬಿಟ್ಟಂತೆ ತೋರುವುದಲ್ಲವೆ? ಆದರೆ ಪರಿಸ್ಥಿತಿ ಅದಲ್ಲವೆಂಬುದು, ದ್ರೌಪದಿಯ ಅಳಲನ್ನು ಕೇಳಿ ವ್ಯಥೆಗೊಂಡ ಕೃಷ್ಣನು ಹೇಳುವ ಮಾತಿನಲ್ಲೇ ಸ್ಪಷ್ಟವಾಗಿದೆ. ಕೃಷ್ಣನು ಆಗ ಧರ್ಮರಾಯನನ್ನು ಕುರಿತು "ಮಹಾರಾಜ, ಆ ಕಾಲದಲ್ಲಿ ನಾನು ದ್ವಾರಕೆಯ ಲ್ಲಿದ್ದಿದ್ದರೆ ನನ್ನನ್ನು ಕರೆಯದಿದ್ದರೂ ಜೂಜು ನಡೆಯುವ ಸ್ಥಳಕ್ಕೆ ಬಂದು, ಅದನ್ನು ತಪ್ಪಿಸುತ್ತಿದ್ದೆ. . . . ಆದರೆ ಏನು ಮಾಡುವುದು? ಆಗಲೇ ನಾನು ಶಾಲ್ವನ ಊರಾದ ಸೌಭನಗರವನ್ನು ನಾಶಪಡಿಸಲು ಹೋಗಿದ್ದೆ"[1] ಎನ್ನುತ್ತಾನೆ. ಇತ್ತ ಪಾಂಡವರು ಸೋತು, ದ್ರೌಪದಿಯ ವಸ್ತ್ರಾಪಹರಣ ನಡೆದ ಕಾಲಕ್ಕೆ ಕೃಷ್ಣನು ದ್ವಾರಕೆಯಲ್ಲಿ ತಾನು ಇರಲೇ ಇಲ್ಲವೆಂದು, ಈ ಬಗ್ಗೆ ತನಗೇನೂ ತಿಳಿದಿರಲಿಲ್ಲವೆಂದು ಕೃಷ್ಣನೇ ಬಾಯಿ ಬಿಟ್ಟು ಹೇಳಿದ ಮೇಲೆ, ನಮ್ಮ ಪ್ರಕ್ಷೇಪಕಾರರು ವರ್ಣಿಸುವಂತೆ "ಕೃಷ್ಣನು ದ್ರೌಪದಿಯ ಕರೆಯನ್ನು ಕೇಳಿ ಕಳವಳಗೊಂಡು ಶಯ್ಯಾಸನದಿಂದ ಎದ್ದು ದ್ರೌಪದಿಯ ಮಾನರಕ್ಷಣೆಗೆ ದಯಮಾಡಿಸಿದನು"—ಎಂಬ ಮಾತೇ ನಿಲ್ಲುವುದಿಲ್ಲ! ಮತ್ತೊಮ್ಮೆ ಉದ್ಯೋಗಪರ್ವದಲ್ಲಿ ಸಂಧಾನಕ್ಕೆ ಹೊರಟ ಕೃಷ್ಣನನ್ನು ಕುರಿತು, ಹಿಂದಿನ ಪರಾಭವಗಳನ್ನು ನೆನೆಯುತ್ತಾ, ಕೌರವರ ಸಭೆಯಲ್ಲಿ ದುಶ್ಶಾಸನನ ವರ್ತನೆಯನ್ನು ಕಂಡೂ ಪಾಂಡವರು ಸುಮ್ಮನಿದ್ದಾಗ "ಗೋವಿಂದಾ ನನ್ನನ್ನು ಕಾಪಾಡು" ಎಂದು ತಾನು ಮನಸ್ಸಿನಲ್ಲೇ ಪ್ರಾರ್ಥಿಸಿದುದಾಗಿ ಹೇಳುತ್ತಾಳೆ.[2] ಆದರೆ ಅಲ್ಲಿಯೂ ಕೃಷ್ಣನ ಕೃಪೆಯಿಂದ ವಸ್ತ್ರ ಅಕ್ಷಯವಾಗಿ ಮಾನ ಉಳಿದ ಸಮಾಚಾರವನ್ನು ಹೇಳದೆ "ಭಗವಾನ್ ರಾಜ"ನಾದ ಧೃತರಾಷ್ಟ್ರನಿಂದ ತಾವು ದಾಸ್ಯವಿಮೋಚನೆ ಪಡೆದುದನ್ನೇ ಹೇಳುತ್ತಾಳೆ. ಹೀಗೆ ಎಲ್ಲೆಲ್ಲಿ ಈ ಪ್ರಸಂಗದ ವಿಷಯ ಬರುವುದೋ ಅಲ್ಲೆಲ್ಲಾ, ದ್ರೌಪದಿಯಿಂದ ಹಾಗೂ ಕೃಷ್ಣನಿಂದ ಈ ಬಗ್ಗೆ ಪರವಾದ ಅಥವಾ ಸಮರ್ಥನೀಯವಾದ ಯಾವ ಒಂದು ಮಾತೂ ಬಾರದಿರುವುದು ಈ ವಿಷಯದಲ್ಲಿ ನಮ್ಮ ನಿರ್ಧಾರವನ್ನೇ ಖಚಿತಗೊಳಿಸುತ್ತದೆ.

---

1 ಶಾಲ್ವಸ್ಯ ನಗರಂ ಸೌಭಂ ಗತೋऽಹಂ ಭರತರ್ಷಭ —
ವಿನಿಹಂತುಂ ನರಶ್ರೇಷ್ಠ ತತ್ರ ಮೇ ಶೃಣು ಕಾರಣಮ್ [ಅರಣ್ಯಪರ್ವ: ೩–೧೫–೩.]
[ಹಾಗೆಯೇ ೩–೧೪ ; ೧ ರಿಂದ ೧೭ ನೋಡಿ.]

2 ನಿರಾಮರ್ಷೇಷ್ವಚೇಷ್ಟೇಷು ಪ್ರೇಕ್ಷಮಾಣೇಷು ಪಾಂಡುಷು |
ತ್ರಾಹಿ ಮಾಮಿತಿ ಗೋವಿಂದ ಮನಸಾ ಕಾಂಕ್ಷಿತೋऽಸ್ಮಿ ಮೇ ||
ಯತ್ರ ಮಾಂ ಭಗವಾನ್ ರಾಜಾ ಶ್ವಶುರೋ ವಾಕ್ಯಮಬ್ರವೀತ್ |
ವರಂ ವೃಣೀಷ್ವ ಪಾಂಚಾಲೀ ವರಾರ್ಹಸಿ ಮತಾಸಿ ಮೇ ||
[ಉದ್ಯೋಗಪರ್ವ: ೫–೮೦–೨೬, ೨೭.]

ಇದರ ಜೊತೆಗೆ ನನ್ನಯ್ಯನ ಕಾಲದ ತನಕ, ಎಂದರೆ ಹನ್ನೊಂದನೆಯ ಶತಮಾನದ ತನಕ, ಸಂಸ್ಕೃತ ಹಾಗೂ ಕನ್ನಡದಲ್ಲಿ ಮಹಾಭಾರತದಿಂದ ವಸ್ತುವನ್ನು ತೆಗೆದುಕೊಂಡು ರಚಿತವಾದ ಯಾವ ಕೃತಿಗಳಲ್ಲಿಯೂ ಕೃಷ್ಣನ ಕೃಪೆಯ ಪ್ರಸಂಗವೇ ಕಂಡುಬಾರದಿರುವುದು ಸ್ವಾರಸ್ಯವಾದ ಸಂಗತಿ. ಹನ್ನೊಂದನೆಯ ಶತಮಾನದ ನಂತರ, ಬಹುಶಃ ಜೈನ ಕವಿಗಳ ಪ್ರಾಬಲ್ಯದ ಕಾಲ ಮುಗಿದನಂತರ, ಶೈವ-ವೈಷ್ಣವ ಮತಗಳ ಭಕ್ತಿಯ ಹೊನಲು ಕನ್ನಡ ನಾಡಿನಲ್ಲಿ ತುಂಬಿ ಬಂದ ಕಾಲದಲ್ಲಿ, ಕೃಷ್ಣನನ್ನು ಭಗವದವತಾರವೆಂದು ಒಪ್ಪಿಕೊಂಡ ಪಂಥದವರು, ಕೃಷ್ಣನ ಮಹಿಮೆಯನ್ನು ಸಾರಲು ಇಂಥದೊಂದು ಪ್ರಸಂಗವನ್ನು ಮೂಲಭಾರತದ ಕಥೆಗೆ ಹೊಂದಿಕೊಳ್ಳುವಂತೆ ಸೃಷ್ಟಿಸಿ, ಹಿಂದೆ ಹೇಳಿದಂಥ ಪ್ರಕ್ಷೇಪಗಳ ರಚನೆಗೆ ಪ್ರೇರಣೆಯನ್ನಿತ್ತಿರಬಹುದು. ಇಷ್ಟು ಹೊತ್ತಿಗೆ ಶ್ರೀ ಕೃಷ್ಣನನ್ನು ಕುರಿತ ಹಲವು ಭಾವನೆಗಳ ಸಮನ್ವಯವೂ ಇದಕ್ಕೆ ಕಾರಣವಾಗಿರಬಹುದು. ಏಕೆಂದರೆ ಮಹಾಭಾರತದಲ್ಲಿ ನಾವು ಕಾಣುವ ಕೃಷ್ಣ ಅಂದಿನ ಯುಗದ ಒಬ್ಬ ಪುರುಷಶ್ರೇಷ್ಠ; ಅಂತೆಯೇ ಭಾಗವತದಲ್ಲಿ ನಾವು ಕಾಣುವ ಕೃಷ್ಣ ಅವತಾರ ಪುರುಷ. ಮಹಾಭಾರತದ ಪರಮ ಪುರುಷನಾದ ಶ್ರೀ ಕೃಷ್ಣನಿಗೂ, ಭಾಗವತದ ಗೋಪೀಜನಪ್ರಿಯನಾದ ಪರಮಾತ್ಮ ಕೃಷ್ಣನಿಗೂ ಮೊದ ಮೊದಲು ಕೇವಲ ವಂಶ ಸಂಬಂಧವಷ್ಟೇ ಇದ್ದದ್ದು, ಕ್ರಮೇಣ ಅಂಶ ಅಂಶದಲ್ಲೂ ಸಂಬಂಧ ಉಂಟೆಂದು ಯಾವಾಗ ಜನ ಮನದಲ್ಲಿ ಸ್ಥಾಪಿತವಾಯಿತೋ, ಅಂಥ ಒಂದು ಭಾವನೆ[1] ನಾರಣಪ್ಪನ ಕಾಲಕ್ಕಾಗಲೆ ಪ್ರಚಲಿತವಾಗಿ, ಕುಮಾರವ್ಯಾಸನ ಕವಿಪ್ರಜ್ಞೆಯಲ್ಲೆ ದರ್ಶನಸಿದ್ಧವಾದುದರಿಂದ,

---

[1] ಶ್ರೀಕೃಷ್ಣನ ಐತಿಹಾಸಿಕತೆಯನ್ನು ಕುರಿತು ಶ್ರೀ ಎ. ಡಿ. ಪುಸಲ್ಕರ್ ಅವರು ಹೇಳಿರುವ ಈ ಮಾತುಗಳು ಗಮನಾರ್ಹವಾಗಿವೆ: "Krishna, therefore, was originally a real man as evidenced by the Pre-epic literature and the earliest part of the Mahābhārata itself." (p. 56.)

"............ It cannot, however, be said that the Mahābhārata is entirely silent as to the early life of Krishna, as there are some references to his early life in Gokula." (P. 58.)

". . . . The activities of Krishna before and during the Bhārata war as recorded in the Māhābhārata, no doubt, represent him as a human politician par excellence, though the Mahābhārata at places attempts to identify him with the god of gods." (p. 60.)

". . . . . The earliest inscriptional and sculptural data indicating the ascription of divinity to Krishna date about second century B.C. (p. 65.).

—Studies in Epics and Puranas of India.—A. D. Pusalkar.
Chapter V—The Historicity of Krishna.

ಕುಮಾರವ್ಯಾಸ ಭಾರತದಲ್ಲಿ ಶ್ರೀಕೃಷ್ಣನ ಪವಾಡ ಸಹಜವಾಗಿ, ರಮ್ಯವಾಗಿ, ತಾನೇ ತಾನಾಗಿ ಮನವನ್ನು ಸೂರೆಗೊಳ್ಳುತ್ತದೆ.

೫

ದ್ರೌಪದೀ ವಸ್ತ್ರಾಪಹರಣದ ಪ್ರಸಂಗ ಬಹು ಸೂಕ್ಷ್ಮವಾದ ಹಾಗೂ ಅತ್ಯಂತ ತೊಡಕಾದ ಪ್ರಸಂಗ. ಎಂತಲೇ ಅದನ್ನು ಕುರಿತು ಸಾಕಷ್ಟು ಊಹಾಪೋಹಗಳೂ ಚರ್ಚೆಗಳೂ ನಡೆದಂತೆ ತೋರುತ್ತದೆ. ಪ್ರಕ್ಷೇಪಕಾರರಿಂದ ಹಿಡಿದು ವಿಮರ್ಶಕರ ತನಕ ಈ ಪ್ರಸಂಗಕ್ಕೆ ವಿವರಣೆಗಳನ್ನೊದಗಿಸುವ ಪ್ರಯತ್ನ ನಡೆದಂತೆ ತೋರುತ್ತದೆ. ಇತಿಹಾಸ ಪುರಾಣಗಳು ವೇದಾರ್ಥಗಳನ್ನು ಪ್ರತಿಮಾರೂಪದಲ್ಲಿ ಪ್ರಸಾರಮಾಡಲು ನಿರ್ಮಿತವಾದ ಸಾಧನಗಳು ಎಂದು ಭಾವಿಸುವ ವಿದ್ವಾಂಸರೊಬ್ಬರು, ದ್ರೌಪದೀ ವಸ್ತ್ರಾಪಹರಣ ಪ್ರಸಂಗದ ಪ್ರೇರಣೆ ಋಗ್ವೇದದ ಹತ್ತನೆಯ ಮಂಡಲದ ಮೂರನೇ ಅಧ್ಯಾಯದ ೩೩ ನೇ ಸೂಕ್ತದಲ್ಲಿದೆ ಎನ್ನುತ್ತಾರೆ. ಹಾಗೆಯೇ ಪಂಚ ಪಾಂಡವರನ್ನು ಪಂಚ ಗ್ರಹಗಳಿಗೆ ಹೋಲಿಸಿ "ಪಂಚಗ್ರಹಗಳು ಸೂರ್ಯಕಿರಣದಿಂದಲೇ ಪ್ರಕಾಶಿಸುತ್ತಾ ಸರ್ವದಾ ಸುತ್ತುತ್ತಿರುವರು. ಅವರೈದು ಜನಗಳಿಗೂ ಸೂರ್ಯಕಿರಣ ರೂಪವಾದ ದ್ರೌಪದಿಯೊಬ್ಬಳೇ ಪತ್ನೀರೂಪಳಾಗಿರುವಳು. ಈ ಪಂಚ ಗ್ರಹಗಳಿಗೆ ಪಂಚ ಜನಾಃ ಪಂಚಕ್ಷಿತಯಃ ಪಂಚವಿಪ್ರಾಃ ಪಂಚ ಋತ್ವಿಜಃ—ಎಂಬುದಾಗಿ ಅನೇಕ ನಾಮಗಳು ವೇದದಲ್ಲಿರುವುವು. ಗ್ರಹಗಳಿಗೆ ಕಿರಣವೇ ವಸ್ತ್ರವೆಂತಲೂ, ಕಿರಣಹಾನಿಯೇ ನಗ್ನತೆಯೆಂತಲೂ ವರ್ಣಿಸಲ್ಪಡುವುದು. ಖಗೋಲದಲ್ಲಿ ಗ್ರಹಗಳು ಸರ್ವದಾ ಸುತ್ತುತ್ತಿರುವುದೇ ಅವರು ಮಾಡುತ್ತಿರುವ ಜೂಜು. ಈ ಜೂಜಿಗೆ ಆಜಿ ಎಂದು ನಾಮಧೇಯವು. ಗ್ರಹಗಳಲ್ಲಿ ಚಂದ್ರಸೂರ್ಯರು ಗ್ರಹಣಕ್ಕೆ ಗುರಿಯಾಗುವರು. ಉಳಿದ ಐದು ಗ್ರಹಗಳು ಸೂರ್ಯ ಚಂದ್ರರಿಂದ ಅಸ್ತರಾಗುವರು. ಗ್ರಹಗಳು ಅಸ್ತರಾದಾಗ ಅವರು ಕಾಂತಿಹೀನರಾಗುವರು. ಆ ಸಮಯದಲ್ಲಿ ಅವರ ಪತ್ನಿಗೆ ನಗ್ನತೆಯುಂಟಾಯಿತೆಂದು ವೇದದಲ್ಲಿ ವರ್ಣನೆಯು ಕಂಡುಬರುವುದು. ಇಂತಹ ನಗ್ನತೆಯು ಋಗ್ವೇದದ ಹತ್ತನೆಯ ಮಂಡಲದ ೩೩ನೇ ಸೂಕ್ತದಲ್ಲಿ ವರ್ಣಿಸಲ್ಪಟ್ಟಿರುವುದು. ಈ ವರ್ಣನೆಯು ದ್ರೌಪದೀ ವಸ್ತ್ರಾಪಹರಣದ ಕತೆಗೆ ಮೂಲವೆಂದು ತೋರುವುದು"[1]—ಎಂದು ಡಾ|| ಶ್ಯಾಮಶಾಸ್ತ್ರಿಗಳು ಹೇಳುತ್ತಾರೆ. ಇಲ್ಲಿ ಋಗ್ವೇದದಲ್ಲಿ ಕಂಡುಬರುವ ಈ ಸೂಕ್ತದಲ್ಲಿ ಕವಷ ಸಂಜ್ಞನೆನ್ನುವವನು, ತ್ರಸದಸ್ಸುವಿನ ಪುತ್ರನೂ ಅತಿಶಯವಾಗಿ ದಾನ ಮಾಡುವವನೂ ಆದ ಕುರುಶ್ರವಣನೆಂಬ ರಾಜನಿಂದ ಋತ್ವಿಕ್ಕುಗಳಿಗಾಗಿ ಧನವನ್ನು ಯಾಚಿಸುವ

[1] ವೇದರಹಸ್ಯ : ಪಂಡಿತರಾಜ, ವಿದ್ಯಾಲಂಕಾರ ಮಹಾಮಹೋಪಾಧ್ಯಾಯ ಡಾ|| ಆರ್. ಶ್ಯಾಮಶಾಸ್ತ್ರಿಗಳು : "ಜಯಕರ್ನಾಟಕ"—ಡಿಸೆಂಬರ್ ೧೯೪೨.

ಪ್ರಸಂಗ ವರ್ಣಿತವಾಗಿದೆ. ಇಲ್ಲಿ ಬರುವ ಜನಾಃ, ದುಶ್ಯಾಸುಃ, ನಗ್ನತೆ, ಕುರುಶ್ರವಣ ರಾಜ–ಈ ಶಬ್ದಗಳು ಮಹಾಭಾರತದ ದ್ರೌಪದೀ ವಸ್ತ್ರಾಪಹರಣದ ಕಥಾ ಸೂಚಕ ಗಳಾಗಿರಬಹುದೆಂದು ಲೇಖಕರು ಊಹಿಸಿದ್ದಾರೆ. ಆದರೆ ಈ ಖಗೋಲ ವಿಜ್ಞಾನದ ವಿವರಣೆಯಿಂದ ವೇದದ ಈ ಋಕ್ಕಿಗೂ ದ್ರೌಪದೀ ವಸ್ತ್ರಾಪಹರಣಕ್ಕೂ ಸಂಬಂಧ ವಿರುವುದೋ ಇಲ್ಲವೋ ತಿಳಿಯದಾದರೂ, ಈ ಎರಡಕ್ಕೂ ಇರಬಹುದಾದ ಸಾದೃಶ್ಯ ಶ್ರೀಯನ್ನು ಗುರುತಿಸಿದ ಶ್ರೀ ಶಾಸ್ತ್ರಿಗಳ ಕಲ್ಪನೆ ಸುಂದರವಾಗಿದೆಯೆಂದು ಒಪ್ಪ ಬಹುದು. ಮಹಾಭಾರತ ಸಮಸ್ತಕ್ಕೂ ಒಂದು ಬಗೆಯ ತಾತ್ವಿಕ ವಿವರಣೆಯನ್ನು ಕೊಡಲು ಹೊರಟು, ಮಹಾಭಾರತದ ಪ್ರತಿಯೊಂದು ಪಾತ್ರವೂ ಭರತಖಂಡದ ಮತಧರ್ಮಗಳ ಒಂದೊಂದು ತತ್ವಕ್ಕೆ ಪ್ರತಿಮೆ ಎಂದು ಭಾವಿಸಿ ದ್ರೌಪದೀ ವಸ್ತ್ರಾಪಹರಣದ ಪ್ರಸಂಗ "ಯಜ್ಞ ಮತ್ತು ಭಗವದ್ಭಾವನೆ"ಯ ಪ್ರತಿಮೆ ಎಂದು ಶ್ರೀ ಎನ್. ವಿ. ಥಾಡನಿಯವರು ಸಾಧಿಸಲು ಪ್ರಯತ್ನಪಟ್ಟಿದ್ದಾರೆ.[1] ರಾಮಾಯಣಕ್ಕೆ ಒಂದು ಅಧ್ಯಾತ್ಮಿಕ ವಿವರಣೆಯನ್ನು ಕೊಟ್ಟ ಅಧ್ಯಾತ್ಮ ರಾಮಾಯಣದಂತೆ, ಇದು ಮಹಾಭಾರತಕ್ಕೂ ಆಧ್ಯಾತ್ಮಿಕ ವಿವರಣೆಯನ್ನು ನೀಡುವ ಪ್ರಯತ್ನ. ಈ ಪ್ರಯತ್ನದಿಂದ ತಾತ್ವಿಕಜ್ಞಾನಕ್ಕೆ ಏನು ಲಾಭವಾಗಿದೆಯೋ ನಮಗೆ ತಿಳಿಯುವುದಿಲ್ಲವಾದರೂ, ಕಾವ್ಯವನ್ನೋದಿ ಆನಂದಿಸುವ ಸಹೃದಯರಿಗೆ ಇದು ಕೇವಲ ಚಮತ್ಕಾರ ಮಾತ್ರವೆಂದು ತೋರದೆ ಇರದು. ಇನ್ನು ಭಕ್ತಿಯ ದೃಷ್ಟಿಯಿಂದ ನೋಡುವುದಾದರೆ ವಸ್ತ್ರಾಪಹರಣ ಪ್ರಸಂಗ ಭಕ್ತನ ಶ್ರದ್ಧೆಯ ಕರೆಗೆ ಓಗೊಟ್ಟ ಭಗವಂತನ ಲೀಲೆಗಳಲ್ಲೊಂದಾಗಿ ತೋರುತ್ತದೆ. ಒಟ್ಟಿನಲ್ಲಿ ಈ ಪ್ರಸಂಗ ಇಷ್ಟೊಂದು ವಿವಿಧ ದೃಷ್ಟಿಯ ಜನರ ಗಮನವನ್ನು ಸೆಳೆದಿದೆ ಎನ್ನುವುದು ಗಮನಾರ್ಹವಾದ ಸಂಗತಿ.

ಏನು ವಿವರಣೆ ಕೊಡಲು ಪ್ರಯತ್ನಿಸಿದರೂ ಈ ಸಂದರ್ಭದಲ್ಲಿ ಕಟುವಾದ ಸತ್ಯವೊಂದು ಹೀಗೆ ವಿವರಣೆಗಳ ಮೂಲಕ ಮರೆಮಾಡಲ್ಪಟ್ಟಿದೆಯೇನೋ ಎಂಬ ಒಂದು ಶಂಕೆ ಮೂಡುತ್ತದೆ. ವಾಸ್ತವವಾಗಿ ದ್ರೌಪದಿಗೆ ವಸ್ತ್ರಾಪಹರಣವೆ ಆಗಿರ ಬೇಕು—ಎನ್ನುವುದೇ ಆ ಶಂಕೆ![2] ಆದರೆ ಮೂಲಭಾರತ ವಸ್ತ್ರ ಅಕ್ಷಯವಾಯಿ

---

[1] As the idea of 'wearing clothes' is associated with God, he who believes in him cannot be 'unrobed.' Again the idea of God is born of sacrifice, and, as Draupadi is an embodiment of sacrifice, she remembers Krishna, the supreme creator of the universe, and cannot be 'unrobed'....

The Mystery of Mahabharatha : N. V. Thadani,

Vol. IV—Part I, Page 255.

[2] ಈ ಒಂದು ಅಂಶಕ್ಕೆ ನಾನು ಪೂಜ್ಯ ತೀ. ನಂ. ಶ್ರೀ ಅವರಿಗೆ ಋಣಿಯಾಗಿದ್ದೇನೆ.

ತೆಂದು ಹೇಳಿ ಅದನ್ನು ಸುಮ್ಮನೆ 'ಅದ್ಭುತತಮಂ' ಎಂದು ವ್ಯಾಖ್ಯಾನಿಸುತ್ತದೆ. ಆದರೆ, ಏಕೆ ಭಾಸ, ಭಟ್ಟನಾರಾಯಣ, ರನ್ನ—ಈ ಕವಿಗಳು ವಸ್ತ್ರಾಪಹರಣವಾಯಿತೆಂದು ಒಕ್ಕೊರಲಿನಿಂದ ಹೇಳಿದರೂ, ಕೃಷ್ಣನ ಕೃಪೆಯನ್ನಾಗಲೀ, ಅದರಿಂದ ವಸ್ತ್ರ ಅಕ್ಷಯವಾದ ವಿಚಾರವನ್ನಾಗಲೀ ಹೇಳಲಿಲ್ಲ? ಮೂಲಭಾರತದಲ್ಲೂ ಸಹ ಆ ಘಟನೆ ನಡೆದ ಮರುಕ್ಷಣವೇ, ವಸ್ತ್ರ ಅಕ್ಷಯವಾದ ಅದ್ಭುತವನ್ನು ಅದೊಂದು ಭಗವತ್ಕೃಪೆ ಎಂಬಂತಹ ಯಾವ ಮಾತೂ ಕಾಣುವುದಿಲ್ಲ. ಮುಂದೆ ಮಹಾಭಾರತದಲ್ಲಿ, ಕವಿಯಾಗಲಿ, ಆತನ ಪಾತ್ರಗಳಾಗಲಿ ವಸ್ತ್ರ ಅಕ್ಷಯವಾದ 'ಅದ್ಭುತ'ದ ಬಗೆಗೆ ಯಾವ ದೈವೀಕೃಪೆಯ ವಿಷಯವನ್ನೂ ಹೇಳುವುದಿಲ್ಲವಲ್ಲ? ಕೃಷ್ಣನ ಕೃಪೆಯೊಂದಿಗೆ ಹೊಂದಿಕೊಂಡ 'ಅಕ್ಷಯ ವಸ್ತ್ರ'ದ ಅದ್ಭುತ, ಕೃಷ್ಣನ ಕೃಪೆಯಂತೆಯೇ ಪ್ರಕ್ಷಿಪ್ತವಿರಬಹುದಲ್ಲ? ಕೃಷ್ಣನ ಕೃಪೆ ಪ್ರಕ್ಷಿಪ್ತವೆಂದು ಅದನ್ನು ತೆಗೆದುಹಾಕಿದಂತೆ, ವಸ್ತ್ರ ಅಕ್ಷಯವಾದ ವಿಷಯವೂ ಪ್ರಕ್ಷಿಪ್ತವೆಂದು ತೆಗೆದು ಹಾಕಿದರೆ, ವಸ್ತ್ರಾಪಹರಣವಾಯಿತೆಂದೇ ಹೇಳಬೇಕಲ್ಲ? ನಮ್ಮ ಮಟ್ಟಿಗೆ ಹೇಳುವುದಾದರೆ ಹಾಗೆ ಆಗಿದ್ದಿರಲೂಬಹುದು. ಆದರೆ ಹಾಗೆಂದು ಚಿತ್ರಿತವಾಗಿದ್ದಿದ್ದರೆ, ಭಾರತೀಯ ಸಹೃದಯರ ನೈತಿಕ ದೃಷ್ಟಿ ಸಹಿಸುವುದಾದರೂ ಹೇಗೆ? ಆದ್ದರಿಂದ ಅಕ್ಷಯವಸ್ತ್ರದ ಪ್ರಸಂಗ ಬಂದು ದ್ರೌಪದಿಯ ಮಾನವನ್ನು ಉಳಿಸಿತು. ಈ ಭಾಗ ಪ್ರಕ್ಷೇಪವಲ್ಲವೆಂದು ಪಾಠನಿರ್ಣಯಕಾರರು ಒಪ್ಪಿಕೊಳ್ಳುವಷ್ಟರಮಟ್ಟಿಗೆ ತನ್ನನ್ನು ತಾನು ಬೆಸೆದುಕೊಂಡಿತು. ಕೃಷ್ಣನ ಕೃಪೆಯ ಪ್ರಸಂಗ ಪ್ರಕ್ಷಿಪ್ತವೆಂದರೂ ತಡೆದೀತು; ಆದರೆ ಅಕ್ಷಯವಸ್ತ್ರದ ಪ್ರಸಂಗವೂ ಪ್ರಕ್ಷಿಪ್ತವೆಂದರೆ ತಡೆಯಲಾರದು ಭಾರತೀಯ ಸಹೃದಯಮತಿ. ಕೃಷ್ಣನ ಕೃಪೆ ಹೋದರೆ ಹೋಗಲಿ, ಸದ್ಯ ದ್ರೌಪದಿಯ ಮಾನ ಹೀಗಾದರೂ ಉಳಿದರೆ ಸಾಕು—ಎನ್ನಿಸಿರಬೇಕು. ಸರಿ; ದ್ರೌಪದಿಯ ಮಾನ ಉಳಿಯಿತು ವಸ್ತ್ರ ಅಕ್ಷಯವಾದದ್ದರಿಂದ. ಮಹಾಭಾರತ ಅದನ್ನು 'ಅದ್ಭುತತಮಂ' ಎಂದು ವ್ಯಾಖ್ಯಾನಿಸಿತು. ಹೀಗಾಗಿ ವಿಮರ್ಶಕರಿಗೆ ಎರಡೇ ದಾರಿ: ಇಡೀ ವಸ್ತ್ರಾಪಹರಣ ಪ್ರಸಂಗವೇ ಇರಲಿಲ್ಲ ಎನ್ನಬೇಕು; ಇತ್ತು ಎನ್ನುವುದಾದರೆ, ದ್ರೌಪದಿಯ ವಸ್ತ್ರ ಅಕ್ಷಯವಾಯಿತು ಎನ್ನಬೇಕು!

ಆದುದರಿಂದ ಈ ಸಮಸ್ಯೆಯ ಪರಿಶೀಲನೆಗೆ ಮೂರು ಮಾರ್ಗಗಳಿರುವಂತೆ ತೋರುತ್ತದೆ:

೧. ವಸ್ತ್ರಾಪಹರಣ ಪ್ರಸಂಗ ವಾಸ್ತವವಾಗಿ ಇರಲೇ ಇಲ್ಲ; ಅದೇನಿದ್ದರೂ ಇತ್ತೀಚಿನವರ ಪ್ರಕ್ಷೇಪ.
೨. ಅದು ಸಂಪೂರ್ಣ ಪ್ರಕ್ಷೇಪವಲ್ಲ; ಅದು ಮೊದ ಮೊದಲು ಇದ್ದ ರೂಪ ಬೇರೆ, ಕ್ರಮೇಣ ಮಾರ್ಪಾಡಾಗಿ ಈಗಿರುವ ರೂಪಕ್ಕೆ ಬಂದಿದೆ.
೩. ವಸ್ತ್ರಾಪಹರಣ ಪ್ರಸಂಗವನ್ನು ಕವಿ ಚಿತ್ರಿಸಿರುವಂತೆಯೇ ಒಪ್ಪಿಕೊಂಡು ವಸ್ತುನಿಷ್ಠ ದೃಷ್ಟಿಯಿಂದ ಪರಿಶೀಲಿಸುವುದು.

ವಸ್ತ್ರಾಪಹರಣ ಪ್ರಸಂಗವೇ ಪ್ರಕ್ಷಿಪ್ತವೆಂದು ತಳ್ಳಿಹಾಕಲು ಆಧಾರವೇ ಇಲ್ಲ. ಏಕೆಂದರೆ ವಸ್ತ್ರಾಪಹರಣವಾಯಿತೆಂಬ ವಿಷಯಕ್ಕೆ, ಮಹಾಭಾರತವನ್ನು ಆಧಾರವನ್ನಾಗಿರಿಸಿ ರಚಿತವಾದ ಸಂಸ್ಕೃತ ಹಾಗೂ ಕನ್ನಡ ಕವಿಗಳ ಕೃತಿಗಳಲ್ಲಿ ಏಕಪ್ರಕಾರವಾಗಿ ಸಾಕಷ್ಟು ಸಾಕ್ಷ್ಯವಿದೆ. ಭಂಡಾರ್ಕರ್ ಸಂಶೋಧನ ಸಮಿತಿಯವರು ಪರಿಷ್ಕರಿಸಿ ಪ್ರಕಟಿಸಿರುವ ಭಾರತದಲ್ಲಿ ಇದು ಮೂಲ ಪಾಠವೇ ಇರಬೇಕೆಂದು ಅಂಗೀಕೃತವಾಗಿದೆ. ಈ ಕಾರಣದಿಂದ ವಸ್ತ್ರಾಪಹರಣ ಪ್ರಸಂಗವೇ ಇಡಿಯಾಗಿ ಪ್ರಕ್ಷಿಪ್ತವೆಂದು ಒಪ್ಪಲಾಗುವುದಿಲ್ಲ.

ಎರಡನೆಯ ಮತ, ಈ ಪ್ರಸಂಗ ಮೊದಲು ಇದ್ದ ರೂಪ ಬೇರೆ, ಅದರಲ್ಲಿ ಕಾಲ ಕಾಲಕ್ಕೆ ಮಾರ್ಪಾಡುಗಳಾಗಿ ಈಗ ಹೀಗಿರುವ ರೂಪಕ್ಕೆ ಬಂದಿದೆ ಎನ್ನುವುದು. ಶ್ರೀಯುತ ಕೆ. ವೆಂಕಟಾಚಲಂ ಐಯ್ಯರ್ ಅವರು ಈ ಬಗ್ಗೆ ಹೇಳುತ್ತಾ "ಪಾಂಡವರು ತಮ್ಮ ಉತ್ತರೀಯಗಳನ್ನು ತೆಗೆದೆಸೆದಾಗ, ಕೌರವನ ಪರವಾಗಿ ದುಶ್ಶಾಸನ ದ್ರೌಪದಿಯ ಅವಕುಂಠನವನ್ನು ಕಿತ್ತೆಸೆದಿರಬಹುದು. ಹೀಗೆಂದು ಮೊದ ಮೊದಲ ಮಹಾಭಾರತದ ಪ್ರತಿಗಳಲ್ಲಿದ್ದುದು ಬರಬರುತ್ತಾ ವಸ್ತ್ರಾಪಹರಣದ ಪ್ರಸಂಗವಾಗಿ, ಅನಂತರ ಅದು ಅಕ್ಷಯವಾದ ಕತೆಯಾಗಿ, ಅದಾದಮೇಲೆ ಕೃಷ್ಣನ ಪವಾಡವಾಗಿ ಮಾರ್ಪಟ್ಟಿರಬಹುದು"[1] ಎನ್ನುತ್ತಾರೆ. ಇದಕ್ಕೆ ಸಮರ್ಥನೆಯಾಗಿ ಅವರು, "ದುಶ್ಶಾಸನನು ದ್ರೌಪದಿಯನ್ನು ಸಭೆಗೆ ಎಳೆದುತಂದನೆನ್ನುವ ವಿಚಾರವೇ ಸಂಶಯಾಸ್ಪದವಾಗಿದೆ, ಅಂತೆಯೇ ಮುಂದೆ, ಅವಳು ಏಕವಸ್ತ್ರೆಯಾಗಿದ್ದಳು, ಅದಕ್ಕೆ ಕಾರಣ ಆಕೆ ರಜಸ್ವಲೆಯಾಗಿದ್ದಳು—ಎಂಬ ಅಂಶ, ಆಕೆಯ ಅವಕುಂಠನವನ್ನು ಸೆಳೆಯಲಿಲ್ಲ, ಸೆಳೆದದ್ದು ಉಟ್ಟ ಏಕವಸ್ತ್ರವನ್ನೇ—ಎಂಬ ವಿಷಯವನ್ನು ಸ್ಥಾಪಿಸಲು ಬಂದು ಸೇರಿಕೊಂಡ ಭಾಗ"[2] ಎನ್ನುತ್ತಾರೆ. ಆದರೆ ದ್ರೌಪದಿ ಉಟ್ಟಿದ್ದು ಏಕವಸ್ತ್ರವನ್ನೇ, ಆಕೆ ಅಂದು ರಜಸ್ವಲೆಯಾಗಿದ್ದಳು—ಎಂಬ ವಿಷಯ ಮಹಾಭಾರತದಲ್ಲೆ ಹಲವು ಸಲ ಬರುತ್ತದೆ. ಅಂತೆಯೇ ಪಂಪ ನಾರಣಪ್ಪ ಇವರಲ್ಲಿಯೂ ಈ ವಿಷಯಕ್ಕೆ ಸಮರ್ಥನೆ ಇದೆ.[3] ಆದರೆ ದ್ರೌಪದಿಯನ್ನು ದುಶ್ಶಾಸನ ಸಭೆಗೆ ಎಳೆದುತಂದ ವಿಚಾರದ ಬಗೆಗೆ ಶ್ರೀ ಐಯ್ಯರ್ ಅವರು ವ್ಯಕ್ತಪಡಿಸಿರುವ ಸಂದೇಹ ಸಕಾರಣವಾಗಿದೆ. ಏಕೆಂದರೆ ಮೂಲಭಾರತದ ಈ

1–2. Notes of a study of the preliminary chapters of The Mahābhārata—K. Venkatachallam Iyer : p. 182-183 ; 184.

3. ತೆಲುಗು ಭಾರತದಲ್ಲಿ ಮಾತ್ರ ದ್ರೌಪದಿ ರಜಸ್ವಲೆಯಾಗಿದ್ದಳೆಂಬ ವಿಷಯವಿಲ್ಲ. "ಏಕವಸ್ತ್ರಯು ಅಧೋನೀವಿಯು" ಎಂದಿದೆ. ಮಹಾಭಾರತ ಸಂಪಾದಕ ಪರಿಣತರು 'ಅಧೋನೀವಿ' ಎಂಬುದು ರಜಸ್ವಲೆಯಾಗಿದ್ದಳೆಂಬ ವಿಷಯವನ್ನು ಸೂಚಿಸುತ್ತದೆ ಎನ್ನುತ್ತಾರೆ—K. Venkatachallam Iyer : Notes of a study of the preliminary chapters of The Mahabharata : p. 196.

ಪ್ರಸಂಗದಲ್ಲೆ ಎರಡು ಬೇರೆ ಬೇರೆ ಪಾಠಗಳ ಜೋಡಣೆಯಿರುವಂತೆ ತೋರುತ್ತದೆ. ಒಂದರಲ್ಲಿ ಮೊದಲು ಪ್ರಾತಿಕಾಮಿಯನ್ನು ಕೌರವ ದ್ರೌಪದಿಯನ್ನು ಕರೆತರಲು ಕಳುಹಿಸುತ್ತಾನೆ. ಆದರೆ ದ್ರೌಪದಿ ತಾನು ಬರಲೊಪ್ಪದೆ, ಧರ್ಮರಾಯನು ತನ್ನನ್ನು ತಾನೆ ಮೊದಲು ಸೋತು ಅನಂತರ ತನ್ನನ್ನು (ದ್ರೌಪದಿಯನ್ನು) ಸೋತುದು ಹೇಗೆ ಎಂಬ ಪ್ರಶ್ನೆಯನ್ನು ಹೇಳಿಕಳುಹಿಸುತ್ತಾಳೆ. ಪ್ರಾತಿಕಾಮಿಯ ಪ್ರಯತ್ನ ಮತ್ತೂ ಒಂದು ಸಲ ಸಫಲವಾಗದಿದ್ದಾಗ, ಯುಧಿಷ್ಠಿರನು ದ್ರೌಪದಿಗೆ ಸಮ್ಮತನಾದ ದೂತನೊಬ್ಬನನ್ನು ಕಳುಹಿಸಿದನು ; ಆಗ ದ್ರೌಪದಿ ಸಭೆಗೆ ಬಂದಳು— ಎಂದಿದೆ. ಅದಾದನಂತರ, ಮತ್ತೆ ದುರ್ಯೋಧನ ಪ್ರಾತಿಕಾಮಿಯನ್ನು ಕುರಿತು 'ದ್ರೌಪದಿಯನ್ನು ಎಳೆದುತಂದು ನಿಲ್ಲಿಸು' ಎಂದು ಹೇಳಿದ ಹಾಗೂ [೨-೬೦-೧೬], ಆ ಕಾರ್ಯಕ್ಕೆ ಪ್ರಾತಿಕಾಮಿ ಹಿಂಜರಿದಾಗ ದುರ್ಯೋಧನ ದ್ರೌಪದಿಯನ್ನೆಳೆದು ತರಲು ತಮ್ಮನಿಗೆ ಆಜ್ಞಾಪಿಸಿದ ಹಾಗೂ [೨-೬೦-೧೭], ಅನಂತರ ದುಶ್ಶಾಸನನು ಅವಳನ್ನು ಹಿಡಿದು ಎಳೆದುತಂದಂತೆಯೂ—ಇನ್ನೊಂದು ಪಾಠವಿದೆ.[1] ಈ ಬಗ್ಗೆ ಎಜರ್‌ಟನ್ ಅವರು ಹೇಳುತ್ತಾ "ಸ್ಪಷ್ಟವಾಗಿ ಇಲ್ಲಿ ಎರಡು ಪಾಠಗಳಿವೆ . . . . ಬಹುಶಃ ಮೂಲ ಕರ್ತೃವೇ, ನಮಗೆ ದೊರೆತಿರುವ ಎಲ್ಲಾ ಪ್ರತಿಗಳಲ್ಲಿಯೂ ದೊರೆಯುವ ಈ ಎರಡು ಭಾಗಗಳನ್ನು ಸೇರಿಸಲು ಪ್ರಯತ್ನಿಸಿದ್ದಾನೆ. ಆದರೆ ಈ ಪ್ರಯತ್ನ ಅಷ್ಟೇನೂ ಯಶಸ್ವಿಯಾಗಿಲ್ಲ"[2]—ಎನ್ನುತ್ತಾರೆ. ಆದರೆ ಪಂಪ, ನನ್ನಯ್ಯ ನಾರಣಪ್ಪ ಇವರಲ್ಲಿ ಈ ಎರಡು ಭಾಗಗಳ ಯಶಸ್ವಿಯಾದ ಸಂಯೋಜನೆ ನಡೆದಿದೆ.[3]

1. ಈ ಭಾಗದ ವಿಷಯ ಭಂಡಾರ್ಕರ್ ಪ್ರಾಚ್ಯ ಸಂಶೋಧನಾ ಸಮಿತಿಯವರಿಂದ ಪರಿಷ್ಕೃತವಾದ ಭಾರತದಲ್ಲಿ : ೨-೬೦-೧೪ ರಿಂದ ೨-೬೦-೨೩.

2. ಮಹಾಭಾರತದ ಸಭಾಪರ್ವಕ್ಕೆ ಬರೆದ ಮುನ್ನುಡಿಯಲ್ಲಿ–Franklin Edgerton : Page XXXI–XXXII.

3. ' ಅಂತು ದುರ್ಯೋಧನನಜಾತಶತ್ರುವಿನ ಸರ್ವಸ್ವಮೆಲ್ಲಮಂ ಗೆಲ್ದು ಗೆಲ್ದ ಕಸವರಮೆಲ್ಲಂ ಬಂದುದು ಪಾಂಚಾಳರಾಜತನೂಜೆಯೊರ್ವಳ್ ಬಂದಳಿಲ್ಲಾಕೆಯಂ ತನ್ನಿಮೆಂದು . . . . ಪ್ರಾತಿಕಾಮಿಯೆಂಬನುಮಂ ತನ್ನ ತಮ್ಮ ದುಶ್ಶಾಸನನುಮಂ ಪೇಟ್ಟೊಡೆ ಅವಂದಿರಾಗಳೆ ಬೀಡಿಂಗೆ ವರಿದು ರಜಸ್ವಲೆಯಾಗಿರ್ದಂ ಮುಟ್ಟಲಾಗದೆನೆಯುಂ ಒತ್ತಂಬದಿಂದೊಳಗಂ ಪೊಕ್ಕು ಪಾಂಚಾಳಿಯಂ ಕಣ್ಗೆಡೆಜಡಿದು ಮುಡಿಯಂ ಪಿಡಿದು ತನ್ಮಧ್ಯದಿಂ ಸುಯೋಧನನ ಸಭಾಮಧ್ಯಕ್ಕೆ ತಂದು . . . [ಪಂಪಭಾರತ : ೭—ವಚನ. ೪, ೫ನೆ ಪದ್ಯದ ನಡುವೆ: ಪು. ೧೭೦]

ಇಲ್ಲಿ ಮೂಲದಲ್ಲಿ ಬರುವ ಧರ್ಮರಾಯನ ದೂತನನ್ನು ನಿವಾರಿಸಿರುವುದೂ, ಪ್ರಾತಿಕಾಮಿ ಹಾಗೂ ದುಶ್ಶಾಸನರಿರ್ವರನ್ನೂ ಕಳುಹಿಸುವುದೂ, ಮೂಲದ ಎರಡು ಪ್ರಸಂಗಗಳ ಯಶಸ್ವಿಯಾದ ಸಂಯೋಜನೆಯೂ, ಪರಿವರ್ತನೆಯೂ ಆಗಿದೆ.

—ನನ್ನಯ್ಯನಲ್ಲಿ ಧರ್ಮರಾಯ ದೂತನನ್ನು ಕಳುಹಿಸಿದ ಪ್ರಸಂಗವೇ ಇಲ್ಲ. ಹೀಗಾಗಿ ಅಲ್ಲಿ ಸಮಸ್ಯೆಯೇ ಏಳುವುದಿಲ್ಲ.

—ನಾರಣಪ್ಪನಲ್ಲಿ, ಮೊದಲು ಪ್ರಾತಿಕಾಮಿ ಹೋಗಿ ಬಂದು ದ್ರೌಪದಿಯ ಪ್ರಶ್ನೆಯನ್ನು

ಮೂಲಭಾರತದಲ್ಲಂತೂ ಈ ವಿಷಯ ಸಂದೇಹಾಸ್ಪದವಾಗಿದೆ. ಆದರೆ, ದ್ರೌಪದಿ ತಾನಾಗಿಯೇ ಬಂದಳೋ, ದುಶ್ಶಾಸನನಿಂದ ಎಳೆದು ತರಲ್ಪಟ್ಟಳೋ ಎಂಬ ವಿಷಯ ಅವಳ ವಸ್ತ್ರಾಪಹಾರವಾಗಲಿಲ್ಲ ಎಂಬ ವಿಷಯಕ್ಕೇನೂ ಪೋಷಕ ವಾಗುವುದಿಲ್ಲ. ಹಾಗೆ ನೋಡಿದರೆ, ವಸ್ತ್ರಾಪಹಾರವೇ ಆಗಿರಬಹುದು, ಅನಂತರ ಅಕ್ಷಯವಸ್ತ್ರದ ವಿಷಯ ಸೇರಿಕೊಂಡಿರಬಹುದು ; ಅಥವಾ ವಸ್ತ್ರಾಪಹರಣ ಪ್ರಯತ್ನ ಮಾತ್ರವಿದ್ದಿರಬಹುದು,—ಪಂಪಭಾರತದಲ್ಲಿ ನಿರೂಪಿಸಿರುವಂತೆ—ಅಂಥ ಪ್ರಯತ್ನ ಅಷ್ಟಕ್ಕೇ ನಿಂತಿರಬಹುದು, ಇಲ್ಲವೇ, ವಸ್ತ್ರಾಪಹರಣದಲ್ಲಿ ದ್ರೌಪದಿಯ ಚಾರಿತ್ರದಿಂದ ಆ ಪ್ರಯತ್ನ ವಿಫಲವಾಗಿರಬಹುದು. ಒಂದು ಮಹಾಕೃತಿಯಲ್ಲಿ ಹೀಗಿದ್ದಿರ ಬಹುದು, ಹೀಗಿದ್ದದ್ದು ಹೀಗಾಗಿರಬಹುದು—ಎಂದು ಒಂದು ಪ್ರಸಂಗದ ಬೆಳವಣಿಗೆಯನ್ನು ಊಹಿಸಬಹುದೇ ಹೊರತು ಅದರ ಮೂಲರೂಪವನ್ನು ಖಚಿತ ವಾಗಿ ಯಾರೂ ಹೇಳಲಾರರು. ಆದುದರಿಂದ ಸದ್ಯಕ್ಕೆ, ವಿದ್ವಾಂಸರ ಪರಿಶ್ರಮದಿಂದ, ಪರಿಷ್ಕರಣದಿಂದ, ಮೂಲಪಾಠವೆಂದು ಅಂಗೀಕೃತವಾಗಿರುವ ಭಾಗವನ್ನು, ಅದರ ಸೊಗಸನ್ನು ನಾವು ಪರಿಶೀಲಿಸುವುದು ಒಳ್ಳಿತು.

ಈಗ ಅಂಗೀಕೃತವಾಗಿರುವ ಭಾಗವಷ್ಟನ್ನೆ ನೋಡಿದರೆ, ವಸ್ತ್ರಾಪಹರಣ ಪ್ರಸಂಗ ತುಂಬ ಸಂಗ್ರಹವಾಗಿ, ಸಶಕ್ತವಾಗಿ, ಸುಂದರವಾಗಿ ಬಂದಿದೆ. ಕೇವಲ ಆರು ಪಂಕ್ತಿಗಳಲ್ಲಿ ಈ ಪ್ರಸಂಗವನ್ನು ಚಿತ್ರಿಸಿ, ಅದರ ಪರಿಣಾಮವಾಗಿ ಭೀಮನ ಕೋಪಮುಸಗಿದ ಪರಿಯನ್ನೂ, ಅವನ ಪ್ರಚಂಡ ಪ್ರತಿಜ್ಞೆಯನ್ನೂ ಕವಿ ಮುಂದೆ ಚಿತ್ರಿಸಿದ್ದಾನೆ. ಈ ಭಾಗದ ಪ್ರಕಾರ ದುಶ್ಶಾಸನನು ದ್ರೌಪದಿಯನ್ನು ಸಭಾಮಧ್ಯಕ್ಕೆ ಎಳೆದು ತಂದು ಅವಳ ಸೀರೆಯನ್ನು ಸೆಳೆಯಲು ಉಪಕ್ರಮಿಸಿದನು ; ಆಗ ಅವನು ಎಳೆದಂತೆಲ್ಲಾ ಅದೇ ಪ್ರಕಾರವಾದ ವಸ್ತ್ರಗಳ ಪರಂಪರೆ ಅನೇಕವಾಯಿತು. ಆ 'ಅದ್ಭುತತಮ'ವಾದ ದೃಶ್ಯವನ್ನು ನೋಡಿ ನೆರೆದ ರಾಜರಲ್ಲಿ ಮಹಾ ಕೋಲಾಹಲ ಉಂಟಾಯಿತು. ಈ ಸಂಗತಿಯ ಸತ್ಯ ಇಷ್ಟೆ : ದ್ರೌಪದಿಯ ವಸ್ತ್ರಾಪಹರಣ ನಡೆಯಿತು, ಆದರೆ ಅದು ಸಫಲವಾಗಲಿಲ್ಲ—ಎಂದು ಮಾತ್ರ. ಹಾಗೆ ವಿಫಲ ವಾದುದೂ ಒಂದು ಪವಾಡದಂತೆ ಅದ್ಭುತ. ಕವಿ ಆ ಪ್ರಯತ್ನ ವಿಫಲ ವಾಯಿತೆನ್ನುವ ಸತ್ಯವನ್ನು ಅಕ್ಷಯವಾಯಿತು — ಎಂದು ಹೇಳಿದ್ದಾನೆಂದು ನಾವು ಭಾವಿಸಬಹುದು ; ಅಥವಾ ಮಾನುಷ ಬುದ್ಧಿ ತಿಳಿಯಲಾಗದ, ಅಳೆಯಲಾಗದ ಅಂಥ ಒಂದು ಪವಾಡವೆ ನಡೆಯಿತೆಂದು ಭಾವಿಸಲೂ ಹಿಂಜರಿಯ ಬೇಕಾಗಿಲ್ಲ. ಏಕೆಂದರೆ ಮಹಾಭಾರತ ಎಷ್ಟೇ ಲೌಕಿಕವಾದರೂ, ಅದೊಂದು

ಬಿನ್ನವಿಸಿದಾಗ, ಕೌರವ ನೇರವಾಗಿ ದ್ರೌಪದಿಯನ್ನೆಳೆದುತರಲು ದುಶ್ಶಾಸನನನ್ನೇ ಕಳುಹಿಸು ತ್ತಾನೆ. ಅನಂತರ ದುಶ್ಶಾಸನ ಎಳೆದು ತರುತ್ತಾನೆ.

—ವಿಲ್ಲಿಪುತ್ತೂರ್ ಅವರಲ್ಲಿ ಸಂಪೂರ್ಣವಾಗಿ ನಾರಣಪ್ಪನ ಭಾರತದ ಪ್ರಸಂಗವೇ ಪುನರುಕ್ತವಾದಂತಿದೆ.

ಅದ್ಭುತವಾದ ಲೋಕವೇ. ಮಹಾಭಾರತದ ತುಂಬ ಇಂಥ ಎಷ್ಟೋ ಅದ್ಭುತಗಳಿವೆ; ಅವುಗಳಲ್ಲಿ ಇದೂ ಒಂದು. ಆದರೆ ಪವಾಡವೆಂದರೆ ಏನೋ ಎಂತೋ ಎಂದು ಶಂಕಿಸುವ, ಪ್ರತಿಯೊಂದನ್ನೂ ಬುದ್ಧಿಯ ತರ್ಕಕ್ಕೆ ಒಪ್ಪಿಗೆಯಾಗುವಂತೆ ಹೇಳಬೇಕೆನ್ನುವ ವಿಮರ್ಶನಮತಿ ಒಮ್ಮೊಮ್ಮೆ ಬೇರೆಯ ಲೌಕಿಕ ವಿವರಣೆಯನ್ನು ಕೊಡಲು ಯತ್ನಿಸುವುದೂ ಉಂಟು. ಹೀಗಾಗಿ "ದುಶ್ಶಾಸನ ವಸ್ತ್ರವನ್ನು ಸೆಳೆದಂತೆ, ಸೋತು ಬಿದ್ದಂತೆ ಕತೆಯಿದೆ. ವಸ್ತ್ರ ಅಕ್ಷಯವಾಯಿತು ಎಂದು ವಾಕ್ಯವಿದೆ. ಈ ಸಂಗತಿ ನಡೆದದ್ದೇ ಆದರೆ ಇದರ ಅರ್ಥ ಇಷ್ಟೇ ಇರಬೇಕು. ಅವನು ಅದೆಷ್ಟು ಸೆಳೆದರೂ ವಸ್ತ್ರವನ್ನು ತೆಗೆಯಲಾಗಲಿಲ್ಲ. ಏತರಿಂದಲೋ ನಾವು ಊಹಿಸಬೇಕಾದದ್ದಿಲ್ಲ. ಊಹಿಸಲೇಬೇಕೆಂದು ಯಾರಾದರೂ ಬಯಸುವುದಾದರೆ, ತನ್ನ ಮರ್ಯಾದೆಯ ರಕ್ಷಣೆಗಾಗಿ ದ್ರೌಪದಿ ಅದನ್ನು ಹಿಡಿದಿದ್ದ ಪಟ್ಟು ಅಷ್ಟು ಗಟ್ಟಿಯಾಗಿತ್ತು, ಎನ್ನಬಹುದು."[1]—ಎಂಬ ವಿವರಣೆಯೂ ದೊರೆಯುತ್ತದೆ. ಈ ವಿವರಣೆಯಲ್ಲಿರುವ ಊಹೆ ಬಹಳ ವಿಚಿತ್ರವಾಗಿದೆ. ದ್ರೌಪದಿಯ ವಸ್ತ್ರ ಅಕ್ಷಯ ವಾಯಿತೆಂಬ ಅದ್ಭುತವನ್ನು ಒಪ್ಪಲಾಗದೆ ನಾವು, ಅವಳ ವಸ್ತ್ರಾಪಹರಣ ವಿಫಲ ವಾದ ಪ್ರಸಂಗವನ್ನು, ಭೀಮ ಪತ್ನಿಯ ಬಾಹುಬಲದ ಅಳತೆಗೋಲೆಂದು ವಿವರಿಸು ವುದು ಅಷ್ಟು ಹಿತವಾಗಿ ತೋರುವುದಿಲ್ಲ. ಮೂಲ ಭಾರತವೇ ಈ ಪ್ರಸಂಗವನ್ನು ಕೇವಲ 'ಅದ್ಭುತ'ವಲ್ಲ; 'ಅದ್ಭುತತಮ'—ಎನ್ನುತ್ತದೆ. ಹಾಗೆಂದರೆ ಅರ್ಥ ವೇನು? "ಇದರ ಅರ್ಥ ಇಷ್ಟೇ ಇರಬೇಕು. ಅವನು ಅದೆಷ್ಟು ಸೆಳೆದರೂ ವಸ್ತ್ರವನ್ನು ತೆಗೆಯಲಾಗಲಿಲ್ಲ."[2] ಆ ಪ್ರಯತ್ನ ವಿಫಲವಾಯಿತೆಂಬ ಸತ್ಯವನ್ನು ಕಾವ್ಯ ಅಕ್ಷಯವಾಯಿತು, ಅದೇ ಬಗೆಯ ಅನೇಕ ವಸ್ತ್ರಗಳು ಬಂದುವು— ಎನ್ನುತ್ತದೆ. ಹಾಗೆ ವಿಫಲವಾದದ್ದರ ಕಾರಣ "ದ್ರೌಪದಿ ಹಿಡಿದ ಪಟ್ಟು ಅಷ್ಟು ಗಟ್ಟಿಯಾಗಿತ್ತು"–ಎಂದು ದ್ರೌಪದಿಯ ಬಾಹುಬಲಕ್ಕೆ ಬೆಲೆ ಕೊಡುವುದರ ಬದಲು, ಹಾಗೆ ಆದದ್ದು ಅವಳ ಆತ್ಮಶಕ್ತಿಯ ಅಥವಾ ಶೀಲದ ಬಲದಿಂದ ಎಂದು ಭಾವಿಸು ವುದು ಹೆಚ್ಚು ಸಮಂಜಸ. ಅವಳ ಧರ್ಮವೋ, ಲೋಕವನ್ನು ನಡೆಸುವ ಧರ್ಮವೋ, ಹಾಗೆ ದ್ರೌಪದಿ ಅವಮಾನಿತಳಾಗುವುದನ್ನು ತಡೆಯಿತು ಎನ್ನಬಹುದು.[3]

ಮೂಲ ಭಾರತದಲ್ಲಿ, ದ್ರೌಪದಿಯ ವಸ್ತ್ರಾಪಹರಣ ಪ್ರಯತ್ನ ವಿಫಲ ವಾಯಿತೆಂಬ ಸತ್ಯ, ಯಾವಾಗ ಅಕ್ಷಯವಾಯಿತೆಂಬ ಈ ಪವಾಡದ ಪ್ರತಿಮೆಯಲ್ಲಿ

1–2. ಭಾರತತೀರ್ಥ : ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪುಟ. ೧೯೪.

3. "It is apparently implied (though not stated) that cosmic justice automatically, or "magically" if you like, prevented the chaste and noble Draupadi from being stripped in public"

Edgerton, Introduction, P.XXIX.

ಸೂಚಿತವಾಯಿತೋ, ಅದರಿಂದ ಸಮಾಧಾನಪಡದೆ, ಅದನ್ನು ಹಿಗ್ಗಿಸುವುದರಲ್ಲಿ, ಅದಕ್ಕೊಂದು ತರ್ಕಬದ್ಧತೆಯನ್ನು ನೀಡುವುದರಲ್ಲಿ ಪ್ರಕ್ಷೇಪ ಪ್ರಜ್ಞೆ ತೊಡಗಿದಂತೆ ಕಾಣುತ್ತದೆ. ದುಶ್ಶಾಸನ ದ್ರೌಪದಿಯ ಸೀರೆಯನ್ನು ಸೆಳೆದಂತೆ, ಅದೇ ಬಗೆಯ ಅನೇಕ ವಸ್ತ್ರಗಳು ಕಾಣಿಸಿಕೊಂಡ ಅದ್ಭುತವನ್ನು ಕುರಿತು, ಪ್ರಕ್ಷೇಪಕಾರರಲ್ಲಿ ಸಾಕಷ್ಟು ಕುತೂಹಲ ಮೂಡಿರಬಹುದು. ಸೀರೆಯೇನೋ ಅಕ್ಷಯವಾಯಿತು; ಅದು 'ಅದ್ಭುತ ತಮ' ಎಂದು ಮಹಾಭಾರತ ಹೇಳಿತು. ಆದರೆ ಈ ಪವಾಡದ ಹಿಂದೆ ಯಾವ ಶಕ್ತಿ ಕೆಲಸಮಾಡಿರಬಹುದು? ದ್ರೌಪದಿಯ ಶೀಲವೆ? ದೈವೀ ಕೃಪೆಯೆ? ಈ ಪ್ರಶ್ನೆಗೆ ಮಹಾಭಾರತ ಮೌನವಾಗಿದೆಯಲ್ಲ? ಈ ಪ್ರಶ್ನೆಗಳುದ್ಭವಿಸಿ, ಹಾಗೆ ಸೀರೆ ಅಕ್ಷಯವಾದ ಪವಾಡದ ಮಹಿಮೆಯನ್ನು, ಮರ್ತ್ಯಳಾದ ದ್ರೌಪದಿಯ ಚಾರಿತ್ರಕ್ಕೆ ಮಾತ್ರ ಕೊಡಲೊಪ್ಪದೆ, ದೇವರ ಕೃಪೆಗೆ ಸಲ್ಲಿಸಿರುವಂತೆ ತೋರುತ್ತದೆ. ಹೀಗಾಗಿ ಪಾಂಡವರ ಪ್ರಾಣನಾದ ಶ್ರೀ ಕೃಷ್ಣನನ್ನು ದ್ರೌಪದಿ ನೆನೆದಳೆಂದೂ, ಭಗವಾನ್ ಕೃಷ್ಣನು ಸೀರೆಯನ್ನು ಅಕ್ಷಯಮಾಡುವ ಕೃಪೆದೋರಿದನೆಂದೂ, ಮಹಾಭಾರತದ ಅದ್ಭುತವನ್ನು ರಮ್ಯವನ್ನಾಗಿ ವಿಸ್ತರಿಸಿತು ಪ್ರಕ್ಷೇಪ ಪ್ರಜ್ಞೆ.[1] ಅಲ್ಲಿ ಸಭೆಯಲ್ಲಿ ದುಶ್ಶಾಸನ ಸೀರೆಯನ್ನು ಸೆಳೆದಾಗ ಅವಳು ಕೃಷ್ಣನನ್ನು ಬಗೆಬಗೆಯಾಗಿ ಪ್ರಾರ್ಥಿಸಿದಳು. ಆಗ ಶ್ರೀ ಕೃಷ್ಣನು ಭಕ್ತಳ ವಾಣಿಗೆ ಓಗೊಟ್ಟು ಅವಳಿಗೆ ಅಕ್ಷಯವಸ್ತ್ರವನ್ನು ಕರುಣಿಸಿದನು.—ಈ ಒಂದು ಸಂಗತಿ ಪ್ರಕ್ಷಿಪ್ತವಾದರೂ ಬಹು ಸ್ವಾರಸ್ಯವಾದ ಹಲವು ಅಂಶಗಳು ಇದರಲ್ಲಿವೆ. ಒಂದು ವೇಳೆ ಈ ಪವಾಡದ ಮಹಿಮೆಗೆ ಕೇವಲ ದ್ರೌಪದಿಯ ಶೀಲವೆ ಕಾರಣ ಎಂದು ಪ್ರಕ್ಷೇಪಕಾರರು ವಿವರಿಸಿದ್ದ ಪಕ್ಷದಲ್ಲಿ, ಅದು ಮಾನವ ಚಾರಿತ್ರದ ಮಹಿಮೆಯಷ್ಟನ್ನೆ ಹೇಳಿದಂತಾಗುತಿತ್ತು. ಹಾಗೆ ಹೇಳಿದ್ದರೆ ಅದೂ ದೊಡ್ಡ ವಿಚಾರವೇ. ಆದರೆ ಅಷ್ಟನ್ನೆ ಹೇಳದೆ ಈ ಮಹಿಮೆಗೆ ಕೃಷ್ಣನನ್ನು ಏಕೆ ಕಾರಣವನ್ನಾಗಿ ಎಣಿಸಿತು? ಇಡೀ ಪ್ರಸಂಗದ

---

1. ಒಂದು ಕಡೆ ಮಹಾಕವಿಪ್ರಜ್ಞೆ ಕಾವ್ಯವನ್ನು ಕಟ್ಟುತ್ತಿರುವಂತೆಯೇ, ಅದೇ ಕಾವ್ಯವಸ್ತುವನ್ನು ಕುರಿತು ಆ ಮೊದಲೇ ಪ್ರಕ್ಷೇಪ ಪ್ರಜ್ಞೆ ನಿರ್ಮಿಸಿದ ಹಲವು ಪ್ರಸಂಗಗಳನ್ನು ಅಳವಡಿಸಿಕೊಂಡು ಪ್ರಯೋಜನ ಪಡೆಯುತ್ತದೆ. ಇನ್ನು ಹಲವು ವೇಳೆ ಮಹಾಕವಿಯ ಕಾವ್ಯ ನಿರ್ಮಾಣವಾದಮೇಲೂ ಈ ಪ್ರಕ್ಷೇಪ ಪ್ರಜ್ಞೆ, ಅವಕಾಶ ಸಿಕ್ಕೆಡೆಯಲ್ಲಿ ತನ್ನ ಕೈಚಳಕವನ್ನು ಸೇರಿಸುತ್ತದೆ. ಅಲ್ಲಿನ ಶೂನ್ಯವನ್ನು ಹಲವು ಸಲ ಭರ್ತಿಮಾಡುವುದುಂಟು; ಅಲ್ಲಿನ ಸಮಸ್ಯೆಗಳಿಗೆ ಉತ್ತರಗಳನ್ನು ಸೇರಿಸುವುದುಂಟು; ಎಷ್ಟೋ ಸಲ ತನಗಾಗದ ಮತವೊಂದರ ಖಂಡನ ಮಂಡನಗಳೂ, ಅಥವಾ ತಾನು ಒಪ್ಪಿಕೊಂಡ ವಾದ, ನೀತಿಬೋಧೆಗಳೂ ಪ್ರಕ್ಷೇಪಕಾರರಿಂದ ಮಹಾಕಾವ್ಯದಲ್ಲಿ ಬಂದು ಮನೆಮಾಡಲೂ ಬಹುದು. ಎಷ್ಟೋ ಸಲ ಮೂಲದ ಧ್ವನಿಪೂರ್ಣ ಮೌನ ಈ ಪ್ರಕ್ಷೇಪಗಳ ಪೂರಣದಿಂದ ವಾಚ್ಯವಾಗುವುದೂ ಉಂಟು; ಎಲ್ಲೋ ಒಮ್ಮೊಮ್ಮೆ ಕವಿ ಕಾಣದ್ದನ್ನು ಈ ಪ್ರಕ್ಷೇಪಕಾರ ಕಂಡರಿಸಿ ಸೇರಿಸಿ ಸೊಗಸನ್ನು ತರಬಹುದು. ಅಂತೂ ಮಹಾಕವಿ ಪ್ರಜ್ಞೆಯ ಜೊತೆಯಲ್ಲಿಯೇ ಈ ಪ್ರಕ್ಷೇಪಪ್ರಜ್ಞೆಯೂ ಸಹಯಾತ್ರಿಯಾಗಿ ಹಿಂಬಾಲಿಸಿ ಬಂದು ಸಮಯ ದೊರೆತಾಗ ಮಹಾಕವಿ ಕೃತಿಯಲ್ಲಿ ಮನೆಮಾಡಿ ಕೂತುಬಿಡುತ್ತದೆ!

ಅದ್ಭುತದ ಜವಾಬ್ದಾರಿಯನ್ನು ದ್ರೌಪದಿಯ ಶೀಲದ ಮಹತ್ವ ಹೊರಲಾರದು ಎಂಬ ಶಂಕೆಯಿಂದ ಪ್ರಕ್ಷೇಪ ಪ್ರಜ್ಞೆ ಆ ಪವಾಡದ ಮಹಿಮೆಯನ್ನು ಕೃಷ್ಣನಿಗೆ ಸಲ್ಲಿಸಿತು ಎಂದಲ್ಲ ; ಮಾನವ ಶಕ್ತಿಗಿಂತ ದೈವ ಹಿರಿದಾದುದು ಎಂಬ ಭಾವನೆಯಿಂದ ಹೀಗೆ ಮಾಡಿತು. ಈ ಮಹಿಮೆಯನ್ನು ಕೃಷ್ಣನಿಗೆ ಸಲ್ಲಿಸುವುದರ ಮೂಲಕ, ಮಾನುಷ್ಯದ ಮಹಿಮೆಯ ಬೆಲೆಯನ್ನು ತಗ್ಗಿಸದೆ, ದೈವದ ಮಹಿಮೆಯ ಬೆಲೆಯನ್ನು ಎತ್ತಿ ಹಿಡಿದಿದ್ದಾರೆ ಪ್ರಕ್ಷೇಪಕಾರರು. ಏಕೆಂದರೆ ಭಾರತೀಯರ ಪ್ರಕಾರ ಮನುಷ್ಯತ್ವದ ಮಹಿಮೆಗೆ ಬೆಲೆ ಇರುವುದು ಅದು ಎಷ್ಟರಮಟ್ಟಿಗೆ ತನ್ನನ್ನು ದೈವೀಶಕ್ತಿಗೆ ಸಮರ್ಪಿಸಿ ಕೊಳ್ಳುವುದೊ, ಮತ್ತು ಆ ಕೃಪೆಯನ್ನು ತನ್ನೆಡೆಗೆ ಎಳೆದುಕೊಳ್ಳುವುದೋ ಆ ಶ್ರದ್ಧೆಯ ಶಕ್ತಿಯಲ್ಲಿ. ದ್ರೌಪದಿ ಇಂತಹ ಆರ್ತಸ್ಥಿತಿಯಲ್ಲಿ ಕೃಷ್ಣನಿಗೆ ಮೊರೆ ಯಿಟ್ಟಾಗ, ಅವಳ ಅಂತರಂಗದ ಆ ಪ್ರಾರ್ಥನೆಯ ಕರೆ ದೂರದ ದ್ವಾರಕೆಯಲ್ಲಿದ್ದ ಕೃಷ್ಣನ ಕೃಪೆಯನ್ನು ತನ್ನೆಡೆ ಎಳೆದುಕೊಳ್ಳುವಷ್ಟು ಶಕ್ತವಾಗಿತ್ತೆಂಬುದೇ ಭಕ್ತಜನ ಪ್ರಿಯವಾದ ಸಂಗತಿ. ಈ ವಿಚಾರದಲ್ಲಿ, ಈ ಕಾವ್ಯಗಳಲ್ಲಿ ಕಾಣದ, ಆದರೆ ಜನಜನಿತವಾದ ಇನ್ನು ಒಂದು ಅಲಿಖಿತ (?) ಪ್ರಕ್ಷೇಪವನ್ನು ನಾವು ಕೇಳಿದ್ದೇವೆ : ದ್ರೌಪದಿ, ದುಶ್ಯಾಸನ ಸೀರೆಯನ್ನು ಸೆಳೆಯುವ ಕಾಲದಲ್ಲಿ ಇತ್ತ ತನ್ನ ಸೀರೆಯ ನಿರಿಯನ್ನು ಬಲವಾಗಿ ಹಿಡಿದುಕೊಂಡಳು, ಅತ್ತ ದ್ವಾರಕಾವಾಸಿಯಾದ ಕೃಷ್ಣನನ್ನು ಕುರಿತು ಪ್ರಾರ್ಥಿಸಿದಳು. ಎಲ್ಲಿಯತನಕ ಅವಳಲ್ಲಿ ತನ್ನನ್ನು ತಾನು ಕಾಪಾಡಿಕೊಳ್ಳ ಬಲ್ಲೆನೆಂಬ ಭಾವನೆ ಇತ್ತೋ, ಮತ್ತು ಅಂತಹ ಒಂದು ಭಾವನೆಯಿಂದ ಸೀರೆಯನ್ನು ಬಿಗಿಯಾಗಿ ಹಿಡಿದುಕೊಂಡಳೋ, ಅಲ್ಲಿಯತನಕ ಅಕ್ಷಯವಸ್ತ್ರದ ಕೃಪೆ ಅವಳಿಗೆ ಲಭಿಸಲಿಲ್ಲ. ಆದರೆ ಯಾವಾಗ ಅವಳು ತನ್ನನ್ನು ತಾನು ಕಾಪಾಡಿಕೊಳ್ಳಬಲ್ಲೆನೆಂಬ ಕಿಂಚಿತ್ ಅಹಂಕಾರವನ್ನೂ ತೊರೆದು, ಸೀರೆಯ ನಿರಿಯನ್ನು ಕೈಬಿಟ್ಟು, ಸಂಪೂರ್ಣ ಸಮರ್ಪಣಭಾವದಿಂದ ದೇವರಲ್ಲಿ ಮೊರೆಯಿಟ್ಟಳೋ, ಆಗ ಅವಳ ಸೀರೆ ಕೃಷ್ಣನ ಕೃಪೆಯಿಂದ ಅಕ್ಷಯವಾಯಿತು.–ಇದು ಈ ಪ್ರಸಂಗವನ್ನು ಕುರಿತು ಪ್ರಕ್ಷೇಪ ಪ್ರಜ್ಞೆ ಇನ್ನೂ ಕೆಲಸಮಾಡುತ್ತಿರುವ ಪರಿ.[1] ಶ್ರದ್ಧೆ–ಸಮರ್ಪಣಭಾವಗಳ ದೃಷ್ಟಿಯಿಂದ ಈ ಹೊಸ ಕತೆ ತುಂಬ ಅರ್ಥವತ್ತಾಗಿದೆ. ಯಾವ ದೇಶದಲ್ಲಿ ಕಲಾ ಪ್ರಜ್ಞೆ

---

1. ಪುರಂದರದಾಸರದೆಂದು ಹೇಳಲಾದ ' ದ್ರೌಪದೀ ವಸ್ತ್ರಾಪಹರಣ 'ದಲ್ಲಿ, ಸೆಳೆಯು ತಿರ್ದನು ಖಳನು ಬೆಳೆಯುತಿರ್ದವು ಸೀರೆ | ಪೊಳೆವ ಪೊಂಬಟ್ಟೆ ನಾನಾ ವಿಚಿತ್ರದ ಬಣ್ಣ| ಹೊಳಲು ತುಂಬುವ ತೆರದಿ ಸೆಳೆಸೆಳೆದು ಬಳಲಿ ಇಳೆಯೊಳಗೊರಗಿದ |—ಎಂಬ ಪದ್ಯ ಮುಗಿದ ಮೇಲೆ " ಸಿಟ್ಟನಲಿ ದ್ರೌಪದಿಯು ಕಣ್ದೆರೆದು ನೋಡಲಾ | ಬೆಟ್ಟದಂತೊಟ್ಟಿರ್ದ ವಸ್ತ್ರರಾಸಿಗಳೆಲ್ಲ| ಸುಟ್ಟಗ್ನಿ ಹೊರಸೂಸಿ ನೆಟ್ಟನಾರಾಜಗೃಹ ಘಟ್ಟನಾಹುತಿಗೊಂಡಿತು | ಕೊಟ್ಟಳೈ ಶಾಪವನು ಕುರುಪತಿಗೆ ಕಮಲಮುಖಿ | ಕಟ್ಟಾಳು ಭೀಮಸೇನನ ಗದೆಯು ರಣದಲ್ಲಿ | ಕುಟ್ಟಿಬಿಸುಡಲಿ ನಿನ್ನ ತೊಡೆಗಳೆರಡನು ಎಂದು ಇಟ್ಟನುಡಿ ತಪ್ಪಲುಂಟೆ ‖ " ಎಂಬ ಪದ್ಯ ಬರುತ್ತದೆ.

ಹರಿದಾಸ ಕೀರ್ತನ ತರಂಗಿಣಿ: ಸುಬೋಧ ಎಂ. ರಾಮರಾವ್, ದ್ರೌಪದೀ ವಸ್ತ್ರಾಪಹರಣ (ಭಾಗ II, ಪು. ೧೬೪, ಕೀ. ೧೦–೧೧)

ಧರ್ಮದಿಂದ ಜಾಗ್ರತಗೊಂಡಿತೋ, ಎಲ್ಲಿ ಧರ್ಮವೂ ಕಾವ್ಯ ಧರ್ಮವೂ ಬೇರೆಯಲ್ಲ ವೆಂಬ ನಂಬುಗೆ ಬದುಕನ್ನು ತುಂಬಿದೆಯೋ ಅಂಥ ದೇಶದಲ್ಲಿ ಶ್ರೀ ಕೃಷ್ಣನ ಕೃಪೆಯಿಂದ ವಸ್ತ್ರ ಅಕ್ಷಯವಾಯಿತೆಂಬ ವಿಚಾರವನ್ನು ಯಾವ ಸಂಕೋಚವೂ ಇಲ್ಲದೆ ಓದಿ ಸುಖಿಸುತ್ತೇವೆ. ಅದರಿಂದ ಕಾವ್ಯ ಕೇವಲ ಸತ್ಯ ಮತ್ತು ಸುಂದರ ಮಾತ್ರವಾಗದೆ ಶಿವವೂ ಆಯಿತೆಂದು ಭಾವಿಸುತ್ತೇವೆ. ಆದುದರಿಂದಲೇ ನಾರಣಪ್ಪನ ಭಾರತದಲ್ಲಿ ಈ ಪ್ರಸಂಗ ಅತ್ಯಂತ ಕಾವ್ಯಮಯವಾಗಿ ಪರಿಣಮಿಸಿದೆ. ಆದರೆ ಮೂಲಭಾರತದಲ್ಲಿ ಪ್ರಕ್ಷೇಪವೆಂದು ಭಾವಿಸಲಾಗಿರುವ ಕೃಷ್ಣನ ಕೃಪೆಯ ವಿಷಯ ವಿಲ್ಲದೆಯೂ, ವಸ್ತ್ರಾಪಹರಣದ ಪ್ರಸಂಗ ಕಾವ್ಯದೃಷ್ಟಿಯಿಂದ ಅತ್ಯಂತ ಸೊಗಸಾಗಿದೆ ಎಂದು ಒಪ್ಪಬಹುದು.[1]

೬

ವಸ್ತ್ರಾಪಹರಣ ಸಂದರ್ಭದಲ್ಲಿ, ವಸ್ತ್ರ ಅಕ್ಷಯವಾಗಿ ದ್ರೌಪದಿಯ ಮಾನ ವೇನೋ ಉಳಿಯಿತು ; ನಿಜ. ಆದರೆ ಆ ಯುಗದ ಸಭ್ಯತೆಯು, ಹಾಗೂ ಈ ದೃಶ್ಯವನ್ನು ಕುಳಿತು ವೀಕ್ಷಿಸಿದ, ಇದನ್ನು ಕಾರ್ಯರೂಪಕ್ಕೆ ತಂದವರ ಮಾನ ಉಳಿಯಿತೆಂದು ಹೇಳಲಾಗುವುದಿಲ್ಲ. ವಾಸ್ತವವಾಗಿ ಇದೊಂದು ಅಸಭ್ಯವಾದ ಘಟನೆಯೇ. ತಮ್ಮ ವಂಶದ ಕುಲಸ್ತ್ರೀಯನ್ನು ತುಂಬಿದ ಸಭೆಯಲ್ಲಿ ಹೀಗೆ ನಡೆಸಿ ಕೊಂಡದ್ದು ಕಳಂಕಪ್ರಾಯವೇ. ಮೊದಮೊದಲು ದುರ್ಯೋಧನನ ಮನಸ್ಸಿನಲ್ಲಿ ಹೀಗೆ ದ್ರೌಪದಿಯ ವಸ್ತ್ರಾಪಹಾರ ಮಾಡುವ ಕಲ್ಪನೆಯೂ ಇರಲಿಲ್ಲ ; ಅವನ ಪಾಲಿಗೆ ಅವಳು ಸೋತು ವಶವಾದ ದಾಸಿ. ತನ್ನ ದಾಸಿಯರೊಂದಿಗೆ ಅವಳು ಅರಮನೆ ಯನ್ನು ಗುಡಿಸುವುದು ತನಗೆ ಆನಂದ ಎಂದು ಆತ ಭಾವಿಸುತ್ತಾನೆ.[2] ಆದರೆ, ಕರ್ಣ ದುಶ್ಯಾಸನರ ಪಾಲಿಗೆ ಅವಳು, ಗೆದ್ದವರು ಹೇಗೆ ಬೇಕಾದರೆ ಹಾಗೆ ನಡೆಸಿ ಕೊಳ್ಳಬಹುದಾದ ದಾಸಿ ; ಕರ್ಣನಿಗೆ ಹಲವರನ್ನು ಉಪಚರಿಸಿದ ಬಂಧಕಿ ; ಆದ್ದರಿಂದ ಅವರಿಬ್ಬರ ಮತದಲ್ಲೂ ಅವಳು ಏಕವಸ್ತ್ರೆಯಾದರೇನು, ವಿವಸ್ತ್ರೆಯಾದ

---

1. However edifying from the religious stand point the prayer to Krishna and his intervention may be, from the purely secular and artistic stand point :I believe—most people—at least when they get used to it, and if they can detach themselves from familiar memories (Which no one quite likes to give up at first) —will find that original version is finer than any of the 'doctored' ones.

Edgerton, Introduction to Sabhāparva, P. XXIX.

2. ಸಂಮಾರ್ಜತಾಂ ವೇಶ್ಮ ಪರೈತು ಶೀಘ್ರ—
ಮಾನಂದೋ ನಃ ಸಹ ದಾಸೀ ಭಿರಸ್ತು॥—೨-೫೯-೧ (ಉತ್ತರಾರ್ಧ)

ರೇನು—ಅವಮಾನವಲ್ಲ.[1] ಅವರ ಮನದಲ್ಲಿ ಬೆಳೆದ ‘ ವಿವಸ್ತ್ರೆಯಾದರೇನು ’ ಎಂಬ ಆಲೋಚನೆ, ಕೌರವನ ಮೌನದ ಸಮ್ಮತಿಯಿಂದ ಪುಟಗೊಂಡು ದುಶ್ಶಾಸನನಿಂದ ಕಾರ್ಯರೂಪಕ್ಕಿಳಿದೇಬಿಟ್ಟಿತು. ಇಂಥದೊಂದು ಅಸಭ್ಯಘಟನೆ ನಡೆಯುತ್ತಿರುವಾಗ ಎಲ್ಲರೂ ಸುಮ್ಮನೆ ಕುಳಿತುಕೊಂಡಿರಲಿಲ್ಲ ; ಆದರೆ ಇದನ್ನು ಯಾರೂ ಮೊದಲಲ್ಲೇ ತಡೆಯಲಾಗಲಿಲ್ಲ. ಕೌರವರಲ್ಲಿ ಒಬ್ಬನಾದ ವಿಕರ್ಣನೇ ದ್ರೌಪದಿಯ ಪರವಾಗಿ ಮಾತನಾಡಿ ‘ ಈ ತುಂಬಿದ ಸಭೆಯಲ್ಲಿ ಧರ್ಮವನ್ನು ಹೇಳುವವರು ಯಾರೂ ಇಲ್ಲವಾಯಿತೇ ’[2]—ಎಂದು ಕೊರಗುತ್ತಾನೆ. ಪರಿಸ್ಥಿತಿಯೂ ಹಾಗೇ ಇತ್ತು. ಧರ್ಮ ಯಾವುದು ಎನ್ನುವುದನ್ನು ಹೇಳಬೇಕಾಗಿದ್ದ ಭೀಷ್ಮ ದ್ರೋಣರಂಥವರೇ ತಳಮಳದ ಕಡಲಲ್ಲಿ ಮುಳುಗಿಹೋದರು. “ ತಾಯಿ, ಧರ್ಮದ ಗತಿ ಬಹುಸೂಕ್ಷ್ಮ; ಇದನ್ನು ಹೀಗೆ ಎಂದು ನಿರ್ಣಯಿಸಲು ನಾನು ಅಶಕ್ತನಾಗಿದ್ದೇನೆ ”—ಎಂದು ಭೀಷ್ಮರು ದ್ರೌಪದಿಗೆ ಹೇಳುತ್ತಾರೆ.[3] ಇನ್ನು ತಾವಾಗಿಯೇ ಜೂಜಿಗಿಳಿದು, ಸೋತು ತಲೆ ತಗ್ಗಿಸಿದ ಪಾಂಡವರು ಮಾಡುವುದೇನು ? “ ದ್ರೌಪದಿಯನ್ನು ಒಡ್ಡಿ ಸೋತು ಅವಳನ್ನು ಈ ಗತಿಗೆ ತಂದ ಅಗ್ರಜನಾದ ಧರ್ಮರಾಯನ ತೋಳುಗಳನ್ನು ಸುಡುತ್ತೇನೆ ”—ಎಂದು ಭೀಮನ ಕೋಪದ ಜ್ವಾಲಾಮುಖಿ ಕೆರಳಿತು ;[4] ಆದರೇನು, ದ್ರೌಪದಿಗೆ ಅವಮಾನವಾಗುವುದು ತಪ್ಪಲಿಲ್ಲ.

‘ ಜೂಜಿನಲ್ಲಿ ಸೋತು ದಾಸಿಯಾದವಳನ್ನು ಗೆದ್ದವನು ಹೇಗಾದರೂ ನಡೆಸಿಕೊಳ್ಳಬಹುದು ’—ಎನ್ನುವುದು ಒಂದು ನಿಯಮವಿರಬಹುದು. ಆದರೆ ದ್ರೌಪದಿ

---

1. ದುಶ್ಶಾಸನ ಹೇಳಿದ್ದು—

ರಜಸ್ವಲಾ ವಾ ಭವ ಯಾಜ್ಞಸೇನಿ
ಏಕಾಂಬರಾ ವಾಪ್ಯಥ ವಾ ವಿವಸ್ತ್ರಾ
ದ್ಯೂತೇ ಜಿತಾ ಚಾಸಿ ಕೃತಾಸಿ ದಾಸಿ
ದಾಸೀಷು ಕಾಮಶ್ಚ ಯಥೋಪಜೋಷಮ್ ೨-೬೦-೨೭.

ಕರ್ಣ ಹೇಳಿದ್ದು :—

ಏಕೋ ಭರ್ತಾ ಸ್ತ್ರಿಯಾ ದೇವೈರ್ವಿಹಿತಃ ಕುರುನಂದನ
ಇಯಂ ತ್ವನೇಕವಶಗಾ ಬಂಧಕೀತಿ ವಿನಿಶ್ಚಿತಾ
ಅಸ್ಯಾಃ ಸಭಾಮಾನಯನಂ ನ ಚಿತ್ರಮಿತಿ ಮೇ ಮತಿಃ
ಏಕಾಂಬರಧರತ್ವಂ ವಾಪ್ಯಥ ವಾಪಿ ವಿವಸ್ತ್ರಾ ತಾ ೨-೬೧-೩೫, ೩೬.

ಕರ್ಣ :—ಪಾಂಡವಾನಾಂಚ ವಾಸಾಂಸಿ ದ್ರೌಪದ್ಯಾಶ್ಚಾಪ್ಯುಪಾಹರ—೨-೬೧-೩೮.

2. ೨-೬೧-೧೧ರಿಂದ ೨-೬೧-೨೪ರ ತನಕ : ಸಭಾಪರ್ವದಲ್ಲಿ.

3. ನ ಧರ್ಮ ಸೌಕ್ಷ್ಮ್ಯಾ ಸ್ತ್ಸುಭಗೇ ವಿವಕ್ತುಂ
ಶಕ್ನೋಮಿತೇ ಪ್ರಶ್ನಮಿದಂ ಯಥಾವತ್—೨-೬೦-೪೦.

4. ಅಸ್ಯಾಃ ಕೃತೇ ಮನ್ಯುರಯಂ ತ್ವಯಿ ರಾಜನ್ನಿಪಾತ್ಯತೇ
ಬಾಹೂ ತೇ ಸಂಪ್ರಧಕ್ಷ್ಯಾಮಿ ಸಹಾದೇವಾಗ್ನಿಮಾನಯ ೨-೬೧-೬.

ಯನ್ನು ಹೀಗೆ ನಡೆಸಿಕೊಂಡದ್ದು ದುಶ್ಶಾಸನ ಬುದ್ಧಿಗೆ ಮಾತ್ರ ಸರಿ ತೋರೀತು. ದಾಸಿಯರನ್ನು ಕೂಡ ಹೀಗೆ ನಡೆಸಿಕೊಳ್ಳಬಾರದು, ಮನುಷ್ಯ ಗೌರವದ ಬೆಲೆಯನ್ನರಿತವರು. ಅದರಲ್ಲೂ ತಮ್ಮ ವಂಶದ ಕುಲಸ್ತ್ರೀಯಾದ, ಅತ್ತಿಗೆಯಾದ ದ್ರೌಪದಿಯನ್ನು ಕೌರವರು ಹೀಗೆ ನಡೆಸಿಕೊಂಡದ್ದು ಪೈಶಾಚಿಕ ನೀತಿ ಎನ್ನುವುದರಲ್ಲಿ ಸಂಶಯವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಭೀಷ್ಮಾದಿಗಳೂ ವಿವೇಕ ಹೇಳುವ, ಕಡೆಗೆ ಪ್ರತಿಭಟಿಸುವ ಕೆಚ್ಚನ್ನು ತಾಳದೆ ಸುಮ್ಮನೆ ಕೂತರಲ್ಲ? ನಿಜವಾಗಿಯೂ ದೊಡ್ಡವರಾದ ಅವರು ಪ್ರತಿಭಟಿಸಬೇಕಾಗಿತ್ತು ಎಂದು ನಾವು ಹೇಳಬಹುದು. ಆದರೆ ಎಂತಹ ಶಿಷ್ಟ ಶಕ್ತಿಗಳೂ ಇಂಥ ದುಷ್ಟ ಶಕ್ತಿಗಳ ವಿಜೃಂಭಣೆಯಲ್ಲಿ ಸ್ತಬ್ಧವಾಗಿ, ವಿಷಾದಹತವಾಗುವುದು ಆಶ್ಚರ್ಯವೇನಲ್ಲ. ಮುಂಗಾರು ಮಳೆ ಹೊಯ್ಯುತ್ತಿರುವಾಗ ಹೊನಲು ಉಕ್ಕೇರಿದಾಗ ಯಾವ ಯಂತ್ರ ವಿಜ್ಞಾನಿಯೂ ಅಣೆಕಟ್ಟನ್ನು ನಿರ್ಮಿಸಲು ಹೊರಡುವುದಿಲ್ಲ. ಧರ್ಮರಾಯನಂಥ ವಿವೇಕಿಯೇ ಚಾಪಲ್ಯದಿಂದ ಜೂಜಿಗಿಳಿದು, ದ್ರೌಪದಿಯನ್ನೊಡ್ಡಿ ಸೋತಿರುವಾಗ, ಪಾಂಡವರೈವರೂ ತಮ್ಮ ಸತಿಯ ಪರಾಭವ ವನ್ನು ಕಂಡೂ ಕಿಂಕರ್ತವ್ಯಮೂಢರಾಗಿರುವಾಗ, ಹಿರಿಯರಾದ ತಮ್ಮ ಯಾರ ಮಾತನ್ನೂ ಕೇಳದೆ ಜೂಜಾಡಿ ಈ ಗತಿಗೆ ತಂದುಕೊಂಡವರ ಪರವಾಗಿ ಭೀಷ್ಮಾದಿಗಳು ಈಗ ಧರ್ಮಾಧರ್ಮಗಳನ್ನು ನಿರ್ಣಯಿಸಿ ಹೇಳಲಿಲ್ಲವೆಂದು ನಾವು ಆಕ್ಷೇಪಿಸುವುದು ಯಾವ ನ್ಯಾಯ? ಇದರ ಮೇಲೆ ಭೀಷ್ಮಾದಿಗಳು ಕೌರವನ ಜೋಳದ ಪಾಳಿಗೆ ಕಟ್ಟುಬಿದ್ದವರು; ದುರ್ಯೋಧನನ ಪ್ರಜೆಗಳು. ಹೀಗಾಗಿ ಭೀಷ್ಮಾದಿಗಳು ದ್ರೌಪದಿ ಗಾದ ಅವಮಾನವನ್ನು ತಡೆಯಲಾಗದಿದ್ದುದು ಪೌರುಷಾಭಾವದಿಂದಲ್ಲ, ವಿಧಿವಶ ದಿಂದ—ಎನ್ನಬೇಕು. ಆದರೆ ಅಂದಿನ ಹಿರಿಯರು ಮಾನವತ್ವದ ಗೌರವದ ದೃಷ್ಟಿಯಿಂದಲಾದರೂ ಹೊಡೆದಾಡಬೇಕಾಗಿತ್ತು ಎನ್ನುವುದು, ಇಷ್ಟು ದೂರ ನಿಂತು, ಅಂದಿನ ದೂರ ದ್ವಾಪರಯುಗದ ಪ್ರಸಂಗವನ್ನು, ಇಂದು ವಿವೇಚಿಸುವ ನಮ್ಮ ದೃಷ್ಟಿಯಲ್ಲಿರಬಹುದಾದ ದೋಷದ ಪರಿಣಾಮವೆನ್ನಬಹುದು. ಏಕೆಂದರೆ ಅಂದಿನ ಮೌಲ್ಯಗಳ ದೃಷ್ಟಿಯಿಂದ ಅಂಥದೊಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಭೀಷ್ಮಾದಿಗಳು ತಮಗೆ ತತ್ಕಾಲದಲ್ಲಿ ಸರಿ ಎಂದು ತೋರಿದಂತೆ ನಡೆದುಕೊಂಡರು; ದುರ್ಯೋಧ ನಾದಿಗಳು ತಮ್ಮ ದುರ್ವರ್ತನೆಯ ದುರಂತ ಫಲವನ್ನು ಅನುಭವಿಸಿ ಹೋದರು. ಆ ಸಂದರ್ಭದಲ್ಲಿ ಕಂಡುಬರುವ ದೊಡ್ಡವರ ನಡವಳಿಕೆಯನ್ನು ಇಂದಿನ ಯುಗದ ಸಾಮಾಜಿಕ ಹಾಗೂ ಧಾರ್ಮಿಕ ಮೌಲ್ಯಗಳಿಂದ ಅಳೆದು 'ತಪ್ಪು-ಸರಿ'ಗಳ ನಿರ್ಣಯವನ್ನು ಕೊಡುವ ಸಾಹಸ ಸಾಧುವಲ್ಲ, ಸಾಧ್ಯವೂ ಅಲ್ಲ.

ಒಟ್ಟಿನಲ್ಲಿ ಇಡೀ ಪ್ರಸಂಗವನ್ನು ನಾವು ಕಾವ್ಯದ ದೃಷ್ಟಿಯಿಂದ ನೋಡಿದರೆ, ದ್ರೌಪದೀ ವಸ್ತ್ರಾಪಹರಣದ ಸಂದರ್ಭ ಸೃಜಿಸಿದ ಪರಿಣಾಮತರಂಗಗಳೂ ಅದ್ಭುತ ವಾಗಿವೆ. ಆ ಸಂದರ್ಭ ಪ್ರಚಂಡ ಶಕ್ತಿಗಳ ಸಂಘರ್ಷಣೆಯಂತೆ ತೋರುತ್ತದೆ. ಜೂಜಿನ ದಾಳಗಳ ಉರುಳಾಟದಲ್ಲಿ ಎಷ್ಟೊಂದು ಜನರ ಮಾನ-ಗೌರವಗಳೇ

ಉರುಳಿಹೋದವು.! ದುಶ್ಶಾಸನನಿಂದ ಆದ ದ್ರೌಪದಿಯ ಕೇಶಾಪಕರ್ಷಣ; ದ್ರೌಪದಿಯ ದೀನಾರ್ತ ಪರಿಸ್ಥಿತಿ; ಸೋತು ತಲೆ ತಗ್ಗಿಸಿದ ಪಾಂಡವರ ತಳಮಳ; ಭೀಮನ ಕೋಪಾಗ್ನಿಯ ಬಿರುಬು; ಭೀಷ್ಮಾದಿಗಳ ಧರ್ಮಸಂಕಟದ ಮಬ್ಬು; ವಿದುರ ವಿಕರ್ಣರ ಸಾತ್ವಿಕ ವಾಣಿಯ ಕ್ಷೀಣಕಾಂತಿ; ಕರ್ಣ ಶಕುನಿ ಕೌರವರ ಅಟ್ಟಹಾಸದ ಹೊಗೆ; ದ್ರೌಪದಿಯ ಚಾರಿತ್ರದಿಂದ ಆದ ಅಕ್ಷಯವಸ್ತ್ರದ ಪವಾಡದಿಂದ ಮೂಡಿದ ಅದ್ಭುತದ ಮಿಂಚು; ಕಡೆಗೆ ಭೀಮಾರ್ಜುನರ ಪ್ರಚಂಡ ಪ್ರತಿಜ್ಞೆಯ ಮೊಳಗು;—ಎಷ್ಟೊಂದು ಭಾವ ತುಮುಲಗಳ, ಘಟನೆಗಳ ಪರಂಪರೆಯನ್ನು ಕವಿಪ್ರತಿಭೆ ಇಲ್ಲಿ ಚಿತ್ರಿಸಿದೆ! ಎಷ್ಟು ದೊಡ್ಡಪಟ; ಎಷ್ಟು ವಿವಿಧ ವರ್ಣದ ಚಿತ್ರಗಳು! ಇದೊಂದು ದಿವ್ಯಪ್ರತಿಭೆಯ ಶಕ್ತಿಪೂರ್ಣಸೃಷ್ಟಿ ಎನ್ನಲು ಸಭಾಪರ್ವದ ಈ ಒಂದು ಪ್ರಸಂಗ ಜ್ವಲಂತ ಸಾಕ್ಷಿಯಾಗಿದೆ.

—ಜಿ. ಎಸ್. ಶಿವರುದ್ರಪ್ಪ

ಗ್ರಂಥಋಣ

1. *The Mahābhārata*—Edited by Sri V. S. Sukthankar
   Sabhaparvam Vol. I and II
   Aranyaparvam Vol. I and II
   Udyogaparvam Vol. I
2. *Sukthankar Memorial Edition*—P. K. Gode. Vol. I.
3. *Notes of a study of the Preliminary Chapters of The Mahābhārata* —K. Venkatachallam Iyer.
4. *The Mystery of Māhabhārata*—N. V. Thadani, Vol. IV, Part I.
5. *Studies in Epics and Puranas of India*—A. D. Pusalker.
6. *Bhāsa Nātaka Chakram*—Edited by C. R. Devadhar.
7. *Bhārata Kathā Manjari*—Edited by Mahamahopadhyaya, Pandit Sivadatta and Kasinatha Panduranga Parab.
8. *Kirātārjuneeya*—Edited by Prof. S. V. Dixit, M.A.
9. ಕಿರಾತಾರ್ಜುನೀಯ—ಅನು: ಡಾ॥ ಕೆ. ಕೃಷ್ಣಮೂರ್ತಿ.
10. ವೇಣೀಸಂಹಾರನಾಟಕಂ—ಅನು: ಟಿ. ಜಯರಾಯಾಚಾರ್ಯ.
11. ಶ್ರೀಮದಾಂಧ್ರಭಾರತಮು—ಸಂ: ವಾವಿಳ್ಲ ರಾಮಸ್ವಾಮಿಶಾಸ್ತ್ರುಲು.
12. ಶ್ರೀ ವಿಲ್ಲಿಪುತ್ತೂರ್ ಅವರ್ಗಳ್ ಭಾರತಂ —ಸಂ: ವಿ. ಎಂ. ಗೋಪಾಲಕೃಷ್ಣಮಾಚಾರ್ಯ.
13. ಸಂಸ್ಕೃತ ನಾಟಕಗಳು—ಶ್ರೀ ಎ. ಆರ್. ಕೃಷ್ಣಶಾಸ್ತ್ರೀ.
14. ಹರಿದಾಸ ಕೀರ್ತನ ತರಂಗಿಣಿ—ಭಾಗ ೨. ಸಂ: ಸುಬೋಧ ಎಂ. ರಾಮರಾವ್.
15. ಭಾರತ ತೀರ್ಥ—ಶ್ರೀ ಮೂಸ್ತಿ ವೆಂಕಟೇಶ ಅಯ್ಯಂಗಾರ್.
16. ಜಯಕರ್ನಾಟಕ—ಸಂಪುಟ ೧೨, ಸಂಚಿಕೆ ೨೦, ಡಿಸೆಂಬರ್ ೧೯೪೨.
17. ಪಂಪಭಾರತ—

18. ಕುಮಾರವ್ಯಾಸಭಾರತ—ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್.
19. ಗದಾಯುದ್ಧ—ಎಂ. ಎ. ರಾಮಾನುಜ ಐಯಂಗಾರ್.
20. ಸಾಳ್ವಭಾರತ—(ಮೈಸೂರು ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿರುವ [K. 69] ಹಸ್ತಲಿಖಿತ ಪ್ರತಿ,)
21. ಕರ್ಣಪಾರ್ಯನ ನೇಮಿನಾಥಪುರಾಣಂ.
22. ಜಿನಭಾರತ—ಬ್ರಹ್ಮಣಾಂಕ.

ಗಾಥಾಸಪ್ತಶತಿಯಿಂದ

೧

ಧನ್ಯರಂಗನೆಯರು ಕನಸಿನೊಳಾದರು
ಕಂಡಿನಿಯರನಪ್ಪುವವರು
ಅವನಿಲ್ಲದಿದ್ದರೆ ನಿದ್ದೆಯೆ ಬರದೆನೆ
ಕನಸಿನ ಮಾತು ಮತ್ತೇನೆ?

೨

ವಿರಹವು ಗರಗಸದಂತವಳೆದೆಯನು
ಸರಸರ ಕೊಯ್ಯುತಲಿಹುದು
ಕಾಡಿಗೆಯೊಡವೆರೆದಾಕೆಯ ಕಂಗಳು
ಅಳತೆಯ ದಾರದಂತಿಹುದು

೩

ನಿನ್ನ ನಲ್ಲನು ಆತನಲ್ಲದೆ ಹೋದರೆ
ಹೆಸರನು ಹೇಳಿದರುಂತೆ
ಮೊಗವೇಕೆ ಹಿಗ್ಗುವುದೆಲೆ ಸಖಿ ತಾವರೆ
ರವಿ ಕಿರಣಕೆ ಹಿಗ್ಗುವಂತೆ

೪

ಅದರುವ ಎಡಗಣ್ಣೆ ನೀ ಸೂಚಿಪಂದದೆ
ಬಂದರೆನ್ನಿನಿಯನು ಭರದೆ
ನಿನ್ನನೆ ತೆರೆದು ನಾ ನೋಡುವೆನವನನು
ಸಲೆ ಮುಚ್ಚಿ ಬಲಗಣ್ಣನಿದನು

—ಎಸ್. ವಿ. ಪರಮೇಶ್ವರಭಟ್ಟ

ದರ್ಪಣಾಲೋಕನ

ಕನ್ನಡದಲ್ಲಿ ನಾಗವರ್ಮ ಮತ್ತು ಭಟ್ಟಾಕಳಂಕರೆಂಬ ವೈಯಾಕರಣಿಗಳ ಮಧ್ಯೆ ಇರುವ ಕೇಶಿರಾಜನ ಕಾಲವು ಒಂದು ವಿಶಿಷ್ಟತೆಯಿಂದ ಕೂಡಿದೆ. ಅತಿಯಾದ ಸಂಸ್ಕೃತ ಪದಗಳನ್ನು ಹದಗೆಟ್ಟು ಬೆರೆಸಿದ ಕವಿಗಳು ಲೋಕದ ಅಪಹಾಸ್ಯಕ್ಕೆ ಕಾರಣರಾದ ಕಾಲವದು. 'ಸಕ್ಕದಮಂ ಪೇೞ್ವೊಡೆ, ನೆರೆ ಸಕ್ಕದಮಂ ಪೇೞ್ಗೆ; ಶುದ್ಧ ಕನ್ನಡದೊಳ್ ತಂದಿಕ್ಕುವುದೇ ಸಕ್ಕದಮಂ? ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ?' ಎಂದು ನಯಸೇನ ಕೆರಳಿ ಕೇಳಿದರೆ,—'ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ ಬಗೆಗೊಳೆ ಪೇಳಲಾರರ್'—ಎಂಬ ನಿರಾಶೆ ಆಂಡಯ್ಯನ ಕಾಲಕ್ಕೆ ಬಲಿತಿತ್ತು. 'ಹಱಗವಿಗಳ ಕಬ್ಬಂಗಳ ಹೊಱಗಳಿಯಕ್ಕರದ ಹೊಲಿಗೆ ಬಿರ್ಚಿದೊಡೆಲ್ಲಂ—ಬಱ ತಾಱಗ ಬೀಱಗವೆತ್ತರ ತತ್ತಱವೆಕ್ಕಸಕ್ಕಮಸ್ತವ್ಯಸ್ತಂ'–ಎಂದು ಜರೆದ ಹರಿಹರಕವಿ ದಿಟ್ಟತನದಿಂದ–ನೋಡುವೊಡೊಂದಕ್ಕರಮದು ಮಾಡುವೊಡುಚ್ಚರಣೆಗರಿದು ಮೂಱುಂ ತೆಱನಂಕೂಡೆ ಕವಿತತಿ ವಿಚಾರಿಸಬೇಡದಱಂ ರಳ ಕುಳ ಕ್ಷಳಂಗಳಂ—ಎಂದು ಎಚ್ಚರಿಕೆ ಕೊಟ್ಟು ಮುಂದೆ ಸಾಗಿದನು. ಈ 'ರಗಳೆಯ ಕವಿಯ' ತೀಕ್ಷ್ಣವಾದ ನುಡಿಯು ಶುದ್ಧ ಶಾಸ್ತ್ರೀಯ ದೃಷ್ಟಿಯಿದ್ದು, ಪಾರಂಪರ್ಯದ ಮಮತೆ ಸ್ವಲ್ಪ ಇರುವ ಪಂಡಿತರನೇಕರಿಗೆ ನುಂಗಲಾರದ ತುತ್ತಾಗಿರಬೇಕು. ಹೀಗಿರಲು 'ಲಕ್ಷಣಾಚಾರ್ಯರ್ ಪೇೞೆಂದು ಬೆಸಸೆ, **ಬಗೆಗೆ ಬರ್ಪಂತು** ಮನಂಬುಗೆ ಪೇೞ್ವೆಂ' ಎಂದು ಕೇಶಿರಾಜ ವ್ಯಾಕರಣ ರಚನೆಗೆ ಮನಸ್ಸುಮಾಡಿದನು. ಆದರೆ ಭಾಷೆಯಲ್ಲಿ ಅನೇಕ ಪ್ರಭೇದಗಳು ಹೊಸತು ಹಳತರ ಮಿಶ್ರವಾಗಿ, 'ಅದೋ, ಇದೋ,' ಎಂದು ಸಂದೇಹವಾಗಿರುವಾಗ—'ಇದು ಹೀಗೆ' ಎಂದು ಹೇಳುವವರಿಲ್ಲದ ಕಾಲದಲ್ಲಿ ಒಂದು ಶಾಸ್ತ್ರ ರಚಿಸುವುದು ಸಾಮಾನ್ಯವಲ್ಲ. ಅಂತಹ ಶಾಸ್ತ್ರಕಾರನಿಗೆ ತುಂಬ ಹೊಣೆಗಾರಿಕೆಯಿದೆ. 'ಎಂಟೆದೆ' ಯವನಿಗೂ ಅಳುಕು ಸಹಜವಾಗಿದೆ. ಅದಕ್ಕಾಗಿಯೇ, 'ವಿದ್ವಾಂಸರ್ ಅವಧರಿಸಿ, ಮನಃ ಪ್ರೀತಿವೆರಸಿ ತಿರ್ದುವುದು' ಎಂದು ಬಿನ್ನವಿಸಿ ಪೂರ್ವದ ಪ್ರಸಿದ್ಧರಾದ ಕವಿಗಳನ್ನು ತನ್ನೆದುರಿಗಿಟ್ಟುಕೊಂಡು ಕೇಶಿರಾಜ ವ್ಯಾಕರಣ ರಚನೆಗೆ ಕೈ ಹಾಕುತ್ತಾನೆ.

ತನ್ನ ವ್ಯಾಕರಣ 'ಭಾಷೆಗೆ ಭೂಷಣ'ವೆಂದಾಗಲೀ, ಭಾಷೆಯ ನಡತೆಗೆ ಶಾಸನವೆಂದಾಗಲೀ ಹೆಸರಲ್ಲಾದರೂ ಈತ ಹೇಳಿಕೊಳ್ಳದೆ, ಕೇವಲ 'ಶಬ್ದ-ಮಣಿ ದರ್ಪಣ'—ಎಂದು ಕರೆದುದು ಅನ್ವರ್ಥವಾಗಿದೆ. ಪೂರ್ವಕಾಲದ ಸಾಹಿತ್ಯಭಾಷೆ, ಆಗಿನ ಸ್ಥಿತ್ಯಂತರಭಾಷೆ, ಎಂಬುದೆಲ್ಲ ಹೇಗಿದೆ, ಅವನ ಕಾಲದ ಶಿಷ್ಟರ ಭಾಷೆಯ ಸ್ವರೂಪವೇನೆಂದು ಅವನ ಕೃತಿ ಬಿಂಬಿಸುತ್ತಲ್ಲದೆ, ಯಾವ ವಿಚಾರವನ್ನೇ ಆಗಲಿ, ದಂಡಧಾರಿಯಾಗಿ, ಹೀಗೇ ಆಗಬೇಕೆಂದು ಆಜ್ಞಾಪಿಸುವುದಿಲ್ಲ. ತೀರ ಅಗತ್ಯವೆಂದಾಗ ಒಂದೊಂದು ಸಣ್ಣನುಡಿಯ ಕಿಡಿಯನ್ನು ಸಿಡಿಸುತ್ತಾನೆ. 'ಅೞ್ತಿ

ಯೆಂದು ಪ್ರೀತಿ; ಅದನ್ನು ಅರ್ತಿಯೆಂದು ಪೇಳಲಾಗದು' (~'ಪೇೞ್ವುದ ಬದ್ಧಂ') ಎಂದು ಒಂದೆಡೆ ಹೇಳಿದರೆ, 'ಸತೃಣಾಭ್ಯವಹಾರಿಗಳ್' ಎಂದು ಒಮ್ಮೆ ಮಾತ್ರ ಸಿಡುಕುತ್ತಾನೆ. ಅದಕ್ಕಿಂತ ಹೆಚ್ಚಿಲ್ಲ. ಸಂದೇಹಕ್ಕೆಡೆಯಿದ್ದಲ್ಲಿ, 'ಇದು ಸಂದೇಹ' ಎಂಬುದನ್ನು ಅಂಜದೆ ಹೇಳುತ್ತಾನೆ. ಇಂತಹ ಗುಣದಿಂದ ಇದು ವಿವರಣವ್ಯಾಕರಣ ಜಾತಿಗೆ (descriptive grammar) ಬಹುಮಟ್ಟಿಗೆ, ನೂರಕ್ಕೆ ನೂರರಷ್ಟು ಸರಿಯೆಂದರೂ ತಪ್ಪಾಗದು. ಇದು ಹೆಸರಿಂದ ಮಾತ್ರವಲ್ಲ ಕೃತಿಯಲ್ಲಿಯೂ 'ಶಾಸನ' (normative grammar, or prescriptive grammar) ಆಗಿಲ್ಲ. ಈ ರೀತಿಯಿಂದ ನೋಡಿದಾಗ ಕೇಶಿರಾಜ, ಒಳ್ಳೆಯ ವೈಜ್ಞಾನಿಕ ವೈಯಾಕರಣನೆಂದು ಅವನ ಮೇಲೆ ನಮಗಿರುವ ಗೌರವವು ಅಧಿಕವಾಗುತ್ತದೆ. ಆದರೆ ಶಾಸ್ತ್ರದೃಷ್ಟಿಯ ಪರಿಪೂರ್ಣತೆಗಾಗಿ, ಅಲ್ಲಲ್ಲಿ ಹಿರಿಯ ವಿದ್ವಾಂಸರು ಅವನನ್ನು ಒರೆಗೆ ಹಚ್ಚಿನೋಡಿದ್ದಾರೆ. ಹೀಗಿರುತ್ತಾ ಱ ೞ ಕುಳಗಳನ್ನು ಕೇಶರಾಜ ಹೇಳಿದ ಬಗೆಗೆ—'ಈ ಅಕ್ಷರಗಳನ್ನು ಬದುಕಿಸುವ ಪ್ರಯತ್ನವನ್ನು ಮಾಡಿದ ದರ್ಪಣಕಾರನೇ, ತನಗೆ ತಿಳಿಯದಂತೆ, ತಾನೇ ಇವುಗಳ ಸಮಾಧಿಯನ್ನು ರಚಿಸಿದನೆಂದು ಹೇಳಬಹುದು'* ಎಂದು ಹಿರಿಯರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ದೃಷ್ಟಿಯಿಂದ ನೋಡಿದಾಗ ಕೇಶಿರಾಜನ ದೃಷ್ಟಿ ಶಾಸಕನ ದೃಷ್ಟಿ; ವಿಜ್ಞಾನಿಯದಲ್ಲವೆಂದು ತಿಳಿಯಬೇಕಾಗುತ್ತದೆ. ವ್ಯಾಕರಣದಲ್ಲಿ ಪ್ರಾಸವಿಚಾರದ ಆವಶ್ಯಕತೆಯಿಲ್ಲವೆನ್ನಲು ಅಡ್ಡಿಯಿಲ್ಲ. ಅದರ ಸ್ಥಾನ 'ಅಲಂಕಾರ' ಮತ್ತು ಛಂದಸ್ಸಿನಲ್ಲಿ. 'ವರ್ಣಾವೃತ್ತಿಗೆ ಸಲ್ವುವು; ಸಂದುಂ ಪ್ರಾಸದೆಡೆಗೆ ಸಲ್ಲವು'—ಎಂಬ ಅವನ ಮಾತಿನಲ್ಲಿ ವಿಧಿಸುವ ನಿಯಮಿಸುವಿಕೆಯ ಅವಧಾರಣೆಯಿರುವಂತೆ ಕಂಡುಬರುವುದಿಲ್ಲ. ಇಲ್ಲಿ ೞ, ಳ, ಱ-ರ ಗಳೊಳಗೆ ಹೊರ ಆವರಣದ (external) ಕೆಲ ಹೋಲಿಕೆಯಿದೆ. ಅದೇ ಅವುಗಳೊಳಗಿರುವ 'ಶಬ್ದಸಾಮ್ಯ' (phonetic similarity). ಈ ಕಾರಣದಿಂದ ಅವುಗಳ ಪ್ರಯೋಗ ವರ್ಣಾವೃತ್ತಿಯಲ್ಲಿ ನಡೆಯುತ್ತಿತ್ತು--ಎಂದು ಹೇಳಿರುವನೆಂದು ತಿಳಿದುಕೊಂಡರೆ ಕೇಶಿರಾಜನು ರಚಿಸುವ 'ಸಮಾಧಿಯ' ಪ್ರಸ್ತಾಪಕ್ಕೆ ಎಡೆಯಿರದೆಂದು ತೋರುತ್ತದೆ. ಅಲ್ಲದೆ, ಒಂದೇ ಸ್ಥಾನದಲ್ಲಿ ಉತ್ಪನ್ನವಾಗುವ (ಕೇಶಿರಾಜನ ಪ್ರಕಾರ) ವರ್ಣಗಳಿವು, ಕೇವಲ 'ಬೆಟ್ಟಿತ್ತಾಗಿ' ಉಚ್ಚರಿಸುವುದರಿಂದ ಮಾತ್ರ ಭೇದ ತೋರಿಸುವವುಗಳು. ಸ್ಥಾನಮಾತ್ರದಿಂದಲ್ಲದೆ, 'ಘೋಷಗುಣ'ದಿಂದಲೂ (resonance quality) ಇವು ಸಮಾನಗುಣವುಳ್ಳವುಗಳಾಗುತ್ತವೆ. ಇದನ್ನು ಪ್ರತ್ಯಕ್ಷವೋ ಪರೋಕ್ಷವೋ ಆಗಿ ಮನಗಂಡ, 'ಅಲಂಕಾರಪ್ರಿಯ' ಕವಿಗಳು ವರ್ಣಾವೃತ್ತಿಯಲ್ಲಿ ಉಪಯೋಗಿಸುತ್ತಿದ್ದುದನ್ನು ಮಾತ್ರ ಹೇಳಿರುವಂತೆ ಕಾಣುತ್ತದೆ. ಈ ಪ್ರಯೋಗಕ್ಕೆ ಕೇಶಿರಾಜ ಸಮ್ಮತಿ ಕೊಟ್ಟಿರುವನೇ ಇಲ್ಲವೇ, ಇದು ಸರಿಯೇ

* ಶ್ರೀ। ಮ। ಪ್ರ। ಪೂಜಾರ್—ಕೆಲವು ಕನ್ನಡ ವ್ಯಾಕರಣ ವಿಚಾರಗಳು (ಪು. ೭೮)

ತಪ್ಪೇ, ಎಂಬುದು ವ್ಯಾಕರಣಕ್ಕೆ ಹೊರಗಿನದಾಗುತ್ತದೆ. ಆ ದೃಷ್ಟಿಯಿಂದ ನೋಡಿದರೂ, ಬೆಳೆಯುತ್ತಿರುವ ಭಾಷೆಯಲ್ಲಿ ತಡೆ, ತೊಡರುಗಳನ್ನು ಹಾಕಿ ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ. ನಾವು ವೈಜ್ಞಾನಿಕ ದೃಷ್ಟಿಯಿಂದ ನೋಡಿದರೂ, ವ್ಯಾಕರಣದ ಉದ್ದೇಶ–ಆಯಾ ಕಾಲದ ಭಾಷೆಯನ್ನು ತಿಳಿದುಕೊಳ್ಳುವುದಕ್ಕೊಂದು ಕೈಗನ್ನಡಿಯೆಂದು ತಿಳಿಯಬೇಕೇ ಹೊರತು, ಸಾರ್ವಕಾಲಿಕವಾದ 'ಪೀನಲ್ ಕೋಡ್' ('Penal Code') ಅದು ಆಗದೆಂಬುದು ನಿಶ್ಚಯ. 'ವ್ಯಾಕರಣದಿಂದೆ ಪದಮ್; ಪದದಿನರ್ಥಮ್'—ಎಂದು ಕೇಶಿರಾಜನೇ ವ್ಯಾಕರಣದ ಉಪಯೋಗವನ್ನು ಘೋಷಿಸಿದ್ದಾನೆ.

ಟಕಾರ ಮತ್ತು ರೇಫ ಸಂಯುಕ್ತ ಪ್ರಾಸಕ್ಕೆ ಕೇಶಿರಾಜ ಪೂರ್ವ ಕವಿಗಳ ಉದಾಹರಣೆಗಳನ್ನಿತ್ತಿದ್ದಾನೆ :

(೧) "ಬಟ್ಟಿದು ಬಳ್ಳವಾಡಿ....ನಂ
ಬಿರ್ದುದಾರುಹುತಂ...."

(೨) "ಚುರ್ಚಿದವೋಲ್....ಕಿ–
ಮುಟ್ಟಿದ............

(೩) "......................ದೇ
ವರ್ಕಳ್ಗೊಡೆಯರ........
ಸೀಟ್ಕರಿಸಿದ............"

ಇದು ಚಾರಿತ್ರಿಕಾಂಶವನ್ನು ಒಳಗೊಂಡಿದೆ. ಕೇಶಿರಾಜ, ಪ್ರಾಸಗಳನ್ನು ಹೇಳದೆ ಈ ಅಕ್ಷರಗಳ ಪರಸ್ಪರ ಸಾಮ್ಯ—ವಿರೋಧಗಳನ್ನು ಸ್ಪಷ್ಟಪಡಿಸಲು ಹೊರಟಿದ್ದರೆ, ಅವನಿಗೆ ಈ ಅಪವಾದ ಬರಲೆಡೆಯಿದ್ದಿಲ್ಲ. ಆದರೆ, 'ಅಟನಾಗದನುಚ್ಚರಿಸಲ್ಕಾಗ' ಎಂಬುದನ್ನು ಗಮನಿಸಬೇಕು. 'ಇರ್ದ ತೆರದಿನಂತದು ಶುದ್ಧಂ'—ಎಂದು ಎಚ್ಚರಿಸಿದುದನ್ನೂ ಕಣ್ಣಿಟ್ಟು ನೋಡಬೇಕು. ಈ 'ವರ್ಣ ಸಂಕರತೆ' ಬಹಳ ಹಿಂದಿನಿಂದಲೇ ನಡೆಯುತ್ತ ಬಂದಿದೆ—ಎನ್ನುವುದು, ಶಾಸನಗಳ ಚಾರಿತ್ರಿಕ, ಅಥವಾ ಸಾಮಯಿಕ ವ್ಯಾಕರಣದಿಂದ ತಿಳಿದುಬರುತ್ತದೆ.* ಈ ಪ್ರಭಾವವು ಕೇಶಿರಾಜನ ಕಾಲಕ್ಕು ಸಹ ಇದ್ದು, ಸ್ವಲ್ಪ ಸಂಪ್ರದಾಯ ಬದ್ಧ ಹಿರಿ—ಕಿರಿ 'ಲಕ್ಷಣಾಚಾರ್ಯರ್'—ರೇಫ ಸಂಯುಕ್ತವನ್ನು ಅಟನಾಗಿ ಉಚ್ಚರಿಸುತ್ತಿದ್ದುದನ್ನು ಕೇಶಿರಾಜ ಕೇಳಿದ್ದನಾದುದರಿಂದ—ಈ ಮಾತನ್ನು ಹೇಳಿದ್ದಾನೆ. ಇದರಿಂದ,

---

* A grammar of the oldest Kanarese Inscriptions, A. N. Narasimhaia, (Page 90).

eḻtu > ertu > ettu
gaḻde > garde > gadde. etc.

' ಹೊನ್ನನ, ಹಂಪನ.... ' ಮೊದಲಾದವರ ಗ್ರಂಥಗಳಲ್ಲದೆ, ಆ ಕಾಲದಲ್ಲಿ, ಜನರ ಬಾಯಲ್ಲಾಡುತ್ತಿದ್ದ ಕನ್ನಡವನ್ನು (Spoken Kannada) ಕೂಡ ಗಮನಿಸಿ ಕೊಂಡಿದ್ದಾನೆ—ಎಂದು ನೋಡಿದಾಗ, ಅವನ ವ್ಯಾಕರಣದ ರಚನೆಯ ಸಾಮಗ್ರಿ ಬಹಳ ವಿಶಾಲವಾಗಿತ್ತೆಂದು ಸುಸ್ಪಷ್ಟವಾಗಿ ತಿಳಿಯುತ್ತದೆ. ಕಾವ್ಯದ ಕೋಟೆಯ ಕಿಂಡಿಯೊಳಗಿಂದ ಇಣಿಕಿ, ವ್ಯಾವಹಾರಿಕ ಬಯಲಿನ ಕಡೆ ನಿಟ್ಟಿಸಿದ್ದನೆಂಬುದು ನಿಸ್ಸಂದೇಹ. ' ಚುರ್ಚಿದ—ಕಿಮುಟ್ಚಿದ ' ಎಂಬ ಪದಗಳಲ್ಲಿ ' ಚುರ್ಚಿದ '— ಎಂಬುದನ್ನು ' ಚುಟ್ಚಿದ ' ಎಂದು ಮಾಡಲು ಪೂರ್ವದಲ್ಲಿ ಆ ತರಹ ಪ್ರಯೋಗ ವಾಗಲೀ, ಅದರಿಂದ ನಿಷ್ಪನ್ನವಾಯ್ತೆಂದು ಸಾಧಿಸಲಾಗಲೀ ಎಡೆಯಿಲ್ಲದುದ ರಿಂದಲೇ ' ಜಟನಾಗದನುಚ್ಚರಿಸಲ್ಕಾಗ '—ಎಂದು ಅವನು ಹೇಳಬೇಕಾಯ್ತು. ' ಅೞ್ತಿ ' ಎಂಬುದು ' ಅರ್ತಿ 'ಯಾದಾಗ ಕೂಡ ಅವನು ಅದರ ಬದಲುವಿಕೆಗೆ ಒಪ್ಪಿಗೆ ಕೊಡದೆ ಇದ್ದುದು ಈ ಕಾರಣದಿಂದಲೇ. ' ಅರ್ತಿ ' ಎಂಬ ಪದವು ಒಂದು ಮರವನ್ನು ಸೂಚಿಸುತ್ತದೆ. ಒಂದು ಪದವು ' ಶಬ್ದ 'ದಲ್ಲಿ (Phonetically) ಒಂದೇ ಆಗಿದ್ದು, ಎರಡು ಅಥವಾ ಹೆಚ್ಚು ಅರ್ಥವನ್ನು ಕೊಡುವುದು ಹೊಸತೇನಲ್ಲ ವಾದರೂ, ಅದರಿಂದ ಸಂದೇಹಾಸ್ಪದ ಗಲಭೆಗಳು ಸಾಕಷ್ಟಾಗಿವೆಯೆಂದು ಮನ ಗಂಡರೆ, ಕೇಶಿರಾಜ ಹೇಳಿದ ಮಾತನ್ನು ಮನಗಾಣಬಹುದು. ಈ ' ಶುದ್ಧಗೆ ' ಗಳು ಒಂದರೊಡನೊಂದು ವಿಲೀನವಾಗುವ ಕ್ರಿಯೆಯಿಂದ (Phonemic merger) ಅನೇಕ ಪದಗಳು ನಮ್ಮ ಭಾಷೆಯಿಂದ ಕಣ್ಮರೆಯಾಗಿವೆ. ಒಂದು ವೇಳೆ, ವರ್ಣಾ ವೃತ್ತಿಯ ಮತ್ತು ಪ್ರಾಸದ ಮಾತೆತ್ತಿದುದು ಕೇಶಿರಾಜನಲ್ಲಿ ಹುದುಗಿರುವ ಕವಿಯ ಗುಣವಲ್ಲದೆ, ವ್ಯಾಕರಣ ಶಾಸ್ತ್ರ ದೃಷ್ಟಿಯಿಂದ, ಅನಗತ್ಯವೆಂದು ತಳ್ಳಿದರೂ ತಳ್ಳ ಬಹುದು. ಆದರೆ, ಪ್ರಾಸಾದಿಗಳ ವಿಚಾರಕ್ಕಿಂತ, ಅವುಗಳಲ್ಲಿರುವ ' ಶಬ್ದಸಾಮ್ಯ ' ವನ್ನು (Phonetic similarity) ಗಣಿಸಿದಾಗ, ಬರಿದೆ ಅವುಗಳನ್ನು ತಳ್ಳಿಬಿಡಲು ಸಾಧ್ಯವಿಲ್ಲ.

ಅವನಿಂದ ಮೊದಲಿನ ನಾಗವರ್ಮ, ಮತ್ತಿನ ಭಟ್ಟಾಕಳಂಕರು ಹೇಳಿದುದ ಕ್ಕಿಂತ ಭಿನ್ನರೀತಿಯ ' ಶಬ್ದವಿಚಾರ 'ವನ್ನು (Phonology) ಕೇಶಿರಾಜ ಹೇಳಿದ್ದಾನೆ ಎಂಬುದನ್ನು ಗಮನಿಸಬೇಕು. ಅವರಿಬ್ಬರೂ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದವರು. ನಾಗವರ್ಮನ ಕನ್ನಡದ ' ಶಬ್ದ ಸ್ಮೃತಿ ' ಯೆಂಬ ಕೃತಿ ತೀರ ಸಂಕ್ಷಿಪ್ತ ವಾಗಿದೆ. ಇಲ್ಲಿಯೂ, ಕನ್ನಡತನದ ಕೆಚ್ಚು ಮರೆಯುತ್ತಿದ್ದ ಕಾಲದಲ್ಲಿದ್ದ ಕೇಶಿ ರಾಜನಿಗೆ, ಈ ' ಅಭಿಮಾನ ' ವನ್ನು ಬಿಡಲಾಗದೆ, ಕನ್ನಡದ ದೃಷ್ಟಿಯಿಂದಲೇ, ' ಶಬ್ದವಿಚಾರ ' ಬರೆದುದು ಶ್ಲಾಘನೀಯವೇ ಸರಿ.

ಕೇಶಿರಾಜ ಕೊಟ್ಟ ಸಂಸ್ಕೃತ ಮತ್ತು ಕನ್ನಡಕ್ಕೆ ಸಾಮಾನ್ಯವಾಗಿರುವ ವರ್ಣಗಳನ್ನು ಈ ಕೆಳಗಿನಂತೆ ಕೊಡಬಹುದು :—

ಸ್ವರಗಳು (Vowels):—

	ಆದಿ (Front)	ಮಧ್ಯ (Central)	ಅಂತ (Back)
ಉನ್ನತ (High)	ಇ ಈ		ಉ ಊ
ಮಧ್ಯ (Mid.)	ಎ ಏ		ಒ ಓ
ನಿಮ್ನ (Low)		ಅ ಆ	
			ಋ ೠ
			ಌ ೡ

ವ್ಯಂಜನಗಳು (Consonants):—

ಸ್ಪರ್ಶ ವರ್ಣಕಗಳು. (Stop Cons.)	ಅನಾದಿತ (Voiceless)	ಪ ಫ	ತ ಥ	ಟ ಠ	ಚ ಛ	ಕ ಖ	
	ನಾದಿತ (Voiced)	ಬ ಭ	ದ ಧ	ಡ ಢ	ಜ ಝ	ಗ ಘ	
ನಾಸಿಕಗಳು (Nasals)		"ಂ" ಮ	ನ	ಣ	ಞ	ಙ	
ಸ್ಪರ್ಶರಹಿತ ಘೋಷಕಗಳು (Frictionless Continuants)		ವ			ಯ		
ಆಕಂಪಿತಗಳು (Trills)			ರ ಱ				
ಪಾರ್ಶ್ವಗಾಮಿಗಳು (Laterals)			ಲ	ಳ ೞ (ಳ)			
ಅನಾದಿತ ಘರ್ಷಕಗಳು (Voiceless Fricatives)		ೲಪ	ಸ	ಷ	ಶ	xಕ	: ಹ*

ಇಷ್ಟಾದ ಮೇಲೆ ಕನ್ನಡದ ದೃಷ್ಟಿಯಿಂದಲೇ ಶುದ್ಧಗೆಗಳನ್ನು ವಿಭಾಗಿಸುತ್ತಾನೆ. 'ಶ, ಷ, ಋ, ೠ, ಌ, ೡ, ×ಕ, ೲಪ, ವಿಸರ್ಗ ಮತ್ತು ಕ್ಷಳಗಳನ್ನು ಕಳೆದು ಐದು ದೇಶೀಯ ಅಕ್ಷರಗಳನ್ನು ಸೇರಿಸಿದ್ದಾನೆ. ಆದರೆ, ಕನ್ನಡಕ್ಕೆ ಸಹಜವಲ್ಲದ ಮಹಾ ಪ್ರಾಣಗಳನ್ನು 'ಒಳವು ಮಹಾಪ್ರಾಣಂಗಳ್, ನಿಜದಿಂ ಕನ್ನಡದೊಳ್' ಎಂದು ಹೇಳಿ ಉಳಿಸಿಕೊಂಡುದರಿಂದ, ಮೊತ್ತಮೊದಲಿಗೆ ಕನ್ನಡಕ್ಕೆ ಕನ್ನಡದ್ದೇ ಆದ 'ಶಬ್ದವಿಚಾರ' ವನ್ನು (Phonology) ಹೇಳಲು ಯತ್ನಿಸಿದನೆಂದು ಅವನ ಮೇಲೆ ಒತ್ತರಿಸಿ ಬರುವ ಗೌರವಕ್ಕೆ ತಡೆ ಹಿಡಿಯುವಂತೆ ಮಾಡುತ್ತದೆ. ಸಂಖ್ಯಾನುಕರಣ ಶಬ್ದಗಳು ಕೇವಲ ಅಲ್ಪ, ಅನಗತ್ಯ; ಇದನ್ನು ಎಣಿಸದೆ ಮಾಡಿದ ಕೇಶಿರಾಜನ ತೀರ್ಮಾನ ಅಕ್ಷಮ್ಯವಾಗಿದೆ. ಆದರೆ, ಆಧುನಿಕರಾದ ನಮ್ಮ ಮಾತಿನಲ್ಲಿ—ಅಂಥ, ಇಂಥ, ಎಂಥ, ("ಎಂಥಾ ಚೆಲುವನಮ್ಮಯ್ಯಾ....ರಾಮ....") ಎಂಬ ಮಹಾ ಪ್ರಾಣಗಳು ಪ್ರಯೋಗವಾಗುತ್ತಿವೆ; 'ಷ'ಕಾರದ ಪ್ರಯೋಗ, 'ಅಷ್ಟು', 'ಇಷ್ಟು' ಎಂಬ ದೇಶೀಯ ಪದಗಳಲ್ಲಿ ಬರುತ್ತವೆ. ಕೇಶಿರಾಜನಂತೆ ಈಗಿನ ಕನ್ನಡಕ್ಕೆ

ವ್ಯಾಕರಣ ಬರೆಯುವವನು ಏನು ಮಾಡಬೇಕು? ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ, ಕೇಶಿರಾಜನು ತೊಡಕಿಗೆ ಸಿಕ್ಕಿದುದು ಅರ್ಥವಾಗುತ್ತದೆ. ನಾಗವರ್ಮ ನಿರ್ದಿಷ್ಟ ಸಂಖ್ಯೆಯನ್ನು ಹೇಳದ್ದರಿಂದ ಅವನಿಗೆ ಈ ಉರುಳು ಬೀಳಲಿಲ್ಲ. ಮುಂದಿನ ಭಟ್ಟಾಕಳಂಕನು ಮೊದಲೇ ತುಂಬಿರುವ ವರ್ಣಮಾಲೆಯನ್ನು ಮತ್ತಷ್ಟು ನಿಬಿಡಗೊಳಿಸುತ್ತಾನೆ. ಕನ್ನಡಕ್ಕೆ ಮಾತ್ರವೆಂದು ಕೇಶಿರಾಜ ಕೊಟ್ಟ ಶುದ್ಧಗೆಗಳನ್ನು ಈ ರೀತಿ ಪ್ರತಿನಿಧಿಸಬಹುದು.

ಸ್ವರಗಳು (Vowels):—

ಇ ಈ   ಉ ಊ
ಎ ಏ ಐ   ಒ ಓ ಔ
ಅ ಆ   ಸ್ವರಗಳು=೧೨

ವ್ಯಂಜನಗಳು (Consonants):—

ಪ ತ ಟ ಚ ಕ
ಬ ದ ಡ ಜ ಗ
ಫ ಥ ಠ ಛ ಖ
ಭ ಧ ಢ ಝ ಘ
"ಂ" ಮ ನ ಣ ಞ ಙ   ವರ್ಗ=೨೫+೧=೨೬
ವ ಯ
ರ ಱ
ಲ ಳ ೞ
ಸ ಹ   ಅವರ್ಗ ೯
        ಒಟ್ಟು = ೪೭

ಮಹಾಪ್ರಾಣಾಕ್ಷರಗಳನ್ನು ಉಳಿಸಿಕೊಂಡ ಕೇಶಿರಾಜ ಹೆಚ್ಚು ಬಳಕೆಯಲ್ಲಿದ 'ಶ' ಮತ್ತು 'ಷ' ಗಳನ್ನು ಉಳಿಸಿಕೊಳ್ಳಬಹುದಾಗಿತ್ತು. ಆದರೆ, ಮಧ್ಯಕಾಲೀನ ಕನ್ನಡ ಗ್ರಂಥಗಳಲ್ಲಿ ಬಹುಮಟ್ಟಿಗೆ ತದ್ಭವ ಪದಗಳೇ ಹೆಚ್ಚು ಬರುತ್ತಿದ್ದುದರಿಂದ್ದ ಈ 'ಶ' ಮತ್ತು 'ಷ'ಕಾರಗಳ ಬಳಕೆ ಕಡಿಮೆಯಾಗಿತ್ತು ಎಂಬುದರಿಂದ ಕನ್ನಡದ ಶುದ್ಧಗೆಯ ಪಟ್ಟಿಯಿಂದ (Phonemic chart) ಇವುಗಳನ್ನು ತೆಗೆದು ಹಾಕಿರಬೇಕು.

ಶಿಥಿಲ ದ್ವಿತ್ವಗಳು ಮತ್ತು ವಿಜಾತೀಯ ಸಂಯುಕ್ತಾಕ್ಷರಗಳು

ಕೇಶಿರಾಜನ ವ್ಯಾಕರಣದಲ್ಲಿ ೫೨, ೫೩ ಮತ್ತು ೫೪ನೇ ಸೂತ್ರಗಳಲ್ಲಿ ಶಿಥಿಲ ದ್ವಿತ್ವವನ್ನು ಕುರಿತು ಹೇಳಿದೆ. ಱ, ೞ ರೇಫಾಂತಗಳಾಗಿರುವ ಪದಗಳು ಪೂರ್ವಾಕ್ಷರವು ಹ್ರಸ್ವವಾಗಿರುವಾಗ, ಮುಂದೆ, ಗ, ದ, ವ, ಜಕಾರಗಳಿರುವಾಗ ಆಗುವ ಸಂಯೋಗವನ್ನು ಶಿಥಿಲವೆಂದು ಕರೆಯಲಾಗಿದೆ. ಇದರ ಪರಿಮಾಣ (duration) ಏಕಮಾತ್ರೆಯೆಂದು ಹೇಳಲಾಗಿದೆ. ಪೂರ್ವ ಕವಿಗಳ ಕೃತಿಗಳಲ್ಲೆಲ್ಲ ಈ ಶಿಥಿಲದ್ವಿತ್ವ ಕಂಡುಬರುತ್ತದೆ. ಱ, ೞ ರೇಫಾಂತಗಳಲ್ಲದೆ 'ಲಾಂತ ಪದ'

ಗಳಲ್ಲಿಯೂ ಮೇಲಿನ ಪ್ರಸರಣದಲ್ಲಿ (distribution) 'ಶಿಥಿಲತೆ' ಇರುವುದು ರನ್ನ ಕವಿಯ 'ಗದಾಯುದ್ಧ' ಕಾವ್ಯದಲ್ಲಿದೆ. ಇವಲ್ಲದೆ ಸ್ವಾಭಾವಿಕವಾಗಿ 'ಶಿಥಿಲತೆ' ಯಿರುವ ಕೆಲವು ಪದಗಳನ್ನು ಕೊಟ್ಟಿದೆ. ಉದಾ:—ಬರ್ದಿಲ, ಗರ್ದುಗು, ಎರ್ದೆ, ಅದಿರ್ಮುರ್ತ್ತೆ ಮುಂತಾದುವು. ಇನ್ನು ಸಂಧಿಯಾಗುವೆಡೆಗಳಲ್ಲಿ, ಶ್ರುತಿಕಟುತೆಯನ್ನು ಕುರಿತು ಹೇಳುತ್ತಾ 'ಸರೇಫಮಿದಿರಾಗೆ, ಶಿಥಿಲಮೆಂದನುಕರಿಪರ್' ಎಂದು ಹೇಳಲಾಗಿದೆ!!....ಹಳೆಯ ಶಿಲಾಲಿಪಿಗಳಲ್ಲಿ 'ಶಾಸನಕಾರನು' ವಿಧಿಸಿದಂತೆ ವ್ಯಂಜನ ದ್ವಿರ್ಭಾವವೇ ಕಂಡುಬರುತ್ತದೆಯಂತೆ; ಇದು ಸಂಸ್ಕೃತಾನುಸರಣವಿರಬಹುದು"* ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ನಮ್ಮ ಈಗಿನ ಉಚ್ಚಾರಣೆಯನ್ನು ಗಮನಿಸಿದರೆ ಆದಿಸ್ಥಾನದ (initial position) ಸ್ಪರ್ಶವರ್ಣಗಳು (stop consonants) ಕಠಿಣವಾಗಿಯೂ, ಸ್ವರಗಳ ಮಧ್ಯೆ, ಸ್ವಲ್ಪ ಹಗುರವಾಗಿಯೂ, ಇರುತ್ತವೆ. ಪ್ರಯೋಗಾರ್ಥವಾಗಿ ಈ ಕೆಳಗಿನ ಪದಗಳನ್ನು ಸಹಜವಾಗಿ ಉಚ್ಚರಿಸಿದರೆ, ಇದು ಮಂದಟ್ಟಾಗುತ್ತದೆ.

ಉದಾ:

ಪರ	ತನು	ಟವ	ಚಲ	ಕಲ
ಅಪರ	ಅತನು	ವಟಿ	ಅಚಲ	ಸಕಲ
ಬಲಿ	ದಯೆ	ಡಗೆ	ಜಲ	ಗುರು
ಅಬಲ	ಸದಯ	ಅಡಗು	ಸುಜಲ	ಉಗುರು

ಆದಿಸ್ಥಾನದಲ್ಲಿ, ಆಯಾ ವರ್ಣಗಳ ಸ್ಫೋಟನಕ್ಕೆ (explosion) ಮಧ್ಯಸ್ಥಾನದಲ್ಲಿಯವುಗಳಿಗಿಂತ ಹೆಚ್ಚುಕಾಲ ಬೇಕಾಗುತ್ತದೆ. ಆದರೆ ದೀರ್ಘಸ್ವರಗಳ ನಂತರ ಬರುವ ಸ್ಪರ್ಶವರ್ಣಗಳು, ಆದಿಸ್ಥಾನದಲ್ಲಿಯವುಗಳಷ್ಟೇ, (initial stops) ಅಥವಾ ಅತಿ ಸಮೀಪವಾದ ಕಾಲಪ್ರಮಾಣದಲ್ಲಿ ಸ್ಫೋಟನ(explosion)ವಾಗುತ್ತವೆ. ಉದಾ:— 'ಆಗ, ಈಗ, ಹಾಗೆ, ಹೇಗೆ,—' 'ಹಾಕು, ಸಾಕು, ಬೇಕು' ಎಂಬಂತಹವುಗಳನ್ನು ಗಮನಿಸಬೇಕು. ತಮಿಳು ಭಾಷೆಯಲ್ಲಿ ಇಷ್ಟು ಮಾತ್ರವಲ್ಲದೆ, ದೀರ್ಘಸ್ವರಗಳ ನಂತರ ದ್ವಿತ್ವಗಳು ಕೂಡ ಬರುತ್ತವೆ. ಮಲೆಯಾಳದಲ್ಲಿಯೂ ಹೀಗೆಯೇ ಇದೆ. ಉದಾ:—ಪಾಕ್ಕ್; ತೋಟ್ಟಂ; ಆಪ್ಪಂ; ಇತ್ಯಾದಿ....ಸ್ವರಗಳ ಮಧ್ಯೆ ಬರುವ ಹ್ರಸ್ವಸ್ಪರ್ಶ ವರ್ಣಗಳು, ಆದಿಯಲ್ಲಿ ಅನಾದಿತ (voiceless) ವಾದವುಗಳು, ಅರ್ಧ, ಅಥವಾ, ಅಲ್ಪ ಸ್ಪರ್ಶಕಗಳಾಗಿಯೂ (fricatives) ಅನುನಾಸಿಕಗಳ ನಂತರ ಪೂರ್ಣಸ್ಪರ್ಶಕ ನಾದಿತಗಳಾಗಿ (voiced stops) ಸ್ಫುರಿಸುತ್ತವೆ. ಕನ್ನಡದಲ್ಲಿಯೂ, ತೆಲುಗಿನಲ್ಲಿಯೂ, ದೀರ್ಘಸ್ವರಗಳನಂತರ ದ್ವಿತ್ವ ಬರುವುದೇ ಇಲ್ಲ. ಹ್ರಸ್ವ ಸ್ವರದ ಮಧ್ಯದ ವರ್ಣಗಳ ಸ್ಫೋಟನೆ ಶೀಘ್ರಗತಿಯದಾಗಿರುವುದು. ತಮಿಳಿನ ಉಚ್ಚಾರಣೆ

---

* ಕೆಲವು ಕನ್ನಡ ವ್ಯಾಕರಣ ವಿಚಾರಗಳು, ಪುಟ ೧೬–೧೭.

ಯನ್ನೂ ಇವನ್ನೂ ಹೋಲಿಸಿ ನೋಡಿದಾಗ ನಮಗೆ ಪರಸ್ಪರ ಸೂಕ್ಷ್ಮ ಸಂಬಂಧದ ಅರಿವಾಗುತ್ತದೆ.

ಪ್ರಾಚೀನ ದ್ರಾವಿಡದಲ್ಲಿದ್ದ (Proto—Dravidian) ಅನಾದಿತ ವರ್ಣಗಳು (Voiceless Consonants) ಕ್ರಮೇಣ ನಾದಿತವಾಗುತ್ತ (Voiced Consonants) ಬಂದುವೆಂದು ತಿಳಿಯುತ್ತದೆ.* ಈ ರೀತಿಯ ಪರಿವರ್ತನೆಗೆ ಕಾರಣ, ಉಚ್ಚಾರಣಾ ಸೌಲಭ್ಯದ ಕುರಿತು ಜನರು ಹೆಚ್ಚು ಗಮನಕೊಟ್ಟುದೆಂದೇ ತೋರುತ್ತದೆ. ಇಂತಹ ಸೌಲಭ್ಯಾಕಾಂಕ್ಷೆ ಕನ್ನಡದಲ್ಲಿ ಸ್ವಲ್ಪ ಹೆಚ್ಚಿಗಾಗುತ್ತ ಬಂದುದರಿಂದಲೇ ೞ > ಳ ಱ > ರ; ಪ > ಹ ಮುಂತಾದ ಬದಲಾವಣೆಗಳು ಆಗುತ್ತ ಬಂದಿವೆ. ಕಾಲ ಕಾಲಕ್ಕೆ ಸರಿಯಾಗಿ ಅವುಗಳಿಗೆ ಗ್ರಾಂಥಿಕ ಮನ್ನಣೆಯೂ ದೊರೆತಿದೆ. ಕೇಶಿರಾಜನೇ, 'ಪ–'ವು 'ಹ–' ವಾಗುತ್ತ ಕೆಲವೆಡೆಗಳಲ್ಲಿ ತೋರುವುದು—'ಇದು ದೇಶಿಯೊಳ್ ಚೆಲ್ವು' ಎಂದು ಮೆಚ್ಚಿಗೆ ಸೂಚಿಸಿದ್ದಾನೆ. (ಇಂತಹ ಕಡೆ ತಮಿಳು ಕನ್ನಡಕ್ಕಿಂತ ಹೆಚ್ಚು ಸಂಪ್ರದಾಯ ಶರಣತೆಯನ್ನು ಗ್ರಾಂಥಿಕ ಭಾಷೆಯಲ್ಲಿ ತೋರುತ್ತದೆ.)

ಈ ಹಿಂದೆ ಹೇಳಿದಂತೆ ಶಾಸನಗಳಲ್ಲಿ ವ್ಯಂಜನ ದ್ವಿರ್ಭಾವ [ಪೂರ್ವಪದದ ಕೊನೆಯ ಅಕ್ಷರ ಲಘುವಾಗಿ, ಪರಪದದ ಮೊದಲ ಅಕ್ಷರದ ಇದಿರು ರೇಫ ಬರುವಾಗ] ಕಂಡು ಬರುವುದು, ಜನತೆಯ ಸಹಜ ಉಚ್ಚಾರಣೆಯನ್ನು ಮಾತ್ರ ಗಮನಿಸಿ, ಬರೆಯುತ್ತಿದ್ದುದೇ ಕಾರಣವಲ್ಲದೆ, ಆಮೇಲಿನ, ಶಿಥಿಲ, ಶಿಥಿಲದ್ವಿತ್ವದ ಸೂತ್ರವನ್ನು ರಚಿಸಿದ ಶಾಸ್ತ್ರದ ಕೃತಕತೆಯನ್ನು ತಿಳಿಯದಿರುವುದೂ, ಕಾರಣವೆಂದು ಹೇಳಬಹುದು. ಹೇಗಿದ್ದರೂ, ಒಂದು ಕಾಲದಲ್ಲಿ, ಈ ವ್ಯಂಜನ ದ್ವಿರ್ಭಾವ ಸ್ವಾಭಾವಿಕವಾಗಿ ಕನ್ನಡದಲ್ಲಿದ್ದುದು ಕ್ರಮೇಣ ಕನ್ನಡಿಗರ ಕಿವಿಗೆ ಶ್ರುತಿಕಟು ವಾಯ್ತು. ಹೀಗೆ, ಕೇಶಿರಾಜ ಒಂದು ನಿಯಮವನ್ನೇ ಮಾಡಿ ಹಾಕಿದನು. ಆದರೆ, ಹೊಸಗನ್ನಡದಲ್ಲಿ ಬರಹದಲ್ಲಿ ಇಲ್ಲದಿದ್ದರೂ, ಉಚ್ಚಾರಣೆಯಲ್ಲಿ ಇಂತಹ ಎಡೆಯಲ್ಲಿ ಸಂಪೂರ್ಣ ದ್ವಿತ್ವವಲ್ಲದಿದ್ದರೂ, ಸ್ವಲ್ಪ ಮಟ್ಟಿಗೆ ಒತ್ತಿ ಉಚ್ಚಾರಣೆ ಯಾಗುತ್ತದೆ. [ಶಾಸ್ತ್ರದ ಪರಿಚಯವಿರುವವರಲ್ಲಿ ಪ್ರಯತ್ನ ಪೂರ್ವಕ ಇದು ಬಾರದಿದ್ದರೆ (ಅಂದರೆ—ಬರಹವನ್ನೇ ಅನುಸರಿಸಿ ಉಚ್ಚರಿಸುವಾಗ) ಆಶ್ಚರ್ಯ ಪಡಬೇಕಾಗಿಲ್ಲ.] ಇಲ್ಲಿ, ಈ ಶಿಥಿಲತೆಯನ್ನು ಸರ್ವ ಕಾಲಕ್ಕೂ ಕಾದಿರಿಸಿ

* Historical Grammar of old Kannada, G. S. Gai, Page 10.

" ಇರೆ ವರ್ಗಪ್ರಥಮಂಗಳ್
ಪರದೊಳ್ ಚ–ಟ–ವರ್ಗಮುಳಿಯೆ, ತಮ್ಮ ತೃತೀಯಾ॥
ಕ್ಷರಮಕ್ಕುಂ ಪದವಿಧಿಯೊಳ್
ಪರಿಹರಿಸಬಾರದಲ್ಲಿ ಬಹುಳ ಸ್ಥಿತಿಯಿಂ ॥

ಶಬ್ದಮಣಿದರ್ಪಣ, ಸೂತ್ರ ೬೫.

ಕೊಳ್ಳಬೇಕಾದರೆ, ನಾವೊಂದು ' ಸಂಧಿ ಶುದ್ಧಗೆಯನ್ನು ' (Juncture Phoneme) ಮಧ್ಯ ಪ್ರವೇಶಿಸುವಂತೆ ಮಾಡಿದರೆ, ಈ ಸಂದಿಗ್ಧತೆಯಿಂದ ಪಾರಾಗಬಹುದು. ಉದಾ :—ಬರಿಸಿ+ಪ್ರಧಾನರಂ ;.... ಕುಳ್ಳಿರಿಸಿ+ಪ್ರಿಯ.

ಈ ಶಿಥಿಲತೆಗೂ, ಶಿಥಿಲದ್ವಿತ್ವಕ್ಕೂ ಹೆಚ್ಚು ವ್ಯತ್ಯಾಸವಿರುವಂತೆ ಕಾಣುವುದಿಲ್ಲ. ಹಿಂದೆ ಇದ್ದ ವೈಯಾಕರಣಿ ನಾಗವರ್ಮ ಈ ವಿಚಾರ ಹೇಳದೆ, ಕೇಶಿರಾಜ ಮಾತ್ರ ಹೇಳಿರುವುದು ಕುತೂಹಲಕಾರಿಯಾಗಿದೆ. ತಮಿಳಿನಲ್ಲಿ ಈಗಲೂ, ಉಚ್ಚಾರಣೆಯಲ್ಲಿರುವಂತೆ, ಕನ್ನಡದಲ್ಲಿಯೂ, ಈ ಅರ್ಧ ಅಥವಾ ಅಲ್ಪ ಸ್ಪರ್ಶಕಗಳು ಇದ್ದುವೆಂದು ಊಹಿಸಬಹುದು. ಹೀಗೆ ' ಗ ' ಕಾರದಲ್ಲಿ ಮತ್ತು ' ದ ' ಕಾರದಲ್ಲಿ ಎರಡೆರಡು ಉಚ್ಚರಣೆಗಳಿದ್ದು, ಕೇಶಿರಾಜನ ಕಾಲಕ್ಕೆ ಒಂದೇ ಆಗುತ್ತ ಬಂದು, ತಪ್ಪು ಪ್ರಯೋಗಗಳಾಗುತ್ತಿದ್ದುದರಿಂದಲೇ, ಅವುಗಳ ಸ್ಥಾನವನ್ನು ಗುರುತಿಸಿ ಹೇಳಬೇಕಾಯ್ತು. ಇಂತಹ ಆವಶ್ಯಕತೆ ಅವನಿಗಿಂತ ಹಿಂದಿನವರಿಗೆ ಬಂದಿರಲಿಕ್ಕಿಲ್ಲ ; ಆಗ ಅವುಗಳು ಸರ್ವ ಸಾಮಾನ್ಯವಾಗಿದ್ದಿರಬೇಕು. ಕೇಶಿರಾಜನ ಕಾಲದಲ್ಲಿ ' ಸರೇಫಮಿದಿರಾಗೆ ಶಿಥಿಲಮೆಂದನುಕರಿಪರ್ '—ಮಾತ್ರವಲ್ಲ ನಿಯತ ದ್ವಿತ್ವಗಳನ್ನು ಒಂದೇ ಅಕ್ಷರದಿಂದ ಅಂದರೆ ಹ್ರಸ್ವ ವರ್ಣಗಳಿಂದ ಕೆಲವೆಡೆಯಲ್ಲಿ ಸೂಚಿಸುತ್ತಿದ್ದರೆಂದು ಶಿಲಾಶಾಸನಗಳ ಬರಹ ಪದ್ಧತಿಯಿಂದಲೂ ತಿಳಿಯಲಾಗುತ್ತದೆ.

* ಉದಾ :—ಅಪುದು, ಆಟುತುಂ, ಗೆಯೆ
ರುದ್ದ ಪಯನ್.... ಇತ್ಯಾದಿ.... ಇತ್ಯಾದಿ....

ಈಗಲೂ ನಮ್ಮಲ್ಲಿ ಕೆಲವರು ದೇವಪ, ನಾಗಣ, ಮುಂತಾಗಿ, ಉಚ್ಚಾರಣೆಯಲ್ಲಿ ದ್ವಿತ್ವವಾದರೂ, ಬರಹದಲ್ಲಿ ಹ್ರಸ್ವವಾಗಿ ಬರೆಯುವುದನ್ನು ಕಾಣಬಹುದು.

ಅಂತೂ ಈ ವರ್ಣಗಳು ಶುದ್ಧಗೆಗಳ ಸ್ಥಾನಕ್ಕೆ (phonemic status) ಅಡರಲಿಲ್ಲ. ಅವುಗಳ ಪ್ರಸರಣ (distribution) ನಿರ್ದಿಷ್ಟವಾಗಿ (Conditioned) ಇದ್ದುದರಿಂದ, ಆಯಾ ಶುದ್ಧಗೆಗಳ ಉಪಸದಸ್ಯ (allophonic members) ಸ್ಥಾನ ಮಾತ್ರ ಇವುಗಳಿಗೆ ದೊರೆತುದು. ಹೀಗಾಗಿ, ಲಿಪಿಯಲ್ಲಿ ಪ್ರತ್ಯೇಕ ಸಂಜ್ಞೆಯೇನೂ ಇದಕ್ಕೆ ಉಂಟಾಗಲಿಲ್ಲ. ಈಗ ಬಳಕೆಯಲ್ಲಿಲ್ಲದ ಶಬ್ದಕ್ಕೆ ಸಂಜ್ಞೆ ಕೊಡುವುದರಲ್ಲಿ ಅರ್ಥವಿಲ್ಲ. (ಬಳಕೆಯಲ್ಲಿರುವ ತಮಿಳಿನಲ್ಲೂ ಇದು ಶುದ್ಧಗೆಯ ಸ್ಥಾನಕ್ಕೆ ಏರಿಲ್ಲ.) ಮ**ಗ**ನ್ ; ಅವರ್**ಗಳ್**, ಎಂಬ ನಾದಿತ ಘರ್ಷಕಗಳಲ್ಲದೆ (voiced fricatives) ಜಿಹ್ವಾಮೂಲೀಯವಾದ ಅನಾದಿತ ಘರ್ಷಕ (voiceless fricative) ಕೂಡ ಇದೆ. ಕೇಶಿರಾಜನ ಕಾಲದ ಕನ್ನಡದಲ್ಲಿ ಅಥವಾ, ಗ್ರಾಂಥಿಕ ಕನ್ನಡದಲ್ಲಿ– ಇವುಗಳ ಪ್ರಸರಣ (distribution) ಹೇಗಿತ್ತೆಂದು ಈ ಕೆಳಗಿನಂತೆ ತೋರಿಸಬಹುದು :

---

* Historical Grammar of old Kannada, G. S. Gai, Page 13.

/ದ/ (೧) **[ದ]** 'ಱಟಿ', 'ಕುಳ,' 'ಲ' ಮತ್ತು ರೇಫಾನಂತರದ ಸ್ಥಾನಗಳಲ್ಲಿ.

ಉದಾ :— ಎರ್ದೆ ತೆಗಱ್ದಂ
ಬರ್ದುಕು ತುಮುಱ್ದಂ
ಗರ್ದುಗು ನುಸುಳ್ದಂ
ಅಗಲ್ದಂ ಇತ್ಯಾದಿ.

(೨) [ದ] ಇತರೆಡೆಗಳಲ್ಲಿ.

ಉದಾ :— ಸದೆ ದಯೆ ಒದೆಯು
ದಾರಿ ಕದಿಯು ಇತ್ಯಾದಿ..........

/ಗ/ (೧) **[ಗ]** ಱಟಿ, ಕುಳ, ರೇಫಾನಂತರದ ಸ್ಥಾನಗಳಲ್ಲಿ.
ಉದಾ : ತೆಗಱ್ಗೆ ಸುಸುಳ್ಗೆ ಬಿದಿರ್ಗೆ
ನೆಗಱ್ಗೆ ಮುಸುಳ್ಗೆ
ತೊಡರ್ಗೆ ಅದಿರ್ಗೆ ಇತ್ಯಾದಿ..........

(೨) [ಗ] ಇತರೆಡೆಗಳಲ್ಲಿ.
ಉದಾ :— ಗಮನ, ಗರತಿ, ಹಗರಣ, ಮಗು ಇತ್ಯಾದಿ.

—ಹೀಗೆ ಱಟಿ ಕುಳ ರೇಫಾನಂತರ ಎಲ್ಲೆಲ್ಲಿ ಹ್ರಸ್ವ 'ದ' ಮತ್ತು 'ದ' ಗಳನ್ನು ಬರೆಯಲಾಗುತ್ತಿತ್ತೋ, ಅದು ಪೂರ್ಣ ಸ್ಪರ್ಶವಲ್ಲ. 'ಅರ್ಧ' ಅಥವಾ ಅಲ್ಪ ಸ್ಪರ್ಶಕ' ಗಳೆಂದು (Non-Stop or fricative Consonants) ಪ್ರಚಲಿತ ವಾಗಿದ್ದವು. ವ್ಯಂಜನ ದ್ವಿರ್ಭಾವವಿದ್ದಲ್ಲಿ ದ್ವಿತ್ವವನ್ನೇ ಬರೆಯಲಾಗುತ್ತಿತ್ತು ಎಂಬುದಕ್ಕೆ ಶಿಲಾಶಾಸನಗಳಲ್ಲಿ ಮಾತ್ರವಲ್ಲದೆ ವಡ್ಡಾರಾಧನೆಯಲ್ಲಿಯೂ, ಉದಾಹರಣೆಗಳು ಸಿಗುತ್ತವೆ.

ಉದಾ : *

ಅರ್ದ್ದಕ್ಕಂಡುಗ ಇಕ್ಕುೞ
ಅವರ್ಗ್ಗೆ ಇರ್ಪ್ಪತ್ತು
ಇದರ್ಕ್ಕೆ ಇರ್ಬ್ಬರ
ಇದಿರ್ಗ್ಗೊಂಡು ಊರ್ಗ್ಗೆ ಇತ್ಯಾದಿ....ಇತ್ಯಾದಿ....

ಆದರೆ ಇದೇ ಕಾಲದಲ್ಲಿ ಇನ್ನೊಂದೆಡೆಯಲ್ಲಿ ಇಂತಹ ಸ್ಥಾನಗಳಲ್ಲಿ ಹ್ರಸ್ವವನ್ನೂ ಬರೆಯುತ್ತಿದ್ದುದರಿಂದ—ಬರಹದ ಅವ್ಯವಸ್ಥೆಯು ಬಹಳ ಹಿಂದಿನಿಂದಲೇ ಆರಂಭಿಸಿತ್ತೆಂದು ಕಾಣುತ್ತದೆ. ಸ್ಪಷ್ಟವಾಗಿ ದ್ವಿತ್ವವನ್ನು ಬರೆಯಬೇಕಾದಲ್ಲಿಯೂ,

* Historical Grammar of Old Kannada, G. S. Gai, Page 12.
ಈ ಉದಾಹರಣೆಗಳನ್ನು—ಪ್ರಾತಿನಿಧಿಕವಾಗಿ ಮಾತ್ರ ಇಲ್ಲಿ ಕೊಟ್ಟಿದೆ.

ಹ್ರಸ್ವವನ್ನು ಬರೆಯುತ್ತಿದ್ದ ಅವ್ಯವಸ್ಥೆ ಕಂಡುಬರುತ್ತದೆ. ಉದಾ :—ಅಪುದು (=ಅಪ್ಪುದು), ಇದಕೆ (=ಇದಕ್ಕೆ), ಇತ್ಯಾದಿ....ನಿಯತ ದ್ವಿತ್ವವೆಂದು ಸುಮಾರು ೫೫ ಪದಗಳನ್ನು 'ಕೇಶಿರಾಜ ಕೊಡಬೇಕಾದ ಕಾರಣ ಈ ಅವ್ಯವಸ್ಥೆಯನ್ನು ತೋರಿಸುತ್ತದೆ. ಇಲ್ಲದಿದ್ದರೆ, ಅಗ್ಗಳ, ಉಕ್ಕೆವ, ಉಗ್ಗಂ, ಕಕ್ಕಸ, ಕಪ್ಪಡಿ† ಎಂಬೀ ಶಬ್ದಗಳು ನಿಯತ ದ್ವಿತ್ವವೆಂದು ಪ್ರತ್ಯೇಕ ಹೇಳ ಬೇಕಾದ್ದಿಲ್ಲ.

ಇನ್ನು ಸರೇಫ ದ್ವಿತ್ವಗಳು ಬರಹದಲ್ಲಿಯೂ ದ್ವಿತ್ವವಾಗಿದ್ದುವು ಎಂಬುದಕ್ಕೆ ವಡ್ಡಾರಾಧನೆಯಲ್ಲಿಯೂ ದ್ವಿತ್ವವಾಗಿ ಬರೆದಿರುವ ಕೆಲಪದಗಳು ಸಾಕ್ಷಿ ಕೊಡುತ್ತವೆ.

ಉದಾ : *

ಇವರ್ಗ್ಗಂ	ಪೆರ್ಚ್ಚಿ
ಪಟ್ಟಿರ್ದ್ದ	ಆರ್ಗ್ಗೆ—ಇತ್ಯಾದಿ—ಇತ್ಯಾದಿ.
ದೇವಾಂಗನೆಯರ್ಕ್ಕಳ್	

ಈ ರೇಫ ಸಂಯುಕ್ತ ದ್ವಿತ್ವ ಮತ್ತು ಹ್ರಸ್ವಗಳ ನಡುವೆ, ಅರ್ಥವಿರೋಧವೂ ಇತ್ತೆಂದು ಅಸ್ಪಷ್ಟವಾಗಿ ಮಿನುಗುತ್ತದೆ. ದ್ವಿತ್ವವಿರುವಲ್ಲಿ ಭೂತಕಾಲ, ಹ್ರಸ್ವವಿರುವಲ್ಲಿ ಭವಿಷ್ಯದ್ವರ್ತಮಾನ ಕೃದ್ವಾಚಿಯಿರುವಂತೆ ಭಾಸವಾಗುತ್ತದೆ. "... ಶಿಲಾಗೃಹದ **ಕೆಳಗಿರ್ದ್ದ** ಯಕ್ಷ ಕನ್ನೆಯಂ ಕಂಡು" (ಭೂತಕಾಲ ಕೃದ್ವಾಚಿ) "ಒರ್ವಳೆ **ಇರ್ದ** (=ಇರುವ) ಸ್ತ್ರೀಯ ಪಕ್ಕದೆ ಸತ್ಪುರುಷಂಗಿರಲ್ ತಕ್ಕುದಲ್ಲ"....(ಭವಿಷ್ಯದ್ವರ್ತಮಾನ—ಕೃದ್ವಾಚಿ). ಇಂತಹ ವ್ಯತ್ಯಾಸ ಬರಬರುತ್ತಾ ಬರಹಕಾರರ 'ಕೈಗಳ ಕೇಡಿನಿಂದ' ಮರೆಯಾಗಿ ಹೋದುದಾದರೆ, ನಮಗೊಂದು ನಷ್ಟವೇ ಆಯ್ತೆಂದು ಬೇರೆ ಹೇಳಬೇಕಾಗಿಲ್ಲ.

ಎಂತಿದ್ದರೂ, ಕೇಶಿರಾಜ ಅದಕ್ಕೊಂದು ನಿಯಮವನ್ನು ಮಾಡಿ ಹಾಕಿದರೂ, ಮುಂದೆ ಅಲ್ಲಿರುವ ರೇಫೆಯೇ ಕಣ್ಮರೆಯಾಯ್ತು. ಬಹುನುಡಿ (Multi-Syllabic). ಹಾಗೂ ಆದಿ ದೀರ್ಘ ಪದಗಳಲ್ಲಿ–ದಂಪತಿಗಳೆಡೆಯಲ್ಲಿ ಮಗುವೊಂದು ಅಡ್ಡವಾದಂತೆ–ಸ್ವರವೊಂದು ಸೇರಿ ಸಂಯುಕ್ತತೆ ಸಡಿಲಿತು. (ಉದಾ:— ಆರ್ಗ್ಗೆ>ಆರಿಗೆ, ಅವರ್ಗ್ಗೆ >ಅವರಿಗೆ ;) ಸಂಬಂಧ ನೆಲಸಿತು ; ವಿಚ್ಛೇದನೆ ಉಂಟಾಗಲಿಲ್ಲ.

ವಿಜಾತೀಯಾಕ್ಷರಗಳು ಸಜಾತೀಯವಾಗುವುದೇ ?

'ಉರ್ದ್ದು,' 'ಬಿರ್ದ್ದು,' 'ನುರ್ಗ್ಗು' 'ಪರ್ದ್ದು' ಎಂಬಂತಹ ಪದಗಳೆಲ್ಲ ಉದ್ದು' 'ಬಿದ್ದು' 'ನುಗ್ಗು' 'ಪ (> ಹ) ದ್ದು' ಎಂಬಂತಾಗಿ ತೋರುವುದ

† ಶಬ್ದಮಣಿದರ್ಪಣ, ಸಂ॥ ಪಿ. ಮಂಗೇಶರಾವ್, ಮಂಗಳೂರು, ೧೯೨೦, ಪು. ೫೬.

* ವಡ್ಡಾರಾಧನೆ— ಡಿ. ಎಲ್. ನರಸಿಂಹಾಚಾರ್, ಪುಟ ೫೫–೫೬–೫೭.

ರಿಂದ ವಿಜಾತೀಯಾಕ್ಷರಗಳು ಸಜಾತೀಯವಾದುವೆಂದುಕೊಳ್ಳುವುದು ವಾಡಿಕೆಯಾಗಿದೆ. ಆಧುನಿಕ ವ್ಯಾಕರಣಗಳಲ್ಲಿಯೂ ಹಾಗೆಯೇ ಹೇಳಲಾಗಿದೆ.* ಱಟಕುಳಾದಿಗಳ ನಂತರಬರುವ ವರ್ಣಗಳನ್ನು ದ್ವಿತ್ವವಾಗಿ ಬರೆಯುವ ವಾಡಿಕೆಯಿತ್ತೆಂಬುದು ಸುಸ್ಪಷ್ಟವಾಗುತ್ತಿದೆ. ವರ್ಣ ಸಮೀಕರಣವೆಂದಾಗ (assimilation) 'ಱಟಕುಳಾದಿಗಳು ಅವುಗಳ ನಂತರಬರುವ ವರ್ಣಗಳಾಗಿ ಪರಿವರ್ತನೆಯಾಗುವುದು' —ಎಂದು ಅರ್ಥವಾಗುತ್ತದೆ. ಱಟಾದಿಗಳನಂತರ ಹ್ರಸ್ವವ್ಯಂಜನಗಳೇ ಇದ್ದುವೆಂದು ತೀರ್ಮಾನಿಸಿದರೆ ಇದು ಸರಿಯಾಗುವುದು. ಆದರೆ, "ಎರ್ದೆ," "ಬರ್ದಿಲ"............ಮುಂತಾದ ಪದಗಳೂ, ಕೂಡ ಹ್ರಸ್ವಗಳಾಗಿಯೇ ಇದ್ದು, ಈ ಸಮೀಕರಣಕ್ರಿಯೆಯಿಂದ ಎದ್ದೆ, ಬದ್ದಿಲ,—ಎಂದು ಏಕಾಗಲಿಲ್ಲ? ಎಂಬ ಪ್ರಶ್ನೆಗೆ ಉತ್ತರ ದೊರೆಯುವುದಿಲ್ಲ. ಆದುದರಿಂದ ಇದನ್ನು 'ವರ್ಣಸಮೀಕರಣ'ವೆಂದು (assimilation) ಒಂದೇ ವರ್ಗಕ್ಕೆ ಏಕಾಏಕಿ ತುಂಬಿಸುವುದು ಅತೃಪ್ತಿಕರವೆಂದು ಕಾಣುತ್ತದೆ. ಇದನ್ನು ವರ್ಣಸಂಯುಕ್ತತೆಯ ನಿರ್ಮೂಲನವೆಂದು ಹೇಳಿಕೊಂಡು ಇಂತಹ ಸಂದರ್ಭದಲ್ಲಿ, ರೇಫವು ಶೂನ್ಯದೊಡನೆ ಲೀನವಾಗುತ್ತದೆ ("*r*" merges with zero) ಎಂದುಬಿಡುವುದು ಉತ್ತಮ. ಹಾಗಾದರೆ, ಆದಿ ದೀರ್ಘವಿರುವ ಪದಗಳಲ್ಲಿ, ಬಹುನುಡಿ (multi-syllabic) ಪದಗಳಲ್ಲಿ ಏಕೆ ದ್ವಿತ್ವವುಳಿಯಲಿಲ್ಲವೆಂದು, ಅಲ್ಲಿ ರೇಫೆ ಏಕೆ ಮಾಯವಾಗಲಿಲ್ಲ ಎಂದು ಪ್ರಶ್ನೆಯೇಳುತ್ತದೆ. ಕನ್ನಡದಲ್ಲಿ ದೀರ್ಘಸ್ವರಗಳನಂತರ ದ್ವಿತ್ವ ಬರುವುದಿಲ್ಲವೆಂದು ಹಿಂದೆಯೇ ನೋಡಿದ್ದೇವೆ. ಅಷ್ಟು ಮಾತ್ರವಲ್ಲ, ಅಧಿಕನುಡಿಗಳಲ್ಲಿ (multi-syllabic) ದ್ವಿತ್ವ ಬರುವುದು ಕಡಿಮೆ. ಉದಾ:—ನನ್ನ—ನಿನ್ನ ಎಂಬಂತಹ ಕೊನೆಯ ಅನುನಾಸಿಕದ ದ್ವಿತ್ವತೆ 'ಅಧಿಕನುಡಿ' ಪದವಾದ 'ಅವನ'—ಎಂಬಲ್ಲಿ ಬರಲಾರದು. [ನನ್+ಅ>ನನ್ನ; ನಿನ್+ಅ>ನಿನ್ನ; ಆದರೆ ಅವನ್+ಅ>ಅವನ.] ಹೀಗಿರುತ್ತಾ ಸಾಧ್ಯವಿರುವಲ್ಲೆಲ್ಲ ಸಂಯುಕ್ತತೆಯ ಕ್ಲಿಷ್ಟತೆಯೇರ್ಪಡದಂತೆ, ಒಂದು ಸ್ವರವನ್ನು ಸೇರಿಸಿ ಒಟ್ಟು ಪದದ ಕಾಲಪ್ರಮಾಣಕ್ಕೆ (duration) ಭಂಗಬಾರದಂತೆ ಛಂದಸ್ಸನ್ನು ಕಾಯ್ದುಕೊಳ್ಳುವ ವ್ಯವಸ್ಥೆಯಾಗಿರುವುದನ್ನು ಗಮನಿಸಬೇಕು. ತಮಿಳಿನಲ್ಲಿ—ನಿತ್ಯದ ವ್ಯವಹಾರ ಭಾಷೆಯಲ್ಲಿ—ಈ ರೇಫೆ ಮಾಯವಾಗುತ್ತಿದೆ. (ಉದಾ:—ಪಾರ್ಕ್ಕ> ಪಾಕ್ಕ............ಅದರ್ಕ್ಕ>ಅದ್ ಕ್............ಇತ್ಯಾದಿ.) ಆದರೆ, ಭಾಷೆಯ

---

* A Grammar of the oldest Kanarese Inscriptions,

A. N. Narasimhaiah, Page 89-90.

"If—*r*—is preceded by a short vowel,—*r*—is assimilated to the consonant following.

"ಕನ್ನಡ ಕೈಪಿಡಿ"—ಭಾಷಾ ಚರಿತ್ರೆಯನ್ನು ನೋಡಿ.

ಗುಣದಂತೆ ದೀರ್ಘಸ್ವರಾನಂತರ ದ್ವಿತ್ವ ಪ್ರಯೋಗವಿರುವುದರಿಂದ, ಅದು ನಮ್ಮಲ್ಲಿ ಯಂತೆ ಸಮಸ್ಯೆಯಾಗಿ ತೋರುವುದಿಲ್ಲ.

ಕೇಶಿರಾಜನ ಕಾಲಾನಂತರ ಈ 'ವಿಜಾತೀಯತೆ' ಶೂನ್ಯವಾಗುತ್ತಾ ಬಂದಿತೆಂದು ಹೇಳಲು ಸಂಶಯವಿಲ್ಲ. ಹೀಗಾಗಲು ಕಾರಣ ಱ, ೞಾದಿಗಳ ನಂತರ ಬರುವ ಅಲ್ಪಸ್ಪರ್ಶಕಗಳ ಉಚ್ಚಾರಣಾವಿಧಾನ ಕಾರಣವಾಯ್ತೇನೋ ಎಂದು ತೋರುತ್ತದೆ. ಱ, ೞಾದಿಗಳನಂತರ ಬರುವ 'ಅಲ್ಪಸ್ಪರ್ಶ'ಕಗಳನ್ನು ಉಚ್ಚರಿಸುವಾಗ ಱ, ೞಾದಿಗಳ ಉಚ್ಚಾರಣೆ ಪೂರ್ಣವಾಗುವುದಿಲ್ಲ. ಅಲ್ಪ ಸ್ಪರ್ಶಕಗಳ ಉಚ್ಚಾರಣೆಯಲ್ಲಿ ಮಾತ್ರ ನಾಲಗೆಯ ಅತ್ಯಲ್ಪಕಾಲದಲ್ಲಿ ಬಾಯಿಯ ಅಂಗುಳಿಗೆ ತಾಗಿ ಕೆಳಗೆ ಯಥಾಸ್ಥಾನಕ್ಕೆ ಬರುವುದು. ಹೀಗೆ ಱಾದಿಗಳಿಗೆ ಪ್ರಾಧಾನ್ಯವಿಲ್ಲದೆ, ಅವು ಅವಕ್ಕಿಂತ ಮೊದಲಿನ ಸ್ವರಗಳಲ್ಲೇ ಐಕ್ಯವಾಗುತ್ತವೆ. ಱಾದಿಗಳನ್ನು ಸರಿಯಾಗಿ ಉಚ್ಚರಿಸಿದರೆ ನಂತರದ ವರ್ಣಗಳು ಪೂರ್ಣ ಸ್ಪರ್ಶಕ ಗಳಾಗುತ್ತವೆ (stops). ಶಿಥಿಲದ್ವಿತ್ವದಲ್ಲಿ ಹೇಳಿದಂತೆ ಅದಕ್ಕೆ ಪ್ರಾಧಾನ್ಯಕಡಿಮೆ ಯಾಗುತ್ತಾ ಬಂದುದು ಸಕ್ರಮವಾಗಿ ಮುಂದೆ ಅವುಗಳ 'ಶೂನ್ಯೀಕರಣ' ಅಥವಾ ಬೇರೊಂದು ಸ್ವರಾಗಮನಕ್ಕೆ ಕಾರಣವಾಯ್ತು. ಇದರ ಪ್ರಭಾವದಿಂದಲೇ, ಉರ್ದು (ಉರ್ದ್ದು), ಬಿರ್ದು (ಬಿರ್ದ್ದು) ಮೊದಲಾದ ಸರೇಫ ಗುರೂಪಧೆಗಳು ರೇಫ ರಹಿತ ಗುರೂಪಧೆಗಳಾಗಿ ರೂಪ ಬದಲಾಯಿಸಿದುವು. ಅಧಿಕನುಡಿ, ಅಥವಾ ಆದಿ ದೀರ್ಘ ಸ್ವರಸಹಿತ ಪದಗಳಲ್ಲಿ, ಸ್ವರಾಗಮನದಿಂದ ಉಚ್ಚಾರಣೆಯ ಸೌಲಭ್ಯ ದೊಂದಿಗೆ ಛಂದಸ್ಸನ್ನೂ ಕಾಯ್ದಿರಿಸಲಾಯ್ತು. ಈ ಬದಲಾವಣೆಯಿಂದ, ಅಂದರೆ ವರ್ಣಸಮೀಕರಣ (assimilation) ದಿಂದಲ್ಲ, ಸಂಯುಕ್ತ ರೇಫಾದಿಗಳ '**ಶೂನ್ಯೀ ಕರಣ'ದಿಂದ** (merging with zero)—'ಗ' ಮತ್ತು 'ದ' ಶುದ್ಧಗೆಗೆಗಳ (phonemes) ಉಪಸದಸ್ಯರಾಗಿದ್ದ (allophones) 'ಅಲ್ಪಸ್ಪರ್ಶಕ' (fricatives) ಗಳು ಹೊಸಗನ್ನಡದಿಂದ ಎಂದೆಂದಿಗೂ ಕಣ್ಮರೆಯಾದುವು.*

—ಕೆ. ಕುಶಾಲಪ್ಪ ಗೌಡ

* ಆಧುನಿಕ ಭಾಷಾವಿಜ್ಞಾನ ಪದ್ಧತಿಗನುಸರಿಸಿ, ಕೆಲವು ಹೊಸ ಪದಗಳ ಬಳಕೆಯಾಗಿದೆ. ಅದಕ್ಕೆ ಸಮಾನವಾದ ಇಂಗ್ಲಿಷ್ ಪದಗಳನ್ನು ಅಲ್ಲಲ್ಲೇ ಕೊಟ್ಟಿದೆ. ಇದನ್ನು ಕೇವಲ ಪ್ರಾಯೋಗಿಕವೆಂದು ಮಾತ್ರ ತಿಳಿದುಕೊಂಡರೆ ಲೇಸು.

ಇದು ನನ್ನ ಪ್ರಾರ್ಥನಾ ಓ ಎನ್ನ ದೇವ :
      ಕತ್ತರಿಸು, ಕತ್ತರಿಸು
ಹೃದಯ ದಾರಿದ್ರ್ಯದಾ ಮೂಲವನ್ನು
ನನ್ನ ಸುಖದುಃಖವನು ಸಂತಸದಿ ಸಹಿಸೆ
      ನೀಡೆನಗೆ ಶಕ್ತಿ.

ಬಡವನೆನ್ನವನೆನಲು, ನಿರ್ಭೀತಿಯಿಂದುದ್ಧತರಲು ಗೆಲಲು,
      ನೀಡೆನಗೆ ಶಕ್ತಿ.
ನಿತ್ಯನಿತ್ಯದ ಮನಸಿನಲ್ಪತೆಯ ಹತ್ತಿಕ್ಕಿ
      ಎತ್ತರವನರಿಯೆ
      ನೀಡೆನಗೆ ಶಕ್ತಿ.

ನನ್ನ ಸಾಮರ್ಥ್ಯ ಸರ್ವಸ್ವವನು ಪ್ರೀತಿಯಲಿ
      ನಿನ್ನಡಿಗೆ ಅರ್ಪಿಸಲು
      ನೀಡೆನಗೆ ಶಕ್ತಿ.

('ಗೀತಾಂಜಲಿ'ಯಿಂದ ೩೬.)

—ಗುಡ್ಡಿ ಚಂದ್ರಶೇಖರ ಐತಾಳ

ಮನೆಗಳ ಹೆಸರುಗಳು

ಸ್ಥಳಗಳ ಹೆಸರುಗಳ ಪರಿಶೀಲನೆಯಲ್ಲಿ ಆಸಕ್ತನಾದ ನನಗೆ ಮನೆಗಳ ಹೆಸರುಗಳ ವಿಷಯದಲ್ಲೂ ಅಷ್ಟೇ ಆದರವಿರುವುದು ಸಹಜ. ಮನೆಗಳಿಗೆ ಹೆಸರುಗಳನ್ನಿಡುವುದು ನಮ್ಮ ದೇಶದಲ್ಲಿ ಹೊಸದೇನೂ ಅಲ್ಲ. ಹಿಂದೆ ರಾಜಮಹಾರಾಜರುಗಳ ಅರಮನೆಗಳಿಗೆ ಕರ್ಣಾನಂದಕರವೂ ಕುತೂಹಲಕಾರಿಗಳೂ ಆದ ಬಗೆಬಗೆಯ ನಾಮಧೇಯಗಳಿರುತ್ತಿದ್ದುದು ತಿಳಿದುಬಂದಿದೆ. ನಲಂದ ವಿದ್ಯಾಪೀಠದ ಪುಸ್ತಕ ಭಂಡಾರವಿದ್ದ ಮೂರು ಕಟ್ಟಡಗಳಿಗೆ 'ರತ್ನೋದಧಿ', 'ರತ್ನಸಾಗರ' ಮತ್ತು 'ರತ್ನರಂಜಕ' ಎಂಬ ಸೊಗಸಾದ ಹೆಸರುಗಳಿದ್ದವೆಂದು ಹ್ಯೂಯನತ್ಸಾಂಗ್ ಹೇಳಿದ್ದಾನೆ. ಆದರೆ ಸಾಧಾರಣ ಜನರ ನಿವಾಸಗಳಿಗೆ ಹೆಸರುಗಳನ್ನಿಡುವ ವಾಡಿಕೆ ಹಿಂದೆ ಎಷ್ಟುಮಟ್ಟಿಗೆ ಪ್ರಚಾರದಲ್ಲಿದ್ದಿತೋ ನಾವರಿಯೆವು. ಈಗಂತೂ ಅದೊಂದು 'ಫ್ಯಾಷನ್' (ಅಥವಾ ಕೆಲವರು ಉಚ್ಚರಿಸುವಂತೆ 'ಪ್ಯಾಷನ್') ಆಗಿಹೋಗಿದೆ. ಹೊಸದಾಗಿ ಮನೆ ಕಟ್ಟುವವರಿಗೂ ಕಟ್ಟಿದ ಮನೆಯನ್ನು ಕೊಂಡುಕೊಳ್ಳುವವರಿಗೂ ತಮ್ಮ ಮನೆಗೆ ಹೆಸರಿಡಬೇಕೋ ಬೇಡವೋ, ಇಟ್ಟರೆ ಯಾವ ಹೆಸರು ಚೆನ್ನಾಗಿರುತ್ತದೆ ಎಂಬ ಜಿಜ್ಞಾಸೆ ಕೆಲವು ವೇಳೆ ದುರ್ಭರವಾಗುವಷ್ಟು ಪ್ರಬಲವಾಗಿರುತ್ತದೆ.

ಹುಟ್ಟಿದ ಮಕ್ಕಳಿಗೆ ದೇವರ ಹೆಸರನ್ನಿಟ್ಟು ತನ್ಮೂಲಕ ತಮ್ಮ ಭಕ್ತಿ ಪ್ರದರ್ಶನ ಮಾಡಿ ಕೃತಾರ್ಥರಾಗುವುದು ನಮ್ಮ ಜನರಲ್ಲಿ ಸರ್ವಸಾಮಾನ್ಯ (ಹಲ ಕೆಲವರು ನವನವೀನ ಮಾತಾ ಪಿತೃಗಳನ್ನು ಬಿಟ್ಟು). ಅವರ ಈ ಧರ್ಮಶ್ರದ್ಧೆ ಮನೆಗಳ ಹೆಸರುಗಳಲ್ಲೂ ಕಂಡುಬರುತ್ತದೆ. ಮನೆ ಕಟ್ಟಿದವರನೇಕರು ತಮಗೆ ಗೃಹಾಧಿಪತಿಗಳಾಗುವ ಸಾಮರ್ಥ್ಯವನ್ನು ಅನುಗ್ರಹಿಸಿದ ಪರಮಾತ್ಮನಿಗೆ ಕೃತಜ್ಞತೆಯ ಕಾಣಿಕೆಯನ್ನು ಸಲ್ಲಿಸಬಯಸಿ 'ದೇವ ಪ್ರಸಾದ', 'ನಾರಾಯಣ ಕೃಪ', 'ಶಿವಕೃಪ' ಮೊದಲಾದ ಹೆಸರುಗಳ ಹಲಗೆಗಳನ್ನು ತಮ್ಮ ಮನೆಗಳ ಮುಂದೆ ತಗಲುಹಾಕುತ್ತಾರೆ. ಎಲ್ಲ ಐಶ್ವರ್ಯವೂ ಎಲ್ಲ ಸೌಭಾಗ್ಯವೂ ದೇವರಿಂದಲೇ ದತ್ತವಾದುದಾಗಿರುವಾಗ ಅದನ್ನು ಮತ್ತೇಕೆ ಈ ರೀತಿ ಒತ್ತಿ ಪ್ರಕಟಿಸಬೇಕೋ ಅರ್ಥವಾಗುವುದಿಲ್ಲ. ದೇವರು ಒಪ್ಪಲಾರದಂತಹ ರೀತಿಯಲ್ಲಿ ಹಣ ಗಳಿಸಿ ಮನೆ ಕಟ್ಟಿಸಿದವರು ಕೂಡ ಅದನ್ನು ದೇವರ ಕೃಪಾಪ್ರಸಾದವೆಂದೇ ಕರೆಯುವುದು. ಈ ಗೌರವ ತನಗೆ ಸಲ್ಲುವುದನ್ನು ಕಂಡು ದೇವರು ಏನೆನ್ನುವನೋ ನಾವು ಹೇಳುವಂತಿಲ್ಲ.

ಕೆಲವರು ತಮ್ಮ ಮನೆದೇವರ ಕೃಪೆಯಿಂದಲೇ ಬಂದುದೆಂದು ಸ್ಪಷ್ಟವಾಗಿ ಸೂಚಿಸದಿದ್ದರೂ ದೇವರ ಹೆಸರನ್ನು ಅದಕ್ಕಿಟ್ಟು ತಮ್ಮ ದೈವಭಕ್ತಿಯನ್ನೇನೋ ತೋರಿಸಿಕೊಳ್ಳುತ್ತಾರೆ. ದೈವಭಕ್ತಿಯನ್ನು ಮಾತ್ರವೇ ಅಲ್ಲ—ತಾವು ಯಾವ ಜಾತಿಗೆ ಯಾವ ಪಂಥಕ್ಕೆ ಸೇರಿದವರು ಎಂಬುದನ್ನೂ ಅವರು ತನ್ಮೂಲಕ ಹೊರ

ಗೆಡಹುವರು. 'ಕೃಷ್ಣ ಪ್ರಸಾದ', 'ಕೇಶವ ಸದನ', 'ಮಾಧವ ವಿಲಾಸ', 'ನರಸಿಂಹ ಹರ್ಮ್ಯ', 'ಶಿವನಿಕೇತನ', 'ಬಸವ ಕೃಪ', 'ರೇಣುಕ ಮಂದಿರ', 'ತಿರುನಿಲಯಂ', 'ರಾಘವೇಂದ್ರ ವಿಹಾರ', 'ಸಾಯಿಬಾಬಾ ನಿವಾಸ' ಮೊದಲಾದ ಹೆಸರುಗಳನ್ನು ನೋಡಿದೊಡನೆ ನಾವು ಆ ಮನೆಗಳ ಒಡೆಯರು ಯಾವ ಮತದವರೆಂದು ಊಹಿಸಬಹುದು. ದೇವರು ಕೊಟ್ಟ ಮನೆ ಇದು ಎಂದು ಹೇಳುವುದು ಅನಾವಶ್ಯಕವಾದರೆ ಮನುಷ್ಯಕಲ್ಪಿತವಾದ ಆ ದೇವರ ಯಾವುದೋ ಒಂದು ರೂಪ ಇತರರಿಗಿಲ್ಲದ ಭಾಗ್ಯವಿಶೇಷವನ್ನು ತಮಗೊಬ್ಬರಿಗೇ ದಯಪಾಲಿಸಿದೆ ಎಂಬ ತರ್ಕದ ಔಚಿತ್ಯ ಇನ್ನೂ ಸಂದೇಹಾಸ್ಪದವಾದುದು. ಅನೇಕರು 'ಶ್ರೀನಿವಾಸ' 'ಶ್ರೀ ನಿಲಯ' ಅಥವಾ 'ಲಕ್ಷ್ಮೀ ಪ್ರಸಾದ' ಎಂದು ಹೆಸರಿಟ್ಟು ತಮ್ಮ ಹಣ ಲಕ್ಷ್ಮೀದೇವಿಯ ಕೃಪಾ ಭಿಕ್ಷೆಯೆಂದು ಪ್ರಪಂಚಕ್ಕೆ ಪ್ರಕಟಿಸುತ್ತಾರೆ. ಇತರರ ಹಣ ಇನ್ನೆಲ್ಲಿಂದ ಬಂದುದೊ?

ಸಾಮಾನ್ಯವಾಗಿ ನಮ್ಮ ಜನ ಮನೆಗಳಿಗೆ ಕೊಡುವ ಹೆಸರುಗಳು ದೇವರ ನಾಮಾಂಕಿತಗಳಾದರೂ ಇತರ ಬಗೆಯ ಹೆಸರುಗಳಿಗೂ ಅಭಾವವಿಲ್ಲ. ಇವು ಹೆಸರಿಡುವವನ ಬುದ್ಧಿವೈಚಿತ್ರ್ಯವನ್ನೂ (ವೈಪರೀತ್ಯವನ್ನೋ?) ಕಲ್ಪನಾವೈಖರಿಯನ್ನೂ ಆಸೆ ಆಕಾಂಕ್ಷೆಗಳನ್ನೂ ಸ್ಪಷ್ಟಪಡಿಸುತ್ತವೆ. 'ಆನಂದ ನಿಲಯ', 'ಆನಂದಾಶ್ರಮ', 'ಆನಂದ ವಿಹಾರ', 'ಸದಾನಂದ' ಎಂಬ ಹೆಸರುಗಳಿರುವ ಮನೆಗಳನ್ನು ನೀವು ನೋಡಿರಬಹುದು, ನೋಡಿ ಅಸೂಯೆ ಪಟ್ಟಿರಲೂಬಹುದು. ಜಗತ್ತೇ ದುಃಖಮಯವಾದುದು ಎಂದು ತಾತ್ವಿಕರ ಪರಂಪರೆಯೇ ಹೇಳಿಕೊಂಡು ಬಂದಿರುವಾಗ ಒಬ್ಬ ಮನುಷ್ಯ ತನ್ನ ಮನೆಯಲ್ಲಿ ಆನಂದವಿದೆ ಎಂದು ನಂಬಿರುವುದು ಮಾತ್ರವಲ್ಲದೆ ಬೀದಿಯಲ್ಲಿ ಹೋಗಿಬರುವವರಿಗೆಲ್ಲಾ ಅದನ್ನು ಧೈರ್ಯವಾಗಿ ಸಾರುವುದೆಂದರೆ ಅದೊಂದು ಅದ್ಭುತವಲ್ಲವೆ? 'ಶಾಂತಿನಿವಾಸ' ಎನ್ನುವ ಮನೆಗಳಿಗಂತೂ ಲೆಕ್ಕವೇ ಇಲ್ಲ. ಸದಾ ಗಿಜಿಗಿಜಿ ಎನ್ನುವ ಜನಸಮೂಹದ ಮಧ್ಯೆ ನಿರ್ಮಿತವಾಗಿರುವ ಗೃಹಗಳ ಬಾಗಿಲುಗಳ ಮೇಲೆ ಕೂಡ ಎಷ್ಟೋ ಸಾರಿ ಈ ಹೆಸರು ವಿಕಟಾಟ್ಟಹಾಸದಿಂದ ಮೆರೆಯುತ್ತಿರುತ್ತದೆ. ಯಜಮಾನನ ಮನದಲ್ಲಲ್ಲದಿದ್ದರೂ ಅವನ ಹೆಸರಿನಲ್ಲಾದರೂ ಶಾಂತಿಯಿದೆಯಲ್ಲಾ ಎಂದು ಸಂತೋಷಿಸೋಣವೆ? ಇಲ್ಲ, ತನ್ನ ನಿಜಸ್ಥಿತಿಯನ್ನು ಈ ತೆರದ ನಿಷ್ಪ್ರಯೋಜಕವಾದ ಮುಖವಾಡದ ಹಿಂದೆ ಹುದುಗಿಸಿಟ್ಟುಕೊಳ್ಳುವ ಅವನ ಬುದ್ಧಿಹೀನತೆಗಾಗಿ ಮರುಕ ತೋರೋಣವೆ? ಅಥವಾ ಹೀಗೆ ಎಲ್ಲರೆದುರಿಗೂ ಎಲ್ಲರ ಗಮನವನ್ನೂ ಸೆಳೆಯುವ ರೀತಿಯಲ್ಲಿ ಶಾಂತಿಗಾಗಿ ಅಪೇಕ್ಷಿಸುವ ಆ ಬಡಪಾಯಿಯನ್ನು ಕುರಿತು ಅಯ್ಯೋ ಎನ್ನೋಣವೆ? ಅದೂ ಅಲ್ಲದಿದ್ದರೆ, ಪ್ರಾಪಂಚಿಕ ವ್ಯವಹಾರಗಳ ಗೊಂದಲಕ್ಕೆ ಸಿಕ್ಕಿ ತೊಳಲುವ, ತಲೆಯ ತುಂಬಾ ಚಿಂತೆಗಳ ರಾಶಿಯನ್ನೇ ಒಟ್ಟಿಕೊಂಡಿರುವ ಅವನು ಶಾಂತಿಗಾಗಿ ತಾನು ಪಡುವ ಹಂಬಲವನ್ನು ಹೀಗೆ ಪರೋಕ್ಷವಾಗಿ ತೋಡಿಕೊಳ್ಳುವುದನ್ನು ಕಂಡು

ಅಪಹಾಸ್ಯ ಮಾಡೋಣವೆ? ದೊಡ್ಡ ದೊಡ್ಡ ವ್ಯಾಪಾರೋದ್ಯಮಗಳಲ್ಲಿ, ಕೈಗಾರಿಕೆಗಳಲ್ಲಿ ನಿರತರಾಗಿ ಕೈಕಾಲುಗಳಿಗೆ ವಿಶ್ರಾಂತಿ ಕಣ್ಣಿಗೆ ನಿದ್ದೆ ಮನಸ್ಸಿಗೆ ನೆಮ್ಮದಿ ಯಾವುದನ್ನೂ ಕಾಣದೆ. ಯಾವಾಗಲೂ ಏನಾದರೊಂದು ಚಿಂತೆಯನ್ನು ತಲೆಯಲ್ಲಿ ತುಂಬಿಕೊಂಡು ಪರದಾಡುವವರು ತಮ್ಮ ಸೌಧಗಳನ್ನು 'ಶಾಂತಿ ಕುಟೀರ'ಗಳೆಂದು ಕರೆವುದಂತೂ ಸಾಹಸದ ಪರಮಾವಧಿ.

ಆನಂದ ಮತ್ತು ಶಾಂತಿಗಳ ಮಾತು ಹಾಗಿರಲಿ. ಅವು ತಮ್ಮ ಸಂಸಾರಗಳಲ್ಲೂ ಜೀವನದಲ್ಲೂ ಇಲ್ಲದಿದ್ದರೂ ಇರಬೇಕೆಂಬ ಕನಸುಕಾಣಲಿಕ್ಕೋಸ್ಕರ ಕೆಲವರು ಆ ಹೆಸರುಗಳನ್ನು ತಮ್ಮ ಮನೆಗಳಿಗೆ ಕೊಟ್ಟಿದ್ದಾರೆ ಎಂದು ಒಪ್ಪಿಕೊಂಡು ಅವರ ಆಶಯ ಫಲಿಸಲಿ ಎಂದು ಹರಸೋಣ. ಆದರೆ ತಮ್ಮ ಮನೆಗಳನ್ನು 'ಸತ್ಯ ನಿಲಯ', 'ಸತ್ಯ ವಿಲಾಸ' ಎಂದು ಕರೆದುಕೊಳ್ಳುವ ಎದೆಗಾರಿಕೆಯುಳ್ಳ ಮಹನೀಯರನ್ನು ಕಂಡಾಗ ನನಗೆ ಮಾತೇ ಹೊರಡುವುದಿಲ್ಲ. ತಮ್ಮ ಜೀವನವನ್ನೇ ಸತ್ಯಶೋಧನೆಗೆ ಮೀಸಲಾಗಿಟ್ಟಿದ್ದ ಗಾಂಧೀಜಿಯವರು ಕೂಡ ತಮ್ಮ ನಿವಾಸ ಸತ್ಯದ ನೆಲೆ ಎಂದು ಇಷ್ಟು ನಿಸ್ಸಂಕೋಚವಾಗಿ ನಿರ್ಭಯವಾಗಿ ಹೇಳುತ್ತಿದ್ದರೋ ಇಲ್ಲವೋ ಕಾಣೆ. ಈ ಹೆಸರನ್ನು ಮನೆಗಳಿಗಿಡುವ ಗೃಹಸ್ವಾಮಿಗಳನ್ನು ನಾವು ಅಭಿನಂದಿಸಲೇ ಬೇಕು. ಒಂದು ವೇಳೆ ಈಗ ಅವರು ಸತ್ಯವ್ರತರಲ್ಲದಿದ್ದರೂ ಹಗಲಿರುಳೂ ಅದರ ಅಗತ್ಯವನ್ನು ಜ್ಞಾಪಕಕ್ಕೆ ತರುವ ನಿರ್ಬಂಧಕ್ಕೆ ತಮ್ಮನ್ನು ತಾವೇ ಒಳಪಡಿಸಿಕೊಳ್ಳುವ ಅವರು ನಿಜಕ್ಕೂ ಧೀರರಲ್ಲವೆ? ಹುಲುಮನುಜರು 'ಸತ್ಯ ನಿಲಯ'ದಲ್ಲಿ ವಾಸಮಾಡುವುದೂ ಒಂದೇ; ಮೂರು ಹೊತ್ತೂ ದೇವರ ಸಾನ್ನಿಧ್ಯದಲ್ಲಿರುವುದೂ ಒಂದೇ !

ಇನ್ನೂ ದಿಟ್ಟರಾದವರು ತಮ್ಮ ಸತೀಮಣಿಯರ ಪವಿತ್ರನಾಮಧೇಯಗಳನ್ನೇ ಮನೆಗಳಿಗೂ ಕೊಟ್ಟಿರುತ್ತಾರೆ. ಒಂದು ರೀತಿ ಇದು ಸರಿಯೇ. 'ಮನೆ' ಎನ್ನಿಸಿಕೊಳ್ಳಬೇಕಾದರೆ 'ಮನೆಯಾಕೆ' ಇದ್ದರೆ ತಾನೆ? ಬರಿಯ ಗಂಡಸರ ಸಂಸಾರ 'ಮನೆವಾಳ್ತೆ' ಹೇಗಾದೀತು? ಗೃಹಿಣಿಯ ಹೆಸರನ್ನು ಮನೆಗಿಟ್ಟು ಇದು ಇಂಥವರ ಮನೆ ಎಂದು ಪ್ರಕಟಿಸುವುದರಲ್ಲಿ ಔಚಿತ್ಯವಿದೆ, ನ್ಯಾಯವಿದೆ. ಏಕೆಂದರೆ ಒಂದು ಮನೆಯ ವೈಶಿಷ್ಟ್ಯಕ್ಕೂ ಇನ್ನೊಂದರ ವೈಶಿಷ್ಟ್ಯಕ್ಕೂ ಮನೆಯಾಕೆಯೇ ಕಾರಣ. ಆದರೆ ಸಾಮಾನ್ಯವಾಗಿ ನಾವು ಕಾಣುವುದು—ಹೆಂಡತಿ ಬದುಕಿರುವಾಗ ಆಕೆಯ ಹೆಸರನ್ನು ಯಾರೂ ತಮ್ಮ ಮನೆಗಿಡುವುದಿಲ್ಲ. ಬದುಕಿರುವ ಹೆಂಡತಿಯ ಹೆಸರನ್ನು ಪ್ರಪಂಚದ ಎದುರು ಎತ್ತಿ ಹಿಡಿಯಬಾರದು ಎಂಬ ವಿನಯವೊಂದು ಕಡೆ, ಬದುಕಿರುವ ಹೆಂಡತಿಯ ಹೆಸರು ಅವರಿವರಿಗೆ ಗೊತ್ತಾದರೆ ತೊಂದರೆಗಿಟ್ಟುಕೊಳ್ಳುತ್ತದೆ (ಆಕೆ ಚೆಲುವೆಯಾದರೆ ಇನ್ನೂ ಕಷ್ಟ) ಎಂಬ ಭಯವೊಂದು ಕಡೆ, ಇದಕ್ಕೆ ಕಾರಣವಿರಬೇಕು. ತಾವು ಪತ್ನೀವ್ರತರೆಂದೂ ತಮ್ಮ ಸೌಭಾಗ್ಯವತಿಯನ್ನು ಸದಾ ಸ್ಮರಿಸುತ್ತಿರುವವರೆಂದೂ ಬೀದಿಯವರಿಗೆಲ್ಲಾ ಸಾರುವ ಸಲುವಾಗಿ ವಿಧುರರು

ಈ ಕ್ರಮವನ್ನು ಕೈಕೊಳ್ಳುತ್ತಾರೆಂದು ತೋರುತ್ತದೆ. ಆದರೆ ಹೆಂಡತಿಯ 'ಸ್ಮಾರಕ' ಈ ಮನೆ ಎಂಬ ಭಾವ ಬರುವುದಿಲ್ಲವೆ ಆಕೆಯ ಹೆಸರನ್ನು ಅದಕ್ಕಿಟ್ಟರೆ? ಆಕೆಯ ಗುರುತಿಗೆ ಮಕ್ಕಳುಮರಿಗಳಿರುವಾಗ ಈ ನಿರ್ಜೀವವಸ್ತುವಿನ ಸಹಾಯದ ಅಗತ್ಯವೇನು? ತಮ್ಮ ಪ್ರೇಮವನ್ನು ಪ್ರದರ್ಶಿಸಲು ಈ ರೀತಿ ಮಾಡುವರೆಂದರೆ ಅದು ಅಷ್ಟೇನೂ ಪ್ರಶಂಸಾರ್ಹವಾಗಿ ಕಾಣುವುದಿಲ್ಲ. ಗಂಡ ಹೆಂಡಿರ ಪ್ರೇಮಕ್ಕೆ ಹೀಗೆ ಸರ್ವಜನ ಮನ್ನಣೆಯನ್ನು ಪಡೆಯುವ ಪ್ರಯತ್ನವೇಕೆ? ಅದರಲ್ಲಿ 'ಸೆಂಟಿಮೆಂಟ್' ಎಷ್ಟಿದೆಯೋ 'ಷೋಯಿನೆಸ್'ಸ್ಸೂ ಅಷ್ಟೇ ಇಲ್ಲವೆ? ಹೆಂಡತಿಯ ಹೆಸರನ್ನು ಆಕೆ ಸತ್ತಮೇಲೆ ಕಟ್ಟಿದ ಮನೆಗಿಡುವುದರಿಂದ ಗಂಡನ ಶೋಕವೇನಾದರೂ ಶಮನವಾದೀತೇನು? ಅದೂ ಅನುಮಾನಾಸ್ಪದವಾದ ಸಂಗತಿಯೆ. ನಿರಂತರವಾಗಿ ಆಕೆಯ ಹೆಸರು ಕಣ್ಣು ಕಿವಿಗಳಿಗೆ ಬೀಳುತ್ತಿದ್ದರೆ ಅದರಿಂದ ದುಃಖ ಕಡಿಮೆಯಾಗುವುದರ ಬದಲು ಎಚ್ಚರವಾಗಿಯೇ ಇರಲು ಪ್ರೇರಣೆ ದೊರೆಯುತ್ತದೆ. ಆಕೆಯ ಹಿರಿಮೆ ಕಡೆಗೆ ಕೇವಲ ಒಂದು ಮನೆಯ ಹೆಸರಿನಲ್ಲಿ ಉಳಿದುಕೊಳ್ಳುತ್ತದೆ ಎಂದು ಆಸೆಪಡುವುದು ಭ್ರಮೆಯಲ್ಲವೆ?

ಕೆಲವರು ತಾವು ಹಿಂದೆ ಎಂದಾದರೂ ಇದ್ದು ಅನಂತರ ಬಿಟ್ಟು ಬಂದಿರುವ ಸ್ಥಳಗಳ ಹೆಸರುಗಳನ್ನು ಮನೆಗಳಿಗೆ ದಯಪಾಲಿಸಿರುವ ಉದಾಹರಣೆಗಳೂ ಉಂಟು. ಬೆಂಗಳೂರಿನ 'ದಂಡಿನ' ಪ್ರದೇಶದಲ್ಲಿ ಈ ತೆರನಾದ ಹೆಸರುಗಳನ್ನು ಹೊಂದಿರುವ ಅನೇಕ ಮನೆಗಳನ್ನು ನಾವು ಕಾಣಬಹುದು. 'ಥಿಸಲ್‌ಹರ್ಸ್ಟ್' 'ಯಾರ್ಕ್‌ಷೈರ್' 'ಕೆನ್ಸಿಂಗ್‌ಟನ್' ಮೊದಲಾದ ಹೆಸರುಗಳು ಈ ಪ್ರವೃತ್ತಿಯನ್ನು ತೋರಿಸುತ್ತವೆ. ಇದರಲ್ಲಿ ತಪ್ಪೇನೂ ಕಾಣುವುದಿಲ್ಲ. ಬಹಳ ಕಾಲ ತಾವೂ ತಮ್ಮವರೂ ಇದ್ದ ನೆಲೆಯನ್ನು ಜೀವನೋಪಾಯಕ್ಕಾಗಿಯೋ ಅಥವಾ ಇನ್ನಾವುದಾದರೂ ಕಾರಣಕ್ಕಾಗಿಯೋ ಬಿಟ್ಟು ದೂರ ಬಂದಿರುವವರು ಒಂದು ಬಗೆಯ ಭಕ್ತಿವಿಶ್ವಾಸದಿಂದ ತಮ್ಮ ತೌರೂರನ್ನು ನೆನಪಿನಲ್ಲಿಟ್ಟುಕೊಳ್ಳುವ ಸಲುವಾಗಿ ಹೊಸ ಸ್ಥಳದಲ್ಲಿ ತಾವು ಕಟ್ಟುವ ಮನೆಗಳಿಗೆ ಅದರ ಹೆಸರನ್ನಿಡುವುದು ಅರ್ಥಮಾಡಿಕೊಳ್ಳಬಹುದಾದ ಮನೋಭಾವವನ್ನು ಸೂಚಿಸುತ್ತದೆ. ಇಂಗ್ಲೆಂಡ್ ಮತ್ತು ಇತರ ಯೂರೋಪ್ ದೇಶಗಳಿಂದ ಅಮೆರಿಕಾಕ್ಕೆ ವಲಸೆ ಹೋದ ಜನ ಅಲ್ಲಿ ಕೇಂಬ್ರಿಡ್ಜ್, ಯಾರ್ಕ್, ಬಾಲ್ಟಿಮೋರ್, ಆರ್ಲಿಯನ್ಸ್ ಮೊದಲಾದ ಐರೋಪ್ಯ ನಗರಗಳ ಹೆಸರುಗಳನ್ನೇ ಮತ್ತೆ ಬಳಕೆಗೆ ತಂದರು. ಇಂದೂ ಇಂಥ ಹೆಸರುಗಳ ಊರುಗಳು ಅಮೆರಿಕಾದಲ್ಲಿ ಎಲ್ಲೆಲ್ಲೂ ಇವೆ.

ತಮ್ಮ ಒಡೆತನದ ಹಳ್ಳಿಯ ಅಥವಾ ಜಮೀನ್ದಾರಿಯ ಹೆಸರನ್ನು ಪಟ್ಟಣದಲ್ಲಿ ತಾವು ವಾಸಮಾಡುವ ಮನೆಗಳಿಗಿಟ್ಟಿರುವವರೂ ಕೆಲವರಿದ್ದಾರೆ. 'ಬೆಟ್ಟದಪುರದ ಮನೆ,' 'ಬಸವನ ಹಳ್ಳಿ ನಿಲಯ,' 'ಶಿಕಾರಿಪುರ್ ಮಂದಿರ,' 'ಸುಂಟಿಕೊಪ್ಪ ಮ್ಯಾನ್‌ಷನ್' ಇತ್ಯಾದಿಗಳು ಆ ಮನೆಗಳ ಮಾಲೀಕರು ತಮ್ಮ ಹಣವನ್ನು ಎಲ್ಲಿ

ಸಂಪಾದಿಸಿದರು ಎಂಬುದನ್ನು ನಿಸ್ಸಂದೇಹವಾಗಿ ವ್ಯಕ್ತಪಡಿಸುತ್ತವೆ. ಭೂಮಿ ಕಾಣಿಗಳಿರುವುದು ಗ್ರಾಮಾಂತರ ಸೀಮೆಯ ಯಾವುದೋ ಮೂಲೆಯಾಗಿರ ಬಹುದು; ಭೂಸ್ವಾಮಿ ಬೆಂಗಳೂರಿನ ಹೈಗ್ರೌಂಡ್ಸಿನಲ್ಲೋ ಮಲ್ಲೇಶ್ವರ ಬಸವನ ಗುಡಿಗಳಲ್ಲೋ ಮೈಸೂರಿನ ಲಕ್ಷ್ಮೀಪುರ ಒಂಟಿಕೊಪ್ಪಲುಗಳಲ್ಲೋ ಬಂಗಲೆ ಯೊಂದನ್ನು ಕಟ್ಟಿಸಿಕೊಂಡು ಆಧುನಿಕ ಸುಖಸಾಧನಗಳ ಮಧ್ಯೆ ಮೆರೆಯುತ್ತಿರ ಬಹುದು. ಅವನ ಮನೆಯ ಹೆಸರೊಂದೇ ಅವನು ಯಾವ ಊರಿನವನು, ಅವನ ಐಶ್ವರ್ಯಕ್ಕೂ ವೈಭವಕ್ಕೂ ಕಾರಣವಾದ ಹಣ ಎಲ್ಲಿಂದ ಹರಿದುಬರುತ್ತದೆ ಎಂದು ತೋರಿಸುವ ಕೈಮರ. ಈ ಕೃತಜ್ಞತಾಸೂಚನೆ ಪ್ರಶಂಸಾರ್ಹವಾದ ವಿಷಯವೇ.

ತಮ್ಮ ಅಥವಾ ತಮ್ಮ ಪೂರ್ವಿಕರ ತೌರ್ನಾಡು ತೌರೂರುಗಳ ಹೆಸರುಗಳನ್ನೂ ತಮ್ಮ ಆರ್ಥಿಕ ನೆಮ್ಮದಿಗೆ ಮೂಲವಾದ ಹಳ್ಳಿಗಳ ಹೆಸರುಗಳನ್ನೂ ಮನೆಗಳಿಗಿಡು ವುದು ಮಾನವಸಹಜವಾದ ದೌರ್ಬಲ್ಯ, ಚಾಪಲ್ಯ ಎನ್ನಬಹುದು. ಆದರೆ 'ಹಿಮಗಿರಿ', 'ವಿಂಧ್ಯಾದ್ರಿ', 'ಯದುಗಿರಿ', 'ಬಿಳಿಗಿರಿ', 'ತಿರುಮಲೈ', 'ಪಲನಿ,' 'ಶ್ರೀಶೈಲ', 'ಬದರಿ', 'ಕೈಲಾಸ', ಮೊದಲಾದ ದೂರದ ಪರ್ವತಧಾಮಗಳ ಹೆಸರು ಗಳನ್ನು ತಮ್ಮ ಕಿರುಮನೆಗಳಿಗಿಡುವವರ ಉದ್ದೇಶ ಏನಿರಬಹುದು? ತಮ್ಮ ಮನೆಗಳು ಆ ಗಿರಿಗಳಂತೆಯೇ ಉನ್ನತವೂ ನಯನಮೋಹಕವೂ ಪವಿತ್ರವೂ ಆದ ಸ್ಥಳಗಳೆಂಬ ಹೆಮ್ಮೆಯಿರಬಹುದೋ ಇವರಿಗೆ? ಅಥವಾ ತಾವು ಅಲ್ಲಿನ ದೇವರುಗಳ ಭಕ್ತರು, ತಾವು ಅಲ್ಲಿಗೆ ಹೋಗಿಬಂದಿರುವವರು ಎಂದು ಲೋಕಕ್ಕೆಲ್ಲಾ ಗೊತ್ತಾಗಲಿ ಎಂಬ ಬಯಕೆಯೋ? ತಾವು ಯಾತ್ರೆಹೋಗಿ ಬಂದವರೆಂದು ಇತರರಿಗೇಕೆ ಗೊತ್ತಾಗ ಬೇಕು? ಯಾತ್ರೆ ಹೋಗಿಬರುವುದು ಆತ್ಮೋದ್ಧಾರಕ್ಕಾಗಿಯೋ ಲೋಕವಿಖ್ಯಾತಿ ಯನ್ನು ಗಳಿಸುವುದಕ್ಕೋ? ತಮ್ಮ ಹಿರಿಮೆ ಜಗತ್ತಿನ ಕಣ್ಣಿಗೆ ಬೀಳಲಿ ಎಂಬ ಬಯಕೆ ಇವರಲ್ಲಿ ಇಷ್ಟು ಉತ್ಕಟವಾಗಿರುವ ಪಕ್ಷಕ್ಕೆ ಇವರು ಯಾತ್ರೆ ಹೋಗಿ ಬಂದು ಫಲವೇನು? ವಾಹನ ಸೌಕರ್ಯ ಯಥೇಷ್ಟವಾಗಿರುವ ಇಂದು ಎಷ್ಟು ದೂರ ಯಾತ್ರೆ ಹೋಗಿಬಂದರೂ ಅದರಲ್ಲಿ ಯಾವ ವೈಶಿಷ್ಟ್ಯವೂ (ದುಡ್ಡಿರುವ ಒಂದು ವಿಷಯವನ್ನು ಬಿಟ್ಟು) ಕಾಣುವುದಿಲ್ಲವಲ್ಲಾ!

ಇನ್ನು ಕೆಲವು ಮಂದಿ ಪುರಾಣ ಪ್ರಸಿದ್ಧವಾದ ಸ್ಥಳಗಳ ಹೆಸರುಗಳನ್ನು ತಮ್ಮ ಮನೆಗಳಿಗಿಟ್ಟಿರುತ್ತಾರೆ. 'ದ್ವಾರಕ', 'ಮಿಥಿಲಾ', 'ಅಯೋಧ್ಯಾ', 'ಪಂಚವಟಿ', 'ನಂದನ', 'ಬೃಂದಾವನ' ಮೊದಲಾದ ಹೆಸರುಗಳು ಇಂಥವು. ಈ ಹೆಸರುಗಳನ್ನು ಇಡುವವರ ಮನೋಭಾವವನ್ನು ನಿರ್ಧರಿಸುವುದು ಕಷ್ಟ. ಇವು ಅವರು ಹೋಗಿ ಬಂದ ಸ್ಥಳಗಳಲ್ಲವೆಂಬುದು ಸ್ವತಃಸಿದ್ಧ. ತಾವು ಅವನ್ನು ವರ್ಣಿಸುವ ಕಾವ್ಯಗಳನ್ನು ಓದಿದ್ದೇವೆ ಎಂಬ ಹೆಮ್ಮೆಯ ಅಭಿವ್ಯಕ್ತಿಯೆ ಇರಬಹುದು ಈ ಪದ್ಧತಿ. ಅಥವಾ ದೇವರುಗಳ ದೇವತೆಗಳ ಮತ್ತು ಅವತಾರ ಪುರುಷರ ಸಂಬಂಧ ಪಡೆದಿದ್ದ ಆ ಸ್ಥಳಗಳ ಹೆಸರುಗಳನ್ನು ತಮ್ಮ ನಿವಾಸಗಳಿಗಿಟ್ಟರೆ ಅದೂ ಒಂದು ಬಗೆಯ ಧರ್ಮಶ್ರದ್ಧೆ

ಯೆಂದೋ ಇವರ ಭಾವನೆ? ಧರ್ಮಪರಿಪಾಲನೆ ಇಷ್ಟು ಸುಲಭವಾಗಿಬಿಟ್ಟರೆ ನಿಜವಾಗಿಯೂ ಮಾನವರು ಧನ್ಯರು! ಮತಾಂತರ ಹೊಂದಿದ ನಮ್ಮ ಜನ ಕೆಲವರು ತಮ್ಮ ಯಜಮಾನರೂ ಪೋಷಕರೂ ಆದ ಐರೋಪ್ಯರ ಹೆಸರುಗಳನ್ನು ತಮ್ಮ ಮಕ್ಕಳಿಗಿಟ್ಟಿರುವುದನ್ನು ನಾವು ಕಂಡಿದ್ದೇವೆ. ಅವರನ್ನು ಮೆಚ್ಚಿಸಿ ಅವರಿಂದ ಹೆಚ್ಚಿನ ಅನುಗ್ರಹವನ್ನು ಪಡೆಯಬೇಕೆಂಬ ಬಯಕೆ ಇದಕ್ಕೆ ಪ್ರೇರಕವಾಗಿರುತ್ತಿತ್ತು. ದೇವಾಧಿ ದೇವತೆಗಳ ಮನಸ್ಸನ್ನೂ ಇದೇ ರೀತಿಯ ಜಾಣತನದಿಂದ ಪ್ರತ್ಯಕ್ಷವೋ ಪರೋಕ್ಷವೋ ಆದ ಪ್ರಶಂಸೆಯಿಂದ ಒಲಿಸಿಕೊಳ್ಳಬಹುದೆಂದು ಭಾವಿಸುವುದು ಸರಿಯೆ? ಆದರೆ ಈ ತೆರದ ಹೆಸರುಗಳನ್ನು ಮನೆಗಳಿಗಿಡುವವರು ಧರ್ಮ ಪ್ರೇಮ ದೈವಭಕ್ತಿಗಳಿಗಿಂತಲೂ ಹೆಚ್ಚಾಗಿ ಒಂದು ಬಗೆಯ ಅಹಂಭಾವಕ್ಕೆ ದಾಸರು ಎಂದು ತೋರುತ್ತದೆ. ತಾವು ತುಂಬಾ ಸುಸಂಸ್ಕೃತರು, ಶಾಸ್ತ್ರ ಸಾಹಿತ್ಯಗಳ ಪರಿಚಯವಿರುವವರು, ಆದುದರಿಂದ ಅತಿಶಯವಾದ ಅಪರೂಪವಾದ ಹೆಸರುಗಳಿಂದ ತಮ್ಮ ಮನೆಗಳನ್ನು ಅಲಂಕರಿಸುವವರು ಎಂಬ ಅಸ್ಪಷ್ಟವಾದರೂ ವಾಸ್ತವವಾದ ಅಭಿಮಾನ ಅವರ ಮನಸ್ಸನ್ನು ಆಕ್ರಮಿಸಿರಬೇಕು. ಇಲ್ಲದಿದ್ದರೆ ಅಂತಹ ದೊಡ್ಡ ಹೆಸರುಗಳನ್ನು ಯಃಕಶ್ಚಿತವಾದ ಮನೆಗಳಿಗಿಡುವುದೆಂದರೇನು?

ತಾವು ಬುದ್ಧಿವಂತರು ಅತಿಶಯವಾದ ಕಲ್ಪನಾಶಕ್ತಿಯುಳ್ಳವರು ಎಂಬ ಅಭಿಮಾನದಿಂದ ಪ್ರೇರಿತರಾದವರಿಂದ ದತ್ತವಾದ ಮನೆಗಳ ಹೆಸರುಗಳ ಒಂದು ವಿಶಿಷ್ಟ ಪಂಗಡವೇ ಉಂಟು. ಕೆಲವರು ತಮ್ಮ ಭಾಷಾನೈಪುಣ್ಯವನ್ನೂ ಬುದ್ಧಿ ಚಾಕಚಕ್ಯತೆಯನ್ನೂ ಪೂರ್ಣವಾಗಿ ಮನೆಗಳಿಗೆ ತಾವಿಡುವ ಹೆಸರುಗಳಲ್ಲೇ ಪ್ರದರ್ಶಿಸಲೆಳಸುವರೆಂದು ಕಾಣುತ್ತದೆ. ಇಲ್ಲದಿದ್ದರೆ ಆ ಹೆಸರುಗಳ ವೈಚಿತ್ರ್ಯಕ್ಕೆ ಕಾರಣ ಹೇಳಲು ಸಾಧ್ಯವಾಗದು. 'ಜ್ಯೋತಿ', 'ಕಾಂತಿ', 'ಚಂದ್ರಿಕಾ', 'ಕೋಹಿನೂರ್' ಮೊದಲಾದ ಹೆಸರುಗಳನ್ನು ಮನೆಗಳಿಗಿಡುವವರ ಮನಸ್ಸು ಹೇಗಿರಬಹುದು? ತಮ್ಮ ಜೀವನದ ಜ್ಯೋತಿ ಈ ಮನೆ ಎಂದೋ ಅವರ ಭಾವನೆ? ಇಲ್ಲ ಊರಲ್ಲಿ ಇನ್ನಾವ ಮನೆಗೂ ಇಲ್ಲದ ಕಾಂತಿ ತಮ್ಮೊಬ್ಬರ ಗೃಹಕ್ಕಿದೆಯೆಂಬ ಹೆಮ್ಮೆಯೋ? ಮನೆಗೆ ಸುಣ್ಣ ಬಳಿಸಿ ಅರ್ಧ ದಶಕವಾಗಿದ್ದು ಗೋಡೆಗಳೆಲ್ಲಾ ಕಪ್ಪಿಟ್ಟಿರುವಾಗ ಹೆಸರು ಮಾತ್ರ 'ಚಂದ್ರಿಕಾ' ಅಥವಾ 'ಕೋಹಿನೂರ್' ಎಂದಿದ್ದರೆ ಎಂತಹ ಆಭಾಸ! ಹೂಗಳ ಗಂಧವೇ ಇಲ್ಲದ ಮನೆಗೆ 'ಪುಷ್ಪ ವಿಲಾಸ' ಎಂದೋ 'ಪದ್ಮ ನಿವಾಸ'ವೆಂದೋ 'ಚಂಪಕ ನಿಲಯ'ವೆಂದೋ ಹೆಸರಿಟ್ಟರೆ ಔಚಿತ್ಯವಿರುತ್ತದೆಯೆ? ಇಲ್ಲಿ 'ಪುಷ್ಪ' 'ಪದ್ಮ' 'ಚಂಪಕ'ಗಳು ಹೂವಾಗಿರದೆ ಮನೆಯ ಒಡತಿಯರ ಅಥವಾ ಮಕ್ಕಳ ಅಮೂಲ್ಯ ನಾಮಧೇಯಗಳಾಗಿರುವುದೂ ಸಾಧ್ಯ. ಆ ಮನೆಯ ಅಂದ ಚೆಂದಗಳೂ ಆವರಣ—ಸನ್ನಿವೇಶಗಳೂ ಅವರಿಗೆ ಗೌರವ ತರುವಂತಿಲ್ಲದಿದ್ದರೆ ಅವರ ಹೆಸರುಗಳನ್ನು ಅವಕ್ಕಿಡುವುದು ಕುಹಕವಲ್ಲವೆ? ಗೋಡೆ ಮೇಲ್ಛಾವಣಿಗಳು ಕೂಡ ಪೂರ್ತಿಯಾಗಿ ನಿರ್ಮಿತವಾಗಿಲ್ಲದ ಮನೆ ಎಷ್ಟೋ ಕಡೆ 'ಲಕ್ಷ್ಮೀ ನಿವಾಸ'

ವಾಗಿ ತನ್ನ ಹೆಸರಿಗೆ ತಾನೇ ನಾಚಿಕೊಳ್ಳುತ್ತಿರುವಂತೆ ತಲೆ ತಗ್ಗಿಸಿದ್ದರೆ ಇನ್ನೊಂದು ಕಡೆ ವಿಪುಲೈಶ್ವರ್ಯಕ್ಕೂ ವೈಭವಯುತವಾದ ಜೀವನಕ್ಕೂ ಆಕರವಾದ ನಿಲಯ ಕೇವಲ 'ಕುಟೀರ'ವೆನ್ನಿಸಿಕೊಂಡು ಅನಾವಶ್ಯಕವಾದ ನಮ್ರತೆಯನ್ನು ತೋರಲೆಳಸಿ ವಿಫಲವಾಗುತ್ತದೆ. ಲಕ್ಷ್ಮೀದೇವಿ ಕುಟೀರದಲ್ಲಿರಲು ಎಂದಾದರೂ ಸಮ್ಮತಿ ಸಿದ್ಧಾಳೆಯೆ? ಆ ಮಾತನ್ನು ಅವಳ ಹೆಸರಿನೊಡನೆ ಜೋಡಿಸುವುದು ಅವಳಿಗೆ ಅವಮಾನ ಮಾಡಿದಂತಲ್ಲವೆ? ಇದನ್ನಾದರೂ ಕ್ಷಮಿಸಬಹುದು; ಆದರೆ ಆಧುನಿಕ ನಾಗರಿಕತೆಯ ಸಮಸ್ತ ಸಾಧನಗಳ ಸಂಪೂರ್ಣ ಉಪಯೋಗವನ್ನು ಪಡೆದು ಸರ್ವೇಂದ್ರಿಯಗಳ ಸಂತೃಪ್ತಿಯನ್ನೇ ಜೀವನದ ಪ್ರಮುಖೋದ್ದೇಶವಾಗಿ ಹೊಂದಿರುವವರು 'ಭಕ್ತಿವಿಲಾಸ'ಗಳಲ್ಲಿ ವಾಸಮಾಡುವುದೆಂದರೆ ಚೋದ್ಯವಲ್ಲವೆ? ಇಂದೋ ನಾಳೆಯೋ ಕುಸಿದು ಬೀಳುವಂತಿರುವ ಮುರುಕು ಮನೆ 'ವರ್ಧಿನಿ' ಎನ್ನಿಸಿಕೊಳ್ಳುವುದೂ ಯಾವ ಕಲಾನಿಯಮಕ್ಕೂ ಒಳಪಡದೆ ಪೆಡಂಭೂತದಂತೆ ಬೆಳೆದು ನಿಂತಿರುವ ಕಟ್ಟಡ 'ಸುಲೋಚನ' ಅಥವಾ 'ಸುದರ್ಶನ'ವಾಗಿರುವುದೂ ಯಾವ ನ್ಯಾಯವೆಂದು ಕೇಳದಿದ್ದರೆ ವಿಧಿಯಿಲ್ಲ. ಆದರೆ ಮನೆಗಳಿಗೆ ಹೆಸರುಗಳನ್ನು ಕೊಡುವವರು ನ್ಯಾಯಕ್ಕಾಗಲಿ ಸತ್ಯಕ್ಕಾಗಲಿ ಔಚಿತ್ಯಕ್ಕಾಗಲಿ ಕಟ್ಟುಬೀಳದ ಸ್ವತಂತ್ರರು. ಹಿಂಸೆ ಮೋಸ ಅಸತ್ಯಗಳ ಆಧಾರದ ಮೇಲೆಯೇ ಜೀವನವನ್ನು ಸಾಗಿಸುವವರು 'ಸಬರ್ಮತಿ' ಎಂದೋ 'ಸೇವಾಶ್ರಮ'ವೆಂದೋ 'ಬಾಪೂಜೀ ನಿಲಯ'ವೆಂದೋ ತಮ್ಮ ನಿವಾಸಕ್ಕೆ ಹೆಸರಿಟ್ಟೊಡನೆಯೇ ಗಾಂಧೀಜೀಯವರ ಆತ್ಮಕ್ಕೆ ಎಷ್ಟು ಆನಂದವಾಗಿರಬೇಕು? ಎದೆ ಸೀಳಿದರೆ ಎರಡಕ್ಷರವಿಲ್ಲದವರ ಮನೆ 'ಸರಸ್ವತೀ ಮಂದಿರ' ಅಥವಾ 'ಶಾರದಾವಿಲಾಸ'ವಾಗಿರುವುದೂ ಕುಟಿಲೋಪಾಯವೇ ಜೀವನದ ಹೆದ್ದಾರಿಯಾಗಿರುವವರ ವಾಸಸ್ಥಳ 'ಧರ್ಮಾಲಯ'ವಾಗಿರುವುದೂ ಬಾಳಿನಲ್ಲಿ ತಾವಿಡುವ ಪ್ರತಿ ಹೆಜ್ಜೆಯೂ ದುರದೃಷ್ಟದೊಡನೆ ಹೋರಾಟವಾಗಿರುವವರ ಗೃಹ 'ಜಯನಿವಾಸ' ವಾಗಿರುವುದೂ ಸ್ವಾರಸ್ಯವಲ್ಲವೆ? ಕೆಲವು ಮನೆಗಳ ಹೆಸರುಗಳಂತೂ ತೀರಾ ಕುತೂಹಲಕಾರಿಗಳಾಗಿರುತ್ತವೆ, ವ್ಯಂಗ್ಯಾರ್ಥ ಸೂಚಕವೂ ಆಗಿರುತ್ತವೆ. 'ಸೂರ್ಯ ವಿಹಾರ', 'ಚಂದ್ರವಿಲಾಸ' ಎಂಬ ಹೆಸರುಗಳನ್ನಿಡುವವರು ಎಷ್ಟು ನಿರ್ಭೀತರಿರಬೇಕು? ಅವರ ಆತ್ಮವಿಶ್ವಾಸ ಅದಿನ್ನೆಷ್ಟಿರಬಹುದು? ಸೂರ್ಯ ಚಂದ್ರರನ್ನು ತಮ್ಮ ಸ್ವಂತ ಆಸ್ತಿಯಂತೆ ಭಾವಿಸುವ ಇವರ ಅಹಂಭಾವಕ್ಕೆ ಏನು ಹೇಳೋಣ. ಬೇರೆ ಯಾರ ಮನೆಗಳಲ್ಲೂ ಕಾಣದ ಸೂರ್ಯ ಚಂದ್ರರ ಬೆಳಕು ಇವರ ಮನೆಗಳಲ್ಲಿ ಮಾತ್ರ ಇರುತ್ತದೆಯೆ? ಈ ಹೆಸರುಗಳನ್ನು ಅಕ್ಷರಶಃ ಅರ್ಥಮಾಡಿಕೊಂಡರೆ ಭಾವಣಿಯಲ್ಲಿ ಏನೋ ದೋಷವಿರಬೇಕು, ಆದುದರಿಂದ ಸೂರ್ಯ ಚಂದ್ರರು ಇವರ ಮನೆಯೊಳಕ್ಕೇ ಬಂದು ವಿಹರಿಸುತ್ತಾರೆ ಎಂದಾಗುವುದಿಲ್ಲವೆ? 'ಆಂಜನೇಯ ವಿಲಾಸ' 'ಕೃಷ್ಣ ವಿಲಾಸ' 'ವಾಸುಕಿ', 'ನಾಗರಾಜ' ಮೊದಲಾದ ಹೆಸರುಗಳು ಆ ಮನೆಗಳಲ್ಲಿ ವಾಸಿಸುವ ಜನರ ಸ್ವಭಾವಗಳಿಗೆ ಸೂಚಿಗಳೇನು? 'ಪದ್ಮ ಕೃಪ', 'ಪರಿಮಳ' ಎಂದು ಮನೆಗೆ

ಹೆಸರಿಟ್ಟರೆ ಅದರ ಅರ್ಥವೇನು? ಗೃಹಲಕ್ಷ್ಮಿಗೆ 'ಅಶೋಕ', 'ಪ್ರಭಾಕರ' 'ಶ್ರೀರಾಮ' ಮೊದಲಾದ ಪುಲ್ಲಿಂಗ ಸೂಚಕವಾದ ಹೆಸರುಗಳನ್ನಿಡಬಹುದೆ?

ಜೀವನದ ಇತರ ಕ್ಷೇತ್ರಗಳಲ್ಲಿ ಪಾಶ್ಚಾತ್ಯ ನಡೆ ನುಡಿಗಳಿಗೆ ಮಾನ್ಯತೆ ಕೊಡುವವರಿರುವಂತೆಯೇ ತಮ್ಮ ಮನೆಗಳಿಗೆ ಹೆಸರಿಡುವಾಗ ಇಂಗ್ಲಿಷನ್ನು ಮರೆಹೋಗುವವರಿಗೆ ಅಭಾವವಿಲ್ಲ. ಈಚೀಚೆಗೆ ಇಂಗ್ಲಿಷ್ ಹೆಸರುಗಳನ್ನು ಪಡೆಯುವ ಮನೆಗಳ ಸಂಖ್ಯೆ ಕಡಿಮೆಯಾಗುತ್ತಿದ್ದರೂ ಹಿಂದೆ ಆ ಹೆಸರುಗಳನ್ನು ಪಡೆದು ಇನ್ನೂ ಉಳಿಸಿಕೊಂಡಿರುವ ಮನೆಗಳು ಅಲ್ಲಲ್ಲಿ ನಮ್ಮನ್ನು ಸೆಳೆಯುತ್ತವೆ. ಇಂಗ್ಲಿಷರ ನೇರ ಸಂಪರ್ಕವನ್ನು ಹೊಂದಿ ಬಹಳ ಕಾಲ ಅವರ ಪ್ರಭಾವಕ್ಕೆ ಸಿಕ್ಕಿದ್ದ ಪ್ರದೇಶಗಳಲ್ಲಿ ಈ ಹೆಸರುಗಳು ಬೇಕಾದಷ್ಟಿವೆ. ಅವನ್ನು ಅನುಕರಿಸಿ ನಮ್ಮವರೂ ಅನೇಕರು ಇಂಗ್ಲಿಷ್ ಹೆಸರುಗಳನ್ನು ತಮ್ಮ ಮನೆಗಳಿಗಿತ್ತು ಕೃತಕೃತ್ಯರಾಗಿದ್ದಾರೆ. ಈ ಇಂಗ್ಲಿಷ್ ಹೆಸರುಗಳದೇ ಒಂದು ವೈಶಿಷ್ಟ್ಯ. ಅವುಗಳಲ್ಲಿ ಕೆಲವು ಸುಂದರವಾಗಿ ಅರ್ಥಪೂರ್ಣವಾಗಿ (ಮನೆ ಹೇಗಾದರೂ ಇರಲಿ) ಶೋಭಿಸುತ್ತವೆ. 'ಸನ್ನಿಸೈಡ್', 'ಸ್ಪ್ರಿಂಗ್‌ಫೀಲ್ಡ್' ಇತ್ಯಾದಿಯಾದ ಹೆಸರುಗಳು ಕಲ್ಪನೆಯನ್ನು ಕೆರಳಿಸುತ್ತವೆ. ಸಂಸ್ಕೃತದಲ್ಲಿ 'ಪುಷ್ಪವಿಲಾಸ' ವಿರುವಂತೆ ಇಂಗ್ಲಿಷಿನಲ್ಲಿ 'ರೋಸ್‌ವಿಲ್ಲಾ' 'ಜಾಸ್ಮಿನ್ ವಿಲ್ಲಾ' ಮೊದಲಾದ ಹೆಸರುಗಳಿರುತ್ತವೆ. ಕೆಲವರು ಅರ್ಧ ಸಂಸ್ಕೃತ ಅರ್ಧ ಇಂಗ್ಲಿಷಿನ ಹೆಸರುಗಳನ್ನಿಡುವುದುಂಟು. 'ಚಂಪಕವಿಲ್ಲಾ' ಇಂತಹುದೊಂದು ಹೆಸರು. 'ಅಚ್ಯುತವಿಲ್ಲಾ' 'ಹರಿವಿಲ್ಲಾ'ಗಳೂ ಇಲ್ಲದೆ ಹೋಗಿಲ್ಲ. ಈ ಸಂಮಿಶ್ರಣ ಕಿವಿಗೆ ಅಷ್ಟು ಹಿತವಾಗಿರುವುದಿಲ್ಲವೆಂದೇ ಹೇಳಬೇಕು. (ಈ ಸಂದರ್ಭದಲ್ಲಿ 'ಸುಂದರವಿಲ್ಲಾ' ಎಂಬ ಹೆಸರನ್ನು ಕುರಿತು 'ಪರವಾ ಇಲ್ಲ' ಎಂಬ ಕೈಲಾಸಂರವರ ಮಾತು ನೆನಪಾಗುತ್ತದೆ.) ಇಂಗ್ಲಿಷಿನ ಎಷ್ಟೋ ಹೆಸರುಗಳು 'ವ್ಯೂ' ಎಂಬ ಮಾತಿನಲ್ಲಿ ಪರ್ಯವಸಾನವಾಗುತ್ತವೆ. ನೋಡುತ್ತಾ ಹೋದರೆ ಬಗೆ ಬಗೆಯ 'ವ್ಯೂ'ಗಳು ಕಣ್ಣಿಗೆ ಬೀಳುತ್ತವೆ. 'ಹಿಲ್ ವ್ಯೂ' ಎಂದು ಎಷ್ಟು ಊರಿನಲ್ಲಿ ಎಷ್ಟು ಮನೆಗಳಿಗೆ ಹೆಸರುಗಳಿಲ್ಲ? ಊರಿಗೆಲ್ಲಾ ಕಾಣುವ ಬೆಟ್ಟ ತಮ್ಮ ಮನೆಯಿಂದ ಮಾತ್ರ ಗೋಚರವಾಗುತ್ತದೆ ಎಂಬ ಭಾವನೆ ಆ ಜನರ ಆತ್ಮವಿಶ್ವಾಸವನ್ನೂ ಹಿರಿಮೆಯನ್ನೂ ಘೋಷಿಸುತ್ತದೆಯಲ್ಲವೆ? 'ರೇಸ್ ವ್ಯೂ', 'ಗಾಲ್ಫ್ ವ್ಯೂ', 'ಪೆರೇಡ್ ವ್ಯೂ', 'ಪಾರ್ಕ್ ವ್ಯೂ' ಮೊದಲಾದ ಹೆಸರುಗಳು ಬೆಂಗಳೂರಿನಲ್ಲಿವೆ. ಮೈಸೂರಿನ ಪ್ರಸಿದ್ಧ ಸರ್ಕಾರಿ ವಸತಿಗೃಹವಾದ 'ಜಲದರ್ಶಿನಿ' ಕೆಲವು ವರ್ಷಗಳ ಹಿಂದೆ 'ಲೇಕ್ ವ್ಯೂ' ಆಗಿತ್ತು. 'ಎವರ್ ಡಿಲೈಟ್', 'ಲೋಟಸ್ ಬಿಲ್ಡಿಂಗ್' 'ಅಫ್ ಲ್ಯಾಂಡ್ಸ್', 'ಈವೆನಿಂಗ್ ಸ್ಟಾರ್', 'ಈಸ್ಟ್ ವ್ಯೂ', 'ವೆಸ್ಟ್ ಬ್ಯಾಂಕ್', 'ಬ್ಲೂಮ್‌ಫೀಲ್ಡ್', 'ಪ್ಯಾಂಥಿಯನ್ ಹೌಸ್'—ಇವು ನಾನು ಕಂಡಿರುವ ಇನ್ನು ಕೆಲವು ಇಂಗ್ಲಿಷ್ ಹೆಸರುಗಳು. ಅವುಗಳಲ್ಲಿ ಒಂದೊಂದೂ ಒಂದು ರೀತಿಯಲ್ಲಿ ಅವುಗಳ ಸೃಷ್ಟಿಕರ್ತರ ಎದೆಗಾರಿಕೆಯನ್ನು ಹೆಮ್ಮೆ ಹುಮ್ಮಸ್ಸು ಪ್ರತಿಷ್ಠೆಗಳನ್ನೂ ಎತ್ತಿ ತೋರಿಸುತ್ತದೆ.

ಹೆಸರುಗಳಿಂದ ಮನೆಯ ಮಾಲೀಕರ ಜಾತಿ ಮತಗಳನ್ನು ಕಂಡುಹಿಡಿಯ ಬಹುದೆಂದು ಹಿಂದೆ ಹೇಳಿದೆನಲ್ಲವೆ? ಇದು ಹಿಂದೂಗಳಲ್ಲಿ ಮಾತ್ರವಲ್ಲ. 'ಮುಬಾರಕ್ ಮಂಜಿಲ್', 'ಖಲೀಲ್ ಬಾಗ್', 'ರಹ್ಮಾನ್ ಘರ್' ಎಂಬ ಹೆಸರಿನ ಮನೆಗಳು ಮುಸ್ಲಿಮರವೆಂದು ಹೇಳಲೇಬೇಕಾಗಿಲ್ಲ. 'ದಿಲ್ ಕುಷ್' 'ಗುಲ್ ಬಾಗ್' ಮೊದಲಾದ ಹೆಸರುಗಳು ಅವರಿಗೆ ಪ್ರಿಯವೆಂದು ತೋರುತ್ತದೆ.

ಕೆಲವು ಮನೆಗಳ ಹೆಸರುಗಳು ತೀರಾ ನೀರಸವಾಗಿರುತ್ತವೆ. 'ಗೌರ್ಮೆಂಟ್ ಹೌಸ್', 'ರೆಸಿಡೆನ್ಸಿ', 'ಅಠಾರಾ ಕಛೇರಿ', 'ಕಾಲೇಜ್ ಹೌಸ್'—ಇವು ಭವ್ಯ ಭವನಗಳಾದರೂ ಹೆಸರಿನಲ್ಲಿ ತುಂಬಾ 'ಅನ್ ರೊಮ್ಯಾಂಟಿಕ್', ತುಂಬಾ 'ರಿಯಲಿಸ್ಟಿಕ್'.

ನಮ್ಮ ಸುತ್ತಮುತ್ತಣ ಮನೆಗಳ ಹೆಸರುಗಳಲ್ಲಿ ನಾವು ಇನ್ನೊಂದು ವಿಶೇಷ ವನ್ನು ಕಾಣುತ್ತೇವೆ. ಯಾವ ಮನೆಯ ಹೆಸರನ್ನು ನೋಡಿದರೂ ಸಂಸ್ಕೃತದ್ದೋ ಇಂಗ್ಲಿಷಿನದೋ ಹಿಂದೂಸ್ತಾನಿಯದೋ ಆಗಿರುತ್ತದೆ. ಕನ್ನಡದ ಹೆಸರಿರುವ ಮನೆಯನ್ನು ನೀವು ನೋಡಿದ್ದೀರಾ? ವೀರ ಕನ್ನಡಿಗರೆನ್ನಿಸಿಕೊಂಡು ಕನ್ನಡದ ಹಿರಿಮೆಗಾಗಿ ದುಡಿದು ಹೋರಾಡುವವರು ಕೂಡ ನನಗೆ ತಿಳಿದಂತೆ ಎಲ್ಲೂ ಅಚ್ಚ ಗನ್ನಡದ ಹೆಸರುಗಳನ್ನು ತಮ್ಮ ಮನೆಗಳಿಗೆ ಕೊಟ್ಟಿಲ್ಲ. 'ಹೂ ಬಯಲು', 'ಬೆಳಕು', 'ಮೂಡಲ ತೋಟ', 'ಪಡುವಲ ನೋಟ', ಇತ್ಯಾದಿಯಾದ ಹೆಸರುಗಳು ಎಲ್ಲಾದರೂ ಇರುವವೆ?

ಜನ ತಮ್ಮ ಮನೆಗಳಿಗಿಡುವ ಹೆಸರುಗಳನ್ನು ಪ್ರದರ್ಶಿಸುವ ವೈಖರಿಯೂ ವೈವಿಧ್ಯಮಯವಾದುದು, ಗಮನಾರ್ಹವಾದುದು. ಮನೆಯ ಮುಖ್ಯ ಕಟ್ಟಡದ ಮೇಲೆ ಅತ್ಯುನ್ನತವಾದ ಸ್ಥಳದಲ್ಲಿ ದೂರದಿಂದಲೇ ಜನಗಳ ಕಣ್ಣುಗಳನ್ನು ಆಕರ್ಷಿ ಸುವಂತೆ ದೊಡ್ಡ ಅಕ್ಷರಗಳಲ್ಲಿ ಅದರ ಹೆಸರನ್ನು ಗಾರೆಯಲ್ಲೇ ಬರೆಯಿಸುವವರು ಕೆಲವರು. ಇಂಥ ಹೆಸರುಗಳು ಮನೆಯ ಹಣೆಗೆ ಅದರ ಯೋಗ್ಯತೆಯನ್ನು ಸೂಚಿಸುವ ಪಟ್ಟಿಯೊಂದನ್ನು ಅಂಟಿಸಿದಂತೆ ಕಾಣುತ್ತಿರುತ್ತವೆ. ಆದರೆ ಸಾಮಾನ್ಯ ವಾಗಿ ಮನೆಯ ಆವರಣದ ಹೆಬ್ಬಾಗಿಲಿನ ಪಕ್ಕದ ಕಂಬವೊಂದಕ್ಕೆ ಹೆಸರಿನ ಹಲಗೆ ಯನ್ನು ಬಿಗಿದಿರುವವರ ಸಂಖ್ಯೆಯೇ ಹೆಚ್ಚು. ಒಂದು ಕಡೆ ಮನೆಯ ಹೆಸರು, ಇನ್ನೊಂದು ಕಡೆ ಮಾಲೀಕನ ಹೆಸರು ಬಂದು ಹೋಗುವವರನ್ನು ಎದುರುಗೊಳ್ಳು ತ್ತವೆ. ಅಮೃತಶಿಲೆಯ ಫಲಕಗಳಲ್ಲಿ ಹೆಸರುಗಳನ್ನು ಕೆತ್ತಿಸಿ ಅವನ್ನು ಗೋಡೆ ಯಲ್ಲೇ ಗೂಡಿನಂತೆ ಕೊರೆದಿರುವ ಪ್ರದೇಶದಲ್ಲಿ ನಿಲ್ಲಿಸಿ ಗಾರೆ ಗಚ್ಚುಗಳಿಂದ ಭದ್ರ ಪಡಿಸುವವರೂ ಇದ್ದಾರೆ. ಹೀಗೆ ಮಾಡುವುದರಿಂದ ಆ ಹೆಸರುಗಳು ಮನೆಯ ಕಟ್ಟಡದ ಒಂದು ಭಾಗವಾಗಿ ಸ್ಥಿರವಾಗಿರುವವೆಂಬ ನಂಬಿಕೆ ಅವರಿಗೆ ಎಂದು ತೋರುತ್ತದೆ. ಇನ್ನೂ ಕೆಲವರು ಗೋಡೆಯಲ್ಲಿಟ್ಟಿರುವ ಹೆಸರಿನ ಹಲಗೆಯನ್ನು ಬಣ್ಣಗಳಿಂದ ಸಿಂಗರಿಸಿ ಅದರ ಮೇಲೊಂದು ಗಾಜನ್ನು ಮುಚ್ಚಿ ಅದು ಹೊಳೆಯು

ವಂತೆ ಮಾಡಿರುತ್ತಾರೆ. ತಮ್ಮ ಮತ್ತು ತಮ್ಮ ಮನೆಗಳ ಹೆಸರುಗಳು ಜಗತ್ತಿನಲ್ಲಿ ಹೊಳೆಯುವ ಅವಕಾಶ ಇದೊಂದೇ ಆಗಿರುವಾಗ ಅವರು ಹೀಗೆ ಮಾಡುವುದರಲ್ಲಿ ಅಚ್ಚರಿಯೇನೂ ಇಲ್ಲ. ಇನ್ನೂ ಹೆಚ್ಚಿನ ಶಾಶ್ವತತೆಯನ್ನು ಪಡೆಯಲಪೇಕ್ಷಿಸುವವರು ಹೆಸರುಗಳನ್ನು ಕಬ್ಬಿಣದಲ್ಲಿ ಎರಕ ಹೊಯ್ಯಿಸಿ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸಿರುತ್ತಾರೆ; ಇಲ್ಲದಿದ್ದರೆ ಮಹಾದ್ವಾರದ ಕಬ್ಬಿಣದ ಬಾಗಿಲುಗಳಲ್ಲೇ ಮನೆಯ ಹೆಸರಿನ ಮತ್ತು ತಮ್ಮ ಸ್ವಂತ ಹೆಸರಿನ ಅಕ್ಷರಗಳನ್ನು ಜೋಡಿಸಿ ತಯಾರಿಸಿರುತ್ತಾರೆ. ಅಂತೂ ಮನೆಗೆ ಹೆಸರಿಡುವುದರಲ್ಲಿ ಎಷ್ಟರ ಮಟ್ಟಿಗೆ ಬುದ್ಧಿಚಾತುರ್ಯ ಕಲ್ಪನಾಶಕ್ತಿಗಳು ಅಭಿವ್ಯಕ್ತವಾಗುತ್ತವೆಯೋ ಆ ಹೆಸರುಗಳನ್ನು ದಾರಿಗರ ಕಣ್ಣೆದುರು ಎತ್ತಿ ಹಿಡಿಯುವುದರಲ್ಲೂ ಅಷ್ಟೇ ಮುಂದಾಲೋಚನೆ ಮಹದಾಶಯಗಳೂ ವೈಕೃತಿ ವೈಶಿಷ್ಟ್ಯಗಳೂ ಅಹಂಭಾವ ಅಭಿಮಾನಗಳೂ ಎದ್ದು ಕಾಣುತ್ತವೆ.

ಹಾಗೆಯೇ ಯೋಚಿಸಿ ನೋಡಿದರೆ ಮನೆಗಳಿಗೆ ಹೆಸರುಗಳನ್ನಿಡುವ ಹವ್ಯಾಸವೇ ಅಹಂಭಾವದ ಫಲವೆನ್ನಬೇಕು. (ಕೆಲವರು ತಾವು ವಾಸಿಸುವ ಬಾಡಿಗೆ ಮನೆಗಳಿಗೂ ಹೆಸರಿಟ್ಟು ಮನೆ ಬದಲಾಯಿಸಿದಂತೆಲ್ಲಾ ಆ ಹೆಸರನ್ನೂ ತಮ್ಮ ಜೊತೆಗೆ ತೆಗೆದುಕೊಂಡು ಹೋಗುತ್ತಿರುತ್ತಾರೆ.) ತಾನು ಯಾವುದಾದರೂ ಒಂದು ವಿಷಯದಲ್ಲಿ ಇತರರಿಗಿಂತಲೂ ಹೆಚ್ಚಿನವನು ಎಂದು ತೋರಿಸಿಕೊಳ್ಳಲು ಸದಾ ಪ್ರಯತ್ನಿಸುತ್ತಿರುವುದು ಮನುಷ್ಯನ ಹುಟ್ಟುಗುಣಗಳಲ್ಲೊಂದು. ಅದು ತಳೆಯುವ ನಾನಾ ರೂಪಗಳಲ್ಲಿ ಅವನು ತನ್ನ ನಿವಾಸಸ್ಥಾನಗಳಿಗೆ ಕೊಡುವ ಹೆಸರುಗಳೂ ಸೇರಿವೆ. ಇಲ್ಲದಿದ್ದರೆ ಮನೆಗಳಿಗೆ ಹೆಸರುಗಳನ್ನಿಡುವ ಅಗತ್ಯ ತಾನೇ ಏನಿದ್ದೀತು? ಮನುಷ್ಯರಿಗೆ ಹೆಸರಿಡದಿದ್ದರೆ ವ್ಯವಹಾರದಲ್ಲಿ ತೊಡಕುಂಟಾಗುತ್ತದೆ; ಮನೆಗಳಿಗೆ ಹೆಸರಿಡದಿದ್ದರೆ ನಿಂತುಹೋಗುವುದೇನು? ಮನೆಯಲ್ಲಿ ವಾಸಮಾಡುವವರು ಮುಖ್ಯವೋ ಮನೆ ಮುಖ್ಯವೋ? ನಮ್ಮ ವಿಳಾಸ ಇತರರಿಗೆ ತಿಳಿಯಬೇಕಾದರೆ ಮನೆಗೆ ಹೆಸರಿಲ್ಲದಿದ್ದರೆ ಆಗುವುದಿಲ್ಲವೇನು? ಪೌರಸಭೆಯವರು ಅದಕ್ಕೂ ಅದಿರುವ ಬೀದಿಗೂ ಕೊಟ್ಟಿರುವ ಸಂಖ್ಯೆ ಸಾಲದೇನು? ಇಷ್ಟೊಂದು ಜನ ತಮ್ಮ ಮನೆಗಳಿಗೆ ಹೆಸರುಗಳ ಹಣೆಬರಹಗಳನ್ನು ಹೊರಿಸುವುದು ನೋಡಿದರೆ ಮಾನವ ಸಹಜವಾದ ಸ್ವಪ್ರತಿಷ್ಠಾಪಾರಾಯಣತೆಗೆ ಇದೂ ಒಂದು ನಿದರ್ಶನವೆಂಬ ತೀರ್ಮಾನ ಅನಿವಾರ್ಯವಾಗುತ್ತದೆ.

ಹಾಗಾದರೆ 'ನಿಮ್ಮ ಮನೆಗೆ ನೀವು ಯಾವ ಹೆಸರನ್ನೂ ಇಡುವುದೇ ಇಲ್ಲವೇ' ಎಂದು ನೀವು ನನ್ನನ್ನು ಕೇಳಬಹುದು. ಅದಕ್ಕೆ ನನ್ನ ಉತ್ತರ ಇಷ್ಟೆ: ಇನ್ನೊಬ್ಬರ ತಪ್ಪನ್ನು ಎತ್ತಿ ತೋರಿಸಿದ ಮಾತ್ರಕ್ಕೇ ನಾನು ಅದೇ ತಪ್ಪನ್ನು ಮಾಡುವುದಿಲ್ಲವೆಂದು ಒಪ್ಪಿಕೊಂಡಹಾಗಾಯಿತೇನು?

—ಎಂ. ರಾಮರಾವ್

ಒರಿಯಾ ಸಾಹಿತ್ಯಚರಿತ್ರೆ

ಭಾರತ ಗಣರಾಜ್ಯದ ಈಶಾನ್ಯ ಭಾಗದಲ್ಲಿರುವ ತೀರಪ್ರದೇಶವು ಒರಿಸ್ಸಾದೇಶ. ಈ ದೇಶವು ಪ್ರಾಚೀನಕಾಲದಿಂದ ಕಲಿಂಗ, ಓಢ್ರ, ಉತ್ಕಲ ಎಂಬ ಭಿನ್ನನಾಮಗಳಿಂದ ವ್ಯವಹರಿಸಲ್ಪಡುತ್ತಿದೆ. ಒಂದು ಕಡೆ ಸಮುದ್ರ, ಮತ್ತೊಂದು ಕಡೆ ಪರ್ವತಶ್ರೇಣಿ, ಬೇರೊಂದು ಕಡೆ ಅರಣ್ಯ ನದಿಗಳಿಂದ ಸುತ್ತುವರಿಯಲ್ಪಟ್ಟು ಭಾರತದ ಇತರ ದೇಶಗಳಿಂದ ಪ್ರತ್ಯೇಕವಾಗಿ ಉಳಿದು ಉತ್ಕಲವು ತನ್ನದೇ ಆದ ಸಂಸ್ಕೃತಿಯನ್ನು ಬೆಳಸಿಕೊಂಡು ಬಂದಿದೆ. ಪ್ರಾಚೀನಕಾಲದಲ್ಲಿ ಓಢ್ರರು ಭೂಜಲ ಪ್ರದೇಶಗಳಲ್ಲಿ ತಮ್ಮ ಸೈನ್ಯಗಳನ್ನು ನಡಸಿ ದೊಡ್ಡ ಚಕ್ರಾಧಿಪತ್ಯವನ್ನು ಕಟ್ಟಿ ಆಳಿದವರು. ಹಿಂದೆ ಈ ರಾಜ್ಯವು ಗಂಗೆಯಿಂದ ಗೋದಾವರಿಯವರೆಗೆ ವ್ಯಾಪಿಸಿದ್ದುದುಂಟು. ಓಢ್ರರು ದೈವದತ್ತವಾದ ಪ್ರಕೃತಿಸೌಂದರ್ಯಕ್ಕನುಗುಣವಾಗಿ ಪ್ರಾಚೀನ ಕಾಲದಿಂದ ಬಂದ ಶಿಲ್ಪ ಮತ್ತು ವಾಸ್ತುಕಲೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಕ್ರಿ. ಶ. ೨ನೆಯ ಶತಮಾನದ ಉದಯಗಿರಿ ಗುಹಾಂತರ ದೇವಾಲಯ ನಿರ್ಮಾಣ ಕಾಲದಿಂದ ೧೩ನೆಯ ಶತಮಾನದ ಕೊನಾರ್ಕ ದೇವಾಲಯದ ರಚನೆಯವರೆಗೆ ಅವರು ತಮ್ಮ ಶಿಲ್ಪಕಲಾ ವೈಭವವನ್ನು ಬೆಳಸಿಕೊಂಡು ಬಂದಿದ್ದಾರೆ. ಶಿವಾಜಿ ಮಹಾರಾಜನು ಅವರಿಂಗಸೇಬನಿಂದ ತಪ್ಪಿಸಿಕೊಂಡು ಹೋಗುತ್ತಿದ್ದಾಗ ಒರಿಸ್ಸಾದೇಶದ ಭುವನೇಶ್ವರದಲ್ಲಿರುವ ಮಹೋನ್ನತ ಗೋಪುರಗಳನ್ನು ನೋಡಿ ಈ ದೇಶವು ದೇವತೆಗಳು ವಾಸಮಾಡಲು ಯೋಗ್ಯವಾದುದು ಎಂದು ಉದ್ಗಾರ ತೆಗೆದನಂತೆ. ಇಂದಿಗೂ ಅಖಿಲ ಭಾರತೀಯರಿಗೆ ಒರಿಸ್ಸಾ ದೇಶವು ಪವಿತ್ರಸ್ಥಳವೇ ಹೌದು.

ಒರಿಸ್ಸಾ ಪ್ರಾಂತದ ಭಾಷೆ ಒರಿಯ. ಇದನ್ನು ಒಢಿಯಾ ಎಂದು ಕರೆಯುವುದೂ ಉಂಟು. ಇದನ್ನಾಡುವವರ ಜನಸಂಖ್ಯೆ ಒಂದು ಲಕ್ಷದ ಅಯ್ವತ್ತು ಸಾವಿರ. ಒರಿಸ್ಸಾ ಪ್ರಾಂತದ ರಾಜಕೀಯ ಎಲ್ಲೆಯ ಹೊರಗಡೆಯೂ ಒರಿಯಾ ಭಾಷೆಯನ್ನಾಡುವವರಿದ್ದಾರೆ.

ಈಗಿನ ಸಂಶೋಧನೆಯ ಪ್ರಕಾರ ಈ ಭಾಷಾಸಾಹಿತ್ಯದ ಆದಿಕಾಲವನ್ನು ಕ್ರಿ. ಶ. ೮–೯ನೆಯ ಶತಮಾನವಿರಬಹುದೆಂದು ನಿಷ್ಕರ್ಷೆ ಮಾಡಿದ್ದಾರೆ. ಮಹಾಮಹೋಪಾಧ್ಯಾಯ ಹರಪ್ರಸಾದಶಾಸ್ತ್ರಿಗಳು ನೇಪಾಲದಲ್ಲಿ ಕಂಡು ಹಿಡಿದ ಬೌದ್ಧ ಗೀತಾಸಂಗ್ರಹವೊಂದರಲ್ಲಿ ಒರಿಯಾ ಭಾಷೆಯ ಮೂಲರೂಪವನ್ನು ಕಾಣಬಹುದೆಂದು ಸಿದ್ಧಾಂತ ಮಾಡಿದ್ದಾರೆ. ಈ ಸಂಗ್ರಹದಲ್ಲಿ ಕಂಡು ಬರುವ ಅನೇಕ ಶಬ್ದಗಳು, ಶಬ್ದಪುಂಜಗಳೂ ಈಗಿನ ಒರಿಯಾ ಭಾಷೆಯಲ್ಲಿಯೂ ಕಂಡುಬರುವುದರಿಂದ ಆ ಶಬ್ದಗಳಿರುವ ಸಂಗ್ರಹಭಾಗವೂ ಒರಿಯಾ ಭಾಷೆಯದೆಂದೇ ತೀರ್ಮಾನಿಸಿದ್ದಾರೆ. ಈ ಗೀತಾ ಸಂಗ್ರಹಕ್ಕೆ 'ಬೌದ್ಧಗಣ ಓ ದೋಹ' ಎಂದು ಹೆಸರು. ಇದರಲ್ಲಿ ಕಲಿಪದ, ಕೃಷ್ಣಆಚಾರ್ಯ, ಸರಹ, ಧರ್ಮಪದ, ಢೇತನ್, ಮಲಿಪಾಲ್, ಸವರ್‌ಪಾಲ್,

ತಿಲಿಪ, ಇಂದ್ರಹತಿ, ಗಂಭೀರವಜ್ರ, ಜ್ಞಾನವಜ್ರ, ಕಥಾಗತ ರಖಿತ, ದೀಪಂಕರ ಶ್ರೀಜ್ಞಾನ, ಧರ್ಮಶ್ರೀಮಿತ್ರ, ಸ್ಥಗಣ ಗೋರಖನಾಥ, ಮತ್ಸ್ಯೇಂದ್ರನಾಥ ಮೊದಲಾದವರ ಕೃತಿಗಳು ಅಡಕವಾಗಿವೆ. ಇವುಗಳೆಲ್ಲ ಬೌದ್ಧಮತಕ್ಕೆ ಸೇರಿದ ತಾಂತ್ರಿಕ ವಿಧಿಗಳಿಗೆ ಸಂಬಂಧಪಟ್ಟವು. ಇವುಗಳಲ್ಲಿ ಕೆಲವು ಒರಿಯಾ ಭಾಷೆಗೆ ಸಂಬಂಧಪಟ್ಟವುಗಳಾಗಿರಬೇಕು. ಅಶೋಕನು ಕಳಿಂಗ ಯುದ್ಧವಾದಮೇಲೆ ಬೌದ್ಧ ಮತವನ್ನವಲಂಬಿಸಿ ಆ ಮತದ ಪ್ರಚಾರಕ್ಕೆ ವಿಶೇಷ ಶ್ರಮಿಸಿದನು. ಅಂದಿನಿಂದ ಕಳಿಂಗ (ಒರಿಸ್ಸಾ) ದೇಶವು ಬೌದ್ಧಮತದ ಆವಾಸಸ್ಥಾನವಾಗಿದ್ದುದರಿಂದ ಆ ಮತಕ್ಕೆ ಸಂಬಂಧಪಟ್ಟ ಹಾಗೆ ಕವಿಗಳು ಒರಿಯಾ ಭಾಷೆಯಲ್ಲಿ ಗೀತೆಗಳನ್ನು ರಚಿಸಿರಬಹುದು.

ಪುರಿಯಲ್ಲಿರುವ ಜಗನ್ನಾಥ ದೇವಾಲಯದಲ್ಲಿ 'ಮದಲಪಂಜಿ' ಎಂಬ ದೇವಾಲಯದ (ಷಾಹಾಮಲ್) ನಿತ್ಯವಿವರಗಳನ್ನು ತಿಳಿಸುವ ಗ್ರಂಥವಿದೆ. ಇದು ಸುಮಾರು ಹನ್ನೊಂದನೆಯ ಶತಮಾನದಲ್ಲಿ ರಚಿತವಾದುದು. ಇದರಲ್ಲಿ ಪ್ರಾಚೀನ ಕಾಲದ ಒರಿಸ್ಸಾ ದೇಶದ ಚರಿತ್ರೆ ಲಿಖಿತವಾಗಿದೆ. ಇದರಲ್ಲಿ ಎರಡು ಪ್ರತ್ಯೇಕ ಪಾಠಗಳು ಪ್ರತ್ಯೇಕ ಅಧಿಕಾರಿಗಳ ವಶದಲ್ಲಿವೆ. ಇವುಗಳಲ್ಲಿ ಒರಿಯಾ ಭಾಷೆಯ ಪ್ರಾಚೀನ ಗದ್ಯಸ್ವರೂಪವನ್ನು ಕಾಣಬಹುದು. ೧೨–೧೩ನೆಯ ಶತಮಾನದ ಒರಿಯ ಗದ್ಯಸ್ವರೂಪವನ್ನು ಭುವನೇಶ್ವರಿಯ ದೇವಸ್ಥಾನದ ಶಾಸನಗಳಲ್ಲಿಯೂ ಕಾಣಬಹುದು. 'ಓಷಸ್' ಎಂಬ ಸ್ತ್ರೀಯರ ವ್ರತಕತೆಗಳಲ್ಲಿಯೂ ಒರಿಸ್ಸಾ ದೇಶದ ಕೆಲವು ರಾಜಮನೆತನದ ಕತೆಗಳಲ್ಲಿಯೂ ೧೩–೧೪ನೆಯ ಶತಮಾನದ ಗದ್ಯಸ್ವರೂಪವು ವಿಶದವಾಗುವುದು. ಹಾಗೆಯೇ ೧೩ನೆಯ ಶತಮಾನದಲ್ಲಿ ವ್ಯಂಗ್ಯೋಕ್ತಿಗಳ ಮತ್ತು ಜಾನಪದ ಗೀತಗಳ ರೂಪದಲ್ಲಿ ಒರಿಯಾ ಭಾಷೆಯು ಉಪಲಬ್ಧವಾಗಿದೆ. ೧೪ನೆಯ ಶತಮಾನದಿಂದ ಒರಿಯಾ ಭಾಷೆಯ ಪದ್ಯ ಗ್ರಂಥಗಳು ಅನೇಕವು ಸಿಕ್ಕಿವೆ. ಸರಳದಾಸನೆಂಬುವನೇ ಒರಿಯ ಭಾಷೆಯ ಆದಿಕವಿ. ಇವನಿಂದ ಹಿಡಿದು ೧೮ನೆಯ ಶತಮಾನದಲ್ಲಿ ಸುಪ್ರಸಿದ್ಧನಾಗಿದ್ದ ಉಪೇಂದ್ರಭಂಜನವರೆಗೆ ಒರಿಯ ಸಾಹಿತ್ಯದಲ್ಲಿ ೩೦ ಪ್ರಖ್ಯಾತ ಕವಿಗಳು ಆಗಿಹೋಗಿದ್ದಾರೆ. ಇವರೆಲ್ಲರಿಗೂ ಸಾಮಾನ್ಯವಾಗಿ ರಾಮಾಯಣ ಮಹಾಭಾರತಗಳೇ ಆಕರ. ಕೆಲವರನ್ನು ಬಿಟ್ಟರೆ ಉಳಿದವರಿಗೆ ಸಂಸ್ಕೃತ ಭಾಷೆಯ ಪ್ರಭಾವ ವಿಶೇಷವಾಗಿದೆ. ಭಾಷೆಯ ಸ್ವಭಾವಕ್ಕನು ಗುಣವಾಗಿ ಆರಂಭಕಾಲದಿಂದಲೂ ದೇಶದ ಜನರಲ್ಲಿ ಪರಿವರ್ತಿತವಾಗುತ್ತಿರುವ ಮತಧರ್ಮವು ಸ್ಪಷ್ಟವಾಗಿ ಪ್ರತಿಬಿಂಬವಾಗಿದೆ. ಇದು ಬಹುಮಟ್ಟಿಗೆ ಪಾಮರ ಸಾಹಿತ್ಯ, ಜನಪ್ರಿಯವಾದುದು. ಯಾವ ಅರಮನೆ ಗುರುಮನೆಗಳ ನೆರವಿನಿಂದ ಬೆಳೆದುದಲ್ಲ. ಸಾಮಾನ್ಯ ಜನರಿಂದಲೇ ಉದ್ಭವಿಸಿ ಅವರ ಆಶೆ ಆತಂಕಗಳ ಪ್ರತಿನಿಧಿಯಾಗಿ ಜನ್ಮಭೂಮಿಯಲ್ಲಿಯೇ ಬೆಳೆದು ಬಂದಿದೆ. ಕಾವ್ಯಗಳನ್ನು ಆಶ್ರಯ ದಾತರಿಗೆ ಅಂಕಿತಮಾಡುವ ಪದ್ಧತಿಯು ಸಾಮಾನ್ಯವಾಗಿ ಒರಿಸ್ಸಾ ದೇಶದಲ್ಲಿ

ಇಲ್ಲವೆಂದೇ ಹೇಳಬಹುದು. ಬಹು ಪ್ರಾಚೀನಕಾಲದಿಂದಲೂ ಈ ಭಾಷೆಯು ಏಕ ರೂಪತೆಯನ್ನು ತಾಳಿದೆ. ಇದರಲ್ಲಿ ಪ್ರಾಂತ ಭೇದಗಳಿಲ್ಲ. ೧೫ ದಶಲಕ್ಷ ಜನರೂ ಒಂದೇ ರೀತಿಯ ಭಾಷೆಯನ್ನಾಡುತ್ತಾರೆ.

ಆದರೂ ಒರಿಯಾ ಭಾಷೆಗೆ ಅವನತಿ ಕಾಲದ ಸಂಸ್ಕೃತದ ಸಂಬಂಧವುಂಟಾಗಿರುವುದರಿಂದ ಅಲ್ಲಿರುವ ಹಾಗೆ ಇಲ್ಲಿಯೂ ಪಾಂಡಿತ್ಯಪ್ರದರ್ಶನದ ದೃಷ್ಟಿ ಅತ್ಯಧಿಕವಾಗಿದೆ. ಅಸಂಖ್ಯಾತ ಛಂದಸ್ಸುಗಳ ಪ್ರಯೋಗವು ಈ ಭಾಷಾಸಾಹಿತ್ಯದ ವೈಶಿಷ್ಟ್ಯ. ಈಗಲೂ ಒಂದೊಂದು ಛಂದಸ್ಸನ್ನೂ ಪ್ರತ್ಯೇಕ ರಾಗದಲ್ಲಿ ಒರಿಯರು ಹಾಡುತ್ತಾರೆ. ಪ್ರಾಚೀನ ಒರಿಯ ಕವಿಗಳಲ್ಲಿ ಶಬ್ದಾಲಂಕಾರಗಳ ಆಡಂಬರ ಅತ್ಯಧಿಕ. ಚಿತ್ರ ಕವಿತೆಗಳು, ಶ್ಲೇಷೆಗಳು, ದ್ವ್ಯರ್ಥ, ತ್ರ್ಯರ್ಥ, ಷಡರ್ಥ, ಲುಪ್ತಾಕ್ಷರಿ, ಅನುನಾಸಿಕ, ನಿರನುನಾಸಿಕ, ಗತಪ್ರತ್ಯಾಗತ ಮೊದಲಾದವುಗಳ ಗರಡಿಸಾಧನೆ ಬಹು ಹೆಚ್ಚು.

ಇಷ್ಟಾದರೂ ಈ ಭಾಷೆಯಲ್ಲಿ ಚೆನ್ನಾಗಿ ಬೆಳೆದುಬಂದಿರುವ ಉಚ್ಚ ಸಾಹಿತ್ಯ ರಾಶಿಯಿದೆ. ಕೆಲವು ಶತಮಾನಗಳಕಾಲ ಕಂಡೂ ಕಾಣದಂತೆ ಗುಪ್ತವಾಗಿ ಹರಿಯುತ್ತಿದ್ದ ಒರಿಯ ಸಾಹಿತ್ಯವಾಹಿನಿ ಸ್ಪಷ್ಟವಾಗಿ ಗೋಚರವಾಗುವುದು ೧೫ನೆಯ ಶತಮಾನದಲ್ಲಿ. ಸರಳದಾಸನೇ ಒರಿಯಾ ಸಾಹಿತ್ಯದ ಆದಿಕವಿ. ಈತ ದಾಸ ಅಥವಾ ರೈತ ಪಂಗಡಕ್ಕೆ ಸೇರಿದವನು. ಕೃಷಿಯೇ ಈತನ ಜೀವನ. ಇವನಿಗೆ ದೇವಭಾಷೆಯಾದ ಸಂಸ್ಕೃತದ ಗಂಧವೇ ಇಲ್ಲ. ಇಂತಹವನು ಮಹಾಭಾರತವನ್ನು ಒರಿಯಾ ಭಾಷೆಯಲ್ಲಿ–ಬಹುಶಃ ತಾನು ಇತರರಿಂದ ಕೇಳಿದ್ದ ಕತೆಯ ಆಧಾರದಮೇಲೆಯೇ ರಚಿಸಿದನು. ಗ್ರಂಥದ ಪ್ರಾರಂಭದಿಂದಲೂ ಈ ಗ್ರಂಥಕ್ಕೆ ತಾನು ಕರ್ತೃವಲ್ಲವೆಂದೂ ಮಹಾಮಾತೆಯಾದ ಸರಳಾದೇವಿಯೇ ಪ್ರೇರಕಶಕ್ತಿಯೆಂದೂ ಸೂಚಿಸಿದ್ದಾನೆ.

ಮೂಲದ ಪ್ರತ್ಯಕ್ಷ ಪರಿಚಯವಿಲ್ಲದುದರಿಂದ ಸರಳದಾಸನಿಂದ ರಚಿತವಾದ ಭಾರತವು ಒಂದು ಸ್ವತಂತ್ರ ಕೃತಿಯಂತೆಯೇ ಇದೆ. ಇದರಲ್ಲಿ ಒರಿಸ್ಸಾ ದೇಶದ ಆ ಕಾಲದ ಜನರ ನಡೆನುಡಿ ಆಚಾರ ವ್ಯವಹಾರಗಳ ಪ್ರತಿರೂಪವನ್ನು ಕಾಣಬಹುದು. ಇಲ್ಲಿ ವರ್ಣಿತವಾಗಿರುವ ಅನೇಕ ದೃಶ್ಯಗಳು ಅಲ್ಲಿಯವೇ. ಪರ್ವಗಳ ಕ್ರಮವೂ ಸಂಖ್ಯೆಯೂ ವ್ಯತ್ಯಾಸವಾಗಿವೆ. ಮೂಲದ ಅನೇಕ ಭಾಗಗಳು ಲುಪ್ತವಾಗಿರುವುವಲ್ಲದೆ ಅನೇಕ ಹೊಸ ಅಂಶಗಳು ಸೇರಿಕೊಂಡಿವೆ. ಅಲ್ಲಿ ಬರುವ ದೈವಾಂಶ ಸಂಭೂತರಾದ ನಾಯಕ ನಾಯಕಿಯರೆಲ್ಲ ತಮ್ಮ ದೈವಾಂಶವನ್ನು ಕಳೆದುಕೊಂಡು ಸಾಮಾನ್ಯ ಸುಖದುಃಖಗಳಿಂದ ಕೂಡಿದ ಓಢ್ರರಾಗಿಬಿಟ್ಟಿದ್ದಾರೆ. ದುರ್ಯೋಧನನು ಅರಣ್ಯದಲ್ಲಿದ್ದ ಪಾಂಡವರನ್ನು ಗುರುತಿಸಲು ಕಳುಹಿಸಿದ ಗುಪ್ತಚಾರನ ಹೆಸರು ಅರ್ಜುನ ಫಂಡ. ಇದು ಈಗಲೂ ಒರಿಸ್ಸಾ ದೇಶದಲ್ಲಿ ಬಹು ಬಳಕೆಯಲ್ಲಿರುವ ಅವರದೇ ಆದ ಹೆಸರು. ಕವಿಯು ಪಾಂಡವರು ಸ್ವರ್ಗಾರೋಹಣ ಮಾಡುವಾಗ ದಾರಿಯಲ್ಲಿ ಓಢ್ರ

ದೇಶಕ್ಕೆ ಬರಮಾಡಿರುವುದಲ್ಲದೆ ಶಾಪವಿಮೋಚನೆಗಾಗಿ ಹರಿಸಾಹು ಎಂಬ ವರ್ತಕನ ಮಗಳನ್ನು ಯುಧಿಷ್ಠಿರನು ಮದುವೆಯಾಗುವಂತೆ ಮಾಡಿದ್ದಾನೆ. ಒಟ್ಟಿನಲ್ಲಿ ಸರಳ ದಾಸನ ಭಾರತವು ದೇಶಭಕ್ತಿಯುತವಾದ ರಾಷ್ಟ್ರೀಯಕಾವ್ಯವಾಗಿ ಪರಿಣಮಿಸಿದೆ. ಶುದ್ಧಭಾಷಾದೃಷ್ಟಿಯಿಂದ ಅನೇಕ ದೋಷಗಳಿರಬಹುದಾದರೂ ಪಾಮರ ಪ್ರಿಯವಾದ ಶಕ್ತಿಯುಕ್ತವಾದ ಸರಳಭಾಷೆಯಲ್ಲಿ ರಚಿತವಾಗಿರುವುದರಿಂದ ಅತ್ಯಂತ ಜನಪ್ರಿಯವಾಗಿದೆ. ಅಲ್ಲಿಂದೀಚೆಗೆ ಅದೇ ಭಾಷೆಯಲ್ಲಿ ಅನೇಕ ಭಾರತಗಳು ರಚಿತ ವಾಗಿದ್ದರೂ ಸರಳದಾಸನ ಕೃತಿಯ ಜನಪ್ರಿಯತೆ ಅವಕ್ಕಿಲ್ಲ.

ಸರಳದಾಸನು ಸಾಮಾನ್ಯ ಕೃತಿಕಾರನು ಮಾತ್ರವಲ್ಲ; ಒರಿಯಾ ಸಾಹಿತ್ಯದ ಜನಕನೆಂದೇ ಹೇಳಬಹುದು. ಅವನ ಮಹಾಭಾರತವು ಜನಗಳಲ್ಲಿ ಒಂದು ಹೊಸ ಕ್ರಾಂತಿಯನ್ನುಂಟುಮಾಡಿ ಆ ಭಾಷೆಯಲ್ಲಿ ಸ್ವತಂತ್ರ ಗ್ರಂಥಗಳನ್ನು ಸಂಸ್ಕೃತ ಸಂಬಂಧವೇ ಇಲ್ಲದ ಪ್ರತ್ಯೇಕ ಮಾರ್ಗದಲ್ಲಿ ರಚಿಸಲು ಪ್ರೇರಕವಾಯಿತು.

ಸರಳದಾಸನಾದ ಮೇಲೆ ಒಂದು ಶತಮಾನದನಂತರ ಒರಿಯ ಸಾಹಿತ್ಯದಲ್ಲಿ ಪಂಚಸಖರೆಂಬ ಪ್ರಖ್ಯಾತರಾದ ಅಯ್ದು ಕವಿಗಳು ಉದ್ಭವಿಸಿ ಗ್ರಂಥ ರಚನೆ ಮಾಡಿದರು. ಬಲರಾಮದಾಸ್ ಜಗನ್ನಾಥದಾಸ್, ಅನಂತದಾಸ್, ಯಶೋವಂತ ದಾಸ್, ಅಚ್ಯುತಾನಂತದಾಸ್ ಎಂಬ ಐವರೇ ಇವರು. ಇವರೊಬ್ಬೊಬ್ಬರೂ ಒರಿಯಾ ಭಾಷೆಯಲ್ಲಿ ಉದ್ದಾಮ ಗ್ರಂಥಗಳನ್ನು ರಚಿಸಿ ಇಂದಿಗೂ ಬಹು ಜನಪ್ರಿಯ ರಾಗಿದ್ದಾರೆ. ಬಲರಾಮದಾಸನು ಒರಿಯ ರಾಮಾಯಣದ ಕರ್ತೃ. ಈ ರಾಮಾ ಯಣವೂ ಸರಳದಾಸನ ಭಾರತದಂತೆಯೇ ದೇಶೀಯ ಚಿತ್ರಗಳಿಂದಲೂ ವ್ಯಕ್ತಿ ಗಳಿಂದಲೂ ಕೂಡಿರುವುದರಿಂದ ಬಹಳ ಆತ್ಮೀಯವಾಗಿದೆ. ಈ ರಾಮಾಯಣದಲ್ಲಿ ಕವಿಯು ರಾಮನಿಗೆ ಸಹಾಯವಾಗಿ ಲಂಕೆಗೆ ಒರಿಯಾ ದೇಶದ ಬೊನೈ, ನೀಲಗಿರಿ ಮೊದಲಾದ ಭಾಗಗಳ ಸೇನಾ ಸಮೂಹವನ್ನು ಕಳುಹಿಸುತ್ತಾನೆ. ಸಂಸ್ಕೃತದಲ್ಲಿ ವಿದ್ವಾಂಸರ ಸ್ವತ್ತಾಗಿದ್ದ ಜ್ಞಾನರಾಶಿಯನ್ನು ಸಾಮಾನ್ಯ ಜನರಿಗೆ ಒದಗಿಸಿ ಕೊಡುವುದೇ ಇವರ ಉದ್ದೇಶವಾಗಿದ್ದುದರಿಂದ ದಾಸರುಗಳು ಅನೇಕ ಸಂಹಿತೆ, ಮಾಹಾತ್ಮ್ಯ, ಗೀತೆ, ಮತ್ತು ಪುರಾಣಗಳನ್ನು ಒರಿಯಾ ಭಾಷೆಯಲ್ಲಿ ರಚಿಸಿದರು. ಜಗನ್ನಾಥದಾಸನು ಸಂಸ್ಕೃತ ಭಾಗವತಪುರಾಣವನ್ನು ಒರಿಯಾ ಭಾಷೆಗೆ ಭಾಷಾಂತರಿಸಿ ಸರಳದಾಸನ ಮಟ್ಟಕ್ಕೆ ಏರಿದ್ದಾನೆ. ಈ ಭಾಗವತವು ಇಂದಿಗೂ ಒರಿಯದಲ್ಲಿ ಬಹು ಪೂಜ್ಯ ಗ್ರಂಥವಾಗಿದೆ. ಈ ಭಾಗವತವನ್ನು ಜಗನ್ನಾಥ ದಾಸನು ತನ್ನ ತಾಯಿಗಾಗಿ ರಚಿಸಿದಂತೆ ಪ್ರತೀತಿ. ಒರಿಸ್ಸಾ ದೇಶದ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದು 'ಭಾಗವತ್ ಘರ್' ಇದೆ. ಅಲ್ಲೆಲ್ಲ ಜಗನ್ನಾಥ ದಾಸನ ಭಾಗವತದ ಒಂದೊಂದು ಪ್ರತಿಯಿರುವುದಲ್ಲದೆ ಅದರ ಒಂದೊಂದು ಅಧ್ಯಾಯವು ಪ್ರತಿ ದಿನವೂ ಪಠಿತವಾಗುತ್ತದೆ. ಈ ಭಾಗವತವು ಸರಳದಾಸನ ಭಾರತದ ಒರಟು ಭಾಷೆಗೆ ನೇರ ವಿರೋಧವಾಗಿ ಬಹುಮೃದುವಾದ ನಯವಾದ, ಗಂಭೀರವಾದ

ಒರಿಯ ಭಾಷೆಯಲ್ಲಿ ರಚಿತವಾಗಿದೆ. ಇಲ್ಲಿ ಕಂಡುಬರುವ ಭಕ್ತಿಜ್ಞಾನಕ್ಕೆ ಮೆಚ್ಚಿ ಚೈತನ್ಯರು ಜಗನ್ನಾಥದಾಸನಿಗೆ 'ಅತಿವರ್ಧಿ' ಎಂಬ ಬಿರುದನ್ನಿತ್ತರು. ಭಾಗವತದ ಛಂದಸ್ಸಿನ ಸರಳಗತಿ, ಶೈಲಿಯ ಗಾಂಭೀರ್ಯ, ಅದರಲ್ಲಿ ಉಕ್ತವಾಗಿರುವ ಉದಾತ್ತ ತತ್ತ್ವಗಳ ಸರಳಪ್ರತಿಪಾದನೆ ಇವುಗಳಿಂದ ಅದು ಒರಿಯರಿಗೇ ಅಲ್ಲದೆ ಇತರ ಎಲ್ಲರಿಗೂ ಸರ್ವಗ್ರಾಹ್ಯವಾದ ಗ್ರಂಥವಾಗಿ ಪರಿಣಮಿಸಿದೆ. ಸರಳದಾಸನ ಭಾರತ, ಬಲರಾಮದಾಸನ ರಾಮಾಯಣ, ಜಗನ್ನಾಥದಾಸನ ಭಾಗವತ ಈ ಗ್ರಂಥತ್ರಯಗಳೂ ಪಕ್ಕದವರಾದ ವಂಗೀಯರ ಮೇಲೂ ವಿಶೇಷ ಪ್ರಭಾವಿತವಾಗಿ ನೇರವಾಗಿಯೋ ಭಾಷಾಂತರ ರೂಪದಲ್ಲಿಯೋ ಅವರ ನಿತ್ಯ ಪಾರಾಯಣದ ಗ್ರಂಥಗಳಾಗಿಹೋಗಿ ಬಿಟ್ಟಿವೆ. ಅಚ್ಯುತಾನಂತದಾಸ್ ಅನೇಕ ಧಾರ್ಮಿಕ ಗೀತೆಗಳ ಕರ್ತೃ. ಇವನ ಹಿರಿಯರು ಒರಿಯಾ ದೇಶದ ಗೋಪಾಲಕರ ಗುರುಗಳಾಗಿದ್ದರು. ದನ್ಯೈದಾಸ್ ಎಂಬ ಪರಿಚಿತನಾಮವುಳ್ಳ ಜನಾರ್ದನದಾಸನು 'ಗೋಪೀ ಭಾಷಾ' ಎಂಬ ಗ್ರಂಥದ ಕರ್ತೃ. ಶ್ರೀಕೃಷ್ಣನು ಬೃಂದಾವನವನ್ನು ಬಿಟ್ಟುಹೋದ ಮೇಲೆ ಗೋಪಿಕಾ ಜನಕ್ಕೆ ಉಂಟಾದ ವಿರಹವನ್ನು ಇದು ಚಿತ್ರಿಸುತ್ತದೆ.

ಪಂಚಸಖರು ಆಗಿಹೋಗುವಕಾಲಕ್ಕೆ ಹದಿನೈದನೆಯ ಶತಮಾನ ಮುಗಿದು ಹದಿನಾರನೆಯ ಶತಮಾನ ಕಾಲಿಟ್ಟಿತ್ತು. ಈ ಮಧ್ಯೆ ಒರಿಯಾ ದೇಶದ ಒಳಗೂ ಹೊರಗೂ ಅತಿ ಪ್ರಮುಖವಾದ ರಾಜಕೀಯ ಮತ್ತು ಸಾಂಸ್ಕೃತಿಕ ಘಟನೆಗಳು ನಡೆದುಬಿಟ್ಟಿದ್ದುವು. ಯಾವ ನಿಷ್ಪಕ್ಷಪಾತವಾದ ದೃಷ್ಟಿಯಿಂದ ನೋಡಿದರೂ ಒರಿಸ್ಸಾ ದೇಶದವನೇ ಆಗಿದ್ದಿರಬಹುದಾದ ಜಯದೇವನು ಸಂಸ್ಕೃತ ಭಾಷೆಯಲ್ಲಿ ಬಹು ಆಕರ್ಷಕವಾದ ಛಂದಸ್ಸಿನಿಂದಲೂ ಹೃದಯಂಗಮವಾದ ಭಾವರಾಶಿಯಿಂದಲೂ ಕೂಡಿದ 'ಗೀತಗೋವಿಂದ'ವೆಂಬ ಬಹು ಉತ್ತಮವಾದ ಗೀತಾರತ್ನವನ್ನು ರಚಿಸಿದ್ದನು. ಇದರಲ್ಲಿ ಕೃಷ್ಣರಾಧೆಯರ ಶಾರೀರಕ ಮತ್ತೂ ಆಧ್ಯಾತ್ಮಿಕ ಮೇಳನವನ್ನು ಕಾಣಬಹುದು. ಇದರ ಭಾವೌನ್ನತ್ಯಕ್ಕೂ ರಸಮಾಧುರ್ಯಕ್ಕೂ ಮಾರುಹೋದ ಒರಿಸ್ಸಾ ದೇಶದ ಹಿಂದೂರಾಜರು ಇದನ್ನು ಪ್ರತಿನಿತ್ಯವೂ ಜಗನ್ನಾಥ ದೇವಾಲಯದಲ್ಲಿ ಪಾರಾಯಣ ಮಾಡಬೇಕಾಗಿ ವಿಧಿಸಿದರು. ಈ ಸಂಪ್ರದಾಯವು ಇಂದಿಗೂ ಪುರಿಯ ದೇವಾಲಯದಲ್ಲಿ ರೂಢಿಯಲ್ಲಿದೆ. ಆದರೂ ಆ ಗೀತೆಯ ನಿಜವಾದ ಸ್ವಾರಸ್ಯವನ್ನು ಜನರು ಅರಿತುಕೊಂಡುದು ಚೈತನ್ಯರು ಒರಿಸ್ಸಾ ದೇಶಕ್ಕೆ ಬಂದು ಅದರ ಮಹತ್ವವನ್ನರಿತು ಅವರಿಗೆ ವಿಶದಪಡಿಸಿದಾಗಲೇ. ಒರಿಯರನ್ನು ಬಿಟ್ಟು ಇನ್ನಾವ ಜನಾಂಗದ ಮೇಲೂ ಮೇಲ್ಕಂಡ 'ಗೀತ ಗೋವಿಂದ'ವು ಇಂತಹ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿಲ್ಲ. ಇದರ ಮುಂದೆ ಬಹು ಜನಪ್ರಿಯವಾದ ದೇಶೀಯ ಕವಿಗಳಾದ ಸರಳದಾಸ್, ಬಲರಾಮದಾಸ್, ಜಗನ್ನಾಥದಾಸರ ಭಾರತ, ರಾಮಾಯಣ ಭಾಗವತಗಳೂ ಒಂದೊಂದು ಸಲ ಮಸಕು ಮಸುಕಾಗಿ ಹೋಗುತ್ತವೆ. ಅಲ್ಲದೆ, 'ಗೀತಗೋವಿಂದ'ದ ಪ್ರಭಾವದಿಂದ ಪದ್ಯಕ್ಕೆ ಸಂಗೀತ

ಅಥವಾ ಹಾಡುಗಾರಿಕೆಯು ಒಂದು ಪ್ರಧಾನ ಅನಿವಾರ್ಯ ಗುಣವಾಗಿ ಸೇರಿಕೊಂಡಿತು. ಸಾಲದ್ದಕ್ಕೆ ಈ ವೇಳೆಗೆ ಸಂಸ್ಕೃತ ಸಾಹಿತ್ಯದ ಉತ್ತಮ ಕಾಲ ಕಳೆದುಹೋಗಿ ಪಂಡಿತ ಕವಿಗಳೂ ದೇಶೀಯ ಕವಿಗಳಿಗೆ ಆದರ್ಶವಾದರು. ಸಹಜವಾಗಿಯೇ ಅವರ ಶಬ್ದಾರ್ಥಾಲಂಕಾರ ಭೂಯಿಷ್ಠವಾದ ವೈಚಿತ್ರ್ಯಪ್ರಧಾನವಾದ ಬಾಹ್ಯಾಲಂಕಾರಗಳು ದೇಶೀಯ ಕಾವ್ಯಗಳಿಗೂ ಕವಿಗಳಿಗೂ ಅನುಕರಣೀಯವಾದುವು. ಅದುವರೆಗೆ ಅಕೃತಕವೂ ಸರಳವೂ ಸ್ವಚ್ಛವೂ ಆಗಿ ಬೆಳೆದುಬಂದ ಒರಿಯಾ ಭಾಷೆಯು ಸಂಸ್ಕೃತ ಮಿಶ್ರವಾಗಲು ಪ್ರಾರಂಭವಾಗಿ ಕೊನೆಕೊನೆಗೆ ವ್ಯಾಖ್ಯಾನಗಳಿಲ್ಲದೆ ಅರ್ಥವಾಗದಷ್ಟು ಪೆಡಸಾಗಲು ಪ್ರಾರಂಭವಾಯಿತು. ಈ ಕಾಲಕ್ಕೆ ಒರಿಸ್ಸಾ ದೇಶವು ಸಣ್ಣ ಸಣ್ಣ ಪಾಳೆಯಪಟ್ಟುಗಳಾಗಿ ವಿಭಾಗವಾಗಿ ಹೋಗಿತ್ತು. ಅಲ್ಲಿಯ ಪಾಳೆಯಗಾರರು ತಮ್ಮ ಆಶ್ರಯದಲ್ಲಿ ಬೆಳೆದ ಸಾಹಿತ್ಯಕ್ಕೆ ತಮ್ಮ ಅಂತಃಪುರವನ್ನೇ ವಸ್ತುವನ್ನಾಗಿ ನೇಮಕಮಾಡಿದರು. ಆದುದರಿಂದ ಅಲ್ಲಿ ಪ್ರತಿಬಿಂಬಿತವಾದ ಜೀವನವೆಲ್ಲ ಆ ಅಂತಃಪುರದ ಜೀವನವೇ ಆಗತೊಡಗಿತು.

ಈ ಕಾಲದಲ್ಲಿ ಮೇಲ್ಕಂಡ ಗುಣಗಳಿಂದ ತುಂಬಿದ ಕವಿಗಳ ಸಂಖ್ಯೆ ಅಸಂಖ್ಯಾತ. ಅವರು ತಮ್ಮ ಮೇಲ್ಮೆಯನ್ನು ಸ್ಥಾಪಿಸಿಕೊಳ್ಳುವ ಸ್ಪರ್ಧಾಪ್ರಯತ್ನದಲ್ಲಿ ಎಲ್ಲ ವಿಧವಾದ ಗರಡೀಸಾಧನೆಗಳನ್ನೂ ತಮ್ಮ ಗ್ರಂಥಗಳಲ್ಲಿ ತುಂಬತೊಡಗಿದರು. ಇವರೆಲ್ಲರನ್ನೂ ಮೀರಿ ತನ್ನದೇ ಆದ ವ್ಯಕ್ತಿತ್ವವನ್ನು ಪ್ರದರ್ಶನ ಮಾಡಿಕೊಂಡವನೆಂದರೆ ಗಂಜಾಮ್ ಜಿಲ್ಲೆಯ ಉಪೇಂದ್ರಭಂಜನೆಂಬುವನು. ಇವನು ಘುಮುಸೂರು ಮನೆತನಕ್ಕೆ ಸೇರಿದವನು. ೧೮ನೆಯ ಶತಮಾನದ ಆದಿ ಕಾಲದಲ್ಲಿದ್ದವನು. ಆತನ ಬರವಣಿಗೆಯು ಮಹತ್ತರವಾದುದು. ಕಾವ್ಯಕ್ಕೆ ಭಾಷೆಯೇ ಜೀವಾಳವೆಂದು ಅಂಗೀಕಾರಮಾಡಿದರೆ, ಭಾಷೆಯಿಂದಲೇ ಕಾವ್ಯವನ್ನು ಸಾಧ್ಯವಾದಷ್ಟು ಅಲಂಕಾರಮಯವನ್ನಾಗಿ ಮಾಡುವುದು ಉತ್ತಮ ಕವಿತ್ವದೃಷ್ಟಿಯೂ ಉತ್ತಮ ಕವಿಯ ಯೋಗ್ಯತಾಪರೀಕ್ಷೆಯೂ ಆಗುವುದಾದರೆ ಉಪೇಂದ್ರಭಂಜನನ್ನು ಆ ದೃಷ್ಟಿಯಿಂದ ಮೀರಿಸುವವರು ಹಲವರಿಲ್ಲವೆಂದು ಹೇಳಬಹುದು. ಅವನಿಗೆ ಕೃತಿರಚನೆಯಲ್ಲಿ ಅಪಾರವಾದ ಉತ್ಸಾಹವಿತ್ತು. ಆತನು ಮೊದಲು ಪುರಾಣಗಳಿಂದ ಕತೆಗಳನ್ನು ಆರಿಸಿಕೊಂಡು ಅವುಗಳ ಆಧಾರದ ಮೇಲೆ ಅನೇಕ ಕಾವ್ಯಗಳನ್ನು ರಚಿಸಿದನು. ಇದರಿಂದ ತೃಪ್ತನಾಗದೆ ಕೆಲವು ಕಾಲದಮೇಲೆ ಸ್ವಕಲ್ಪಿತವಾದ ವಸ್ತುವಿನ ಮೇಲೆಯೂ ಗ್ರಂಥರಚನೆ ಮಾಡಲು ತೊಡಗಿದನು. ಈತನು ಪ್ರಾಚೀನ ಸಾಂಪ್ರದಾಯಿಕ ಕವಿಗಳ ಶಿಖಾರತ್ನ. ಸುಮಾರು ೪೦ ಗ್ರಂಥಗಳ ಕರ್ತೃ. ಇವುಗಳಲ್ಲಿ ಸುಮಾರು ೨೦ ಗ್ರಂಥಗಳು ಇನ್ನೂ ಅಮುದ್ರಿತವಾಗಿಯೇ ಉಳಿದಿವೆ. ಆತನ 'ವೈದೇಹೀಶವಿಲಾಸ'ವು ವಿವಿಧ ಛಂದಸ್ಸುಗಳಲ್ಲಿದ್ದು ಹಾಡುವುದಕ್ಕೆ ಹೊಂದಿಕೊಂಡಿದೆ. ಪ್ರತಿಪಂಕ್ತಿಯೂ ವಕಾರದಿಂದ ಪಾರಂಭವಾಗುತ್ತದೆ. ಅವನ 'ಕಾಲಕೌತುಕ'ದ ಪ್ರತಿಪಂಕ್ತಿಯೂ ಆದಿ ಮಧ್ಯಾವಸಾನಗಳಲ್ಲಿ ಕಕಾರವನ್ನು ಹೊಂದಿದೆ.

ಅವನ 'ರಸತರಂಗಿಣಿ'ಯು ವಕಾರ ನಕಾರ ವಿರಹಿತವಾಗಿದೆ. 'ಚಿತ್ರಕಾವ್ಯ ಬಂಧೋದಯ'ವೆಂಬ ಒಂದು ಚಿತ್ರಕವಿತೆಯನ್ನೂ ಆತನು ರಚಿಸಿದ್ದಾನೆ. ಇದರಲ್ಲಿ ಶಕಟ, ರಥ, ಚಕ್ರ, ಮತ್ಸ್ಯ, ಕಮಲ, ಷೋಡಶದಳಪದ್ಮ, ಚತುಷ್ಷಷ್ಟಿದಳಕಮಲ, ಸರ್ಪ ಮೊದಲಾದ ಅನೇಕ ಬಂಧಗಳಿವೆ. ಅವನ ಇತರ ಕೃತಿಗಳಲ್ಲಿ 'ಕೋಟಿ ಬ್ರಹ್ಮಾಂಡಸುಂದರಿ' 'ಲಾವಣ್ಯವತಿ' 'ಪ್ರೇಮಸುಧಾನಿಧಿ' 'ರಸಿಕಹಾರಾವಳಿ', 'ರಸಪಂಚಕ' 'ಸುಭದ್ರಾಪರಿಣಯ' 'ಸುವರ್ಣರೇಖಾ' 'ರಾಮಲೀಲಾಮೃತ' 'ಛಂದೋಮಂಜರಿ' 'ಯಮಕರಾಜ ಚೌತೀಶ' 'ಚೌಪದೀಭೂಷಣ', 'ಬಜರ ಬೋಲಿ' 'ಚೌಪದೀಚಂದ್ರ' ಮುಂತಾದುವು ಪ್ರಧಾನವಾದುವು. ಅವನ 'ಲಾವಣ್ಯ ವತಿ' ಎಂಬ ಕಾವ್ಯದ ನಾಯಕ ಕರ್ಣಾಟಕದವನು. ನಾಯಕಿ ಸಿಂಹಳದವಳು. ಇತ್ತೀಚಿಗೆ ಈ ಕಾವ್ಯವನ್ನು ಚಿತ್ರಪಟಗಳ ಮೂಲಕ ವಿವರಿಸುವ ತಾಳೆ ಓಲೆಯ ಪ್ರತಿಯೊಂದು ಉಪಲಬ್ಧವಾಗಿದೆ. ಇದರಿಂದ ಉಪೇಂದ್ರಭಂಜನ ಕಾವ್ಯವು ಕ್ರಮ ಕ್ರಮವಾಗಿ ಉತ್ತರದಿಂದ ಸಿಂಹಳಕ್ಕೆ ಹೋಗಿದ್ದಿರಬಹುದಾದ ಅಂಶವು ದೃಢೀಕೃತ ವಾಗಿದೆ. ಆತನ ಶಕ್ತಿಯೆಲ್ಲ ಶಬ್ದ, ಶಬ್ದಚಿತ್ರ ಪ್ರದರ್ಶನದಲ್ಲಿ ಅಡಕವಾಗಿದೆ. ಈ ಬುದ್ಧಿಚಾತುರ್ಯದ ಎಲ್ಲೆ ಎಷ್ಟು ಮಿತವಾದುದು ಎಂಬುದು ಅವನಿಗೆ ಅರ್ಥವಾಗ ಲಿಲ್ಲ. ತನ್ನ ಮಹಾಕಾವ್ಯದ ಒಂದೊಂದು ಚರಣವೂ ಒಂದೇ ಅಕ್ಷರದಿಂದ ಪ್ರಾರಂಭ ವಾಗುವ ಹಾಗೆ ರಚಿಸಿದ್ದಾನೆ. ಶ್ಲೇಷೆಯಿಂದ ಒಂದೇ ಪದ್ಯದಲ್ಲಿ ಋತುತ್ರಯಗಳ ವರ್ಣನೆಯೂ ದ್ಯೋತಕವಾಗುವಂತೆ ಸರ್ಗಸರ್ಗಗಳನ್ನೇ ನೆಯ್ದಿದ್ದಾನೆ. ಶಬ್ದ ಪ್ರಯೋಗದಲ್ಲಿಯೂ ಶೃಂಗಾರ ವರ್ಣನೆಯಲ್ಲಿಯೂ ಉಪೇಂದ್ರಭಂಜನು ಆ ಕಾಲದ ಸಂಸ್ಕೃತ ಕವಿಗಳನ್ನೂ ಮೀರಿಸಿಬಿಟ್ಟಿದ್ದಾನೆ. ಇತಿಮಿತಿಗಳಿಂದ ಸರಳವಾಗಿ ಬರೆಯ ಬೇಕೆಂದು ಪ್ರಯತ್ನಪಟ್ಟಾಗ ಆತನ ಕಾವ್ಯಭಾಗಗಳು ಯಥೋಚಿತವಾದ ಶಬ್ದಾರ್ಥ ಮೇಳನದಿಂದಲೂ ನಾದಮಯತೆಯಿಂದಲೂ ಆಕರ್ಷಕವಾಗಿರುತ್ತವೆ.

ಉಪೇಂದ್ರಭಂಜನೂ ಆತನ ಅನುಯಾಯಿಗಳೂ ಈ ರೀತಿಯಲ್ಲಿ ಲೌಕಿಕ ಕಾವ್ಯರಚನೆಯಲ್ಲಿ ತೊಡಗಿದ್ದಾಗ ಆತನ ಸಮಕಾಲೀನನಾದ ದೀನಕೃಷ್ಣನಿಂದ ಹಿಡಿದುರ್ಗನೆಯ ಶತಮಾನದ ಗೋಪಾಲಕೃಷ್ಣನವರೆಗಿನ ಭಕ್ತಿಕವಿಗಳು ರಾಧಾಕೃಷ್ಣ ವಿಷಯಕವಾದ ಒಂದು ದೊಡ್ಡ ವೈಷ್ಣವ ಭಕ್ತಿಗೀತಾಸಾಗರವನ್ನೇ ರಚಿಸಿ ಸಹಾಯ ಮಾಡಿದ್ದಾರೆ. ಇವುಗಳು ಎಲ್ಲ ದೃಷ್ಟಿಯಿಂದಲೂ ಇತರ ಯಾವ ಭಾಷೆಯ ಭಕ್ತಿ ಗೀತೆಗಳೊಡನೆಯಾದರೂ ಯೋಗ್ಯತೆಯಲ್ಲಿ ಸಮದಂಡಿಗೆಯಾಗಿ ನಿಲ್ಲಬಲ್ಲವು. ಈ ಕವಿವರ್ಗದಲ್ಲಿ ದೀನಕೃಷ್ಣದಾಸ್, ಅಭಿಮನ್ಯು ಸಾಮಂತಸಿನರ್, ಕವಿಸೂರ್ಯ ಬಲ ದೇವರಥ್, ಮತ್ತು ಗೋಪಾಲಕೃಷ್ಣ ಇವರು ಪ್ರಖ್ಯಾತರು. ಇವರ ಗೀತಗಳು ಪಂಡಿತ ಪಾಮರರಿಬ್ಬರಿಂದಲೂ ಎಲ್ಲ ಕಾಲದಲ್ಲಿಯೂ ಎಲ್ಲ ಭಾಗದಲ್ಲಿಯೂ ಹಾಡಲ್ಪಡುತ್ತವೆ. ದೀನಕೃಷ್ಣ ಮತ್ತು ಅಭಿಮನ್ಯುವಿನ ಕಯ್ಯಲ್ಲಿ ಒರಿಯ ಭಾಷೆಯು ಎಂದೂ ಇಲ್ಲದ ಮಾರ್ದವವನ್ನೂ ಗಾಂಭೀರ್ಯವನ್ನೂ ಸೌಂದರ್ಯವನ್ನೂ ತಾಳಿ

ವಿವಿಧ ಛಂದಸ್ಸುಗಳಲ್ಲಿ ರಾಧಾಕೃಷ್ಣರ ದಿವ್ಯಪ್ರೇಮದ ಬಹುಭಾವಪೂರ್ಣವಾದ ಚಿತ್ರಣಕ್ಕೆ ಸಮರಸದಿಂದ ಸಮನ್ವಯವಾಗಿದೆ. ಬಲದೇವರಥನ 'ಕಿಶೋರಚಂದ್ರಾನಂದ ಚಂಪು'ವು ಪ್ರಾಚೀನ ಒರಿಯ ಸಾಹಿತ್ಯದ ಉತ್ತಮ ಮಾದರಿಯಾಗಿ ಅಂಗೀಕೃತವಾಗಿದೆ. ಇಲ್ಲಿ ಬರುವ ದೂತಿಯಾದ ಲಲಿತಳ ಪಾತ್ರರಚನೆಯು ಬಹುಶ್ಲಾಘ್ಯವಾಗಿದೆ. ಆಕೆಯು ಪ್ರಿಯಪ್ರೇಯಸಿಯರಾದ ರಾಧಾಕೃಷ್ಣರನ್ನು ಒಂದುಗೂಡಿಸುವ ಮೊದಲು ಅವರಿಗೆ ಇಲ್ಲಸಲ್ಲದ ಸುಳ್ಳು ಹೇಳಿ ಅವರು ಪ್ರೇಮಭಗ್ನರಾಗುವ ಸ್ಥಿತಿಗೆ ತರುವ ಸನ್ನಿವೇಶದ ವರ್ಣನೆಯು ಹೃದಯವಿದ್ರಾವಕವಾಗಿದೆ. 'ಕಿಶೋರಚಂದ್ರಾನಂದಚಂಪು'ವು ಮೂವತ್ತುನಾಲ್ಕು ಗೀತೆಗಳಿಂದ ಕೂಡಿದೆ. ಒಂದೊಂದು ಗೀತೆಯೂ ಒರಿಯಾಭಾಷೆಯ ಒಂದೊಂದು ವ್ಯಂಜನಾಕ್ಷರಗಳಿಂದ ಪ್ರಾರಂಭವಾಗುತ್ತದೆ. ಗೀತೆಗಳನ್ನು ಸೇರಿಸತಕ್ಕ ಗದ್ಯಭಾಗಗಳು ಮಧ್ಯೆ ಮಧ್ಯೆ ಬರುತ್ತವೆ. ಒರಿಸ್ಸಾ ದೇಶದಲ್ಲಿ ಈ ಗೀತೆಗಳ ಪರಿಚಯವಿಲ್ಲದ ಗಾಯಕನಾಗಲಿ ನಾಟ್ಯಕಾರನಾಗಲಿ ಅಪ್ರಯೋಜಕನೆಂದು ಗಣಿಸಲ್ಪಡುವನು. ಆತ ಇನ್ನೂ ನೂರಾರು ಗೀತೆಗಳನ್ನು ರಚಿಸಿರುವನು. 'ಚಂದ್ರಕಲಾ' ಎಂಬ ಪ್ರಣಯ ಕಾವ್ಯವೂ 'ರತ್ನಾಕರಚಂಪು' ಎಂಬ ಉದ್ಗ್ರಂಥವೂ ಏತತ್ಕೃತವಾದುದು. ಬಲರಾಮನಿಗಿಂತ ಹೆಚ್ಚು ನಾದಪ್ರಿಯನಾದವನು ಗೋಪಾಲಕೃಷ್ಣ. ಆತನು ತನ್ನ ಅತಿಸರಳವಾದ ನಿತ್ಯಜೀವನದ ಭಾಷೆಯಲ್ಲಿ ಪ್ರೇಮಿಗಳ ಬಹು ಆಳವಾದ ಭಾವ ತರಂಗಗಳ ಪ್ರತ್ಯಕ್ಷಾನುಭವವನ್ನು ಮಾಡಿಸಿದ್ದಾನೆ. ಆತನ ಪ್ರೇಮನಿರೂಪಣೆಯಲ್ಲಿ ವೈಷ್ಣವ ಪಂಥದ ಉತ್ತಮೋತ್ತಮವಾದ ಶರಣಾಗತಿತತ್ವ ಪ್ರತಿಪಾದನೆಯನ್ನು ಕಾಣಬಹುದು. ಯೋಗ್ಯತೆಯ ದೃಷ್ಟಿಯಿಂದ ಆತನು ವಿದ್ಯಾಪತಿ, ಮೀರಾಬಾಯ್, ಚಂಡೀದಾಸರ ಮಟ್ಟಕ್ಕೇರಬಲ್ಲವನೆಂದು ನಿಸ್ಸಂದೇಹವಾಗಿ ಹೇಳಬಹುದು. ಇವರ ಮಟ್ಟಕ್ಕೆ ಏರಲಾರದಿದ್ದರೂ ಈ ಕಾಲದಲ್ಲಿ ಒರಿಯಾಭಾಷೆಯಲ್ಲಿ ಗ್ರಂಥರಚನೆ ಮಾಡಿದ ಇತರ ಅನೇಕ ಗಣ್ಯ ಕವಿಗಳಿದ್ದಾರೆ. ಘನಭಂಜ (ವಿವಿಧ ಛಂದಸ್ಸಿನಿಂದ ಕೂಡಿದ ೨ ಸರಳ ಗ್ರಂಥಗಳು) ಆಂಧ್ರನಾಥಗೋಪಾಲ ಕವಿ (ಆಧ್ಯಾತ್ಮ ರಾಮಾಯಣ), ಸದಾನಂದ ಕವಿಸೂರ್ಯ (ಕೃಷ್ಣನ ಪ್ರಣಯ ವಿಷಯಕವಾದ ಒಂಭತ್ತು ಗ್ರಂಥಗಳು), ಭಕ್ತಚರಣ (ಮಧುರಾಮಂಗಲ), ಪೀತಾಂಬರದಾಸ್ (ನೃಸಿಂಹಪುರಾಣ), ಕೇಶವಪಟ್ಟನಾಯಕ (ನಾಟ್ಯರಾಮಾಯಣ), ದಾಶರಥಿದಾಸ್ (ವ್ರಜವಿಹಾರ), ಯದುಮಣಿ ಮಹಾಪಾತ್ರ (ಕೃಷ್ಣರುಕ್ಮಿಣಿಯರ ವಿವಾಹ ವಿಷಯಕವಾದ 'ಪ್ರಬಂಧಪೂರ್ಣಚಂದ್ರ' 'ರಾಮವಿಲಾಸ' 'ಹಾಸ್ಯೋಕ್ತಿಗಳು'), ರಾಮದಾಸ್ ('ದಾರ್ಢ್ಯತಾಭಕ್ತಿ' ಎಂಬ ಮಹಾಪುರುಷರ ಚರಿತ್ರೆ ಮತ್ತು 'ರಾಮರಸಾಮೃತ'), ರಾಜಾ ಪೀತಾಂಬರ ರಾಜೇಂದ್ರ (ರಾಮಲೀಲ), ಕನ್ಹೂದಾಸ್ (ರಾಮರಸಾಮೃತ ಸಿಂಧು), ಕೃಷ್ಣಚರಣಪಟ್ಟನಾಯಕ (ಜನಪ್ರಿಯ ರಾಮಾಯಣ), ಗೋಪಾಲಕೃಷ್ಣಪಟ್ಟನಾಯಕ (ಫರಲಖೇಮಡಿ), ಭುವನೇಶ್ವರ ಕವಿಚಂದ್ರ

(ಸೀತಾವಿಲಾಸ ಮತ್ತು ವಸುದೇವವಿಲಾಸ), ಅರಕ್ಷಿತದಾಸ್ (ಯೋಗಾಭ್ಯಾಸಕ್ಕೆ ಸಂಬಂಧಪಟ್ಟ 'ಶರೀರಭೇದ'), ಪಿಂಡಿಕ ಶ್ರೀಚಂದನ ವಸಂತದಾಸ ಮೊದಲಾದವರು ಇವರಲ್ಲಿ ಮುಖ್ಯರು.

ಮಧ್ಯಮಯುಗದ ಉತ್ತಮ ಒರಿಯ ಕವಿಯೆಂದರೆ 'ಸಮರತರಂಗದ' ಕರ್ತೃವಾದ ವ್ರಜನಾಥ ವಡಜೇನ. ಈತನು ಧೇನುಕಲ್ ಪ್ರಾಂತಕ್ಕೆ ಸೇರಿದವನು. ತನ್ನ ಸಣ್ಣ ಕೃತಿಯಲ್ಲಿ ಅವನು ತನ್ನ ರಾಜ್ಯದ ಮೇಲೆ ಮರಾಠರು ಮುತ್ತಿದುದನ್ನೂ ಅವರನ್ನು ತನ್ನ ಆಶ್ರಯದಾತನಾದ ರಾಜನು ಓಡಿಸಿದುದನ್ನೂ ಸ್ಪಷ್ಟವಾಗಿ ವರ್ಣಿಸಿದ್ದಾನೆ. ಒರಿಯ ಸಾಹಿತ್ಯದಲ್ಲೆಲ್ಲಾ ಇದೊಂದೇ ಇತಿಹಾಸ ಕಾವ್ಯ. ಆದರೂ ಅದರ ಸಾಹಿತ್ಯಗುಣ ಕಡಿಮೆಯಾಗಿಲ್ಲ. ಶಕ್ತಿಯುಕ್ತವಾದ ಸೈನಿಕರ ಒರಟು ಭಾಷೆಯಲ್ಲಿಯೇ ಕಾವ್ಯವು ನಡೆಯುವುದು. ನಾಯಕನಾದ ರಾಜನು ಸೈನಿಕರನ್ನು ಹುರಿದುಂಬಿಸುವ ಸನ್ನಿವೇಶವಂತೂ ಬಹು ವೀರ್ಯವತ್ತಾಗಿದೆ. ಇದರಲ್ಲಿ ಯುದ್ಧ ವರ್ಣನೆಯ ಅಂಗವಾದ ಯುದ್ಧ ಸಿದ್ಧತೆ, ವ್ಯೂಹ ರಚನೆ, ಯುದ್ಧ ಪ್ರಯಾಣ, ಭೇರೀತಾಡನ, ಸೇನಾ ಸಂಘರ್ಷಣ, ಜಯಘೋಷಣ ಮೊದಲಾದುವು ಸೂಕ್ತ ಪದ ಮೈತ್ರಿಯಿಂದ ಕಣ್ಣಿಗೆ ಕಟ್ಟುವಂತೆ ವರ್ಣಿತವಾಗಿದೆ. ಒರಿಯ ಸಾಹಿತ್ಯದಲ್ಲಿ ಇದಕ್ಕೆ ಪ್ರತ್ಯೇಕ ಸ್ಥಾನವಿದೆ. ವ್ರಜನಾಥನು ಸರಳರಗಳೆಯಲ್ಲಿ ಒಂದು ಸ್ವತಂತ್ರ ಕಾದಂಬರಿಯನ್ನು ರಚಿಸಿ ತನ್ನ ಆಧುನಿಕ ಮನೋಭಾವವನ್ನು ಬಹು ಹಿಂದೆಯೇ ಪ್ರಚುರಪಡಿಸಿಕೊಂಡಿದ್ದಾನೆ.

ಗೋಪಾಲಕೃಷ್ಣನು ತನ್ನ ಕೊನೆಯ ಗೀತಗಳನ್ನು ರಚಿಸುವ ಹೊತ್ತಿಗೆ ಒರಿಯ ಸಾಹಿತ್ಯದಲ್ಲಿ ಹೊಸಯುಗವು ಪ್ರಾರಂಭವಾಗಿಹೋಗಿತ್ತು. ಕ್ರಿ. ಶ. ೧೮೦೩ರಲ್ಲಿ ಮರಾಠೀಯರಿಂದ ಬ್ರಿಟಿಷರು ಒರಿಯವನ್ನು ಕಸಿದುಕೊಂಡರು. ಅಲ್ಲಿಂದ ಅಯ್ವತ್ತು ವರ್ಷಗಳು ಹಿಂದಿನ ಸಂಪ್ರದಾಯಗಳೇ ಬೆಳೆದು ಬಂದರೂ ಒರಿಯ ಪ್ರಾಚೀನ ಸಾಹಿತ್ಯವು ಆಧುನಿಕದಲ್ಲಿ ಆಡಂಬರವಿಲ್ಲದೆ ಗುಪ್ತವಾಗಿ ಲೀನಗೊಂಡಿತು. ಮಧ್ಯಯುಗದ ಗುಣ ರೀತಿ ಲಕ್ಷಣಗಳೆಲ್ಲ ಕ್ರಮಕ್ರಮವಾಗಿ ಮಾರ್ಪಾಟಾಯಿತು. ಹಿಂದಿನ ಪೌರಾಣಿಕ ಸನ್ನಿವೇಶಗಳೆಲ್ಲ ಮಾಯವಾದುವು. ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ಸಂಪರ್ಕವು ಹೊಸ ದೃಷ್ಟಿಯನ್ನೂ ಹೊಸ ಮೌಲ್ಯಗಳನ್ನೂ ಉಂಟುಮಾಡಿದುವು. ಹಿಂದಿನವರಿಗೆ ಪರಿಚಯವೇ ಇಲ್ಲದ ಹೊಸ ಕ್ಷೇತ್ರಗಳು ನಿರ್ಮಾಣವಾಗಿ ಹೊಸ ಪಂಥಗಳು ಸ್ಥಾಪಿತವಾದುವು.

ಈ ಹೊಸ ದೃಷ್ಟಿಸಂಪರ್ಕಗಳು ಐತಿಹಾಸಿಕ ಅನಾನುಕೂಲಗಳಿಂದ ಒರಿಯರಿಗೆ ಬಹಳಕಾಲ ಕಳೆದ ಮೇಲೆ ಅನುಕೂಲವಲ್ಲದ ಕಾಲದಲ್ಲಿ ಉಂಟಾಯಿತು. ಸೋದರೀ ಭಾಷೆಯಾದ ಬಂಗಾಳಿಯಷ್ಟು ಒರಿಯ ಬೆಳೆಯದಿದ್ದುದಕ್ಕೆ ಅದನ್ನಾಡುವ ಜನಗಳಿಗೆ ಸಾಕಷ್ಟು ಶಕ್ತಿಯಿಲ್ಲದುದು ಕಾರಣವಲ್ಲ. ಅವರಿಗೆ ಅವಕಾಶಗಳು ಕಾಲ ಕಳೆದ ಮೇಲೆ ಉಂಟಾದುದು.

ಕಳೆದ ೨೫ ವರ್ಷಗಳಿಂದ ಮಾತ್ರ ಒರಿಯರು ತಮ್ಮದೇ ಆದ ಪ್ರತ್ಯೇಕ ಪ್ರಾಂತವನ್ನು ಪಡೆದಿದ್ದಾರೆ. ೧೬ನೆಯ ಶತಮಾನದ ಕೊನೆಯಲ್ಲಿ ಒರಿಯರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡ ದಿನದಿಂದ ಈಗ ೨೫ ವರ್ಷಗಳ ಕೆಳಗೆ ಒಂದು ಪ್ರತ್ಯೇಕ ಪ್ರಾಂತವಾಗುವವರೆಗೆ ನಾಲ್ಕು ಶತಮಾನಗಳ ಕಾಲ ಅವರು ಬೇರೆ ಬೇರೆ ನಾಲ್ಕು ಪ್ರಾಂತಗಳಲ್ಲಿ ಛಿದ್ರ ಛಿದ್ರವಾಗಿ ಹರಿದು ಹಂಚಿಹೋಗಿ ಒಂದೊಂದರಲ್ಲಿಯೂ ಬಹು ಅನಾದರಣೆಯಿಂದ ತುಳಿಯಲ್ಪಟ್ಟು ಅಲ್ಪಸಂಖ್ಯಾತರಾಗಿ ಉಳಿದಿದ್ದರು. ಈ ದುರ್ದಶೆಯು ಈಗ ಸಂಪೂರ್ಣವಾಗಿ ಮಾಯವಾಗಿದೆ. ಇಲ್ಲಿಯ ವರೆಗೆ ಒರಿಯರು ತಮ್ಮ ಸ್ವಾತಂತ್ರ್ಯಕ್ಕಾಗಿ ತಮ್ಮ ಆಳರಸರ ಜೊತೆಯಲ್ಲಿ ಹೆಣಗಾಡುತ್ತಲೇ ಇದ್ದರು. ಪ್ಲಾಸೀ ಕದನವಾದ ಒಂದು ಶತಮಾನದ ಅವಧಿಯಲ್ಲಿ ಪಕ್ಕದಲ್ಲಿದ್ದ ಬಂಗಾಳ ಮತ್ತು ಅಸ್ಸಾಂ ದೇಶಗಳಲ್ಲಿ ವಿದ್ಯಾಭ್ಯಾಸವು ಬಹು ಮುಂದುವರಿದು ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗಿದ್ದರೂ ಒರಿಸ್ಸಾದಲ್ಲಿ ಒಂದು ಉತ್ತಮ ಪ್ರೌಢಶಾಲೆಯೂ ಇರಲಿಲ್ಲ. ಇಷ್ಟಾದರೂ ಒರಿಯ ಭಾಷಾ ಸಾಹಿತ್ಯಗಳು ಜೀವಂತವಾಗಿರುವುವಲ್ಲದೆ ವಿಶೇಷವಾಗಿ ಅಭಿವೃದ್ಧಿಯಾಗಿರುವುದಕ್ಕೆ ಅದರ ಅಭಿವೃದ್ಧಿ ಕಾರ್ಯದಲ್ಲಿ ನಾಯಕತ್ವವನ್ನು ವಹಿಸಿ ಆಧುನಿಕ ಒರಿಯ ಸಾಹಿತ್ಯದ ಜನಕನೆಂದು ಪ್ರಸಿದ್ಧಿಪಡೆದ ಫಕೀರಮೋಹನ ಸೇನಾಪತಿಯ ಅನವರತ ಪ್ರಯತ್ನವೇ ಕಾರಣ.

ಫಕೀರಮೋಹನ ಸೇನಾಪತಿಯು (೧೮೪೩-೧೯೧೮) ವಾಸ್ತವವಾಗಿ ಅವನ ಹೆಸರಿಗೆ ಅನ್ವರ್ಥವಾಗಿ ಆಧುನಿಕ ಒರಿಯ ಸಾಹಿತ್ಯ ಚಳುವಳಿಯ ಸೇನಾಪತಿ-ನಾಯಕನೇ ಆಗಿದ್ದನು. ಆತನು ಅನೇಕ ದೃಷ್ಟಿಯಿಂದ ಅದ್ಭುತ ವ್ಯಕ್ತಿಯಾಗಿದ್ದನು. ಆತನಿಗೆ ಕ್ರಮವಾಗಿ ೩-೪ ವರ್ಷಗಳ ವಿದ್ಯಾಭ್ಯಾಸ ಮಾತ್ರ ಸಾಗಿತು. ಆಮೇಲೆ ಆತನು ತನ್ನ ಚಿಕ್ಕಪ್ಪನ ಹಡಗು ಸರಿಮಾಡುವ ಕಾರ್ಯದಲ್ಲಿ ಸಹಾಯಕನಾಗಿ ಸೇರಿಕೊಂಡನು. ತನ್ನ ಸ್ವಂತ ಪ್ರತಿಭೆಯಿಂದಲೇ ಆತನು ಬಹಳ ಅಭಿವೃದ್ಧಿಗೆ ಬಂದು ಒರಿಸ್ಸಾ ಪ್ರಾಂತದ ದಿವಾನ್‌ಗಿರಿಗೆ ಏರಿದನು. ಆತನಿಗೆ ಇಂಗ್ಲಿಷ್ ಭಾಷೆಯಲ್ಲಿ ಸಾಮಾನ್ಯ ವ್ಯವಹಾರಜ್ಞಾನವಿದ್ದಿತಲ್ಲದೆ ಅಯ್ದು ಇತರ ಭಾರತೀಯ ಭಾಷೆಗಳಲ್ಲಿ ಉತ್ತಮ ಪರಿಚಯವಿದ್ದಿತು. ಆತನು ಸಹಕಾರ ತತ್ತ್ವದ ಆಧಾರದ ಮೇಲೆ ಒರಿಸ್ಸಾ ದೇಶದಲ್ಲಿ ಮುದ್ರಣಕಾರ್ಯವನ್ನೂ ಪ್ರಕಟಣಕಾರ್ಯವನ್ನೂ ಪ್ರಾರಂಭಿಸಿದನು. ಕ್ರಾಂತಿಕಾರಕ ಮನೋಭಾವನೆಯುಳ್ಳ ಅವನಿಗೆ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಬಹು ಔದಾರ್ಯವಿತ್ತು. ಆತನು ಮೂರ್ತಿಪೂಜೆಯನ್ನು ಸಂಪೂರ್ಣವಾಗಿ ನಿರಾಕರಿಸಿದನು. ಕೋಮುವಾರು ವೈಮನಸ್ಯಗಳ ವಿಷಯದಲ್ಲಿ ಅವನಿಗೆ ಬಹು ಹೇಯವಾದ ತಿರಸ್ಕಾರವಿತ್ತು. ಅವನ ಬರವಣಿಗೆಯಲ್ಲಿ ಒಂದು ವಿಧವಾದ ವಿಶ್ವಬಾಂಧವ್ಯ ಸೂಚಿತವಾಗಿದೆ. ಮೊದಲು ಆತನು ಸವ್ಯಸಾಚಿಯಾಗಿ ಭಾರತ ರಾಮಾಯಣಗಳನ್ನು ಮೂಲದಿಂದ ಆಧುನಿಕ ಒರಿಯಾ ಭಾಷೆಗೆ ಪರಿವರ್ತಿಸಿದನು. ಕೆಲವು ಕಾಲದ ಮೇಲೆ ತನ್ನದೇ ಆದ ಸ್ವಂತ ಶೈಲಿಯನ್ನು ರೂಪಿಸಿಕೊಂಡು

ಕರುಣ, ಹಾಸ್ಯ, ವಿಡಂಬನಗಳಿಂದ ಕೂಡಿದ ಉತ್ತಮ ಸಣ್ಣಕತೆಗಳನ್ನೂ ಭಾವಗೀತೆಗಳನ್ನೂ ಜಾನಪದ ಕವನಗಳನ್ನೂ ಅಣಕುವಾಡುಗಳನ್ನೂ ರಚಿಸಿದನು. ಬುದ್ಧನ ವಿಷಯಕವಾದ 'ಬೌದ್ಧಾವತಾರಕಾವ್ಯ'ವೆಂಬ ಮಹಾಕಾವ್ಯವೊಂದನ್ನು ನಿರ್ಮಿಸಿದನು. ತನ್ನ ವಿಶ್ರಾಂತ ಜೀವನದಲ್ಲಿ ಬಹು ಉತ್ತಮವಾದ ಆರು ಕಾದಂಬರಿಗಳನ್ನು ರಚಿಸಿದನು. ದೇಶಪ್ರೇಮ, ಭಾಷಾಸೌಂದರ್ಯ, ನಾದಮಾಧುರ್ಯ, ಲೋಕಾನುಭವ, ಹಾಸ್ಯಮನೋಭಾವ, ನೈತಿಕ ಪರಿಣಾಮ ಮೊದಲಾದ ದೃಷ್ಟಿಯಿಂದ ಈ ಕಾದಂಬರಿಗಳನ್ನು ಮೀರಿಸಬಲ್ಲ ಒರಿಯ ಕಾದಂಬರಿಗಳು ಇಂದಿಗೂ ಇಲ್ಲವೆಂದು ಹೇಳಬಹುದು.

ಒರಿಸ್ಸಾ ದೇಶದ ಹೊರಗೆ ಸೇನಾಪತಿಯ ಹೆಸರು ಬಹು ಜನಕ್ಕೆ ತಿಳಿಯದು. ಆದರೂ ಪ್ರಾಸಂಗಿಕವಾಗಿ ಆತನ ಒಂದೆರಡು ಕಾದಂಬರಿಗಳನ್ನು ಓದಿದ ಪಾಶ್ಚಾತ್ಯರು ಕೂಡ ಅವನನ್ನು ಬಹು ಉಚ್ಚ ಸಾಹಿತಿಯೆಂದೂ ಪ್ರಜಾಸಾಹಿತ್ಯ ರಚನೆಗಾರರಲ್ಲಿ ಅಗ್ರೇಸರನೆಂದೂ ಒಪ್ಪಿಕೊಂಡಿದ್ದಾರೆ. ಆ ಶಾಖೆಯಲ್ಲಿ ಕೆಲಸಮಾಡುತ್ತಿದ್ದವರನೇಕರಿಗಿಂತ ಅವನು ಮುಂದುವರಿದಿದ್ದಾನೆ. ಬಂಗಾಳದಲ್ಲಿ ಸುಪ್ರಸಿದ್ಧನಾದ ಬಂಕಿಂಚಂದ್ರನು ಒಳ್ಳೆಯ ಸಂಸ್ಕೃತ ಮಿಶ್ರವಾದ ಆಡಂಬರದ ಭಾಷೆಯಲ್ಲಿ ಸಮಾಜದ ಮೇಲುವರ್ಗದ ನವಾಬರು, ಬೇಗಮ್ಮುಗಳು, ಸೇನಾಪತಿಗಳು, ರಾಜರಾಣಿಯರು ಮೊದಲಾದವರ ವಿಷಯದಲ್ಲಿ ಕಾದಂಬರಿಗಳನ್ನು ಬರೆಯುತ್ತಿದ್ದಾಗ ಪ್ರಜಾಪಕ್ಷದ ನಾಯಕನಾದ ಈ ಕವಿಯು ಯಾವ ಆಡಂಬರವೂ ಇಲ್ಲದೆ ಯಾವ ಪ್ರಚಾರಕ್ಕೂ ಅಪೇಕ್ಷಿಸದೆ ಸರಳಜೀವಿಗಳಾದ ಹಳ್ಳಿಯವರಾದ ನೇಯ್ಗೆಯವರು, ನಾಯಿಂದರು, ಶಾನುಭೋಗರು, ಮೋಸಗಾರರು, ಧರ್ಮಾಧರ್ಮ ವಿವೇಚನೆಯಿಲ್ಲದ ದಾಸದಾಸಿಯರು ಮೊದಲಾದವರನ್ನು ನಗರ ಮತ್ತು ಗ್ರಾಮಗಳ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾನೆ. ಹಾಗೆಯೇ ಅವನ ಲೇಖಣಿಯಿಂದ ಹೊರಬಿದ್ದ ಇಂಗ್ಲೀಷ್ ನ್ಯಾಯಾಧೀಶರ ಕೈಕೆಳಗೆ ಕೆಲಸಮಾಡುತ್ತಿದ್ದ ದುರಾಶೆಯಿಂದ ಕೂಡಿದ ಕಾರ್ಕೂನರು, ನ್ಯಾಯವಾದಿಗಳು, ಹೊಸ ಇಂಗ್ಲೀಷ್ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿದ್ದ ಹಿಂದು ತರುಣರು, ಅವರ ಸ್ವೇಚ್ಛಾ ಪ್ರವೃತ್ತಿಯಿಂದ ಎದೆಯೊಡೆದ ತಂದೆತಾಯಿಗಳು ಮೊದಲಾದವರ ಚಿತ್ರಣ ಬಹು ಆಕರ್ಷಕವಾಗಿವೆ. ಸೇನಾಪತಿಗೆ ಪ್ರೌಢ ವಿದ್ಯಾಭ್ಯಾಸ ದೊರಕದಿದ್ದುದು ಒಂದು ದೃಷ್ಟಿಯಿಂದ ಅನುಕೂಲವೇ ಆಯಿತು. ಆತನು ಪ್ರಜೆಗಳ ಕವಿ. ಅವನ ಒಲವೆಲ್ಲ ಅವರ ಕಡೆಗೇ. ಗ್ರಾಮ್ಯವೂ ಪ್ರಭಾವಶಾಲಿಯೂ ಆದ ಅವರ ಮಾತುಕತೆಗಳೂ, ಅವರ ಮನೆಯ ಮತ್ತು ಬೀದಿಯ ದುರ್ಗಂಧಗಳೂ, ಅಲ್ಲಿಯ ಹೊಲಗದ್ದೆಗಳೂ ಅಲ್ಲಿಯ ಸ್ತ್ರೀಯರು ಸ್ನಾನಮಾಡುತ್ತಿದ್ದ ಕೆರೆ ತೊರೆಗಳೂ ಅಲ್ಲಿಯ ಕಾಡುಹರಟೆಗಳೂ ಅವನಿಗೆ ಚಿರಪರಿಚಿತವಾಗಿತ್ತು. ಅವುಗಳನ್ನೆಲ್ಲಾ ಸ್ವಲ್ಪವೂ ಗಾಂಭೀರ್ಯಕ್ಕೆ ಊನ ಬಾರದ ರೀತಿಯಲ್ಲಿ ತನ್ನ ಕೃತಿಗಳಲ್ಲಿ ಚಿತ್ರಿಸಿದ್ದಾನೆ.

ಫಕೀರಮೋಹನನ ಸಣ್ಣಕತೆಗಳಲ್ಲಿಯೂ ಕಾದಂಬರಿಗಳಲ್ಲಿಯೂ ಸಜೀವವಾದ

ಅನೇಕ ವ್ಯಕ್ತಿಗಳ ಪರಿಚಯವಾಗುತ್ತದೆ. ಅವರ ವಾಸ್ತವಿಕತೆಯನ್ನೂ ದೈವದತ್ತವಾದ ವ್ಯಕ್ತಿತ್ವವನ್ನೂ ಸಹಜಕವಿಯಾದ ಸೇನಾಪತಿಯಂತಹವರಿಗಲ್ಲದೆ ಇತರರಿಗೆ ವರ್ಣಿಸಲು ಸಾಧ್ಯವಿಲ್ಲ. ಸಮಾಜದ ಭಿನ್ನ ಮಟ್ಟದ ವಿವಿಧ ರೀತಿಯ ವ್ಯಕ್ತಿಗಳನ್ನೂ ಸನ್ನಿವೇಶಗಳನ್ನೂ ಚಿತ್ರಿಸುವುದರ ಮೂಲಕ ಸೇನಾಪತಿಯು ಒಂದು ಅದ್ಭುತವಾದ ಸಾಮಾಜಿಕ ಚಿತ್ರ ಪ್ರದರ್ಶನವನ್ನೇ ಮಾಡಿದ್ದಾನೆಂದು ಹೇಳಬಹುದು.

ಅವನ 'ಛ ಮಾನ ಆಟ್ ಗುಂಟಾ' ಎಂಬ ಕಾದಂಬರಿ ಆತನ ಪರಮೋತ್ತಮ ಕೃತಿ. ಸಂತಾನವಿಲ್ಲದ ನೆಯ್ಗೆ ದಂಪತಿಯರನ್ನು ಆತನ ಒಡೆಯನಾದ ಸಾಹುಕಾರನು ದಯಾಶೂನ್ಯನಾಗಿ ಹಾಳುಮಾಡಿದ ಕತೆ ಇದರ ವಸ್ತು. ಸೇನಾಪತಿಯ ಗ್ರಾಮೀಣ ವಾಸ್ತವಿಕತೆ ಇಲ್ಲಿ ಅದ್ಭುತವಾಗಿ ಪ್ರಕಾಶಿತವಾಗಿದೆ. ಈ ಕಾದಂಬರಿಯು ಮೊದಲು ಮಾಸಪತ್ರಿಕೆಯಾದ 'ಉತ್ಕಲ ಸಾಹಿತ್ಯ'ದಲ್ಲಿ ಪ್ರಕಟವಾಯಿತು. ಈ ಕಾದಂಬರಿಯು ಮುಂದೆ ಅಯ್ವತ್ತು ವರ್ಷಗಳಾದ ಮೇಲೆ ಬಂದ ಪ್ರೇಮಚಂದ್ರನ 'ಗೋದಾನ್' ಕಾವ್ಯವನ್ನು ಮೂಲರೇಖೆಗಳಲ್ಲಿ ಮೊದಲೇ ಸೂಚಿಸಿದೆ. ಸೇನಾಪತಿಯ 'ಲಚ್ಮ' ಒಂದು ಐತಿಹಾಸಿಕ ಕಾದಂಬರಿ. ಮರಾಠೀಯರು ಒರಿಸ್ಸಾ ಬಂಗಾಳಗಳನ್ನು ಮುತ್ತಿದಾಗ ನಡೆಸಿದ ಅತ್ಯಾಚಾರಗಳ ವಿಷಯಕವಾದುದು. 'ಮಾಮು' ಮತ್ತು 'ಪ್ರಾಯಶ್ಚಿತ್ತ' ಎಂಬುವು ಪಾಶ್ಚಾತ್ಯರ ಸಂಪರ್ಕದಿಂದ ಸಮಾಜದಲ್ಲಿ ಉಂಟಾದ ಅವನತಿಯನ್ನು ತಿಳಿಸುವ ಸಾಮಾಜಿಕ ಕಾದಂಬರಿಗಳು.

ಸಾಹಿತಿ ಮಾತ್ರವಾಗಿರದೆ ಸೇನಾಪತಿಯು ಒರಿಯ ಭಾಷೆಯ ಮೇಲೆ ವಂಗೀಯರು ನಡೆಸುತ್ತಿದ್ದ ಆಧಿಪತ್ಯವನ್ನು ಪ್ರತಿಭಟಿಸಿ ತನ್ನ ತಾಯ್ನುಡಿಯನ್ನು ಪುನರುದ್ಧಾರ ಮಾಡಲು ಟೊಂಕಕಟ್ಟಿ ನಿಂತ ವೀರಪುರುಷನೂ ಹೌದು. ಆದುದರಿಂದ ಒರಿಯ ಸಾಹಿತ್ಯ ಸಮಾಜ ಪ್ರಪಂಚಗಳೆರಡರಲ್ಲಿಯೂ ಅವನಿಗೆ ಪ್ರತ್ಯೇಕ ಸ್ಥಾನವಿದೆ.

ಸೇನಾಪತಿಯು ಏಕವ್ಯಕ್ತಿ ಮಾತ್ರವಾಗಿರಲಿಲ್ಲ. ಅವನು ಒರಿಯ ಭಾಷಾ ಸಂಪ್ರದಾಯಗಳನ್ನು ಉದ್ಧಾರಮಾಡಲು ಬದ್ಧಕಂಕಣರಾಗಿ ಹೊರಟ ಒಂದು ದೊಡ್ಡ ಉತ್ಸಾಹಿ ತರುಣರ ನಾಯಕನಾಗಿಯೂ ಇದ್ದನು. ಇವನೊಡನೆ ಹೆಗಲಿಗೆ ಹೆಗಲುಕೊಟ್ಟು ಕೆಲಸಮಾಡಿದವರು ರಾಧಾನಾಥರಾಯ್ ಮತ್ತು ಮಧುಸೂದನ ರಾವ್ ಎಂಬುವರು. ಈ ಮೂವರೂ ಆಧುನಿಕ ಒರಿಯ ಸಾಹಿತ್ಯದ ತ್ರಿಮೂರ್ತಿಗಳು. ಮಾನವ, ಪ್ರಕೃತಿ, ಮತ್ತು ದೇವರನ್ನು ಕ್ರಮವಾಗಿ ಸೇನಾಪತಿ, ರಾಧಾನಾಥ್, ಮಧುಸೂದನರು ತಮ್ಮ ವಿಚಾರವಿಷಯವಾಗಿ ತೆಗೆದುಕೊಂಡು ಗಂಭೀರವಾದ ಪ್ರಾಚೀನ ಭಾಷೆಯಲ್ಲಿ ಸ್ವಯಂಪೂರ್ಣವಾದ ರೀತಿಯಲ್ಲಿ ಉತ್ತಮ ಗ್ರಂಥಗಳನ್ನು ಸೃಷ್ಟಿಸಿದ್ದಾರೆ. ವ್ಯಕ್ತಿಶಃ ಬಹು ಸೌಜನ್ಯದಿಂದ ನಡೆದುಕೊಳ್ಳುತ್ತಿದ್ದ ಇವರ ಒಟ್ಟು ಸಾಹಿತ್ಯರಾಶಿಯಲ್ಲಿ ತುಂಬು ಸಾಹಿತ್ಯಕ್ಕೆ ಆವಶ್ಯಕವಾದ ಎಲ್ಲ ಗುಣಗಳೂ ಪೂರ್ಣವಾಗಿರುತ್ತಿದ್ದವು. ಫಕೀರಮೋಹನನು ಸಮಾಜದಲ್ಲಿ ಮಾನವನ ವಿವಿಧ ಆಶೆ ಆತಂಕಗಳನ್ನು ಬಹುವಿಸ್ತಾರವಾಗಿ ವರ್ಣಿಸಿದರೆ ಮಧುಸೂದನನು ದೈವತತ್ತ್ವವನ್ನೂ

ದೈವಮಾನುಷ ಸಂಬಂಧವನ್ನೂ ಜೀವಾತ್ಮ ಪರಮಾತ್ಮರ ಮೇಳನವನ್ನೂ ಬಹು ಹೃದಯಂಗಮವಾಗಿ ವರ್ಣಿಸಿದ್ದಾನೆ. ಭಾವಗೀತೆಗಳಲ್ಲಿಯೂ ಭಕ್ತಿ ಕವನಗಳಲ್ಲಿಯೂ ಹಿರಿಯ ಹೆಸರಾದವನು ಮಧುಸೂದನರಾಯ್. ಆತನು ಆರಿಸಿಕೊಂಡ ವಿಷಯಗಳೆಲ್ಲ ಧರ್ಮ, ನ್ಯಾಯ ಮತ್ತು ಸಚ್ಛೀಲಕ್ಕೆ ಹೊಂದಿಕೊಂಡವು ಮಾತ್ರ. ದೈವಮತ್ತನಾದ ಅವನಿಗೆ ಸತ್ಯಕ್ಕಿಂತ ಪರಮೋತ್ತಮವಾದ ಪದಾರ್ಥವೇ ಇರಲಿಲ್ಲ. ರಾಧಾನಾಥನ ಸತ್ಯಾನ್ವೇಷಣೆಗೆ ಸೌಂದರ್ಯವೇ ಸಾಧನವಾದರೆ ಮಧುಸೂದನನಿಗೆ ಭಕ್ತಿಯೇ ಸಾಧನ. ಆತನು ಹಿಮಾಲಯದ ಮೇಲಿರುವ ಹಿಮರಾಶಿಯಿಂದ ಹಿಡಿದು ಬೀದಿಯ ಒರಟು ಜೀವನದವರೆಗೆ ಎಲ್ಲೆಲ್ಲಿಯೂ ದೇವರ ಅಸ್ತಿತ್ವವನ್ನು ಕಂಡಿದ್ದನು. ಆತನು ಸಾಹಿತ್ಯಕ್ಷೇತ್ರದಲ್ಲಿ ಅತಿಯಾದ ಪ್ರಸಿದ್ಧಿಯನ್ನು ಅಪೇಕ್ಷಿಸಲೂ ಇಲ್ಲ; ಪಡೆಯಲೂ ಇಲ್ಲ. ವಿಶೇಷವಾಗಿ ರಚನೆ ಮಾಡಲೂ ಇಲ್ಲ. ಅವನು ಬರೆದಿದ್ದೆಲ್ಲ ಕೇವಲ ಕೆಲವು ಗೀತೆಗಳು, ಸ್ತೋತ್ರಗಳು, ಪದಗಳು, ಚರಮ ಗೀತೆಗಳು ಮತ್ತು ಅಷ್ಟಷಟ್ಪದಿಗಳು. ಅವುಗಳೆಲ್ಲ ಉದಾತ್ತ ಜೀವನದ ಪ್ರತೀಕಗಳು. ಅವುಗಳಲ್ಲಿಯೂ 'ನದಿಯನ್ನು ಕುರಿತು' 'ಹಿಮಾಲಯದಲ್ಲಿ ಸೂರ್ಯೋದಯ' 'ಋಷಿಯ ಆತ್ಮಕ್ಕೆ ದೈವಾವತರಣ' ಮೊದಲಾದ ಕೃತಿಗಳು ಯಾವ ಸಾಹಿತ್ಯದಲ್ಲಾದರೂ ಚಿರಂತನ ರತ್ನಗಳಾಗಿರಲು ಸಾಕು. ಮೇಲಿನವುಗಳಲ್ಲಿ ಕೊನೆಯದು ಆತನ ಕೃತಿರತ್ನವೆನ್ನಬಹುದು. ಇದು ವೈದಿಕ ಮಂತ್ರಗಳ ಮಾದರಿಯಲ್ಲಿದೆ. ಋಷಿಯ ಹೃದಯಕ್ಕೆ ದೇವತೆಯ ಅವತರಣವಾಗುವ ರೀತಿಯನ್ನು ಬಹು ಸೊಗಸಾಗಿ ವರ್ಣಿಸಿದೆ. ಆದಿಕಾಲದಲ್ಲಿ ಹಿಮಾಲಯದ ಮೇಲೆ ಉಷಸ್ ದರ್ಶನವಾದಾಗ ಋಷಿ ಹೃದಯದಲ್ಲಾದ ಪರಿವರ್ತನೆಯ ಚಿತ್ರವನ್ನು ಇದರಲ್ಲಿಯೂ ಕಾಣಬಹುದು. ಆತನ ಸ್ತೋತ್ರಗಳನೇಕ ಪ್ರತಿಸಂಧ್ಯಾಕಾಲದಲ್ಲಿಯೂ ಅನೇಕ ವಿದ್ಯಾರ್ಥಿಗಳಿಂದ ಹಾಡಲ್ಪಡುತ್ತಿವೆ. ಆತನ ಪದ್ಯಗಳಂತೂ ಒರಿಯ ರಾಷ್ಟ್ರಜೀವನದಲ್ಲಿಯೂ ಸಾಹಿತ್ಯ ಪ್ರಪಂಚದಲ್ಲಿಯೂ ಉತ್ತಮ ನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಯಾಗಿ ಪರಿಣಮಿಸಿವೆ.

ರಾಧಾನಾಥನು ಸೃಷ್ಟಿ ಸೌಂದರ್ಯದಲ್ಲಿ ಮಗ್ನನಾದವನು. ಸೇನಾಪತಿಯು ಒರಿಯ ಸಾಹಿತ್ಯದ ಗದ್ಯಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ರಾಧಾನಾಥನು ಪದ್ಯ ಕ್ಷೇತ್ರದಲ್ಲಿ ಸಲ್ಲಿಸಿ ಆ ಸಾಹಿತ್ಯಕ್ಕೆ ಸಂಪೂರ್ಣತೆಯನ್ನುಂಟುಮಾಡಿದನು. ಆತನು ಪದ್ಯ ಪ್ರಪಂಚದಲ್ಲಿ ಒಂದು ಹೊಸ ಯುಗವನ್ನೇ ಸ್ಥಾಪಿಸಿದನು. ಉಪೇಂದ್ರ ಭಂಜನ ಪ್ರಭಾವದಿಂದ ಮಧ್ಯಕಾಲದಿಂದ ಬೆಳೆದು ಬಂದಿದ್ದ ಅತ್ಯಧಿಕವಾದ ಶಬ್ದಾರ್ಥಾಲಂಕಾರಗಳ ಸಂಕೋಲೆಯಿಂದ ಒರಿಯ ಸಾಹಿತ್ಯವನ್ನು ಬಿಡಿಸಿದನು. ಮೊತ್ತಮೊದಲನೆಯ ಸಲ ಶಬ್ದಾರ್ಥಗಳಲ್ಲಿ ಸಮನ್ವಯವನ್ನುಂಟುಮಾಡಿದನು. ಹಿತಮಿತವಾದ ಶಬ್ದಪ್ರಯೋಗಗಳಲ್ಲಿ ಆತನು ತನ್ನ ಧ್ಯೇಯಮೂರ್ತಿಯಾದ ಕಾಳಿದಾಸನ ಸಮದಂಡಿಗೆ ಬಂದಿದ್ದಾನೆಂದು ಹೇಳಬಹುದು. ಇವೆಲ್ಲಕ್ಕಿಂತಲೂ ಒರಿಯ ಸಾಹಿತ್ಯಕ್ಕೆ ರಾಧಾನಾಥನ ಕಾಣಿಕೆಯೆಂದರೆ ಅವನು ಒರಿಯ ಸಾಹಿತ್ಯದಲ್ಲಿ ಒರಿಯರ

ಜೀವನ ಸರ್ವಸ್ವವನ್ನು ಪ್ರತಿಬಿಂಬಿಸಿ ಆ ಸಾಹಿತ್ಯವನ್ನು ಅವರ ಪ್ರತೀಕವನ್ನಾಗಿಸಿದ ಕಾವ್ಯಮಾರ್ಗ. ಒರಿಸ್ಸಾ ದೇಶದ ಎಲ್ಲ ಬೆಟ್ಟಗುಡ್ಡಗಳನ್ನು ಕೆರೆ ತೊರೆಗಳನ್ನು ಜನ ಜಾನುವಾರುಗಳನ್ನು ತನ್ನ ಕೃತಿಗಳಲ್ಲಿ ತುಂಬಿರುವುದಲ್ಲದೆ ಗ್ರೀಕ್ ಮತ್ತು ರೋಮನ್ನರ ಪುರಾಣೇತಿಹಾಸಗಳನ್ನು ತೆಗೆದುಕೊಂಡು ಅದಕ್ಕೆ ದೇಶೀಯ ಆಕಾರವನ್ನುಂಟು ಮಾಡಿ ಅಲ್ಲಿಯೇ ನಡೆದ ಸಂಗತಿಗಳಂತೆ ಚಿತ್ರಿಸಿದ್ದಾನೆ. ಪ್ರಾಚೀನ ಕವಿಗಳಲ್ಲಿ ಸರಳದಾಸ ಮತ್ತು ಬಲರಾಮದಾಸರನ್ನು ಬಿಟ್ಟರೆ ಉಳಿದವರೆಲ್ಲ ಉತ್ತರ ದೇಶದ ಗಂಗಾ, ಯಮುನಾ ಗೋವರ್ಧನಾದಿಗಳನ್ನು ವರ್ಣಿಸಿದ್ದಾರೆಯೇ ವಿನಾ ಒರಿಸ್ಸಾ ದೇಶದ ಮೇಲೆ ಕಣ್ಣೆತ್ತಿ ನೋಡಿರಲಿಲ್ಲ. ಒರಿಸ್ಸಾ ದೇಶದ ಪ್ರಕೃತಿ ಸೌಂದರ್ಯಕ್ಕೆ ಮುಗ್ಧನಾಗಿ, ಅಲ್ಲಿಯ ಮಹಾನದಿ, ವೈತರಣಿ, ಮಲಯಗಿರಿ, ಮಹೇಂದ್ರ ಪರ್ವತ ಗಳನ್ನೂ ಕುರಿತು ಅದ್ಭುತವಾಗಿ ಹಾಡಿದವನು ರಾಧಾನಾಥ್. ಆತನು ಚಿಲಕ ಸರೋವರದ ವಿಷಯವಾಗಿ ಬಹು ಸುಂದರವಾದ ಕಾವ್ಯವನ್ನು ರಚಿಸಿದ್ದಾನೆ. ವಾಸ್ತವವಾಗಿ ಇದು ಒರಿಯಾ ಸಾಹಿತ್ಯದ ಒಂದು ಗಡಿಗಲ್ಲಾಗಿದೆ. ಆ ಸರೋವರದ ದಡದಲ್ಲಿ ಕವಿಯ ಬಳಲಿದ ಧೀರಾತ್ಮವು ಎಲ್ಲಿಯೂ ಇಲ್ಲದ ಶಾಂತಿ ಸೌಖ್ಯವನ್ನು ಪಡೆದಿದೆ. ಬ್ರಿಟಿಷರ ಆಳ್ವಿಕೆಯಲ್ಲಿ ಪ್ರಶಸ್ತಿ ಪ್ರದಾನಕ್ಕಾಗಿ ನಡೆಯುತ್ತಿದ್ದ ಸಭೆಗಳ ಕೃತಕತೆಯನ್ನೂ ಅಸಾರತೆಯನ್ನೂ 'ದರ್ಬಾರ್' ಎಂಬ ತನ್ನ ಕೃತಿಯಲ್ಲಿ ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾನೆ. ಆತನ ಗ್ರಂಥಗಳಲ್ಲೆಲ್ಲ (ಪಾಂಡವರ) 'ಮಹಾ ಯಾತ್ರೆ'ಯೇ ಪರಮೋತ್ತಮವಾದುದೆಂದು ಹೇಳಬಹುದು. ಸರಳರಗಳೆಯ ಬಹುಸುಲಭ ಶೈಲಿಯಲ್ಲಿ ರಚಿತವಾಗಿದ್ದರೂ ಪುರಾಣಗಳ ಗಾಂಭೀರ್ಯವದರಲ್ಲಿದೆ. ಅದು ಪುರುಷಾರ್ಥಗಳ ಸ್ಪಷ್ಟವಾದ ಅರಿವನ್ನುಂಟುಮಾಡುವುದಲ್ಲದೆ ಉಚ್ಚ ದೇಶಾಭಿಮಾನವನ್ನೂ ವಿದೇಶೀಯರ ದಾಸ್ಯದಲ್ಲಿ ಜಿಗುಪ್ಸೆಯನ್ನೂ ಏಕಕಾಲದ ಲ್ಲುಂಟುಮಾಡುತ್ತದೆ. ಇದನ್ನು ಇಪ್ಪತ್ತೊಂದು ಸರ್ಗಗಳಲ್ಲಿ ರಚಿಸಬೇಕೆಂದು ಹೊರಟ ಕವಿ ಏಳು ಸರ್ಗಗಳನ್ನು ಮುಗಿಸುವುದರಲ್ಲಿಯೇ ಕಾಲವಾದನು. ಈ ಅಸಂಪೂರ್ಣಸ್ಥಿತಿಯಲ್ಲಿಯೂ ಅದು ಒಂದು ಉದ್ಘಕೃತಿಯೇ ಆಗಿದೆ. ಇದು ಪಾಂಡವರ ಸಂಬಂಧವಾದ ಕಥೆಯಾದರೂ ಕವಿಯು ಇದರಲ್ಲಿ ಭಾರತದ ಅನುಕ್ರಮ ವಾದ ಭೂತ ಭವಿಷ್ಯತ್ ಇತಿಹಾಸಗಳನ್ನು ವಿವರಿಸಲು ಹೊರಟಿದ್ದಾನೆ. ಪಾಂಡವರು ತಮ್ಮ ಸ್ವರ್ಗದ ದಾರಿಯಲ್ಲಿ ಒರಿಸ್ಸಾದೇಶದ ಪುರಿಯಲ್ಲಿಗೆ ಬರುತ್ತಾರೆ. ಅಲ್ಲಿ ಅವರಿಗೆ ಅಗ್ನಿಯ ದರ್ಶನವಾಗುತ್ತದೆ. ಅಗ್ನಿಯು ಅವರನ್ನು ಒರಿಸ್ಸಾ ದೇಶದ ವನಪ್ರದೇಶದ ಮಾರ್ಗವಾಗಿ ಮಧ್ಯಭಾರತ, ಸಹ್ಯಾದ್ರಿ ಮತ್ತು ಪಶ್ಚಿಮ ಘಟ್ಟಗಳಿಗೆ ಕರೆದೊಯ್ಯುತ್ತಾನೆ. ಅಲ್ಲಿ ಅಗ್ನಿಯು ಅವರಿಗೆ ಆರ್ಯಭೂಮಿಯು ಕಲಿಯುಗದ ಪ್ರಭಾವದಿಂದ ಯಾವ ದುರ್ಗತಿಗೆ ಬರುತ್ತದೆಂಬ ಭಾರತದ ಭವಿಷ್ಯತ್ ಚರಿತ್ರೆ ಯನ್ನು ಕಣ್ಣಿಗೆ ಕಟ್ಟಿದಂತೆ ವಿವರಿಸುತ್ತಾನೆ. ಕತೆಯು ಪೃಥ್ವೀರಾಜನು ಮಹಮ್ಮದ್ ಘೋರಿಯಿಂದ ಪರಾಜಿತನಾಗುವವರೆಗೆ ನಡೆದು ನಿಲ್ಲುತ್ತದೆ.

ಈ ಕಾಲದ ಸಾಹಿತಿಗಳಿಗೆ ಹೊಸದಾಗಿ ಪ್ರಾರಂಭವಾದ ಅನೇಕ ವೃತ್ತ ಪತ್ರಿಕೆಗಳು ವಿಶೇಷ ಪ್ರೋತ್ಸಾಹವನ್ನಿತ್ತವು. 'ಉತ್ಕಲ ಸಾಹಿತ್ಯ'ವೆಂಬ ಮಾಸಿಕದ ಸಂಪಾದಕನಾದ ವಿಶ್ವನಾಥಕರನು ಅನೇಕ ಹೊಸ ಲೇಖಕರಿಗೆ ತನ್ನ ಪತ್ರಿಕೆಯಲ್ಲಿ ಅವಕಾಶವನ್ನಿತ್ತು ಅವರ ಬರವಣಿಗೆಯು ಕುದುರುವಹಾಗೆ ಮಾಡಿದನು. ಆತನ ಪತ್ರಿಕೆಯಲ್ಲಿ ತಮ್ಮ ಲೇಖನವನ್ನು ಪ್ರಕಾಶಿಸುವುದು ಒಂದು ಗೌರವವೆಂದು ಅನೇಕರು ಭಾವಿಸಿದ್ದರು. ಆತನು ಅನೇಕ ಭಾವಪೂರ್ಣವಾದ ಸಾಮಾಜಿಕ, ರಾಜಕೀಯ ಸಾಹಿತ್ಯಕ ವಿಷಯವಾದ ಸಂಪಾದಕೀಯಗಳನ್ನು ರಚಿಸುವುದರ ಮೂಲಕ ಒರಿಯ ಗದ್ಯ ಶೈಲಿಯನ್ನು ಬಹು ಉಚ್ಚಮಟ್ಟಕ್ಕೇರಿಸಿದನು. ವಿಷಯದ ಸ್ಪಷ್ಟತೆಗೂ ಶೈಲಿಯ ಸರಳತೆಗೂ ಆತನ ಬರವಣಿಗೆ ಒಂದು ಮಾದರಿಯಾಗಿತ್ತು.

ಮತ್ತೊಂದು ಜನಪ್ರಿಯವಾದ ಮಾಸಪತ್ರಿಕೆ ವ್ರಜಸುಂದರದಾಸನಿಂದ ಸಂಪಾದಿತವಾಗುತ್ತಿದ್ದ 'ಮುಕುರ.' ವ್ರಜಸುಂದರನ ಬರವಣಿಗೆ ಅಲ್ಪವಾದರೂ ಆತನ ಅಭಿಪ್ರಾಯ ನಿಷ್ಪಕ್ಷಪಾತವಾದುದು. ಮೇಲಿನ ಇಬ್ಬರು ಸಂಪಾದಕರೂ ಆಕಾಲದ ವಿಮರ್ಶಕರಲ್ಲಿ ಅಗ್ರಸ್ಥಾನವನ್ನಲಂಕರಿಸಿದ್ದರು.

ಕಟಕ್ಕಿನಲ್ಲಿ ಸ್ಥಾಪಿತವಾದ 'ಉತ್ಕಲ ಸಾಹಿತ್ಯ ಸಮಾಜ'ದಂತಹ ಸಾಹಿತ್ಯ ಸಂಸ್ಥೆಗಳು ಪ್ರಾರಂಭವಾಗಿ ಬರಹಗಾರರಿಗೆ ವಿಶೇಷ ಪ್ರೋತ್ಸಾಹವನ್ನುಂಟು ಮಾಡಿದವು. ಮಧುಸೂದನರಾಯ್ ಉತ್ಕಲ ಸಾಹಿತ್ಯ ಸಮಾಜದ ಪ್ರಥಮ ಅಧ್ಯಕ್ಷ. ಅದಕ್ಕೆ ಒರಿಸ್ಸಾ ದೇಶದ ಅನೇಕ ಶ್ರೀಮಂತರು ಕೊಡುಗಯ್ಯಿಂದ ಸಹಾಯ ಮಾಡಿದರು.

ಆಧುನಿಕ ಒರಿಯ ಸಾಹಿತ್ಯದ ತ್ರಿಮೂರ್ತಿಗಳಾದ ಫಕೀರ್ ಮೋಹನ್, ರಾಧಾನಾಥ ಮತ್ತು ಮಧುಸೂದನರ ಮಾರ್ಗವನ್ನನುಸರಿಸಿ ಅನೇಕ ತರುಣ ಕವಿಗಳು, ಕಾದಂಬರಿಕಾರರು, ಪ್ರಬಂಧಲೇಖಕರು, ಕತೆಗಾರರೂ ಕೆಲಸಮಾಡಿದರು. ಹಿಂದಿನ ಸಾಂಪ್ರದಾಯಿಕ ಕೃತಿಗಳ ಸ್ಥಾನದಲ್ಲಿ ಅನೇಕ ಲಘುಕವನಗಳು, ಭಾವ ಗೀತೆಗಳು, ಜನಪದ ಗೀತೆಗಳು, ಅಷ್ಟಷಟ್ಪದಿಗಳೂ ರಚಿತವಾಗಲು ಮೊದಲಾದುವು. ಗಂಗಾಧರ ಮೆಹರ್ ಮತ್ತು ಚಿಂತಾಮಣಿ ಮಹಂತಿ ಇವರೇ ಸಾಂಪ್ರದಾಯಿಕ ಕವನಗಳನ್ನು ರಚಿಸಿದವರಲ್ಲಿ ಕೊನೆಯವರು. ಗಂಗಾಧರನು ಹುಟ್ಟುಕವಿ. ಆತನಿಗೆ ಯಾವ ವಿಶೇಷವಾದ ವಿದ್ಯಾಭ್ಯಾಸವೂ ಆಗಲಿಲ್ಲ. ಆತನ ಕೃತಿಗಳಲ್ಲೆಲ್ಲ ಸೀತಾಪಹರಣ ವಿಷಯಕವಾದ 'ತಪಸ್ವಿನಿ' ಎಂಬುದೇ ಉತ್ತಮೋತ್ತಮವಾದುದು. ಇಲ್ಲಿಯ ಸೀತೆಯಪಾತ್ರ ಬಹು ಆದರ್ಶವೂ ಆಕರ್ಷಣೀಯವೂ ಆಗಿದೆ. ಕಾಳಿದಾಸನ 'ಶಾಕುಂತಲ ನಾಟಕ'ದ ವಸ್ತುವಿನ ಆಧಾರದ ಮೇಲೆ ರಚಿತವಾಗಿರುವ 'ಪ್ರಣಯವಲ್ಲರಿ' ಒರಿಯ ಸಾಹಿತ್ಯದಲ್ಲಿ ಗಣ್ಯಸ್ಥಾನವನ್ನಾಕ್ರಮಿಸಿದೆ. ಗಂಗಾಧರನ ವಿದ್ಯಾಭ್ಯಾಸವು ವಿಶೇಷವಾಗಿಲ್ಲದುದರಿಂದ ಅವನ ದರ್ಶನದ ಕ್ಷೇತ್ರವೂ ಮಿತ

ವಾಗಿಯೇ ಇತ್ತು. ಆದರೂ ಅವನು ತನ್ನ ನಿರ್ದಿಷ್ಟ ಪರಿಸರದಲ್ಲಿ ಪ್ರಾಚೀನವಾದ ಪೌರಾಣಿಕ ವಸ್ತುವಿಗೆ ಒಂದು ಐಂದ್ರಜಾಲಿಕ ಶಕ್ತಿಯನ್ನೂ, ಬಳಕೆಯ ಛಂದಸ್ಸಿಗೆ ಎಂದೂ ಇಲ್ಲದ ನಾದಮಯತೆಯನ್ನೂ, ಚಿರಪರಿಚಿತವಾದ ಪಾತ್ರಗಳ ಒಂದು ಹೊಸ ದರ್ಶನವನ್ನೂ ಉಂಟುಮಾಡಿ ಒರಿಯ ಸಾಹಿತ್ಯಕ್ಕೆ ಹೊಸ ಚೈತನ್ಯವನ್ನುಂಟು ಮಾಡಿದನು. ಮೆಹರಿನಿಗೆ ಕಾವ್ಯವು ಸಜೀವವಾದ ವರ್ಣಮಯವಾದ ಅದ್ಭುತವಾದ ಕಲೆ. ಅವನ ಕವನಗಳೆಲ್ಲ ವರ್ಣಪೂರಿತವಾದ ಚಿತ್ರಪಟದ ಸುರಳಿಯಿದ್ದಂತೆ ಇದೆ. ಕ್ಷೇತ್ರ ಕಿರಿದಾದರೂ ಅಷ್ಟರಲ್ಲಿಯೇ ಸಣ್ಣ ಸಣ್ಣ ಸ್ವರ್ಗಗಳನ್ನೇ ನಿರ್ಮಿಸಿದ್ದಾನೆ. ಅವನ ಅನೇಕ ದ್ವಿಪದಿಗಳೂ ಚೌಪದಿಗಳೂ ಒರಿಯದ ಮನೆಮಾತಾಗಿಬಿಟ್ಟಿವೆ.

ಚಿಂತಾಮಣಿಯು ರಾಧಾನಾಥನ ಮಾದರಿಯಲ್ಲಿ ಅಸಂಖ್ಯಾತವಾದ ಕವನಗಳನ್ನೂ ಗಾಂಭೀರ್ಯಕ್ಕೆ ಪ್ರಸಿದ್ಧವಾದ ಕೆಲವು ಕತೆಗಳನ್ನೂ ರಚಿಸಿದನು. ಆದರೆ ಅವನ ಕೃತಿಕರ್ಮದ ಕ್ಷೇತ್ರ ಬಹು ವಿಸ್ತಾರವಾದುದರಿಂದ ಆತನು ಒಂದೇ ವಿಧವಾದ ಮಟ್ಟವನ್ನು ಎಲ್ಲದರಲ್ಲಿಯೂ ತರಲು ಸಾಧ್ಯವಾಗಲಿಲ್ಲ.

ನೀರುಕುಡಿದಂತೆ ಗದ್ಯರಚನೆ ಮಾಡುತ್ತಿದ್ದವನು ಗೋಪಾಲಚಂದ್ರ ಪ್ರಹರಾಜ್. ಅವನ ಅನೇಕ ಲೇಖನಗಳು ವೃತ್ತಪತ್ರಿಕೆಗಳ ಲೇಖನಗಳಂತಿರುತ್ತಿದ್ದವು. ಆತನು ಶ್ರೇಷ್ಠವರ್ಗದ ವಿಮರ್ಶಕ ಮತ್ತು ಹಾಸ್ಯಗಾರ. ಆತನ ಪದಪ್ರಯೋಗ ಬಹು ಮೋಹಕವಾಗಿರುವುದಲ್ಲದೆ ಆತನ ಹಾಸ್ಯ ನಗದವರನ್ನೂ ನಗಿಸುತ್ತದೆ. 'ಭಗವತ್ ತಂಗಿರೇ ಸಂಧ್ಯಾ' (ಹಳ್ಳಿಯ ಕೂಟದ ಸಂಜೆ) ಮತ್ತು 'ನಾನಾಂಕ ಬಸ್ತನಿ' (ಅಪ್ಪನ ದಫ್ತರ) ಎಂಬುವು ಆತನ ಗ್ರಂಥಗಳು. ಆತನು ತನ್ನ ಕೊನೆಯ ಕಾಲದಲ್ಲಿ 'ಪೂರ್ಣಚಂದ್ರ ಒರಿಯ ಭಾಷಾಕೋಶ' ಎಂಬ ಚತುರ್ಭಾಷಾತ್ಮಕ ನಿಘಂಟನ್ನು ಏಳು ಸಂಪುಟಗಳಲ್ಲಿ ರಚಿಸಿದನು. ಈತನ ಸಮಕಾಲೀನ ಶಶಿಭೂಷಣರಾಯ್. ಈತನು ಧರ್ಮ, ಇತಿಹಾಸ, ವಿಜ್ಞಾನ ವಿಷಯಕವಾಗಿ ಅನೇಕ ಗದ್ಯ ಗ್ರಂಥಗಳನ್ನು ರಚಿಸಿದ್ದಾನೆ. ಈ ಕಾಲದ ಸ್ವತಂತ್ರ ಗ್ರಂಥಕರ್ತರೆಂದರೆ ಜಲಂಧರ ದೇವ್ ಮತ್ತು ಮೋಹಿನೀ ಮೋಹನ ಸೇನಾಪತಿ (ಫಕೀರ ಮೋಹನನ ಪುತ್ರ). ಇವರು ಪ್ರಾಚೀನ ಸಾಂಪ್ರದಾಯಿಕ ಗ್ರಂಥರಾಶಿಗಳನ್ನೆಲ್ಲ ಆಧುನಿಕ ದೃಷ್ಟಿಕೋನಗಳಿಂದ ವಿಚಾರ ಮಾಡಿದ್ದಾರೆ.

ನಂದಕಿಶೋರಬಾಲನ ಕವನಗಳು ಒರಿಯ ಸಾಹಿತ್ಯದಲ್ಲಿ ಒಂದು ಗಡಿಗಲ್ಲು. ಆತನು ಹಿಂದಿನ ಸಾಂಪ್ರದಾಯಿಕ ಮಾರ್ಗವನ್ನು ತ್ಯಜಿಸಿ ಸಾಮಾನ್ಯ ವಿಷಯಗಳ ಮೇಲೆಯೂ ಸುಲಭವೂ ಸರಳವೂ ಆದ ಶೈಲಿಯಲ್ಲಿ ಉತ್ತಮ ಕಾವ್ಯಗಳನ್ನು ರಚಿಸಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟನು. ದೇಶೀಯ ಜನರಿಗಾಗಿಯೇ ಗ್ರಂಥರಚನೆ ಮಾಡಿದವರಲ್ಲಿ ಇವನೇ ಮೊದಲನೆಯವನು. ಈತನು ಜಾನಪದ ಗೀತೆಗಳನ್ನೂ ಜೋಗುಳಗಳನ್ನೂ ಶೇಖರಿಸಿ ಅವುಗಳ ಆಧಾರದ ಮೇಲೆ ತನ್ನ ಅದ್ಭುತವಾದ ಪ್ರತಿಭಾಕುಂಚದಿಂದ ಚಿತ್ತಾಕರ್ಷಕವಾದ ಕವನ ಚಿತ್ರಗಳನ್ನು ರಚಿಸಿದ್ದಾನೆ.

ನಂದಕಿಶೋರಬಾಲನ ಸಮಕಾಲೀನನಾದ ಗೋಪಬಂಧುದಾಸನು ಸಾಹಿತ್ಯ ವನ್ನು ರಾಷ್ಟ್ರೀಯ ಕಾರ್ಯಕ್ಕೆ ಉಪಯೋಗಿಸಿಕೊಂಡನು. ಬ್ರಿಟಿಷರು ಒರಿಸ್ಸಾ ದೇಶವನ್ನು ಆಕ್ರಮಿಸಿಕೊಂಡ ಒಂದುನೂರು ವರ್ಷಕ್ಕೆ ಸರಿಯಾಗಿ ೧೯೦೩ ರಲ್ಲಿ ಛಿದ್ರವಾಗಿದ್ದ ಒರಿಸ್ಸಾವನ್ನು ಒಟ್ಟುಗೂಡಿಸಿ ಪುನಸ್ಸಂಘಟಿಸುವುದಕ್ಕಾಗಿ 'ಉತ್ಕಲ ಸಮ್ಮಿಲಿನಿ' ಎಂಬ ಮಹಾಸಭೆಯು ಪ್ರಾರಂಭವಾಯಿತು. ಇದರ ಆಶ್ರಯದಲ್ಲಿ ಅನೇಕ ಉದ್ದಾಮ ಪಂಡಿತರು ಕಾರ್ಯಸಾಧನೆಗೆ ಆತ್ಮಾರ್ಪಣೆ ಮಾಡಿದರು. ಅವರ ನಾಯಕ ಗೋಪ ಬಂಧುದಾಸ್. ಸಾಹಿತ್ಯ ಮತ್ತು ಸಂಸ್ಕೃತಿಯ ಪುನರುದ್ಧಾರದ ಮೂಲಕ ರಾಷ್ಟ್ರೀಯ ಜಾಗೃತಿಯನ್ನುಂಟುಮಾಡುವುದು ಈ ತಂಡದವರ ಪ್ರಧಾನ ಗುರಿಯಾಗಿತ್ತು. ಅದಕ್ಕಾಗಿ ಗೋಪಬಂಧುವು ಪುರಿಯ ಸಮೀಪದಲ್ಲಿರುವ ಸಖೀಗೋಪಾಲವೆಂಬ ಸ್ಥಳದಲ್ಲಿ ಒಂದು 'ವನವಿಹಾರ' (ವಿದ್ಯಾಸಂಸ್ಥೆ)ವನ್ನು ಸ್ಥಾಪಿಸಿದನು. (ಇದು ೧೨ ವರ್ಷಮಾತ್ರ ಬಾಳಿ ಅಲ್ಪಾಯು ವಾಗಿ ತೀರಿಕೊಂಡಿತು.) ಪಂಡಿತವರ್ಯರಾದ ನೀಲಕಂಠದಾಸ್, ಗೋದಾವರೀ ಶಮಿಶ್ರ, ಕೃಪಾಸಿಂಧು ಮಿಶ್ರ ಮೊದಲಾದವರು ಯಾವ ಪ್ರತಿಫಲಾಕ್ಷೆಯೂ ಇಲ್ಲದೆ ಇಲ್ಲಿ ದುಡಿದರು. ತಮ್ಮ ಕಾರ್ಯಸಾಧನೆಗಾಗಿ 'ಸತ್ಯವಾದಿ'ಯೆಂಬ ಮಾಸಿಕವನ್ನೂ 'ಸಮಾಜ'ವೆಂಬ ವಾರಪತ್ರಿಕೆಯನ್ನು ಸ್ಥಾಪಿಸಿ ಅದರ ಮೂಲಕ ಪ್ರಾಚೀನ ಸಂಸ್ಕೃತಿಯ ಸಾರವತ್ತಾದ ಭಾಗವನ್ನೆಲ್ಲಾ ಜನರಿಗೆ ತಿಳಿಯುವ ಸರಳ ಭಾಷೆಯಲ್ಲಿ ಪ್ರಚಾರ ಮಾಡಿದರು. ಈ ವೇಳೆಗೆ ಮಹಾತ್ಮಾ ಗಾಂಧೀಯವರ ಭಾರತದ ರಾಷ್ಟ್ರೀಯ ಚಳುವಳಿಯ ಚಂಡಮಾರುತವು ಒರಿಸ್ಸಾ ದೇಶದಮೇಲೂ ಬೀಸಿ ಜನಗಳ ದೃಷ್ಟಿ ಪಥವನ್ನು ಬದಲಾಯಿಸಿತು. ಅಖಿಲ ಭಾರತದ ಸ್ವಾತಂತ್ರ್ಯದ ದೃಷ್ಟಿಯಿಂದ ಒರಿಸ್ಸಾದ ಏಕೀಕರಣ ಕಾರ್ಯ ಕಿರಿದಾಗಿ ಕಂಡಿತು. ಸತ್ಯವಾದಿ ಸಂಕುಲವು ತಮ್ಮ ದೃಷ್ಟಿಯನ್ನು ಸ್ವರಾಜ್ಯ ಸಾಧನೆಯ ಕಡೆಗೆ ಹರಿಸಿತು. ನಾಯಕನಾದ ಗೋಪಬಂಧುವಿಗೆ ಸ್ವರಾಜ್ಯ ಸಾಧನೆಯು ಉಳಿದ ಎಲ್ಲ ಕಾರ್ಯಕ್ಕಿಂತಲೂ ಪವಿತ್ರ ವೆಂಬುದಾಗಿ ತೋರಿಬಂದಿತು. ಆತನು ಅಪೇಕ್ಷಿಸದಿದ್ದರೂ ಆತನಿಗೆ ನಾಯ ಕತ್ವವು ಪ್ರಾಪ್ತವಾಯಿತು. ಕರ್ಮಯೋಗವು ಆತನ ಪ್ರಧಾನಸಾಧನ. ಆತನಿಗೆ ಭಾರತಮಾತೆಯೇ ವಿಶ್ವಮಾತೆ. ಅವಳ ಸ್ವಾತಂತ್ರ್ಯಸಾಧನೆ ಆದ್ಯಕರ್ತವ್ಯ. ಅದಕ್ಕಾಗಿ ಅವನು ಅನೇಕ ಕವನಗಳನ್ನು ಒರಿಯ ಭಾಷೆಯಲ್ಲಿ ರಚಿಸಿದನು. ಅವುಗಳು ಉಚ್ಚದೇಶಭಕ್ತಿಯಿಂದ ಕೂಡಿವೆ. 'ಧರ್ಮಪದ' ವೆಂಬುದು ಆತನ ಕವನಗಳಲ್ಲಿ ಶ್ರೇಷ್ಠವಾದುದು. ಇದರ ವಸ್ತುವು ಸ್ವಾರಸ್ಯವೂ ಹೃದಯವಿದ್ರಾವಕವೂ ಆಗಿದೆ. ಕೊನಾರ್ಕ ದೇವಾಲಯ ನಿರ್ಮಾಣಕ್ಕೆ ಸಂಬಂಧಪಟ್ಟದು ಅದರ ಕತೆ. 'ಧರ್ಮಪದ' ವೆಂಬುದು ಒಬ್ಬ ಶಿಲ್ಪಿ ಬಾಲಕನ ಹೆಸರು. ಆತನು ಇನ್ನೂ ಗರ್ಭಸ್ಥನಾಗಿರುವಾಗಲೇ ಆತನ ತಂದೆಯು ಕೊನಾರ್ಕದಲ್ಲಿ ದೇವಾಲಯದ ನಿರ್ಮಾಣಕ್ಕೆ ಹೊರಟು ಹೋಗಿ ಹನ್ನೆರಡು ವರ್ಷವಾದರೂ ಹಿಂತಿರುಗಲೇ ಇಲ್ಲ.

ಹನ್ನೆರಡು ವರ್ಷವಾಗುತ್ತಲೆ ಧರ್ಮಪದನು ತಂದೆಯನ್ನು ಹುಡುಕಿ ತರುವುದಾಗಿ ಹೇಳಿ ತಾಯಿಯ ಅಪ್ಪಣೆಯನ್ನು ಪಡೆದು ಹೊರಟು ತಂದೆಯಿರುವಲ್ಲಿಗೆ ಹೋಗಿ ಸೇರಿದನು. ಅದಕ್ಕೆ ಪೂರ್ವದಿನವೇ ಅಲ್ಲಿಯ ರಾಜನು ಧರ್ಮಪದನ ತಂದೆಯೂ ಇತರ ಹನ್ನೆರಡು ಸಾವಿರ ಶಿಲ್ಪಿಗಳೂ ಸೇರಿ ಮಾರನೆಯ ದಿನದೊಳಗೆ ಆ ದೇವಾಲಯದ ಕಲಶ ಸ್ಥಾಪನೆಮಾಡಿ ತೀರಬೇಕೆಂದೂ ಇಲ್ಲವಾದರೆ ಅವರೆಲ್ಲರನ್ನೂ ಏಕ ಕಾಲದಲ್ಲಿ ಘಾಸಿಗೇರಿಸುವನೆಂದೂ ಆಜ್ಞೆಮಾಡಿದನು. ಆದರೆ ಅನೇಕ ತಿಂಗಳು ಗಳಿಂದ ಪ್ರಯತ್ನಪಟ್ಟರೂ ಆ ಕೆಲಸ ಅವರಿಂದ ಸಾಧ್ಯವಾಗಿರಲಿಲ್ಲ. ಈ ವಿಷಯ ಧರ್ಮಪದನಿಗೆ ಗೊತ್ತಾಯಿತು. ತಕ್ಷಣ ಅವನು ಆ ಸ್ಥಳಕ್ಕೆ ಹೋಗಿ ನೋಡಿದನು. ತಾನು ಕಲಶ ಸ್ಥಾಪನೆಮಾಡಿ ಪೂರ್ಣಗೊಳಿಸುವುದಾಗಿ ನಿರ್ಧಾರಮಾಡಿಕೊಂಡನು. ತನ್ನ ಅದ್ಭುತ ಶಕ್ತಿಯಿಂದ ಸಾಧಿಸಿಯೇ ಬಿಟ್ಟನು. ಆದರೆ ಈ ವಿಷಯವನ್ನು ರಹಸ್ಯವನ್ನಾಗಿ ಉಳಿಸಿ ೧೨೦೦೦ ಜನಗಳ ಪ್ರಾಣಸಂರಕ್ಷಣೆಗಾಗಿ ತಾನು ಪಕ್ಕದಲ್ಲಿದ್ದ ಚಂದ್ರಭಾಗಾನದಿಯಲ್ಲಿ ಮುಳುಗಿಕೊಂಡನು. ಈ ಕತೆಯು ಗೋಪಬಂಧುವಿನಿಂದ ಬಹು ಚಮತ್ಕಾರವಾಗಿ ವರ್ಣಿತವಾಗಿದೆ.

ಗೋಪಬಂಧುವು ತನ್ನ ವಿಷಯಗಳನ್ನೆಲ್ಲ ಸುತ್ತುಮುತ್ತಲಿನ ಜನಗಳ ನಿತ್ಯ ಜೀವನದಿಂದ ಆರಿಸಿಕೊಂಡು ಒರಿಯ ಸಾಹಿತ್ಯಕ್ಕೆ ಒಂದು ಹೊಸ ರೂಪವನ್ನು ಕೊಟ್ಟನು. ಅವನ ಅಭಿಪ್ರಾಯದ ಸರಳತೆಯೂ ಶೈಲಿಯ ಸೌಲಭ್ಯವೂ ವಾಚಕರ ನೇಕರನ್ನು ಮುಗ್ಧಗೊಳಿಸಿತು. ಆತ ಪೂರ್ಣ ಆಶಾವಾದಿ. ಆತ ಎಂದೂ ಕಲೆ ಗೋಸ್ಕರ ಕಲೆ ಎಂಬ ಕನಸುಗಂಡವನಲ್ಲ. ಆತನಿಗೆ ಎಲ್ಲಕ್ಕೂ ಒಂದು ನಿಷ್ಕೃಷ್ಟ ಫಲವುಂಟು. ಸಾಹಿತ್ಯವು ಅವನ ದೃಷ್ಟಿಯಲ್ಲಿ ನಡತೆಯನ್ನು ನಿರೂಪಿಸಲು ಒಂದು ಸಾಧನ. ಅಭಿಪ್ರಾಯವನ್ನು ಬೆಳೆಸುವುದಕ್ಕೆ ಪ್ರೇರಕ. ಆತನ ಶಿಷ್ಯರಲ್ಲನೇಕರು ಸ್ವರಾಜ್ಯ ಸ್ಥಾಪನೆ ಕಾರ್ಯದಲ್ಲಿ ಕಾರಾಗೃಹವಾಸವನ್ನನುಭವಿಸಿದರು. ಹಾಗೆಯೆ ಅನೇಕರು ತಮ್ಮ ಕವನ, ನಾಟಕ, ಕಾದಂಬರಿ, ಆತ್ಮಕತೆಗಳಿಂದ ಸಾಹಿತ್ಯವನ್ನು ಪರಿಪೂರ್ಣವನ್ನಾಗಿ ಮಾಡಿದರು.

ವೃದ್ಧನಾದ ಪಂಡಿತ ನೀಲಕಂಠದಾಸನು ಒರಿಯ ಸಾಹಿತ್ಯದ ವೃದ್ಧಪಿತಾಮಹ. ಉದ್ದಾಮ ಸಂಸ್ಕೃತ ಪಂಡಿತನಾದ ಅವನು ತನ್ನ 'ಕೊನಾರ್ಕ' ಎಂಬ ಕವನದಲ್ಲಿ ಆ ದೇವಾಲಯದ ವೈಭವವನ್ನು ಮುಗಿಲು ಮುಟ್ಟಿಸಿದ್ದಾನೆ. ಇದರಲ್ಲಿ ಆತನ ಅದ್ಭುತ ಪ್ರತಿಭೆ ಪ್ರದರ್ಶಿತವಾಗಿದೆ. ಆತನ ಪದ್ಯಕ್ಕಿಂತ ಗದ್ಯವು ಹೆಚ್ಚು ಶಕ್ತಿಯುಕ್ತವಾಗಿದೆ. ಅವನಿಗೆ ಇತಿಹಾಸದಲ್ಲಿಯೂ ಸಂಶೋಧನೆಯಲ್ಲಿಯೂ ವಿಶೇಷ ಆಸಕ್ತಿ. ಒರಿಸ್ಸಾ ದೇಶದ ಸಾಂಸ್ಕೃತಿಕ ಬೆಳವಣಿಗೆಯನ್ನು ನಿರೂಪಿಸುವ 'ಒರಿಯ ಸಾಹಿತ್ಯದ ಕ್ರಮಪರಿಣಾಮ' ಎಂಬ ಆತನ ಗ್ರಂಥವು ಆತನ ಸ್ವತಂತ್ರ ಯೋಜನಾ ಶಕ್ತಿಯನ್ನು ಪ್ರಕಟಿಸುತ್ತದೆ. ಆತನು ಕೆಲಕಾಲ 'ನವಭಾರತ'ವೆಂಬ ಮಾಸಪತ್ರಿಕೆಯನ್ನು ಬಹು ಶ್ರೇಷ್ಠರೀತಿಯಲ್ಲಿ ನಡಸಿದನು. ಆದರೆ ಅದು ಬಹುಕಾಲ ನಡೆಯಲಿಲ್ಲ.

ಪಂಡಿತ ಗೋದಾವರೀಶಮಿಶ್ರನು ಕವಿಯೂ ಅಹುದು, ನಾಟಕಕಾರನೂ ಅಹುದು. ಆತನ 'ಅಲೇಖಿಕಾ' ಮತ್ತು 'ಕಿಸಲಯ' ಎಂಬ ಕವನ ಸಂಗ್ರಹಗಳು ಜನಪ್ರಿಯವಾಗಿವೆ. 'ಪುರುಷೋತ್ತಮದೇವ್' ಮತ್ತು 'ಮುಕುಂದದೇವ್' ಎಂಬೆರಡೂ ಆತನ ಐತಿಹಾಸಿಕ ನಾಟಕಗಳು. ಪ್ರಾಚೀನ ಉತ್ಕಲದಲ್ಲಿ ಸುಪ್ರಸಿದ್ಧರಾದ ಇಬ್ಬರು ರಾಜರು ಇವುಗಳ ನಾಯಕರು. ನಾಟಕತಂತ್ರದ ದೃಷ್ಟಿಯಿಂದ ಇವು ಉನ್ನತ ಮಟ್ಟಕ್ಕೇರದಿದ್ದರೂ ಸಾಹಿತ್ಯದೃಷ್ಟಿಯಿಂದ ಯೋಗ್ಯಸ್ಥಾನವನ್ನು ಗಳಿಸಿವೆ. 'ಕೊನಾರ್ಕ' ಮತ್ತು 'ಬಾರಬತಿ' ಎಂಬ ತನ್ನೆರಡು ಗ್ರಂಥಗಳಲ್ಲಿ ಪಂಡಿತ ಕೃಪಾಸಿಂಧುಮಿಶ್ರನು ಉತ್ತಮ ಐತಿಹಾಸಿಕ ಸಾಹಿತ್ಯವನ್ನು ನಿರ್ಮಿಸಿದ್ದಾನೆ.

ಲಕ್ಷ್ಮೀಕಾಂತ ಮಹಪಾತ್ರನು ಉತ್ತಮ ಗದ್ಯಪದ್ಯ ಲೇಖಕ. ಒರಿಯ ಭಾಷೆಯ ಕೆಲವು ಉತ್ತಮ ದೇಶಪ್ರೇಮ, ಭಕ್ತಿ, ಮತ್ತು ಪ್ರಣಯಗೀತೆಗಳು ಅವನಿಂದ ರಚಿತವಾಗಿವೆ. ಅಣಕುವಾಡುಗಳ ರಚನೆಯಲ್ಲಿಯೂ ವಿಡಂಬನದಲ್ಲಿಯೂ ಅವನನ್ನು ಮಿೂರಿಸಿದವರು ಅತಿ ವಿರಳ. ಶ್ರೀ ಪದ್ಮಚರಣಪಟ್ಟನಾಯಕ್ ಎಂಬುವನು 'ಘೌಲಿಪಹರ್' ಎಂಬ ಕವನದಲ್ಲಿ ಆ ಬೆಟ್ಟದ ರಮ್ಯ ವರ್ಣನೆಯನ್ನು ತಂದಿದ್ದಾನೆ. ಇಲ್ಲಿಯೇ ಅಶೋಕಚಕ್ರವರ್ತಿಯು ಕಳಿಂಗ ದೇಶದ ಯಾತ್ರೆಯಿಂದ ವಿಮುಖನಾದುದು ಮತ್ತು ಬೌದ್ಧ ಧರ್ಮವನ್ನು ಸ್ವೀಕರಿಸಿದುದು. ಈ ಬೆಟ್ಟದಲ್ಲಿ ಈಗಲೂ ಅಶೋಕನ ಶಾಸನವಿದೆ. ಅವನ 'ರಾಜಪುಟಾಣದ ಪೃಥ್ವೀರಾಜನ ಪತ್ರಗಳು' ಎಂಬ ಕವನದಲ್ಲಿ ಜೀವನ ಮತ್ತು ಪ್ರಣಯವಿಷಯಕವಾದ ಉದಾತ್ತಸೂಕ್ತಿಗಳು ಉಕ್ತವಾಗಿವೆ.

ಈ ಶತಮಾನದ ಸ್ತ್ರೀಲೇಖಕಿಯರಲ್ಲಿ ಗದ್ಯಪದ್ಯಗಳೆರಡರ ದೃಷ್ಟಿಯಿಂದಲೂ ಕುಂತಲಕುಮಾರಿಯು ಅಗ್ರೇಸರಳು. ಆಕೆಯು 'ಅಂಜಲಿ' ಮತ್ತು 'ಅರ್ಚನಾ' ಎಂಬ ಎರಡು ಭಕ್ತಿಗೀತಸಂಗ್ರಹಗಳನ್ನು ರಚಿಸಿದಮೇಲೆ ಅನೇಕ ಕಾದಂಬರಿಗಳನ್ನೂ ರಚಿಸಿದಳು. ಆದರೆ ಏಳನೆಯ ವಯಸ್ಸಿನಲ್ಲಿಯೇ ತೀರಿಕೊಂಡಳು. ಅವಳ 'ಅಶ್ವಿನಾ' ಎಂಬ ಕವನಸಂಗ್ರಹವು ಅಸಹಕಾರ ಚಳುವಳಿಯ ಕಾಲದಲ್ಲಿ ಅದರಲ್ಲಿರುವ ಉದ್ರೇಕಪೂರ್ಣವಾದ ಗೀತೆಗಳಿಗಾಗಿ ಬಹಿಷ್ಕೃತವಾಗಿತ್ತು. ಶ್ರೀಮತಿ ವಿದ್ಯುತ್ಪ್ರಭಾದೇವಿಯು ಜೀವಂತಳಾದ ಗಣ್ಯಲೇಖಕಿ.

ಈ ಕಾಲದಲ್ಲಿ ಒರಿಯ ನಾಟಕಸಾಹಿತ್ಯವೂ ಯಥೋಚಿತವಾಗಿ ಬೆಳೆದು ಬಂದಿದೆ. ಆರಂಭಕಾಲದಲ್ಲಿ ಅದು ವಂಗರು ಒರಿಸ್ಸಾ ದೇಶದಲ್ಲಿ ಪ್ರದರ್ಶಿಸುತ್ತಿದ್ದ ವಂಗೀಯ ನಾಟಕಗಳ ಪ್ರತಿಸ್ಪರ್ಧಿಯಾಗಿ ಉದಯವಾಯಿತು. ರಾಮಶಂಕರರಾಯ್ ಕಾಮಪಾಲಮಿಶ್ರ, ವಿಕಾರಿಚರಣಪಟ್ಟನಾಯಕ ಮತ್ತು ಗೋವಿಂದ ಸೂರದೇವ್ ಮೊದಲಾದವರು ಒರಿಯ ನಾಟಕಗಳನ್ನು ಮನರಂಜಕ ಸಾಮಗ್ರಿಯೇ ಅಲ್ಲದೆ ಸಾಮಾಜಿಕ ಪರಿಷ್ಕರಣಕ್ಕೂ ರಾಷ್ಟ್ರೀಯ ಪುನರುದ್ಧಾರಕ್ಕೂ ಸಾಧನವನ್ನಾಗಿ ಉಪಯೋಗಿಸಿಕೊಂಡು ಅವುಗಳನ್ನು ಜನಗಳ ಮೇಲೆ ವಿಶೇಷ ಪ್ರಭಾವಶಾಲಿಯನ್ನಾಗಿ

ಮಾಡಿದರು. ನೆರೆಯವರಾದ ವಂಗರು ತಮ್ಮ ಐತಿಹಾಸಿಕ ನಾಟಕಗಳಿಗೆ ವಸ್ತುವನ್ನು ಮಹಾರಾಷ್ಟ್ರ ಮತ್ತು ರಾಜಪುತ್ರಸ್ಥಾನದ ಚರಿತ್ರೆಗಳಿಂದ ಆರಿಸಿಕೊಂಡರೆ ಒರಿಯರು ಅತ್ಯಂತ ದೇಶಪ್ರೇಮದಿಂದ ಕೂಡಿ ತಮ್ಮ ಹಿಂದಿನ ರಾಜರುಗಳಾದ ಖಾರವೇಲ, ಕಪಿಲೇಂದ್ರ, ಪುರುಷೋತ್ತಮ, ಅನಂಗಭೀಮ ಮೊದಲಾದವರ ಜೀವನದ ಆಧಾರದ ಮೇಲೆಯೇ ತಮ್ಮ ನಾಟಕಗಳನ್ನು ರಚಿಸಿದರು. ಆರಂಭಕಾಲದಲ್ಲೇನೋ ರಾಧಾ ಕೃಷ್ಣರ ಪ್ರಣಯ ವಿಷಯಕವಾದ ಪೌರಾಣಿಕ ರೂಪವನ್ನು ತಾಳಿದ ಈ ಸಾಹಿತ್ಯ ರೂಪ ಇತ್ತೀಚೆಗೆ ವಿಶೇಷವಾಗಿ ಐತಿಹಾಸಿಕ ಮತ್ತು ಸಾಮಾಜಿಕ ರೂಪವನ್ನು ತಾಳಿದೆ. ಈಚೆಗೆ ಅಶ್ವಿನೀಕುಮಾರ್ ಮತ್ತು ಕಲಿಚರಣ್ ಈ ಇರ್ವರು ಉತ್ತಮ ನಾಟಕಕಾರರೆಂದು ಪ್ರಸಿದ್ಧರಾಗಿದ್ದಾರೆ. ಅವರಿಗೂ ರಂಗಸ್ಥಳಕ್ಕೂ ಪ್ರತ್ಯಕ್ಷ ಸಂಬಂಧವಿದೆ. ಕಟಕ್ಕಿನಲ್ಲಿ ಎರಡು ನಾಟಕ ಸಂಸ್ಥೆಗಳು ಸ್ಥಾಪಿತವಾಗಿವೆ. ಒಂದು ದೇಶದಲ್ಲೆಲ್ಲಾ ಸಂಚಾರ ಮಾಡಲು ತೊಡಗಿದೆ. ಈ ಇಬ್ಬರು ನಾಯಕರನ್ನು ಅನುಸರಿಸಿ ಅನೇಕರು ತಮ್ಮ ಉಚ್ಚ ನಾಟಕ ತಂತ್ರಗಳಿಂದಲೂ ಪ್ರಭಾವಶಾಲಿಗಳಾದ ಪಾತ್ರಗಳಿಂದಲೂ ಕರುಳು ಕತ್ತರಿಸುವ ಹಾಸ್ಯವಸ್ತುಗಳಿಂದಲೂ ಒರಿಯ ನಾಟಕ ವನ್ನು ಜನಾಕರ್ಷಕವನ್ನಾಗಿ ಮಾಡಿದ್ದಾರೆ. ಆದರೂ ಸಾಹಿತ್ಯದೃಷ್ಟಿಯಿಂದ ಉತ್ತಮವಾದುದೆಲ್ಲ ರಂಗಸ್ಥಳದೃಷ್ಟಿಯಿಂದಲೂ ಉತ್ತಮವಾಗಿವೆಯೆಂದು ಹೇಳಲು ಸಾಧ್ಯವಿಲ್ಲ. ಇದೇ ಕಾಲದಲ್ಲಿ ವೈಷ್ಣವ ಪಣಿಯೆಂಬುವನು ಹಳ್ಳಿಗಾಡುಗಳಲ್ಲಿದ್ದ 'ಜಾತ್ರೆ'ಗಳೆಂಬ ಗ್ರಾಮರೂಪಕಗಳನ್ನು ಅವುಗಳ ಪ್ರಾಚೀನ ಗುಣಗಳಾವುವೂ ಭಂಗ ವಾಗದಂತೆ, ಆದರೂ ಆಧುನಿಕ ರಂಗ ಸ್ಥಳಗಳಲ್ಲಿ ಪ್ರದರ್ಶಿತವಾಗುವ ನಾಟಕಗಳಿಗೆ ಬಹು ಸಮೀಪವಾಗಿ ಹೊಂದಿಕೊಳ್ಳುವಂತೆ ಪರಿಷ್ಕರಿಸಿ. ಸಾಮಾನ್ಯ ಜನರ ಮೇಲೆ ವಿಶೇಷ ಪರಿಣಾಮಕಾರಿಯಾಗುವಂತೆ ಮಾಡಿದನು. ಏಕವ್ಯಕ್ತಿಯಿಂದ ಸಾಧಿತ ವಾದ ಈ ಕಾರ್ಯವು ಎಂತಹವರಿಗೂ ಆಶ್ಚರ್ಯವನ್ನುಂಟುಮಾಡುವಂತಿದೆ.

ಫಕೀರಮೋಹನನಾದ ಮೇಲೆ ಒರಿಯ ಭಾಷೆಯಲ್ಲಿ ಉತ್ತಮ ಕಾದಂಬರಿ ಗಳಾವುವೂ ರಚಿತವಾಗಿಲ್ಲ. ರಚಿತವಾದ ಒಂದೆರೆಡು ಯೋಗ್ಯಮಟ್ಟದವೆಂದು ಹೇಳ ಲಾಗುವುದಿಲ್ಲ. ಮಧ್ಯ ಕಾಲದಲ್ಲಿ ಬಂದ 'ಸಬುಜ'ರೆಂಬ ಗುಂಪಿನವರು ಈ ಕ್ಷೇತ್ರದಲ್ಲಿ ವಿಶೇಷ ಕೆಲಸಮಾಡಲು ಹೊರಟರೂ ಅಷ್ಟು ಕಾರ್ಯಕಾರಿಯಾದಂತೆ ಕಾಣುವುದಿಲ್ಲ. ಅವರ ಸಾಮೂಹಿಕ ಕೃತಿಯಾದ 'ವಾಸಂತಿ'ಯೂ ಫಣಿಗ್ರಾಹಿಯ 'ಮತೀರ ಮನೀಷಾ' (ಮಣ್ಣಿನ ಮನುಷ್ಯ) ಎಂಬುದೂ ಆ ಗುಂಪಿನವರ ಗಣ್ಯವಾದ ಕಾದಂಬರಿ ಗಳು. ಕಳೆದ ದಶಕದಲ್ಲಿ ಗೋಪೀನಾಥ, ಕನ್ಹುಚರಣ್, ನಿತ್ಯಾನಂದ ಮೊದ ಲಾದವರು ಈ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಒರಿಯ ಸಾಹಿತ್ಯದಲ್ಲಿ ಅಧಿಕಾರವಾಣಿಯಿಂದ ನುಡಿಯಬಲ್ಲ ಸುಪ್ರಸಿದ್ಧ ಪಂಡಿತ ನಾದ ಆರ್ತವಲ್ಲಭಮಹಂತಿಯು ಉತ್ತಮ ಉಪೋದ್ಘಾತ, ವ್ಯಾಖ್ಯಾನ ಮತ್ತು ಟಿಪ್ಪಣಿಗಳಿಂದ ಕೂಡಿದ ಸುಸಂಶೋಧಿತವಾದ ಪ್ರಾಚೀನ ಗ್ರಂಥಗಳನ್ನು ಬೆಳಕಿಗೆ

ತಂದಿದ್ದಾನೆ. ಹೊಸ ತರುಣರ ತಂಡವು ಭಿನ್ನ ವಿಷಯಕವಾದ ಗ್ರಂಥಗಳನ್ನು ಭಿನ್ನ ಭಿನ್ನ ದೃಷ್ಟಿಕೋನಗಳಿಂದ ರಚಿಸಿ ಒರಿಯವನ್ನು ತುಂಬು ಸಾಹಿತ್ಯವನ್ನಾಗಿ ಮಾಡುತ್ತಿದ್ದಾರೆ. ಈಗಿನ ಲೇಖಕರು ಕಾಲ ದೇಶಾನುಗುಣವಾಗಿ ಜನರ ಆವಶ್ಯಕತೆ ಯನ್ನು ತಿಳಿದು ಕೆಲಸಮಾಡುವವರಾಗಿದ್ದಾರೆ. ಆದರೆ ಒಂದು ವಿಷಯವನ್ನು ಮರೆಯಲಾಗದು. ಇದೊಂದು ಸಂಧಿಸಮಯ. ಸ್ವಾತಂತ್ರ್ಯ ಮತ್ತು ಅದರ ಉತ್ತರ ಕಾಲೀನ ಪರಿಣಾಮಗಳು ಜನರಲ್ಲಿ ಇನ್ನೂ ಸ್ಥಿರವಾಗಿ ರಕ್ತಗತವಾಗಿಲ್ಲ. ಹೀಗೆಯೇ ಆಧುನಿಕ ಕಾಲದ ಅಭಿಪ್ರಾಯಗಳೂ ಮತ್ತು ಅವುಗಳ ಪ್ರತಿದ್ವಂದ್ವಿಗಳ ಸ್ವರೂಪ ಯೋಗ್ಯತೆಯ ತಾರತಮ್ಯವನ್ನೂ ನಿಷ್ಕರ್ಷಿಸಲು ಸಾಧ್ಯವಾಗಿಲ್ಲ.

ಒಂದು ಅಂಶ ಸತ್ಯ. ಈಗ ಸಿದ್ಧವಾಗುತ್ತಿರುವ ಗ್ರಂಥರಾಶಿಯಲ್ಲಿ ಸೂಕ್ತ ಮಟ್ಟಕ್ಕೆ ಏರಬಲ್ಲುದು ಬಹಳ ಹೆಚ್ಚಿಲ್ಲ. ಪತ್ತೇದಾರಿಗಳು, ಅದ್ಭುತ ರೋಮಾಂಚ ಕಾರಿಗಳು, ಲೈಂಗಿಕ ಪ್ರಧಾನವಾದ ಪದ್ಯ ಅಥವಾ ನಾಟಕಗಳು ಹೆಚ್ಚುತ್ತಿವೆ. ಸರ್ಕಾರ, ಸಮಾಜ, ಧರ್ಮ, ಮಹಾತ್ಮರ ವಿಷಯವಾಗಿ ತಡೆಯಿಲ್ಲದೆ ನಿರ್ಭಯವಾಗಿ ಖಂಡನೆಮಾಡುವ ಮನೋಧರ್ಮ ಬೆಳೆಯುತ್ತಿದೆ. ನಿಜವಾಗಿಯೂ ಉದ್ಘಕೃತಿ ರಚನೆಮಾಡಬಲ್ಲವರು ಈ ವಿಮರ್ಶಕರಿಗೆ ಆಹುತಿಯಾಗಿ ತಮ್ಮ ಕರ್ತವ್ಯಕರ್ಮದಲ್ಲಿ ವಿಫಲರಾಗುವ ಸಂಭವವಿದೆ.

ಇಷ್ಟಾದರೂ ರಾಜಕೀಯ, ಸಾಮಾಜಿಕ, ಬೌದ್ಧಿಕ ಸಮಸ್ಯೆಗಳನ್ನು ಚಿತ್ರಿಸುವ ಯೋಗ್ಯವಾದ ಕಾದಂಬರಿಗಳು ಹೊರಬೀಳದೇ ಇಲ್ಲ. ಆದರೆ ಅವುಗಳ ಯೋಗ್ಯತೆಗಳನ್ನು ಸ್ಪಷ್ಟವಾಗಿ ವಿವರಿಸಲು, ಖಚಿತವಾಗಿ ನಿಷ್ಕರ್ಷಿಸಲು ವಿಮರ್ಶಕರಿಗೆ ಸರಿಯಾದ ಸಾಧನವಿನ್ನೂ ಸಿಕ್ಕಿಲ್ಲ. ಈಗಿನ ಕಾದಂಬರಿಗಳನೇಕ ವಿಸ್ತರಿಸಲ್ಪಟ್ಟ ಸಣ್ಣ ಕತೆ. ಶಾಬ್ದಿಕ ಚಮತ್ಕಾರ, ಆಡಂಬರ ಪೂರ್ಣವಾದ ಶೈಲಿ, ವಿಸ್ತಾರವಾದ ಶಬ್ದಜಾಲ ಇವುಗಳು ಪ್ರಧಾನ ಗುಣಗಳಾಗಿವೆ. ಆಂತರ್ಯವಾಗಿರಬೇಕಾದ ಭಾವವೈಶಾಲ್ಯ ಮತ್ತು ಜೀವನ ದರ್ಶನ ಇವುಗಳಲ್ಲಿ ಬಹು ಕಡಿಮೆ. ಸಾಲದುದಕ್ಕೆ ಇವು ಸ್ವಾತಂತ್ರ್ಯೋತ್ತರ ಕಾಲದ ಹೊಸ ಸಮಾಜವನ್ನೂ ಹೊಸ ಜೀವನವನ್ನೂ ಚಿತ್ರಿಸಲು ಅಸಮರ್ಥ ವಾಗಿವೆ. ಪದ್ಯ ಮತ್ತು ನಾಟಕಗಳು ಮಾತ್ರ ಈ ದೃಷ್ಟಿಯಲ್ಲಿ ಒಂದು ಹೆಜ್ಜೆ ಮುಂದೆ ನಡೆದಿವೆ. ಆದರೂ ಮುಂದುಮುಂದೆ ಹೊಸ ಜಯವನ್ನು ಗಳಿಸಲು ಹೊರಟಿರುವ ಆಧುನಿಕ ಮಾನವನ ಜೀವನವನ್ನು ಚಿತ್ರಿಸುವುದು ಅತ್ಯಾವಶ್ಯಕವಾಗಿದೆ.

—ಎಸ್. ಅನಂತರಂಗಾಚಾರ್

ಬೀದಿಯ ನಲ್ಲಿ*

ಮಧ್ಯಾಹ್ನದುರಿಬಿಸಿಲು,
ಮೂರು ಘಂಟೆಯ ಬಡಿತ—
ಬಿಸಿಯುಂಡು ಅರೆನಿದ್ದೆ ಮಂಪರದಲೊರಗಿದ್ದ
ಮನೆಯವರನೆಬ್ಬಿಸಿತು ಬೀದಿನಲ್ಲಿಯ
ಕೊರಕೊರ ಸದ್ದು.
ನೀರಿನ್ನೂ ಬಂದಿಲ್ಲ;
ಇದು ಬರಿಯ ಬೊಬ್ಬೆ!
(ತುಂಬಿದ ನಳ ತುಳುಕುತ್ತದೆ,
ಸದ್ದು ಮಾಡುವುದಿಲ್ಲ!)

ಸುರುವಾಯ್ತು ವಿಧವಿಧದ ಪಾತ್ರೆಗಳ ಮೆರವಣಿಗೆ—
ಮನೆಮಂದಿಯೆಲ್ಲ 'ಕ್ಯೂ' ನಿಲ್ಲಬೇಕಿನ್ನು,
ಇಲ್ಲವೋ—ನೀರಿಲ್ಲ ಮನೆಗೆ!
ಬೀದಿನಲ್ಲಿಯ ಮೇಲೆ ಹಕ್ಕು ಯಾರದು ಹೆಚ್ಚು,
ನೀರು ಹಿಡಿಯಲು ಯಾರ ಅಧಿಕಾರ ಮೊದಲು—
ಇಂಥ ಪ್ರಶ್ನೆಯ ಕುರಿತು ನಡೆಯಲೂಬಹುದು
ಆಗಾಗ ಚರ್ಚೆ, ಕಿತ್ತಾಟ:
ಮತ್ತೆ ಈ ನಲ್ಲಿ ಬತ್ತುವತನಕ ಬೀದಿಯಲಿ
ಇದೂ ಒಂದು ನೋಟ!

ಯಾವುದೋ ಹೊಳೆಯಿಂದ, ಕೆರೆಯಿಂದ ಬರಬಹುದು
ನೀರು ಈ ನಲ್ಲಿಗೆ.
ಆ ನೀರಿಗಿಲ್ಲ ಯಾರ ಹಂಗೂ ಕೂಡ;
ಹೋದಾರು ಎಷ್ಟು ಜನ ಅಲ್ಲಿಗೆ?
ಅದು ನಲ್ಲಿಯೊಂದರಲಿ ಹರಿದಿಲ್ಲಿ ಬಂದಾಗ
ಇನಿತೊಂದು ರಂಪ ರಾದ್ಧಾಂತ!
ಒಳಗೆಲ್ಲೊ ಕೇಳಿಸಿತು ತಂಗಿ ಗೊಣಗಿದ ಮಾತು:
ನಮ್ಮ ಮನೆಯೊಳಗೊಂದು ನಲ್ಲಿಯಿಲ್ಲದ ಮೇಲೆ
ಈ ಬವಣೆಯಿಂದಿಲ್ಲ ಬಿಡುಗಡೆ!

—ಸಿ. ಪಿ. ಕೆ.

* ಎ. ಐ. ಆರ್. ಕೃಪೆಯಿಂದ

ಅದೃಷ್ಟ

ನಮ್ಮ ಜೀವನಪಥ ಹಾಗೂ ಅಂತಿಮ ಧ್ಯೇಯದ ಮೇಲೆ ವಾಸ್ತವವಾಗಿ ಪ್ರಭಾವ ಬೀರುವ ಘಟನೆಗಳೂ ಕೂಡ ನಮಗೆ ಸ್ವಲ್ಪ ಮಾತ್ರ ಪರಿಚಿತವಾಗುವುದು ಸಾಧ್ಯ. ಯಾವ ವಾಸ್ತವ ಪರಿಣಾಮವನ್ನೂ ಉಂಟುಮಾಡದೆ ಅಥವಾ ನಮ್ಮ ಮನಸ್ಸಿನಲ್ಲಿ ಯಾವುದೋ ನೆಳಲು ಬೆಳಕಿನ ಪ್ರತಿಫಲನದಿಂದ ತಾವು ಹತ್ತಿರ ಬಂದಿರುವುದನ್ನು ವ್ಯಕ್ತಗೊಳಿಸಿ, ಹಾಗೆಯೇ ಹೊರಟುಹೋಗುವ ಇತರ ಅಸಂಖ್ಯಾತ ಘಟನೆಗಳುಂಟು. ನಮ್ಮ ಅದೃಷ್ಟದಲ್ಲಾಗುವ ಎಲ್ಲ ಪರಿವರ್ತನೆಗಳೂ ನಮಗೆ ತಿಳಿಯಬಹುದಾಗಿದ್ದಲ್ಲಿ, ಜೀವನವು ಒಂದು ಗಂಟೆಯ ನೈಜಶಾಂತಿಯನ್ನೂ ಕೊಡಲಾರದಷ್ಟರಮಟ್ಟಿಗೆ ಆಸೆ ಮತ್ತು ಭಯ, ಆನಂದ ಅಥವಾ ನಿರಾಶೆಯಿಂದ ತುಂಬಿಹೋಗುತ್ತಿತ್ತು. ಈ ಭಾವನೆಗೆ ಡೇವಿಡ್ ಸ್ವಾನನ ರಹಸ್ಯ ಸಂಗತಿಗಳ ಒಂದು ಪುಟದಿಂದ ನಿದರ್ಶನ ಕೊಡಬಹುದು.

ಇಪ್ಪತ್ತು ವರ್ಷದ ಡೇವಿಡ್ ಸ್ವಾನ್ ತನ್ನ ಊರಿನಿಂದ ಬೋಸ್ಟನ್ ನಗರಕ್ಕೆ ರಾಜಮಾರ್ಗದಲ್ಲಿ ಹೋಗುತ್ತಿರುವುದನ್ನು ಕಾಣುವತನಕ ನಮಗೆ ಅವನ ವಿಷಯ ಅಪ್ರಕೃತ. ಬೋಸ್ಟನಿನಲ್ಲಿ ಸಣ್ಣ ಅಂಗಡಿಕಾರನಾಗಿದ್ದ ಅವನ ಚಿಕ್ಕಪ್ಪ ಅವನನ್ನು ಅಂಗಡಿಗೆ ಸೇರಿಸಿಕೊಳ್ಳುವವನಿದ್ದ. ಅವನು ನ್ಯೂಹ್ಯಾಂಪ್‌ಶೈರಿನಲ್ಲಿ ಗೌರವಯುತರಾದ ತಂದೆ ತಾಯಿಗಳಿಗೆ ಹುಟ್ಟಿ ಸಾಧಾರಣವಾದ ಶಾಲಾ ಶಿಕ್ಷಣವನ್ನು ಪಡೆದು, ಗಿಲ್‌ಮಾಂಟನ್ ಅಕ್ಯಾಡಮಿಯಲ್ಲಿ ಒಂದು ವರ್ಷ ಇದ್ದವನೆಂದು ಹೇಳಿದರೆ ಸಾಕು. ಬೇಸಗೆಯ ಒಂದು ದಿನ ಸೂರ್ಯೋದಯದಿಂದ ಹಿಡಿದು ಸುಮಾರು ಮಧ್ಯಾಹ್ನದವರೆಗೂ ಕಾಲ್ನಡಗೆಯಲ್ಲಿ ಪ್ರಯಾಣ ಮಾಡಿದನಂತರ ಅವನು ಮೊದಲು ಸಿಕ್ಕುವ ಅನುಕೂಲವಾದ ನೆರಳಿನಲ್ಲಿ ಕುಳಿತು ಕೋಚ್ ಗಾಡಿಯ ಬರವಿಗಾಗಿ ಕಾಯಲು ನಿರ್ಧರಿಸಬೇಕಾಯಿತು. ಅವನಿಗಾಗಿಯೇ ಉದ್ದೇಶಪೂರ್ವಕವಾಗಿ ನೆಟ್ಟಂತೆ ಕೆಲವು ಮೇಪಲ್ ವೃಕ್ಷಗಳ ಗುಂಪು ಶೀಘ್ರ ಕಾಣಿಸಿತು; ಅದರ ನಡುವೆ ಆನಂದಕರವಾದ ಏಕಾಂತಸ್ಥಳವಿತ್ತು; ಡೇವಿಡ್ ಸ್ವಾನ್‌ಗಲ್ಲದೆ ಮತ್ತಾವ ಪಾಂಥನ ಪಾಲಿಗೂ ಥಳಥಳಿಸಿರಲಿಲ್ಲವೋ ಎಂಬಂತಿದ್ದ ಒಂದು ಹೊಸ ಝರಿಯೂ ಅಲ್ಲಿತ್ತು. ಕನ್ಯೆಯೋ ಅಲ್ಲವೋ—ಅದನ್ನವನು ತೃಷಿತಾಧರಗಳಿಂದ ಚುಂಬಿಸಿದ; ಅನಂತರ ಗೆರೆಗೆರೆಯಾದ ಕೈವಸ್ತ್ರದಲ್ಲಿ ಕಟ್ಟಿದ ಕೆಲವು ಷರಟುಗಳು ಹಾಗೂ ಒಂದು ಜೊತೆ ಷರಾಯಿಗಳನ್ನು ತಲೆದಿಂಬುಮಾಡಿ ದಂಡೆಯ ಮೇಲೆ ಮಲಗಿಬಿಟ್ಟ. ಸೂರ್ಯಕಿರಣಗಳು ಅವನನ್ನು ಮುಟ್ಟುವಂತಿರಲಿಲ್ಲ. ಹಿಂದಿನ ದಿನ ಸುರಿದಿದ್ದ ಮಳೆಯ ಕಾರಣದಿಂದ ದಾರಿಯಲ್ಲಿ ದೂಳು ಎದ್ದಿರಲಿಲ್ಲ. ಹುಲ್ಲಿನ ಆಶ್ರಯ ಆ ತರುಣನಿಗೆ ಹಾಸಿಗೆಗಿಂತ ಉಚಿತವಾಗಿತ್ತು. ಝರಿಯು ಅವನ ಪಕ್ಕದಲ್ಲಿ

ತೂಕಡಿಸುತ್ತ ಸಪ್ಪಳಗೈಯುತ್ತಿತ್ತು; ಕೊಂಬೆಗಳು ಕನಸಿಗರಂತೆ ಮೇಲಿನ ನೀಲಾಕಾಶ ದೆದುರು ಅಲ್ಲಾಡುತ್ತಿದ್ದುವು; ಕೆಲವು ವೇಳೆ ತನ್ನ ಅಂತರಂಗದಲ್ಲಿ ಕನಸುಗಳನ್ನು ಬಚ್ಚಿಟ್ಟುಕೊಂಡಿರುವ ಆಳವಾದ ನಿದ್ದೆಯೊಂದು ಡೇವಿಡ್ ಸ್ವಾನ್‌ನನ್ನು ಕವಿಯಿತು. ಆದರೆ ಅವನು ಸ್ವಪ್ನದಲ್ಲಿ ಕಾಣದ ಘಟನೆಗಳನ್ನು ನಾವು ಹೇಳಬೇಕಾಗಿದೆ.

ಅವನು ನೆರಳಿನಲ್ಲಿ ಗಾಢನಿದ್ರಾವಶನಾಗಿದ್ದಾಗ ಇತರ ಜನರು ಸಂಪೂರ್ಣ ಎಚ್ಚರವಾಗಿದ್ದರು ಮತ್ತು ಕಾಲ್ನಡಗೆಯಿಂದ, ಕುದುರೆಯ ಮೇಲೆ ಮತ್ತಿತರ ಎಲ್ಲ ವಿಧವಾದ ವಾಹನಗಳಲ್ಲಿ ಬಿಸಿಲು ಬಿದ್ದ ದಾರಿಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಹೋಗುತ್ತಿದ್ದರು. ಎಡಬಲಗಳನ್ನು ನೋಡದ ಕೆಲವರು ಅವನಲ್ಲಿದ್ದುದನ್ನು ತಿಳಿಯರು; ಕೆಲವರು ಸುಮ್ಮನೆ ಅತ್ತಕಡೆ ನೋಡಿದರೂ ತಮ್ಮ ಆಲೋಚನೆಗಳ ಗೊಂದಲದಲ್ಲಿ ನಿದ್ರಿತವ್ಯಕ್ತಿಯನ್ನು ಗಮನಿಸುತ್ತಿರಲಿಲ್ಲ; ಅವನೆಷ್ಟು ನೆಮ್ಮದಿಯಿಂದ ಮಲಗಿದ್ದಾನೆಂದು ಕೆಲವರು ನಗುತ್ತಿದ್ದರು; ತಿರಸ್ಕಾರ ತುಂಬಿ ತುಳುಕುವ ಹೃದಯದ ಕೆಲವರು ಡೇವಿಡ್ ಸ್ವಾನನ ಮೇಲೆ ವಿಷ ಕಾರಿದರು. ಮಧ್ಯ ವಯಸ್ಸಿನ ಒಬ್ಬಳು ವಿಧವೆ, ಬೇರಾರೂ ಹತ್ತಿರದಲ್ಲಿಲ್ಲದಾಗ, ಆ ಏಕಾಂತಸ್ಥಳದತ್ತ ತುಸು ತಲೆ ಚಾಚಿ ತರುಣ ವ್ಯಕ್ತಿ ನಿದ್ರೆಯಲ್ಲಿ ಮೋಹಕವಾಗಿ ಕಾಣುತ್ತಾನೆಂದು ತೀರ್ಮಾನಿಸಿದಳು. ಮಿತಪಾನದ ಉಪನ್ಯಾಸಕರೊಬ್ಬರು ಕಂಡು, ಬಡಪಾಯಿ ಡೇವಿಡ್ ಸ್ವಾನ್‌ನನ್ನು ದಾರಿಯ ಪಕ್ಕದ ಅತಿಕುಡಿತಕ್ಕೆ ವಿಚಿತ್ರ ನಿದರ್ಶನವಾಗಿ ಮಾಡಿ ತಮ್ಮ ಸಂಜೆಯ ಉಪನ್ಯಾಸಕ್ಕೆ ಸೇರಿಸಿಕೊಂಡರು. ಆದರೆ ನಿಂದೆ, ಪ್ರಶಂಸೆ, ವಿನೋದ, ತಾತ್ಸಾರ ಮತ್ತು ಅಲಕ್ಷ್ಯ ಎಲ್ಲವೂ ಡೇವಿಡ್ ಸ್ವಾನನಿಗೆ ಒಂದೇ ಆಗಿದ್ದುವು ಅಥವಾ ಏನೂ ಆಗಿರಲಿಲ್ಲ.

ಅವನು ಮಲಗಿ ಕೆಲವೇ ಕ್ಷಣಗಳಾಗಿದ್ದಾಗ, ಸುಂದರವಾದ ಒಂದು ಜೊತೆ ಕುದುರೆಗಳಿಂದ ಎಳೆಯಲ್ಪಟ್ಟ ಕಂದುಬಣ್ಣದ ಗಾಡಿಯೊಂದು ಬಂದು ಡೇವಿಡ್‌ನ ವಿಶ್ರಾಂತಿ ಸ್ಥಾನದ ಮುಂದುಗಡೆಯೇ ನಿಂತಿತು. ಅದರ ಕಡೆಗೀಲೊಂದು ಬಿದ್ದು ಹೋಗಿ, ಒಂದು ಚಕ್ರ ಜಾರಲು ಆಸ್ಪದವಾಗಿತ್ತು. ನಷ್ಟವು ಅಲ್ಪವಾಗಿತ್ತು; ಅದರಿಂದ ಗಾಡಿಯಲ್ಲಿ ಕುಳಿತು ಬೋಸ್ಟನ್ನಿಗೆ ಹಿಂದಿರುಗುತ್ತಿದ್ದ ಒಬ್ಬ ವಯಸ್ಕನಾದ ವ್ಯಾಪಾರಿಗೂ ಅವನ ಪತ್ನಿಗೂ ಕ್ಷಣಮಾತ್ರದ ಭೀತಿಯುಂಟಾಗಿತ್ತು. ಚಾಲಕನೂ ಓರ್ವ ಸೇವಕನೂ ಚಕ್ರಗಳನ್ನು ಮತ್ತೆ ಅಳವಡಿಸುತ್ತಿದ್ದಾಗ, ಆ ದಂಪತಿಗಳು ಮೇಪಲ್ ಮರಗಳ ಕೆಳಗೆ ಆಶ್ರಯ ಪಡೆದು ಝುರಿಯನ್ನೂ ಅದರ ಪಕ್ಕದಲ್ಲಿ ನಿದ್ರಾವಶನಾದ ಡೇವಿಡ್ ಸ್ವಾನ್‌ನನ್ನೂ ಕಂಡರು. ನಿದ್ದೆಹೋದ ಅತ್ಯಂತ ಬಡ ವ್ಯಕ್ತಿಯೂ ತನ್ನ ಸುತ್ತ ಮೂಡಿಸುವ ವಿಸ್ಮಯಕ್ಕೆ ಮಾರುಹೋಗಿ, ವ್ಯಾಪಾರಿಯು ಸಂಧಿವಾತ ಅವಕಾಶವಿತ್ತಷ್ಟು ಮಟ್ಟಿಗೆ ಹಗುರವಾಗಿ ಅತ್ತ ನಡೆದ. ಅವನ ಪತ್ನಿಯು ಡೇವಿಡ್ ಸ್ವಾನ್ ಇದ್ದಕ್ಕಿದ್ದಂತೆ ಏಳದಿರಲೆಂದು ತನ್ನ ರೇಷ್ಮೆಯ ನಿಲುವಂಗಿ ಸದ್ದು ಮಾಡದಂತೆ ಎಚ್ಚರಿಕೆ ವಹಿಸಿದಳು.

“ ಇವನೆಷ್ಟು ನೆಮ್ಮದಿಯಿಂದ ನಿದ್ರಿಸುತ್ತಾನೆ ! ” ಎಂದು ವೃದ್ಧ ಉಸುರಿದ. “ ಆ ಸುಲಭಶ್ವಾಸವನ್ನು ಅವನೆಷ್ಟು ಆಳದಿಂದ ಎಳೆದುಕೊಳ್ಳುತ್ತಾನೆ ! ಔಷಧ ವಿಲ್ಲದೆ ಬರುವ ಇಂಥ ನಿದ್ರೆ ನನ್ನ ಆದಾಯದ ಅರ್ಧಕ್ಕಿಂತಲೂ ಹೆಚ್ಚು ಬೆಲೆಯುಳ್ಳದ್ದು. ಏಕೆಂದರೆ ಅದು ಆರೋಗ್ಯವನ್ನೂ ಅಬಾಧಿತ ಚಿತ್ತವನ್ನೂ ಸೂಚಿಸುತ್ತದೆ. ”

“ ತಾರುಣ್ಯವನ್ನೂ ಕೂಡ ” ಎಂದಳು ಸ್ತ್ರೀ. “ ಆರೋಗ್ಯ ನೆಮ್ಮದಿಗಳಿದ್ದ ಮಾತ್ರಕ್ಕೆ ಹೀಗೆ ನಿದ್ರಿಸುವುದಕ್ಕಾಗುವುದಿಲ್ಲ. ನಮ್ಮ ಜಾಗೃದಾವಸ್ಥೆಯೆಂತೊ ಅಂತೆಯೇ ನಮ್ಮ ನಿದ್ದೆಯೂ ಕೂಡ ಇವನ ನಿದ್ದೆಯಂತಲ್ಲ. ”

ದಾರಿಯ ಪಾರ್ಶ್ವ ಮತ್ತು ಮೇಪಲ್ ಮರಗಳ ನೆರಳೇ ರಹಸ್ಯ ಕೊಠಡಿ ಯಾಗಿದ್ದ ಈ ಅಪರಿಚಿತ ಯುವಕನನ್ನು ನೋಡಿದಷ್ಟೂ ಅವನಲ್ಲಿ ಆ ವೃದ್ಧ ದಂಪತಿಗಳ ಆಸಕ್ತಿ ಹೆಚ್ಚಾಯಿತು. ಅವನ ಮುಖದ ಮೇಲೆ ಬಿಸಿಲ ಕಿರಣವೊಂದು ಬಿದ್ದುದನ್ನು ನೋಡಿ, ಆ ಹೆಂಗಸು ಒಂದು ಕೊಂಬೆಯನ್ನು ತಿರಿಚಿ ಕಿರಣವನ್ನು ತಡೆದಳು. ಈ ಸಣ್ಣ ದಯಾಕೃತ್ಯವನ್ನು ಮಾಡಿದ ಅವಳಿಗೆ ತಾನು ಅವನ ತಾಯಿಯಂತೆ ಎನಿಸತೊಡಗಿತು.

“ ದೇವರೇ ಇವನನ್ನು ಇಲ್ಲಿರಿಸಿ ನಮ್ಮನ್ನಿಲ್ಲಿಗೆ ತಂದು ಕಾಣಿಸಿದ್ದಾನೆ ಎಂದು ತೋರುತ್ತದೆ ” ಎಂದು ಆಕೆ ತನ್ನ ಗಂಡನಿಗೆ ಪಿಸುಗುಟ್ಟಿದಳು. “ ನಮ್ಮ ಗತಿಸಿದ ಹೆನ್ರಿಯ ಹೋಲಿಕೆ ಕಂಡುಬರುತ್ತದೆ. ಇವನನ್ನು ಎಬ್ಬಿಸೋಣವೆ ? ”

“ ಏತಕ್ಕಾಗಿ ? ” ವ್ಯಾಪಾರಿ ಹಿಂಜರಿಯುತ್ತಾ ಹೇಳಿದ, “ ಈ ಯುವಕನ ಸ್ವಭಾವ ನಮಗೇನೂ ಗೊತ್ತಿಲ್ಲ. ”

ಅದೇ ಮೆಲುದನಿಯಲ್ಲಿ ಆಸಕ್ತಿಯಿಂದ ಅವನ ಹೆಂಡತಿ ಉದ್ಗರಿಸಿದಳು : “ ಆ ತೆರೆದ ಮುಖಭಾವ ! ಈ ಮುಗ್ಧನಿದ್ರೆ ! ”

ಈ ಪಿಸುಮಾತುಗಳು ಸಾಗುತ್ತಿರುವಾಗ ನಿದ್ರಿತವ್ಯಕ್ತಿಯ ಹೃದಯ ಸ್ಪಂದಿಸಲಿಲ್ಲ, ಅವನ ಉಸಿರಾಟ ತ್ವರಿತವಾಗಲಿಲ್ಲ, ಕುತೂಹಲದ ಲವಲೇಶವೂ ಅವನ ಮುಖಮುದ್ರೆಯಲ್ಲಿ ಗೋಚರಿಸಲಿಲ್ಲ. ಆದರೂ ಹೊನ್ನಿನ ಹೊರೆಯನ್ನು ನೀಡು ವುದಕ್ಕೆ ಸಿದ್ಧವಾಗಿ ಅದೃಷ್ಟವು ಅವನ ಮೇಲೆ ಬಾಗಿ ನಿಂತಿತ್ತು. ವೃದ್ಧ ವ್ಯಾಪಾರಿಯ ಒಬ್ಬನೇ ಮಗ ತೀರಿಕೊಂಡಿದ್ದ ; ದೂರದ ಸಂಬಂಧಿಯೊಬ್ಬನ ಹೊರತು ಐಶ್ವರ್ಯಕ್ಕೆ ಬೇರೆ ಉತ್ತರಾಧಿಕಾರಿ ಇರಲಿಲ್ಲ. ಆದರೆ ಆ ಸಂಬಂಧಿಯ ನಡತೆ ತೃಪ್ತಿಕರ ವಾಗಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಜನ ಕೆಲವು ವೇಳೆ ಮಂತ್ರವಾದಿ ಮಾಡುವುದ ಕ್ಕಿಂತ ಹೆಚ್ಚು ವಿಚಿತ್ರವಾದ ಕೆಲಸಗಳನ್ನು ಮಾಡಿ, ದಾರಿದ್ರ್ಯದಲ್ಲಿ ನಿದ್ರಿಸುವ ವ್ಯಕ್ತಿಯನ್ನು ವೈಭವಕ್ಕೇರಿಸುತ್ತಾರೆ.

“ ಅವನನ್ನು ಎಬ್ಬಿಸುವುದು ಬೇಡವೆ ? ” ಎಂದು ಸ್ತ್ರೀ ಒತ್ತಾಯದಿಂದ ಪುನರುಚ್ಚರಿಸಿದಳು.

“ ಗಾಡಿ ಸರಿಯಾಗಿದೆ, ಸಾರ್ ” ಎಂದು ಸೇವಕ ಹಿಂದುಗಡೆ ನುಡಿದ.

ಇಷ್ಟೊಂದು ಹಾಸ್ಯಾಸ್ಪದ ಕಾರ್ಯ ಮಾಡುವುದನ್ನು ತಾವು ಕನಸಿನಲ್ಲಿ ಯಾದರೂ ಕಂಡುದುಂಟೇ ಎಂದು ಪರಸ್ಪರ ಆಶ್ಚರ್ಯಪಡುತ್ತ ವೃದ್ಧದಂಪತಿಗಳು ಅವಸರದಿಂದ ಹೊರಟರು. ವ್ಯಾಪಾರಿ ಗಾಡಿಯಲ್ಲಿ ಮತ್ತೆ ಕುಳಿತು ವ್ಯಾಪಾರದಲ್ಲಿ ದುರ್ದೈವಿಗಳಾದ ಜನರಿಗೆ ಭವ್ಯವಾದ ಆಶ್ರಯಗೃಹವೊಂದನ್ನು ಕಟ್ಟಿಸುವ ಯೋಜನೆಯನ್ನು ಚಿತ್ತದಲ್ಲಿ ತುಂಬಿಕೊಂಡ. ಈ ನಡುವೆ ಡೇವಿಡ್‌ಸ್ವಾನ್ ನಿದ್ರಾ ಸುಖವನ್ನು ಸವಿಯುತ್ತಿದ್ದ.

ಗಾಡಿ ಒಂದೆರಡು ಮೈಲಿ ದೂರ ಹೋಗಿರಲಾರದು, ಅಷ್ಟರಲ್ಲಿ ಚೆಲುವೆ ಹುಡುಗಿಯೊಬ್ಬಳು ತನ್ನ ಹೃದಯದ ಕುಣಿತವನ್ನು ಸ್ಪಷ್ಟವಾಗಿ ತೋರಿಸುವ ಕುಲುಕುಗತಿಯಲ್ಲಿ ನಡೆದುಬಂದಳು. ಬಹುಶಃ ಈ ರೀತಿಯ ಮೋಜಿನ ನಡಗೆ ಯಿಂದಲೇ ಅವಳ ಕಾಲ್ಚೀಲ ಕಟ್ಟುವ ದಾರದ ಗಂಟು ಬಿಚ್ಚಿಹೋಯಿತು. ರೇಷ್ಮೆಯ ನಡುಪಟ್ಟಿ ಸಡಿಲವಾಗುತ್ತಿದೆಯೆಂದು ಅರಿತು ಆಕೆ ಮೇಪಲ್ ವೃಕ್ಷಗಳ ಆಶ್ರಯಕ್ಕೆ ಸರಿದಳು; ಅಲ್ಲಿ ಝರಿಯ ಪಕ್ಕದಲ್ಲಿ ನಿದ್ದೆಹೋಗಿದ್ದ ಓರ್ವ ತರುಣನನ್ನು ನೋಡಿದಳು. ಸಭ್ಯಪುರುಷನ ಶಯ್ಯಾಗೃಹಕ್ಕೆ ಅಕ್ರಮ ಪ್ರವೇಶ ಮಾಡಿದವಳೋ ಎನ್ನುವ ಹಾಗೆ ನಾಚಿಕೆಯಿಂದ ಮುಖ ಗುಲಾಬಿಯಂತೆ ಕೆಂಪೇರಲು, ಆಕೆ ತುದಿಗಾಲಿ ನಲ್ಲೇ ಪರಾರಿಯಾಗುವುದರಲ್ಲಿದ್ದಳು. ಆದರೆ ಮಲಗಿದ್ದ ವ್ಯಕ್ತಿಯ ಬಳಿಯಲ್ಲಿ ಅಪಾಯವಿತ್ತು: ಒಂದು ಹಾಳು ದುಂಬಿ ಮೇಲೆ ಅಲೆದಾಡುತ್ತಿತ್ತು. ಅದು ಒಮ್ಮೆ ಎಲೆಗಳ ನಡುವೆಯಿರುವುದು, ಮತ್ತೊಮ್ಮೆ ಸೂರ್ಯರಶ್ಮಿಯಲ್ಲಿ ಮಿಂಚುವುದು, ಮಗುದೊಮ್ಮೆ ಕಪ್ಪು ನೆರಳಿನಲ್ಲಿ ಮಾಯವಾಗುವುದು; ಕಡೆಗೆ ಡೇವಿಡ್‌ಸ್ವಾನನ ಕಣ್ಣುರೆಪ್ಪೆಯ ಮೇಲೆ ಅದು ಕುಳಿತುಕೊಳ್ಳುವಂತೆ ಕಂಡಿತು. ದುಂಬಿಯ ಮುಳ್ಳು ಕೆಲವು ವೇಳೆ ಮಾರಕವೂ ಹೌದು. ಮುಗ್ಧಳಾಗಿದ್ದಂತೆ ವಿಶಾಲ ಹೃದಯದವಳೂ ಆಗಿದ್ದುದರಿಂದ ಆ ಹುಡುಗಿ ಕರವಸ್ತ್ರದಿಂದ ದುಂಬಿಯ ಮೇಲೆ ಆಕ್ರಮಣ ನಡೆಸಿ ಅದನ್ನು ನಿಶ್ಶಬ್ದವಾಗಿ ನಿವಾರಿಸಿ ಮೇಪಲ್ ಮರಗಳ ನೆರಳಿನಿಂದ ಓಡಿಸಿದಳು. ಈ ಸತ್ಕಾರ್ಯ ಮಾಡಿದ ನಂತರ ಆಕೆ ವೇಗವಾದ ಉಸಿರಾಟದಿಂದ, ಮತ್ತಷ್ಟು ಕೆಂಪೇರಿ ಯಾರ ಸಲುವಾಗಿ ತಾನು ಗಾಳಿಯಲ್ಲಿದ್ದ ಭಯಂಕರ ಶತ್ರುವಿನೊಡನೆ ಹೋರಾಟ ವೆಸಗುತ್ತಿದ್ದಳೋ ಆ ಅಪರಿಚಿತ ಯುವಕನತ್ತ ಕಳ್ಳನೋಟ ಬೀರಿದಳು.

"ಇವನು ಚೆಲುವಾಗಿದ್ದಾನೆ!" ಎಂದು ಆಕೆ ಇನ್ನಷ್ಟು ಕೆಂಪೇರುತ್ತ ಯೋಚಿಸಿದಳು.

ಅವನಲ್ಲಿ ಆನಂದದ ಕನಸೊಂದು ಶಕ್ತಿಯುತವಾಗಿ ಬೆಳೆದು ತನ್ನ ಮಾಯೆಯ ನಡುವೆ ಆ ಹುಡುಗಿ ಅವನಿಗೆ ಕಾಣುವಂತೆ ಅವಕಾಶ ಮಾಡಿಕೊಡಲಿಲ್ಲವೇಕೆ? ಕಡೆಯ ಪಕ್ಷ ಅವನ ಮುಖದ ಮೇಲೆ ಸ್ವಾಗತದ ಮುಗುಳ್ನಗೆಯಾದರೂ ಬೆಳಗಲಿಲ್ಲ ವೇಕೆ? ಹಳೆಯ ಸುಂದರ ಕಲ್ಪನೆಯ ಪ್ರಕಾರ ಯಾರ ಆತ್ಮ ತನ್ನಾತ್ಮದಿಂದ ಬೇರ್ಪಟ್ಟಿತ್ತೋ ಮತ್ತು ಯಾರನ್ನು ಕೂಡಿಕೊಳ್ಳಲು ಆತ ಅಸ್ಪಷ್ಟವಾದ, ಆದರೆ

ತೀವ್ರವಾದ ಆಸೆಯಿಂದ, ಹಂಬಲಿಸುತ್ತಿದ್ದನೋ ಆಕೆ, ಆ ತರುಣಿ ಬಂದಿದ್ದಳು. ಅವಳೊಬ್ಬಳನ್ನೇ ಆತ ಪರಿಪೂರ್ಣ ಪ್ರೇಮದಿಂದ ಪ್ರೀತಿಸಬಲ್ಲ; ಅವನೊಬ್ಬನನ್ನೇ ಆಕೆ ತನ್ನ ಹೃದಯಾಂತರಾಳಕ್ಕೆ ಕರೆದುಕೊಳ್ಳಬಲ್ಲಳು. ಈಗ ಆಕೆಯ ಮೂರ್ತಿ ಅವನ ಪಕ್ಕದ ಝರಿಯಲ್ಲಿ ಲಜ್ಜೆಯಲ್ಲಿ ಕ್ಷೀಣವಾಗಿ ಕೆಂಪೇರಿ ನಿಂತಿತ್ತು; ಅದು ಹೊರಟುಹೋದರೆ, ಅದರ ಸುಖಕರವಾದ ಪ್ರಕಾಶ ಮತ್ತೆ ಅವನ ಬಾಳನ್ನು ಬೆಳಗದು.

"ಎಷ್ಟು ನೆಮ್ಮದಿಯಿಂದ ನಿದ್ರಿಸುತ್ತಾನೆ!" ಎಂದು ಹುಡುಗಿ ಉಸುರಿದಳು. ಆಕೆ ಹೊರಟು ಹೋದಳು; ಆದರೆ ಅವಳ ನಡಗೆ-ಅಲ್ಲಿಗೆ ಬರುವಾಗ ಇದ್ದಂತೆ ಈಗ ಹಗುರವಾಗಿರಲಿಲ್ಲ.

ಆ ಹುಡುಗಿಯ ತಂದೆ ಸಮೀಪದ ಊರಿನಲ್ಲಿ ದೊಡ್ಡ ವ್ಯಾಪಾರಿಯಾಗಿದ್ದ; ಇದೇ ಕಾಲದಲ್ಲಿ ಅವನು ಡೇವಿಡ್ ಸ್ವಾನನಂಥ ತರುಣನಿಗಾಗಿ ಹುಡುಕುತ್ತಿದ್ದ. ಅವನ ಮಗಳೊಡನೆ ಡೇವಿಡ್‌ಸ್ವಾನ್ ಪರಿಚಯ ಬೆಳಸಿಕೊಂಡಿದ್ದರೆ, ಅವನು ಅವಳ ತಂದೆಯ ಗುಮಾಸ್ತನಾಗುತ್ತಿದ್ದ; ಉಳಿದುದೆಲ್ಲ ಕ್ರಮವಾಗಿ ನಡೆಯುತ್ತಿತ್ತು. ಇಲ್ಲಿ ಮತ್ತೆ ಅವನ ಭಾಗ್ಯ–ಎಲ್ಲಕ್ಕಿಂತ ಶ್ರೇಷ್ಠವಾದುದು-ಅವಳ ವಸ್ತ್ರ ಸ್ಪರ್ಶವಾಗುವಷ್ಟು ಹತ್ತಿರ ಬಂದಿತ್ತು. ಅವನಿಗೆ ಆ ವಿಚಾರವೇನೂ ತಿಳಿಯದು.

ಆ ಹುಡುಗಿ ಕಣ್ಮರೆಯಾಗುವಷ್ಟರಲ್ಲಿ ಮೇಪಲ್‌ಮರಗಳ ನೆರಳಿಗೆ ಇಬ್ಬರು ವ್ಯಕ್ತಿಗಳು ಬಂದರು. ಇಬ್ಬರಿಗೂ ಕಪ್ಪುಮುಖಗಳು; ಅವರು ಬಟ್ಟೆಯ ಟೋಪಿಗಳನ್ನು ಹುಬ್ಬುಗಳವರೆಗೆ ಕೆಳಗೆ ಎಳೆದುಕೊಂಡಿದ್ದರು. ಅವರ ಬಟ್ಟೆಗಳು ಕೊಳಕಾಗಿದ್ದುವು, ಆದರೂ ಅವಕ್ಕೊಂದು ಅಂದವಿತ್ತು. ಇವರಿಬ್ಬರೂ ನೀಚರು; ಸೈತಾನ ಪ್ರೇರಿಸುವ ಯಾವುದೇ ಕೆಲಸದಿಂದ ಹೊಟ್ಟೆ ಹೊರೆಯುವವರು. ಅವರೀಗ ತಾತ್ಕಾಲಿಕವಾಗಿ ಬೇರೊಂದು ವ್ಯವಹಾರದಲ್ಲಿದ್ದರು; ತಮ್ಮ ಭಾವೀ ನೀಚಕೃತ್ಯದ ಜಂಟಿಲಾಭವನ್ನು ಇಸ್ಪೀಟು ಆಟಕ್ಕೆ ಪಣ ಕಟ್ಟಿದ್ದರು. ಅದನ್ನು ಈ ಮರದ ಕೆಳಗೆ ತೀರ್ಮಾನಿಸಬೇಕಾಗಿತ್ತು. ಆದರೆ ಝರಿಯ ಪಕ್ಕದಲ್ಲಿ ನಿದ್ದೆಹೋಗಿದ್ದ ಡೇವಿಡ್ ಸ್ವಾನ್‌ನನ್ನು ಕಂಡು ದುಷ್ಟರಲ್ಲಿ ಒಬ್ಬ ಜೊತೆಯವನಿಗೆ ಪಿಸುಗುಟ್ಟಿದ. "ಆತನ ತಲೆಯ ಕೆಳಗಿರುವ ಗಂಟು ಕಾಣುತ್ತದೆಯೇ?"

ಮತ್ತೊಬ್ಬ ದುಷ್ಟ ತಲೆಯಾಡಿಸಿ, ಕಣ್ಣು ಮಿಟುಕಿಸಿ, ವಕ್ರದೃಷ್ಟಿಯಿಂದ ನೋಡಿದ. "ನಾನು ನಿನಗೆ ಒಂದು ಕೊಳವೆ ಬ್ರಾಂದಿಯ ಪಣ ಕಟ್ಟುತ್ತೇನೆ—ಈ ಹುಡುಗನ ಷರಟುಗಳಲ್ಲಿ ಒಂದು ಪಾಕೆಟ್‌ಬುಕ್ ಇಲ್ಲವೆ ಚಿಲ್ಲರೆಯ ಪುಟ್ಟ ಗುಪ್ತನಿಧಿ ತುಂಬಿದೆ. ಅಲ್ಲಿಲ್ಲವಾದರೆ ಷರಾಯಿಯ ಜೇಬಿನಲ್ಲಾದರೂ ಕಾಣಬಹುದು" ಎಂದ ಮೊದಲನೆಯವ.

"ಆದರೆ ಅವನಿಗೆ ಎಚ್ಚರವಾದರೆ?" ಎಂದ ಮತ್ತೊಬ್ಬ.

ಅವನ ಸಂಗಡಿಗ ತನ್ನ ಮೇಲಂಗಿಯನ್ನು ಪಕ್ಕಕ್ಕೆ ಸರಿಸಿ ಒಂದು ಕಠಾರಿಯ ಹಿಡಿಯತ್ತ ಕೈತೋರಿಸಿ ತಲೆಯಾಡಿಸಿದ.

" ಹಾಗೆಯೇ ಸರಿ " ಎಂದುಸುರಿದ ಎರಡನೇ ದುಷ್ಟ.

ಅವರು ಪ್ರಜ್ಞಾಶೂನ್ಯನಾದ ಡೇವಿಡ್‌ನನ್ನು ಸಮೀಪಿಸಿದರು. ಒಬ್ಬ ಅವನ ಎದೆಯತ್ತ ಚೂರಿಯನ್ನು ಹಿಡಿದ; ಮತ್ತೊಬ್ಬ ಅವನ ತಲೆಯಡಿಯಲ್ಲಿದ್ದ ಗಂಟನ್ನು ಹುಡುಕತೊಡಗಿದ. ಅವರ ಉಗ್ರವಾದ, ಸುಕ್ಕುಗಟ್ಟಿದ, ಅಪರಾಧ ಮತ್ತು ಹೆದರಿಕೆಯಿಂದ ಭಯಂಕರವಾದ ಎರಡು ಮುಖಗಳು ತಮ್ಮ ಬಲಿಯ ಮೇಲೆ ಬಾಗಿದ್ದುವು. ಅವೆಷ್ಟು ಭೀಕರವಾಗಿದ್ದುವೆಂದರೆ, ಅವನಿಗೆ ಇದ್ದಕ್ಕಿದ್ದಂತೆ ಎಚ್ಚರವಾಗಿದ್ದ ಪಕ್ಷದಲ್ಲಿ ಅವರನ್ನು ಪಿಶಾಚಗಳೆಂದೇ ತಿಳಿಯುತ್ತಿದ್ದ. ಅಷ್ಟೇಕೆ, ಆ ದುಷ್ಟರೇ ಝರಿಯಲ್ಲಿ ನೋಡಿಕೊಂಡಿದ್ದರೆ ತಮ್ಮ ಪ್ರತಿಬಿಂಬಗಳನ್ನು ತಾವೇ ಗುರುತು ಹಿಡಿಯುತ್ತಿರಲಿಲ್ಲ. ಆದರೆ ಡೇವಿಡ್‌ಸ್ವಾನ್ ತನ್ನ ತಾಯಿಯ ಎದೆಯಲ್ಲಿ ನಿದ್ದೆಹೋಗಿದ್ದಾಗಲೂ ಇದಕ್ಕಿಂತ ಹೆಚ್ಚು ಶಾಂತವಾದ ಮುಖಮುದ್ರೆಯನ್ನು ಧರಿಸಿರಲಿಲ್ಲ.

" ನಾನು ಗಂಟನ್ನು ತೆಗೆದುಕೊಳ್ಳಲೇಬೇಕು " ಎಂದು ಒಬ್ಬ ಪಿಸುಗುಟ್ಟಿದ.

" ಅವನು ಕದಲಿದರೆ ನಾನು ಇರಿಯುತ್ತೇನೆ " ಎಂದ ಮತ್ತೊಬ್ಬ.

ಆದರೆ ಆ ಕ್ಷಣದಲ್ಲಿ ಒಂದು ನಾಯಿ ದಾರಿಯುದ್ದಕ್ಕೂ ಮೂಸಿ ನೋಡುತ್ತ ಮೇಪಲ್ ವೃಕ್ಷಗಳ ನೆರಳಿಗೆ ಬಂತು ; ಈ ಇಬ್ಬರು ದುಷ್ಟರನ್ನು ನೆಟ್ಟದೃಷ್ಟಿಯಿಂದ ನೋಡಿತು ; ಅನಂತರ ನೆಮ್ಮದಿಯಿಂದ ಮಲಗಿದ್ದ ವ್ಯಕ್ತಿಯನ್ನೂ ನೋಡಿತು. ಆಮೇಲೆ ಅದು ಝರಿಯನ್ನು ಜಿಗಿದು ಹೋಯಿತು.

" ಓ ! ನಾವೀಗ ಏನೂ ಮಾಡಲಾರೆವು. ನಾಯಿಯ ಒಡೆಯ ಹಿಂದೆಯೇ ಹತ್ತಿರದಲ್ಲಿ ಬರುತ್ತಿರಬೇಕು " ಎಂದ ಒಬ್ಬ ದುಷ್ಟ.

" ಕುಡಿದು ಹೊರಟುಹೋಗೋಣ " ಎಂದ ಮತ್ತೊಬ್ಬ.

ಚೂರಿ ಹಿಡಿದಿದ್ದವನು ಅದನ್ನು ಮತ್ತೆ ಬಚ್ಚಿಟ್ಟುಕೊಂಡು ಒಂದು ಜೇಬು ಪಿಸ್ತೂಲನ್ನು ತೆಗೆದ. ಅದು ಒಂದೇ ಹೊಡೆತದಿಂದ ಕೊಲ್ಲಬಲ್ಲ ಪಿಸ್ತೂಲಿನ ಜಾತಿಯಲ್ಲ ; ಅದೊಂದು ಮದ್ಯದ ಪಾತ್ರೆ, ಅದರ ಬಾಯಿಗೆ ತವರದ ಸೀಸೆಯೊಂದನ್ನು ಬಲವಾಗಿ ಸಿಕ್ಕಿಸಲಾಗಿತ್ತು. ಒಬ್ಬೊಬ್ಬರೂ ತೃಪ್ತಿಕರವಾಗಿ ಒಂದೊಂದು ಡ್ರಾಮ್ ಕುಡಿದು ತಮ್ಮ ವ್ಯರ್ಥವಾದ ದುಷ್ಕೃತ್ಯವನ್ನು ಕುರಿತು ವಿನೋದದಿಂದ ನಗುತ್ತ ಆ ಜಾಗವನ್ನು ಬಿಟ್ಟರು ; ಅವರು ಸಂತಸದಿಂದಲೇ ಹೋದರೆನ್ನಬಹುದು. ಕೆಲವೇ ಗಂಟೆಗಳಲ್ಲಿ ಅವರು ಈ ವ್ಯವಹಾರವನ್ನು ಸಂಪೂರ್ಣ ಮರೆತರು ; ದೇವದೂತನು ಅವರ ಆತ್ಮದಲ್ಲಿ ಅನಂತತೆಯಷ್ಟು ಶಾಶ್ವತವಾದ ಅಕ್ಷರಗಳಿಂದ ಕೊಲೆಯ ಅಪರಾಧವನ್ನು ಬರೆದಿದ್ದಾನೆಂದು ಅವರೆಂದೂ ಕಲ್ಪಿಸಿಕೊಳ್ಳಲಿಲ್ಲ. ಡೇವಿಡ್‌ಸ್ವಾನನ ವಿಚಾರಕ್ಕೆ ಬಂದರೆ, ಅವನಿನ್ನೂ ಶಾಂತವಾಗಿ ನಿದ್ರಿಸುತ್ತಿದ್ದ. ತನ್ನ ಮೇಲೆ ತೂಗುತ್ತಿದ್ದ ಸಾವಿನ ಛಾಯೆಯಾಗಲಿ, ಅದು ಹಿಂದೆ ಸರಿದ ಮೇಲೆ ಉಂಟಾದ ಪುನರ್ಜೀವನದ ಮಿರುಗಾಗಲಿ ಅವನಿಗೆ ಗೊತ್ತೇ ಆಗಲಿಲ್ಲ.

ಅವನು ಮಲಗಿಯೇ ಇದ್ದ; ಆದರೆ ಮೊದಲಿನಷ್ಟು ನೆಮ್ಮದಿಯಿಂದಲ್ಲ. ಅನೇಕ

ಗಂಟೆಗಳ ಶ್ರಮವು ಹೊರಿಸಿದ್ದ ಆಯಾಸವನ್ನು ಒಂದು ಗಂಟೆಯ ನಿದ್ರೆ ಅವನ ನೀಳವಾದ ದೇಹದಿಂದ ಸೆಳೆದುಕೊಂಡಿತ್ತು. ಒಮ್ಮೆ ಅವನು ಕದಲಿದ, ಮತ್ತೊಮ್ಮೆ ನಿಶ್ಶಬ್ದವಾಗಿ ತುಟಿಯಾಡಿಸಿದ, ಇನ್ನೊಮ್ಮೆ ಒಳದನಿಯಲ್ಲಿ ಮಧ್ಯಾಹ್ನದ ಸ್ವಪ್ನ ಭೂತಗಳೊಡನೆ ಮಾತಾಡಿದ. ಆದರೆ ಚಕ್ರಗಳ ಸದ್ದು ದಾರಿಯಲ್ಲಿ ಹೆಚ್ಚು ಹೆಚ್ಚಾಗಿ ಕೇಳಿಬಂತು; ಕಡೆಗೆ ಅದು ಡೇವಿಡ್‌ನ ನಿದ್ರೆಯ ಚದುರುವ ಮಂಜನ್ನು ಭೇದಿಸಿ ಬಂತು-ಅದೊಂದು ಕೋಚ್‌ಗಾಡಿ, ಅವನು ತನ್ನೆಲ್ಲ ಭಾವನೆಗಳೊಡನೆ ಎದ್ದು ಕುಳಿತ.

"ಹಲೋ ಡ್ರೈವರ್! ಒಬ್ಬ ಪ್ರಯಾಣಿಕನನ್ನು ಕರೆದುಕೊಳ್ಳುತ್ತೀಯಾ?" ಎಂದು ಆತ ಕೂಗಿದ. "ಮೇಲೆ ಜಾಗವಿದೆ" ಎಂದ ಸಾರಥಿ.

ಡೇವಿಡ್ ಹತ್ತಿ ಕುಳಿತು ಬೋಸ್ಟನ್ ಕಡೆಗೆ ಸಂತೋಷದಿಂದ ಹೊರಟ; ಸ್ವಪ್ನೋಪಮವಾದ ಪರಿವರ್ತನೆಗಳ ಆ ಝುರಿಯತ್ತ ಅಗಲಿಕೆಯ ನೋಟವನ್ನೂ ಬೀರಲಿಲ್ಲ. ಐಶ್ವರ್ಯದೇವತೆ ಅದರ ನೀರಿನ ಮೇಲೆ ಹೊಂಬಣ್ಣವನ್ನು ಚೆಲ್ಲಿದುದು, ಪ್ರೇಮದೇವತೆಯ ನಿಟ್ಟುಸಿರು ನೀರಿನ ಸಪ್ಪುಳದೊಡನೆ ಬೆರೆತುದು, ಮೃತ್ಯುದೇವತೆ ಅವನ ರಕ್ತದಿಂದ ನೀರನ್ನು ಕೆಂಪು ಮಾಡುವುದಾಗಿ ಹೆದರಿಸಿದ್ದು—ಇಷ್ಟೆಲ್ಲ ಅವನು ನಿದ್ರಿತನಾದ ಒಂದು ಗಂಟೆಯ ಸಂಕ್ಷಿಪ್ತಾವಧಿಯಲ್ಲಿ ನಡೆದಿದ್ದರೂ ಅವನಿಗೆ ಒಂದೂ ತಿಳಿಯದು.

ನಿದ್ರಿಸಿರಲಿ, ಎಚ್ಚರವಾಗಿರಲಿ—ಬಹುಮಟ್ಟಿಗೆ ಘಟಿಸುತ್ತವೆಂದೇ ತೋರುವ ವಿಚಿತ್ರ ಸಂಗತಿಗಳ ಗಾಳಿಹೆಜ್ಜೆಯ ಸದ್ದು ನಮಗೆ ಕೇಳಿಸುವುದಿಲ್ಲ. ಹೀಗೆ ಅಗೋಚರವಾದ ಹಾಗೂ ಅನಿರೀಕ್ಷಿತವಾದ ಘಟನೆಗಳು ನಮ್ಮ ಪಥದಲ್ಲಿ ನಿರಂತರವಾಗಿ ಬಂದು ನಿಲ್ಲುತ್ತಿದ್ದರೂ, ಭವಿಷ್ಯದರ್ಶನ ಸ್ವಲ್ಪಮಟ್ಟಿಗಾದರೂ ಸಾಧ್ಯವಾಗುವಂತೆ ಮಾಡುವಷ್ಟು ಕ್ರಮಬದ್ಧತೆ ಮನಷ್ಯಜೀವನದಲ್ಲಿ ಉಂಟು. ಇದು ನಮ್ಮನ್ನಾಳುವ ದೈವೀ ಶಕ್ತಿಯ ಅಸ್ತಿತ್ವವನ್ನು ಸ್ಥಾಪಿಸುವುದಿಲ್ಲವೆ?

ಮೂಲ: ನತೇನಿಯಲ್ ಹಾಥಾರ್ನ್
'ಡೇವಿಡ್ ಸ್ವಾನ್'

ಅನುವಾದ: **ಸಿ. ಪಿ. ಕೆ.**

ದ್ರಷ್ಟುಮಿಚ್ಛಾಮಿ ತೇ ರೂಪಮೈಶ್ವರಂ*

೧

God said :
' Let there be light ',
And there was light.

ದೇವ ಕಣ್ತೆರೆಯೆ, ಬೆಳಕಾಗಿ, ಹೊರಹರಿದು ಕಿಡಿಹುಡಿಯ ಹೂವರಳಿತ್ತು
ಎಣಿಕೆಸೋಲುವ ಗುಂಪುಗುಂಪು–ಗೊಂಚಲು–ಬೆಳಕು :
ಬಾನಿನಂಗಳದ ಇಂಗಳದ ಮಳೆ ತಂಪಾಗಿ,
ಬೆಳುದಿಂಗಳಿನ ಮಂಗಳದ ಬಳ್ಳಿಯರಳ ಸೊಂಪಾಗಿ ;—

ಆ—

ಹಿರಿಬೆಳಕ ಬರಿಬೆಳಕ ಆಳಕಾಣದ ಬಾಳ ಸೆಲೆಯಿಂದ
ಚಿಲುಮೆ ಚಿಮ್ಮಿದ ಮೊದಲ ಚಿಲುವು ತುಂತುರು–ಬೆಳಕು :
ಕೋಟಿಸೂರ್ಯರ ಬೀಡು, ನಕ್ಷತ್ರಲೋಕ, ಆ ಬೆಳಕ ನಾಕ.
ಯಾರೆ ಹೊತ್ತಿಸದ ಆರದ ಕಾಣಬಾರದ, ಸ್ನೇಹಕೋರದ,
ಆ ಪರಂಜ್ಯೋತಿ ಬೆಳಕೂಡಿ ಮೂಡಿ ಬೆಳಗಿದ ಸಾಲುಸಾಲು ದೀಪ :
ಆ ಸ್ವಯಂ ಪ್ರಕಾಶನ, ಆದಿಪುರುಷನ, ಬೆಳಕು–ಮೈಸಿಡಿಯೆ ಮೂಡಿದಳು,
ಆ ದೀಪಗಳ ಬೆಳಕುಬೊಂಬೆ ಮೂಡಿದಳು, ಮೂಡಿ ಆಡಿದಳು,
ಆ ಚಿದಂಬರ ಪುರುಷ ತನುಜಾತೆ, ಅವನ ಜೊತೆ, ನಮ್ಮ ಆದಿಮಾತೆ ;
ಅವನ ಮೂಲಕೃತಿ, ಪುತ್ರಿ–ಪತ್ನಿ–ಪ್ರಕೃತಿ.
ನಾಮರೂಪವ ಧರಿಸಿ ಅವತರಿಸಿ ಮೆರೆದ
ಪರಮಪುರುಷನ ಮನದ ಹೊಮ್ಮುಗುಳು, ಮೈಬೆಳಕಿನರಳು,
ಅವನ ಸೃಷ್ಟಿಯ ಕಲೆಯ ಕಡೆದ ಬೆರಳು.

೨

ಓ ತಾಯೆ, ಓ ಮಾಯೆ,
ಪರಮಪುರುಷನ ಜಾಯೆ,
ಓ ಪ್ರಕೃತಿ, ಓ ವಿಕೃತಿ, ಅರಿತವರ ಸುಕೃತಿ,
ಓ ಪರಾತ್ಪರೆ, ರುಚಿರೆ, ಸೌಂದರ್ಯಸಾರೆ,
ನುಡಿಗೆ ನಿಲುಕದ ನಿಸರ್ಗ ನೀರೆ,
ಓ ವಿಶ್ವರೂಪಿಣಿ, ಓ ವಿಶ್ವಧಾರಿಣಿ !

* [ಗಣರಾಜ್ಯ ದಿನೋತ್ಸವದ ಅಂಗವಾಗಿ ೨೫–೧–೧೯೬೧ರಂದು ಆಕಾಶವಾಣಿಯ ದೆಹಲಿ ಕೇಂದ್ರವು ಏರ್ಪಡಿಸಿದ್ದ ಅಖಿಲ ಭಾರತೀಯ ಕವಿ ಸಮ್ಮೇಳನದಲ್ಲಿ ಓದಿ, ಪ್ರಸಾರವಾದ ಕವನ. ಆಕಾಶವಾಣಿಯ ಕೃಪೆಯಿಂದ ಪ್ರಕಟವಾಗಿದೆ.]

ದ್ರಷ್ಟುಮಿಚ್ಛಾಮಿ ತೇ ರೂಪಮೈಶ್ವರಂ :
ಹನಿ ಕಡಲ ಕಾಣಹೊರಟಂತೆ
ಕಿಡಿ ಅಗ್ನಿಯನು ಅಪ್ಪ ಬಯಸಿದಂತೆ,
ನಿನ್ನ ಕಾಣಲು ಬಂದೆ
ನಿನ್ನ ಸೇರಲು ಬಂದೆ;
ತೋರು ಮೊಗವ,
ಹರಸು ಮಗುವ.

೩

ನಿನ್ನ ರೂಪರಹಸ್ಯ ನಿನ್ನ ದ್ವೈವಿಧದಾಸ್ಯ :
ಏನಿದಕೆ ಭಾಷ್ಯ ?
ಹೊಳೆದಳಿವೆ, ಅಳಿದುಳಿವೆ, ಮೂಡಿಸುವೆ, ಮುಳುಗಿಸುವೆ :
ಏನು ಈ ಗೈಮೆಯ ಭವಿಷ್ಯ ?

ನೀನೊ, ಬೆಳಕಿನ ಅರಳು ; ಅಹಹ, ಕೆಳಗೇ ನೆರಳು !
ಏನಿದರ ಹುರುಳು ?
ಮೆಲ್ಲಿತ್ತು ಹೂ, ಹಿಡಿಯೆ ; ವಜ್ರವೋವೋ, ಹೊಡೆಯೆ !
ಸುಧೆಯೊಡನೆ ನಂಜು, ಕಡೆಯೆ.

ಅತ್ತ ಜ್ವಾಲಾಮುಖಿ, ನರ್ತಿಪಗ್ನಿಶಿಖಿ :
ಚಂಡಿ, ಚಾಮುಂಡಿ, ಕಾಳಿ ;
ಇತ್ತ ಸುಮಸೌಮ್ಯಮುಖಿ, ರಮಣೀಯ ಲಾಸ್ಯಶಿಖಿ :
ಲಲಿತೆ, ಲಾವಣ್ಯಲಕ್ಷ್ಮಿ.

ನೋಟಕ್ಕೆ ನೀ ಚೆಲುವೆ, ಆಟಕ್ಕೆ ಜೊತೆ ನಿಲುವೆ,
ಬೇಟಕ್ಕೆ ಬಯಸೆ ಬರುವೆ ;
ಪಾಟಕ್ಕೆ ನೀನೊಲಿವೆ, ಮಾಟಕೆ ನೀ ಸಲುವೆ,—
ಆದರೂ ಮುನಿದು ಇರಿವೆ !

ಹೊರಗಣ್ಣ ಮೃಣ್ಮಯಿ, ಒಳಗಣ್ಣ ಚಿನ್ಮಯಿ ;
ಲೋಕಲೋಕಗಳ ತಾಯಿ ;
ಸರ್ವಕ್ಕು ನೀನಾದಿ ; ಸರ್ವಕಂತೆ ಸಮಾಧಿ :
ನಿನಗೆ ನೀನೇ ವಿರೋಧಿ !

ವನದ ಕೋಕಿಲಕಂಠೆ, ಘನದ ರೌದ್ರ ನಿನಾದೆ ;
ನಿನ್ನ ಇಬ್ಬಗೆ ದನಿಯ ಮರ್ಮವೇನು ?
ಇರುಳ ಸಾವಿರಗಣ್ಣ ಸನ್ನೆನುಡಿಗಳವೇನು ?
ಹಗಲಿನುರಿಗಣ್ಣಿನಾಕ್ರೋಶವೇಕೆ ?

೪

ಮೂಡ ಬಾಗಿಲ ಹೊಸಿಲ ಹತ್ತಿ ಹೊನಗೆ ಚೆಲ್ಲಿ
ಋಷಿಯು ಹೃದಯುವ ಕದ್ದ ಕನ್ನೆರನ್ನೆ;
ಮೋಡಮಾಡವನಿಳಿದು ಚೆಂಗಾವಿಯನ್ನುಟ್ಟು
ಕವಿ ಜನಮನವ ಗೆದ್ದ ಚೆಲುವೆ ಚೆನ್ನೆ.

ಸುಗ್ಗಿಯಲಿ ಹೂಮುಡಿದು ಹಿಗ್ಗಿ ಕುಣಿಯುವ ಹುಡುಗಿ,
ಮಳೆಯಿಂದು ಹಸುರುಟ್ಟ ಹಬ್ಬ ಮುತ್ತೈದೆ;
ಮಾಗಿಯಲಿ ತ್ಯಾಗಿ, ತಪನಿಂತಿಹ ವಿರಾಗಿಣಿ:
ಏನು ನಿನ್ನೀ ನಾಟಕದ ನೀತಿಬೋಧೆ?

ಸೂತ್ರಧಾರನದಾರೊ ನಿನ್ನ ಕುಣಿಸುತ್ತಿಹನು,
ದಣಿಯದಲೆ ತಕ್ಕಥೈ ಕುಣಿವೆ ನಿತ್ಯ;
ಕುಣಿಕುಣಿಯ ಮೈಮರೆತು ತೊತ್ತಳತುಳಿದು ಕುಣಿವೆ
ಲೋಕಲೋಕಂಗಳನೆ—ಎಂಥ ನೃತ್ಯ!

ನಿನ್ನ ಮೋಹಕ ನೃತ್ಯಲಯದ ಬಲೆಸೆರೆಯಾಗಿ
ವಿಶ್ವದಣುಕಣವೆಲ್ಲ ಹುಚ್ಚುಕುಣಿಯುವುವು;
ನಿನ್ನ ಕುಣಿತದ ಕಲೆಯ ಜೇಡಬಲೆಗೆರೆಯಾಗಿ
ಬಳಿಸಾರಿ ತಾವಾಗಿ ಮುಡಿಯಮಣಿಯುವುವು.

ಸಪ್ತಸ್ವರಗಳ ಮೇಳ, ಸಪ್ತವರ್ಣದ ಜಾಲ,
ರೂಪರಸಗಂಧಗಳ ಜೇನುಗೂಡು;
ರೂಪರೂಪಾಂತರಕೆ ಚೈತನ್ಯಕಾರಿಕೆ:
ಕಡೆಗೆ ಸರ್ವವ ಬಳಿಗೆ ಸೆಳೆವ ಸೂಡು.

ಬಿಡಿನಿಂತು ನೀ ಬಿಂದು, ಒಡಗೂಡಿ ನೀ ಸಿಂಧು,
ಎಲ್ಲವೆಲ್ಲವು ನೀನೆ—ಒಂದೆ ಒಂದು;
ಇದ್ದೆ ನೀನಂದು, ಇಹೆ ಇಂದು ಮುಂದೆಂದೆಂದು,
ಮರಳಿ ಜನಿಸುವೆ ನೀನು ನಿನ್ನ ನೀ ತಿಂದು.

೫

ಓ ಪ್ರಕೃತಿ ಪಾರ್ವತಿ!
ರಾಮಣೀಯಕ ರೂಪ ದೀಪ ಲಕ್ಷ್ಮಿ,
ನಾದರೂಪಿಣಿ ವಾಣಿ,
ನಿನಗೆ ನಮನ, ನಿನಗೆ ನಮನ!
ಕೊಳ್ ಎನ್ನ ತನು ಮನ,
ನಿನಗರ್ಪಣ.

—ಮೈ ವೆಂ ಸೀ ರಾಘವ

‘ ಪಂಚತಂತ್ರ ’ದ ಪ್ರಪಂಚ ಪರ್ಯಟನ*

ಜನಪದ ಕಥೆಗಳು ಸ್ವಾಭಾವಿಕವಾಗಿಯೇ ಸಂಚಾರೀ ಸ್ವಭಾವದವು. ಆದರೆ, ಒಂದು ಕಥಾಸಂಗ್ರಹಕ್ಕೆ ಸಂಗ್ರಹವೇ ಇಡಿಯಾಗಿ ದೇಶದೇಶಾಂತರಗಳನ್ನು ಪ್ರವೇಶಿಸಿಯೂ, ತನ್ನ ‘ ಇಡಿ ’ ಸ್ವಭಾವವನ್ನು ಉಳಿಸಿಕೊಂಡು ಬಂದಿರುವುದು ಪ್ರಪಂಚದ ಸಾಹಿತ್ಯದಲ್ಲಿಯೇ ಒಂದು ಅಪೂರ್ವ ಸಂಗತಿ. ಪ್ರಪಂಚದಲ್ಲಿಯೇ ಅತ್ಯಂತ ಪ್ರಸಾರವಾಗಿರುವ ಕೆಲವೇ ಕೃತಿಗಳಲ್ಲಿ, ಭಾರತೀಯ ಜನಪದ ಕಥೆಗಳ ಸಂಗ್ರಹವಾದ ‘ಪಂಚತಂತ್ರ’ವೂ ಒಂದು. ಭರತಖಂಡದಲ್ಲಿ, ರಾಷ್ಟ್ರೀಯ ಪುರಾಣ ಕಾವ್ಯಗಳ ನಂತರ ಅತ್ಯಂತ ಹೆಚ್ಚು ಜನಪ್ರಿಯತೆಯನ್ನು ಗಳಿಸಿರುವುವೆಂದರೆ ಪಂಚ ತಂತ್ರದ ಕಥೆಗಳು. ಭಾರತದ ವಿವಿಧ ಭಾಗಗಳಲ್ಲಿ ದೊರೆಯುವ ಜನಪದ ಕಥೆಗಳೆಲ್ಲ, ಪಂಚತಂತ್ರದ ಕಥೆಗಳನ್ನು ಪರಿಷ್ಕರಿಸಿದ, ಹಿಗ್ಗಿಸಿದ, ಕುಗ್ಗಿಸಿದ, ಅಥವಾ ಪದ್ಯ ರೂಪಕ್ಕೆ ತಿರುಗಿಸಿದ, ಇಲ್ಲವೆ ಸರಳ ಗದ್ಯದಲ್ಲಿ ನಿರೂಪಿಸಿದವುಗಳೇ ಆಗಿವೆ. ಅಷ್ಟಲ್ಲದೆ ಅವುಗಳೆಲ್ಲ ಮೂಲ ಸಂಸ್ಕೃತದಿಂದ ದೇಶೀಯ ಭಾಷೆಗಳಿಗೆ ಭಾಷಾಂತರ ವಾಗಿದ್ದು, ಒಮ್ಮೊಮ್ಮೆ ಆ ದೇಶೀಯ ಭಾಷಾ ಮಾತೃಕೆಯನ್ನೇ ಆಧರಿಸಿ ಮತ್ತೆ ಸಂಸ್ಕೃತ ಭಾಷೆಗೆ ಭಾಷಾಂತರಿತವಾದ ಸೋಜಿಗದ ಉದಾಹರಣೆಗಳೂ ಇವೆ. ಈ ಪಂಚತಂತ್ರ ಕಥಾಸಂಗ್ರಹದ ಒಂದು ಅಥವಾ ಹೆಚ್ಚು ಭಾಷಾಂತರಗಳಿಲ್ಲದ ಭಾರತೀಯ ಸಾಹಿತ್ಯವೇ ಇಲ್ಲವೆಂದು ಹೇಳಬಹುದು.

ಪರ-ಭಾರತೀಯ (EXTRA-INDIAN) ಭಾಷೆಗಳಲ್ಲಿ ಪಂಚತಂತ್ರ

‘ ಪಂಚತಂತ್ರ ’ ಭರತಖಂಡದ ಹೊರಭಾಷೆಗಳಲ್ಲಿ ಹಬ್ಬಿ ಹಸರಿಸಿರುವ ವಿಷಯ, ಅದರ ಚರಿತ್ರೆಯಲ್ಲಿಯೇ ಬಹು ಸೋಜಿಗದ ಸಂಗತಿಯಾಗಿದೆ. ಜರ್ಮನಿಯ ಇಂಡಾಲಜಿಸ್ಟ್ ಆದ ಯೋಹಾನೆಸ್ ಹೆರ್ಟೆಲ್ (Johnnes Hertel) ಈ ಬಗ್ಗೆ ಆಳವಾದ ಸಂಶೋಧನೆ ಮಾಡಿದ್ದಾರೆ. ಅಲ್ಲದೆ, ‘ ಪಂಚತಂತ್ರ ’ದ ಹಲವಾರು ವಿಮರ್ಶನಾತ್ಮಕ ಸಂಪಾದನೆಗಳನ್ನು (Editions) ಪ್ರಕಟಿಸಿದ ಹಾಗೂ ಪಂಚತಂತ್ರದ ಪರ್ಯಟನದ ಚರಿತ್ರೆಯನ್ನು ಸವಿಸ್ತಾರವಾಗಿ ಅಭ್ಯಾಸಮಾಡಿದ ಕೀರ್ತಿ ಅವರದಾಗಿದೆ. ಅವರು, ೧೯೧೪ರಲ್ಲಿ ಪ್ರಕಟವಾದ ತಮ್ಮ ಗ್ರಂಥದಲ್ಲಿ[1] ತಾವು ಸಂಗ್ರಹಿಸಿದ ಮಾಹಿತಿಗಳ ಆಧಾರದ ಮೇಲೆ ಈ ಪಂಚತಂತ್ರ ಪ್ರಪಂಚದ ಸುಮಾರು ಐವತ್ತು ಅರುವತ್ತು ಭಾಷೆಗಳಲ್ಲಿ, ಇನ್ನೂರಕ್ಕಿಂತ ಹೆಚ್ಚು ರೂಪಾಂತರ ಗಳಲ್ಲಿ ಕಾಣಸಿಗುತ್ತದೆ ; ಅದರಲ್ಲಿ ಇನ್ನೂ ವಿಶೇಷವೆಂದರೆ, ಇವುಗಳಲ್ಲಿ ಮುಕ್ಕಾಲು

---

* ಈ ಲೇಖನದಲ್ಲಿ ಬರುವ ಅಡಿಟಿಪ್ಪಣಿಗಳನ್ನು ಕೊನೆಯಲ್ಲಿ ಕೊಡಲಾಗಿದೆ.

ಮೂರು ವೀಸೆ ಭಾಷೆಗಳಲ್ಲಿರುವ ಪಂಚತಂತ್ರಕ್ಕೆ ಮೂಲ ಭಾರತೀಯ ಪಂಚತಂತ್ರವಲ್ಲ, ಪರಭಾರತೀಯ ಪಂಚತಂತ್ರ ಎಂದು ಹೇಳಿದ್ದಾರೆ. ಮೇಲೆ ತಿಳಿಸಿದ ಪುಸ್ತಕ ಪ್ರಕಟವಾದನಂತರ ಈ ನಲವತ್ತೈದು ವರ್ಷಗಳಲ್ಲಿ ನಡೆದ ಸಂಶೋಧನೆಗಳು ಶ್ರೀ ಹೆರ್ಟೆಲ್ ಅವರ ಗಣನೆಯನ್ನು ಮೀರಿಸಿವೆ. ಪಂಚತಂತ್ರದ ವಿದೇಶ ಪರ್ಯಟನದ ಪ್ರಸರಣ ಪೂರ್ವದಲ್ಲಿ ಜಪಾನ್, ಜಾವಾ ದ್ವೀಪಗಳಿಂದ ಹಿಡಿದು, ಪಶ್ಚಿಮದಲ್ಲಿ ಐಸ್‌ಲ್ಯಾಂಡ್ ಮತ್ತು ಸ್ಪೆಯಿನ್‌ವರೆಗೂ ವಿಸ್ತರಿಸಿರುವ ಯುರೇಷಿಯಾ ಖಂಡಗಳಲ್ಲೆಲ್ಲಾ, ಅಷ್ಟೇ ಅಲ್ಲದೆ, ಆಫ್ರಿಕಾ ಖಂಡದ ಕೆಲವು ಭಾಗಗಳಲ್ಲಿಯೂ ಹಬ್ಬಿದೆ. ಶ್ರೀ ಹೆರ್ಟೆಲ್ ಅವರಂತೆಯೇ ಸವಿಸ್ತಾರವಾದ, ಆಳವಾದ ಅಭ್ಯಾಸಮಾಡಿರುವ ಫ್ರ್ಯಾಂಕ್ಲಿನ್ ಎಜರ್ಟನ್ (Franklin Edgerton) ಅವರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ವಿವರಿಸುತ್ತಾ ಪಂಚತಂತ್ರದ ಹಬ್ಬುವಿಕೆಯ ಬಗ್ಗೆ ನಾವು ಎಷ್ಟೇ ಉತ್ಪ್ರೇಕ್ಷಿತ ಅಂದಾಜು ಮಾಡಿದರೂ, ಅದೂ ಇನ್ನೂ ಕಡಿಮೆ ಅಂದಾಜಾಗಿಯೇ ಪರಿಣಮಿಸುತ್ತದೆ ಎಂದು ಹೇಳಿದ್ದಾರೆ.[2] ಎಂದ ಮೇಲೆ ಈ ಪಂಚತಂತ್ರದ ವಿಸ್ತಾರ, ವೈವಿಧ್ಯ, ಗಣನಾತೀತವಾಗಿವೆ ಎಂದು ಹೇಳಬಹುದು.

ಈ ಪಂಚತಂತ್ರ ಭರತಖಂಡದ ಭಾಷೆಗಳಲ್ಲಿಯೇ ಹೇಗೆ ಶಾಖೋಪಶಾಖೆಗಳಾಗಿ ಹಬ್ಬಿದೆ ಎಂದು ತಿಳಿದುಕೊಳ್ಳುವ ವಿಷಯವನ್ನು ಸದ್ಯಕ್ಕೆ ಒತ್ತಟ್ಟಿಗಿರಿಸಿ, ಭಾರತದ ಗಡಿಗೆರೆಗಳನ್ನು ದಾಟಿ ಎಲ್ಲೆಲ್ಲಿ ಹೇಗೆ ಹಸರಿಸಿದೆ ಎಂಬುದನ್ನು ಮಾತ್ರ ಇಲ್ಲಿ ಗಮನಿಸೋಣ. ಅಷ್ಟಲ್ಲದೆ, ಇತ್ತೀಚೆಗೆ ಸರಕಾರಗಳ ಅಥವಾ ಖಾಸಗಿ ಸಂಸ್ಥೆಗಳ ಪ್ರಯತ್ನಗಳಿಂದ ವಿಶ್ವದ ಅತ್ಯುತ್ತಮ ಕೃತಿಗಳು ಇತರ ಭಾಷಾ ಸಾಹಿತ್ಯಗಳಿಗೆ ಭಾಷಾಂತರವಾಗುತ್ತಿವೆ. ಅಂಥ ಕೃತಿಗಳಲ್ಲಿ ಪಂಚತಂತ್ರವೂ ಒಂದು. ಹೀಗೆ, ಇತ್ತೀಚೆಗೆ ಪಂಚತಂತ್ರ ಹರಡಿದ ವಿಷಯವನ್ನೂ ಇಲ್ಲಿ ಪ್ರಸ್ತಾಪಿಸಿಲ್ಲ. ಆಧುನಿಕ ಸೌಕರ್ಯಗಳೊಂದೂ ಇಲ್ಲದ, ಸುಸಜ್ಜಿತ ಸರಕಾರ–ಸಂಸ್ಥೆಗಳ ನೆರವೇನೂ ಇಲ್ಲದ, ಹಿಂದಿನ ಕಾಲದಲ್ಲಿ ತನ್ನ ಸಾಹಿತ್ಯಾಂಶ, ಹಾಗೂ ಹೃದಯ ವೀಣೆಯನ್ನು ಮಿಡಿಯುವ ಸೌಂದರ್ಯ, ನೀತಿಯ ಅಂಶಗಳ ಕಾರಣವಾಗಿ ಮಾತ್ರ ಪಂಚತಂತ್ರ ಕಾಲಕಾಲಕ್ಕೆ ಹೇಗೆ ಪ್ರಸಾರಗೊಂಡಿದೆ ಎಂಬುದನ್ನಷ್ಟೇ ಇಲ್ಲಿ ಗಮನಿಸಿದೆ. ಆದರೆ, ಪಂಚತಂತ್ರ ರಚಿತವಾದಂದಿನಿಂದ, ಇಪ್ಪತ್ತನೆಯ ಶತಮಾನ ಪ್ರಾರಂಭವಾಗುವವರೆಗೆ, ಆದ ಸ್ಥಿತ್ಯಂತರಗಳನ್ನು ಮಾತ್ರ ಇಲ್ಲಿ ವಿವರಿಸಲು ಯತ್ನಿಸಲಾಗಿದೆ. ಇನ್ನೊಂದು ಮುಖ್ಯ ವಿಷಯ: ಪ್ರಕೃತಲೇಖನದಲ್ಲಿ ಪಂಚತಂತ್ರದ ಕಥಾಗುಚ್ಛಕ್ಕೆ ಗುಚ್ಛವೇ ಭಾಷಾಂತರವಾದ ಸಂಗತಿಗೆ ಮಾತ್ರ ಪ್ರಾಮುಖ್ಯತೆ ಕೊಟ್ಟು, ಅದರ ಕೆಲಕೆಲವು ಕಥೆಗಳಾಗಲೀ, ಆಯಾ ಕಥೆಗಳ ಅಂತರ್ಭಾವ ಅಥವಾ ಸಾರವಾಗಲೀ ಹೇಗೆ ಪರಿವರ್ತಿತವಾಗಿ ರೂಪಧಾರಣೆ ಮಾಡಿಕೊಂಡಿವೆ ಎನ್ನುವ ವಿಸ್ತಾರವಾದ ವಿಷಯಕ್ಕೂ ಕೈಹಾಕಿಲ್ಲ. ಈ ಎಲ್ಲ ವಿಷಯಗಳು ಪ್ರತ್ಯೇಕವಾದ ಸಂಶೋಧನೆಯ ಅಂಶಗಳೇ ಆಗಿವೆ; ಸಂಶೋಧಕರಿಗೆ ಆಹ್ವಾನವನ್ನು ನೀಡುತ್ತಿವೆ.

ಪಂಚತಂತ್ರದ ಮೂಲ

ಈ ಪಂಚತಂತ್ರ ಕಥೆಗಳ ಮೂಲಗ್ರಂಥ, ಆ ಕವಿಯಿಂದ ರಚಿತವಾದ ರೀತಿಯಲ್ಲಿಯೇ ಉಳಿದುಕೊಂಡುಬಂದಿಲ್ಲ. ಅದರ ಮೂಲರೂಪ, ಶೈಲಿ, ಹಾಗೂ ತಂತ್ರ(Technique)ಗಳು ಹೀಗೆಯೇ ಇದ್ದಿರಬಹುದೆಂದು ಊಹೆಯಿಂದ ತಿಳಿದುಕೊಳ್ಳಬೇಕಾಗಿದೆ, ಅಷ್ಟೆ. ಅದರ ಬಾಹ್ಯ ಮತ್ತು ಆಂತರಿಕ ಕಾರಣಗಳಿಂದ ಈ ಪಂಚತಂತ್ರ ಕ್ರಿ. ಶ. ದ ಪ್ರಾರಂಭದಲ್ಲಿ ರಚಿತವಾಗಿರಬೇಕೆಂದು ನಿಶ್ಚಯಿಸಲಾಗಿದೆ. ಈ ಕೃತಿಯ ವಿವಿಧ ಪರಿಷ್ಕರಣಗಳು, ವಸ್ತು, ಶೈಲಿ, ತಂತ್ರ ಹಾಗೂ ಭಾಷೆಗಳಲ್ಲಿ ತಾರತಮ್ಯ ಗುಣ ಉಳ್ಳವುಗಳಾದರೂ, ಅವೆಲ್ಲ ವಿಷ್ಣುಶರ್ಮನ ‘ ಪಂಚತಂತ್ರ ’ ಹಾಗೂ ಅದರಿಂದ ಸಂಪಾದಿತವಾದ ನಾರಾಯಣನ ‘ ಹಿತೋಪದೇಶ ’ ಮತ್ತು ವಸುಭಾಗನ ‘ ತಂತ್ರೋಪಾಖ್ಯಾನ ’*ದಿಂದ ಕವಲೊಡೆದುವುಗಳೆಂದು ಹೇಳಬಹುದು. ಸಾಧಾರಣವಾಗಿ ಭಾರತೀಯ ಹಾಗೂ ಪಾಶ್ಚಾತ್ಯ ಅನುವಾದಗಳೆಲ್ಲ ವಿಷ್ಣುಶರ್ಮನ ‘ ಪಂಚತಂತ್ರ ’ದ ಸಮಾಪವರ್ತಿಗಳಾಗಿವೆ. ಆದರೆ ಬರ್ಮಾ, ಮಲಯಾ ಮುಂತಾದ ವಿಶಾಲ ಭಾರತದ ದೇಶಗಳಲ್ಲಿ ವಸುಭಾಗನ ಪಂಚತಂತ್ರದ ಶಾಖೆಗಳೇ ಹಬ್ಬಿವೆ.[3]

ಪಹೆಲ್ವಿ (ಪಾಲವಿ) ಭಾಷೆಯ ರೂಪಾಂತರಗಳು

ಈ ಪಂಚತಂತ್ರ ಪಶ್ಚಿಮದ ದೇಶಗಳನ್ನು ಪ್ರವೇಶಿಸಿದ್ದು ಆಕಸ್ಮಿಕವಾಗಿ ಮಾತ್ರವಾದರೂ, ಅತ್ಯದ್ಭುತ ಪರಿಣಾಮಗಳನ್ನುಂಟುಮಾಡಿದೆ. ಇದು ದೇಶ ದೇಶಾಂತರಗಳಿಗೆ ವಲಸೆಹೋದ ಬಗ್ಗೆ ಅನೇಕ ಕಥೆಗಳಿವೆ. ಆದರೆ, ಅವೆಲ್ಲವುಗಳ ಸಾರಾಂಶ ಇಷ್ಟೆ: ಪರ್ಷಿಯಾ ದೇಶವನ್ನು ಕ್ರಿ. ಶ. ೫೩೧ರಿಂದ ೫೭೯ರ ವರೆಗೆ ಆಳುತ್ತಿದ್ದ ಸಸಾನಿಯಾದ ದೊರೆ ಖುಸ್ರೋನೌಷೇರ್ವಾನ್(Khosrauanosharwan), ಸತ್ತವರನ್ನು ಬದುಕಿಸುವ ಗಿಡಮೂಲಿಕೆಯೊಂದು ಭರತಖಂಡದಲ್ಲಿದೆ ಎಂಬ ಸುದ್ದಿಯನ್ನು ಕೇಳಿ ಅತ್ಯಂತ ಆಸೆಯಿಂದ ತನ್ನ ಆಸ್ಥಾನದ ವೈದ್ಯನಾದ ಬರ್ಜೂಯಿ (Burzoe)ಯನ್ನು ಹಿಂದೂದೇಶಕ್ಕೆ ಕಳುಹಿಸಿ, ಆ ಗಿಡಮೂಲಿಕೆಯನ್ನು ತನಗೆ ತಂದುಕೊಡಬೇಕೆಂದು ಆಜ್ಞೆಮಾಡಿದನು. ಆ ವೈದ್ಯ, ಹಿಂದೂದೇಶಕ್ಕೆ ಬಂದು, ಇನ್ನಿಲ್ಲ ಎನ್ನುವಷ್ಟು ಹುಡುಕಾಡಿದ. ಆದರೆ, ಅವನ ಶ್ರಮವೆಲ್ಲ ನಿಷ್ಪ್ರಯೋಜಕವಾಯಿತು. “ ಅಂಥ ಔಷಧ ಬೇರಿನ್ನೇನೂ ಇರಲಿಕ್ಕಿಲ್ಲ, ಮಂದಮತಿಗಳನ್ನು ಮುತ್ಸದ್ದಿಗಳನ್ನಾಗಿ ಮಾಡಬಲ್ಲ ಪಂಚತಂತ್ರ ಪುಸ್ತಕವನ್ನೇ ಹಾಗೆ ರೂಪಕವಾಗಿ ವರ್ಣಿಸಿರಬೇಕು ” ಎಂದೊಬ್ಬ ಮುದುಕ ಆ ವೈದ್ಯನಿಗೆ ತಿಳಿಸಿದನಂತೆ. ಇದನ್ನು ತಿಳಿದ ಬರ್ಜೂಯಿ, ಕೂಡಲೇ ‘ ಪಂಚತಂತ್ರ ’ದ ಪ್ರತಿಯೊಂದನ್ನು ಪ್ರಯತ್ನಪೂರ್ವಕವಾಗಿ ದೊರಕಿಸಿ, ಆ ಕಥೆಗಳ ಜೊತೆಗೆ, ಕೆಲವು ಮಹಾಭಾರತದ ಕಥೆ

---

* ಈ ಬಗ್ಗೆ ಇನ್ನೂ ಮುಂದೆ ನೋಡಿ.

ಗಳನ್ನೂ ಸೇರಿಸಿ, ಅಂದಿನ ರಾಜಭಾಷೆಯಾದ ಪೂರ್ವ ಪಹೆಲ್ವಿ(Old Pahlavi)ಗೆ ಭಾಷಾಂತರಿಸಿಕೊಂಡು, ತನ್ನ ದೇಶಕ್ಕೆ ಹೊರಟ. ಈ ಕಥೆಗಳನ್ನು ಕೇಳಿ ಆ ದೊರೆ, ನಿಜವಾದ ಸಂಜೀವಿನೀ ಮೂಲಿಕೆ ದೊರೆತುದಕ್ಕಿಂತಲೂ ಹೆಚ್ಚು ಸಂತೋಷಪಟ್ಟ. ಬರ್ಜೂಯಿ ಪಂಚತಂತ್ರದ ಪ್ರಾಸ್ತಾವಿಕ ಕಥೆಯನ್ನು ತನ್ನ ಭಾಷಾಂತರದಲ್ಲಿ ಕೈಬಿಟ್ಟು, ತಾನು ಆ ಕೃತಿಯನ್ನು ದೊರಕಿಸಿಕೊಂಡ ಕಥೆಯನ್ನು ಸೇರಿಸಿ, ಮೊದಲನೆಯ ತಂತ್ರವಾದ 'ಸುಹೃದ್ಭೇದ'ದಲ್ಲಿ ಪ್ರಮುಖ ಪಾತ್ರವಹಿಸುವ ಕರಟಕ, ದಮನಕರೆಂಬ ತಂತ್ರಗಾರ ನರಿಯಣ್ಣಗಳ ಹೆಸರನ್ನೇ ತನ್ನ ಪಹೆಲ್ವಿಯ ಭಾಷಾಂತರಕ್ಕೆ ಇಟ್ಟುಬಿಟ್ಟ ! ಪೂರ್ವ ಪಹೆಲ್ವಿಯ ಈ ಗ್ರಂಥ ಈಗ ಕಾಣಸಿಗುವುದಿಲ್ಲ. ಆದರೆ, ಅದರಿಂದ ಹೊರಟ ಭಾಷಾಂತರಗಳನ್ನು ಗಮನಿಸಿ, ಆ ಮೂಲಕೃತಿಯ ಅಂಶಗಳನ್ನು ಊಹಿಸಿಕೊಳ್ಳಬೇಕಾಗಿದೆ.

ಸಿರಿಯಾ ಭಾಷೆಯ ಕೃತಿಗಳು

ಬರ್ಜೂಯಿಯ ಪಹೆಲ್ವಿಯ ಕೃತಿಯಿಂದ ಅನೇಕಾನೇಕ ಭಾಷಾಂತರ ರೂಪಾಂತರಗಳು ಕ್ರಿ. ಶ. ೬ರಿಂದ ೧೬ನೆಯ ಶತಮಾನದವರೆಗೆ ಮೂಡಿಬಂದಿವೆ. ಮೊಟ್ಟಮೊದಲು, ಕ್ರಿ. ಶ. ೫೭೦ರಲ್ಲಿ ಪರ್ಷಿಯಾ ಆಸ್ಥಾನದಲ್ಲಿದ್ದ, ಪರ್ಷಿಯನ್ ಕ್ರಿಶ್ಚಿಯನ್ ಬೂದ್ (Būd), ಪ್ರಾಚೀನ ಸಿರಿಯಾ ಭಾಷೆಗೆ ಇದನ್ನು ಕಲೀಲ ಒ ದಮ್ನ (Kålilag And Damnag) ಎನ್ನುವ ಹೆಸರಿನಲ್ಲಿ ಭಾಷಾಂತರಿಸಿದನು. ಈ ಗ್ರಂಥ ಈಗಲೂ ಮುದ್ರಿತ ಸ್ಥಿತಿಯಲ್ಲಿ ದೊರೆಯುತ್ತದೆ. ಅಷ್ಟಲ್ಲದೆ, ಇದರ ಎರಡು ಭಾಷಾಂತರಗಳು ಜರ್ಮನಿ ಭಾಷೆಯಲ್ಲಿ ಇಂದಿಗೂ ಇವೆ.[4]

ಅರೇಬಿಯಾದ ರೂಪಾಂತರಗಳು

ಎಂಟನೆಯ ಶತಮಾನದಲ್ಲಿ ಈ ಪಹೆಲ್ವಿಯ ಕೃತಿಯ ಭಾಷಾಂತರಗಳು ಅರೇಬಿಯಾ ಭಾಷೆಯಲ್ಲಿ ಹಲವಾರು ಬಂದಿವೆ. ಅವುಗಳಲ್ಲಿ ಮುಖ್ಯವಾದ ಮೂರು ಕೃತಿಗಳ ವಿಷಯ ಮಾತ್ರ ತಿಳಿದಿದೆ. ಅವುಗಳಲ್ಲಿ ಅಬ್ದುಲ್ಲಾ : ಇಬ್ನಲ್ ಮುಖಫಾ (Abdullah Ibn Al-Moqaffa) ಎಂಬುವನಿಂದ ಗದ್ಯರೂಪಕ್ಕೆ ತಿರುಗಿಸಿದ ಕೃತಿ ಬಹು ಮುಖ್ಯವಾದುದು. ಅವನು ಮಜ್‌ಡೆಯಿಜಂ[5] ಎಂಬ ಧರ್ಮದಿಂದ ಇಸ್ಲಾಮ್ ಧರ್ಮಕ್ಕೆ ಬಂದು ಸೇರಿಕೊಂಡವನು. ಅವನು ಕ್ರಿ. ಶ. ೭೫೦ರಲ್ಲಿ ಸತ್ತುಹೋದನೆಂದು ತಿಳಿದುಬಂದಿದೆ. ಇನ್ನುಳಿದ ಎರಡು ಭಾಷಾಂತರಗಳಲ್ಲಿ, ಅಬ್ದುಲ್ಲಾ: ಬಿನ್ ಅಲೀ ಅಲ್ ಅಹವಾಜ್ (ಶಿ. ೭೮೧) ಎನ್ನುವವನ ಗದ್ಯರೂಪದ ಅವತರಣಿಕೆಯೂ, ಸಹಲ್‌ಬಿನ್ ನೌಬತ್ (೮ ಶತ. ಕೊನೆ) ಅವನ ಪದ್ಯರೂಪದ ಭಾಷಾಂತರವೂ ಈಗ ದೊರೆಯುವುದಿಲ್ಲ. ಆದರೂ, ಅವುಗಳ ವಿಷಯ, ಅಲ್ಲಲ್ಲಿ ದೊರೆಯುವ ಉದ್ಧೃತ ಅಂಶಗಳಿಂದ ತಿಳಿದುಬರುತ್ತದೆ. ಮುಖಫನ ಕೃತಿ ಬಹು ಜನಪ್ರಿಯವಾಗಿದ್ದಿತು. ಅದರ ಕೈಬರಹದ ಪ್ರತಿಗಳು ಇಂದಿಗೂ ದೊರೆಯುತ್ತವೆ.

ಅದರ ಸ್ಥಳೀಯ ಪ್ರಕಟನೆಗಳೂ ಬೇಕಾದಷ್ಟಿವೆ. ಆದರೆ ಕ್ರಿ. ಶ. ೧೮೧೬ರಲ್ಲಿ ಅದರ ಪ್ರಪ್ರಥಮ ಭಾಷಾಂತರ ಯುರೋಪಿಯನ್ ಭಾಷೆಗಳಲ್ಲಿ ಕಾಣಿಸಿಕೊಂಡಿತು. (Silvestre De Sacy, Calila Et Dimna). ಅದರಲ್ಲಿ ಶ್ರೀ. ಎಲ್. ಚೈಖೋ (Beyrouth 1905, 1923) ಅವರ ಸಂಸ್ಕರಣವೇ ಸಂಪೂರ್ಣವೂ, ವಿಮರ್ಶಾತ್ಮಕವೂ ಆಗಿದೆ. ಇಷ್ಟಲ್ಲದೆ, ಇಂಗ್ಲಿಷ್, ಜರ್ಮನ್, ಡೇನಿಷ್, ಫ್ರೆಂಚ್, ರಷ್ಯನ್, ಇಟ್ಯಾಲಿಯನ್, ಸ್ಪ್ಯಾನಿಷ್, ಜೆಕ್ ಭಾಷೆಗಳಲ್ಲಿಯೂ, ಮುಖಫನ ಈ ಕೃತಿ ಭಾಷಾಂತರವಾಗಿದೆ.[6]

ಮುಖಫನ ಗದ್ಯಕಥೆಯಿಂದ, ಅರೇಬಿಯಾ ಭಾಷೆಯಲ್ಲಿಯೇ ಹಲವಾರು ಪದ್ಯ ಭಾಷಾಂತರಗಳುಂಟಾಗಿವೆ. ಈ ಮುಖಫನಂತೆಯೇ ಕ್ಯಾಲಿಫ್(ಶಿ. ೭೫೦)ನ ಆಸ್ಥಾನಕವಿಯಾಗಿದ್ದ ಅಬುಲ್ ಫಾರ್ಸಿ, ಸು. ಶಿ. ೮೦೦ರ ಕೊನೆಯಲ್ಲಿದ್ದ ಬರ್ಮಿ ಸೈಡ್ಸ್‌ನ ಆಸ್ಥಾನದಲ್ಲಿದ್ದ ಅಬ್ನಲ್ ಲಾಹಿಖಿ, ಕ್ಯಾಲಿಪ್ ಹಾರೂನಲ್ ರಷೀದ್ (ಶಿ. ೧೧೦೦)ಳ ಕಾರ್ಯದರ್ಶಿಯಾಗಿದ್ದ ಅಲಿ ಇಬ್ನ ದಾವೂದ್, ಬೆಹರ್ ಇಬ್ನುಲ್ ಮೋತಮುದ್ (ಕೆಲವು ಭಾಗಗಳನ್ನು ಮಾತ್ರ), ಮಹಮುದ್ ಅಲ್ ಹಬಾರಿಯಾ (ಶಿ. ೧೧೦೦), ಇಬ್ನ್ ಮಾಮತಿ ಅಲ್ ಮಿಸ್ರಿ (೧೨೦೦ರಲ್ಲಿ ಸತ್ತನು.), ಜಲಾಲುದ್ದೀನ್ ಅನ್ ಸಖ್‌ಷ್ (ಶಿ. ೧೪೦೦), ಮತ್ತು ಅಬ್ದುಲ್ ಮೊಮಿನ್ ಇಬ್ನ ಹಸನ್ ಅಸ್ ಸಘಾನಿ (ಕ್ರಿ. ಶ. ೧೨೪೨) ಮೊದಲಾದವರೂ ಭಾಷಾಂತರ ಮಾಡಿದ್ದಾರೆ.

' ಕಲೀಲ್ ಒ ದಮ್ನ 'ದ ಅರೇಬಿಯವಲ್ಲದ ಭಾಷಾಂತರಗಳು

ಹನ್ನೊಂದು, ಹನ್ನೆರಡನೆಯ ಶತಮಾನದಲ್ಲಿ, ಅಜ್ಞಾತ ಕವಿಯೊಬ್ಬನಿಂದ, ಈ ಮುಖಫನ ಪ್ರಪ್ರಥಮ ಭಾಷಾಂತರ ಆಧುನಿಕ ಸಿರಿಯಾಕ್ ಭಾಷೆಯಲ್ಲಿ ರಚಿತವಾಗಿದೆ (Ed. Wright. 1884). ಈ ಕೃತಿ ಕೀತ್ ಫಾಲ್ಕೊನರ್ (Keith-Falconer, Cambridge 1885) ಅವರ ಭಾಷಾಂತರದ ಮೂಲಕ ಇಂಗ್ಲೆಂಡಿನಲ್ಲಿ ಸುಪ್ರಸಿದ್ಧವಾಯಿತು. ಹನ್ನೊಂದನೆಯ ಶತಮಾನದ ಅಂತ್ಯದಲ್ಲಿ ಸಿಮಿಯನ್ ಸೇಟ್ (Symeon Seth) ಅವರಿಂದ, ಮುಖಫನ ಕೃತಿ ಗ್ರೀಕ್ ಭಾಷೆಯಲ್ಲಿ ರೂಪತಾಳಿತು.[7] ಅನಂತರ ಈ ಕೃತಿಯೇ ಮೂಲ ಮಾತೃಕೆಯಾಗಿ, ಹಳೆ ಸ್ಲಾವೊನಿಕ್,[8] ಇಟ್ಯಾಲಿಯನ್,[9] ಲ್ಯಾಟಿನ್[10] ಮತ್ತು ಜರ್ಮನ್[11] ಭಾಷೆಗಳಲ್ಲಿ ಪಂಚತಂತ್ರ ಕಾಣಿಸಿಕೊಂಡಿತು. ೧೩ನೆಯ ಶತಕದ ಮಧ್ಯಭಾಗದಲ್ಲಿ, ಅಜ್ಞಾತ ಕವಿಯೊಬ್ಬನಿಂದ ಈ ಕೃತಿ ಪ್ರಾಚೀನ ಸ್ಪೈಯಿನ್ ಭಾಷೆ[12]ಯಲ್ಲಿ ರಚಿತವಾಯಿತು. ಕ್ರಿ. ಶ. ೧೩೧೩ಕ್ಕಿಂತ ಮೊದಲು ರೈಮಾಂಡ್ ಡಿಬೆಝಿಯಾ (Raymond De Beziers) ಅವರು ಜಾನ್ ಆಫ್ ಕಾಪುವ(John of Capua)ದಿಂದಲೂ ವಿಷಯವನ್ನು ಸಂಗ್ರಹಿಸಿ ಪಂಚತಂತ್ರದ ಲ್ಯಾಟಿನ್ ಭಾಷಾಂತರವನ್ನು[೧೩] ರಚಿಸಿ

ದರು. ಈ ಕಾಲಕ್ಕಿಂತ ಸ್ವಲ್ಪ ಮುಂಚೆ ರಬ್ಬಿ ಯೋಯೆಲ್[೧೪] (Rabbi Joel) ಅವರಿಂದ ಭಾಷಾಂತರವಾಯಿತೆಂದು ಹೇಳುವ ಹೀಬ್ರೂ ಭಾಷಾಂತರವೂ ಅಸ್ತಿತ್ವಕ್ಕೆ ಬಂದಿದ್ದಿತು.

ಜಾನ್ ಆಫ್ ಕಾಪುವ

'ಜಾನ್ ಆಫ್ ಕಾಪುವ'ದ ಸುಪ್ರಸಿದ್ಧ ಲ್ಯಾಟಿನ್ ಭಾಷಾಂತರವಾದ ಲಿಬರ್ ಕಲಿಲೊ ಎಟ್ ಡಿಮನೋ : ಡಿರೆಕ್ಟೋರಿಯಮ್ ವಿಟೀ ಹ್ಯುಮೆನೆ (c. 1270) (Liber Keliloe Et Dimnoe : Directorium Vitae Humanae) ಎಂಬುದಕ್ಕೂ ಈ ಹೀಬ್ರೂ ಭಾಷೆಯ ಭಾಷಾಂತರವೇ ಮೂಲ ಮಾತೃಕೆಯಾಗಿದೆ. ಯುರೋಪಿನಲ್ಲಿ ಅಚ್ಚಿನ ಸೌಕರ್ಯಗಳು ಆಗತಾನೇ ಸಂಶೋಧನೆಗೊಂಡಿದ್ದರೂ ಕ್ರಿ. ಶ. ೧೪೮೦ರ ಸರಿಸುಮಾರಿನಲ್ಲಿ ಕಾಪುವನ ಪಂಚತಂತ್ರ ಎರಡು ಸಂಸ್ಕರಣಗಳನ್ನು ಪಡೆದು, ಎರಡುಬಾರಿ ಅಚ್ಚಾಗಿದ್ದಿತು. ಈ ಕೃತಿಯ ವಿಮರ್ಶಾತ್ಮಕ ಸಂಪಾದನೆಯನ್ನು ಜೆ. ಡೆರಿನ್‌ಬೂರ್ (J. Derenbourg) ಅವರು ಪ್ಯಾರಿಸ್‌ನಲ್ಲಿ ೧೮೯೯ ರಲ್ಲಿಯೇ ಪ್ರಕಟಿಸಿದರು. ಯೂರೋಪ್ ಖಂಡದಲ್ಲಿ ಪಂಚತಂತ್ರ ಪಸರಿಸಲಿಕ್ಕೆ ಈ ಕೃತಿ ಹೇಳಿಕೊಳ್ಳುವಷ್ಟು ಸಹಾಯಮಾಡಿದೆ. ಈ ಕೃತಿಯೇ ನೇರವಾಗಿ ಇತರ ಭಾಷೆಗಳಿಗೆ ಭಾಷಾಂತರಗೊಂಡಿರುವುದಲ್ಲದೆ ಆ ಭಾಷಾಂತರಗಳ ಮರು ಭಾಷಾಂತರಗಳಿಂದಲೂ ಯೊರೋಪಿನಲ್ಲಿ ಪಂಚತಂತ್ರ ಹಬ್ಬಿ ಹರಡಿದೆ. ಹದಿನೈದನೆಯ ಶತಕದ ಅಂತ್ಯಭಾಗದಲ್ಲಿ ಶ್ರೀ ಎವೋನ್ ಪೂರ್ (Avan Pforr) ಅವರ ಸುಪ್ರಸಿದ್ಧ ಭಾಷಾಂತರವಾದ ಬುಖಡರ್ ಬೈಸ್ಪಿಲೆ(Buchder Beispiele)ಯ ಇಟ್ಯಾಲಿಯನ್ ಮಾತೃಕೆ(ಈಗ ಉಪಲಬ್ಧವಿಲ್ಲ)ಯಿಂದಲೇ ಪ್ರಚೋದಿತವಾದುದು. ಮಧ್ಯಯುಗದಲ್ಲಿ ಈ ಜರ್ಮನ್ ಭಾಷಾಂತರ ಅತಿ ಜನಪ್ರಿಯವಾಗಿದ್ದಿತು. ಇದು ಮೊದಲು ೧೪೮೦ರಲ್ಲಿ ಅಚ್ಚಾಯಿತು. ಅನಂತರ ಈ ಕೃತಿಯ ನೂರಾರು ಪರಿಷ್ಕರಣಗಳು ಪ್ರಕಟವಾಗಿವೆ.[೧೫] ಈ ಕೃತಿ ಡೇನಿಷ್ ಭಾಷೆ[೧೬]ಗೂ, ಡಚ್ ಭಾಷೆ[೧೭]ಗೂ, ಇದ್ದಿಷ್* (Yeddish) ಭಾಷೆಗೂ ಭಾಷಾಂತರಗೊಂಡಿದೆ. ಅನಂತರ ಡೇನಿಷ್ ಭಾಷಾಂತರದಿಂದ, ಪಂಚತಂತ್ರ ಐಸ್‌ಲ್ಯಾಂಡನ್ನೂ ಪ್ರವೇಶಿಸಿದೆ !

ಇಷ್ಟಲ್ಲದೆ ' ಜಾನ್ ಆಫ್ ಕಾಪುವ 'ದ ಇನ್ನೂ ಮೂರು ಭಾಷಾಂತರಗಳು ಪ್ರಸಿದ್ಧವಾಗಿವೆ. ಮೊದಲನೆಯದು ಸ್ಪ್ಯಾನಿಷ್ ಭಾಷೆಯಲ್ಲಿದೆ. ಅದು ' ಎಕ್ಜಂಪ್ಲಾರಿಯೋ ಕಾಂತ್ರಾ ಲೋಸ್ ಜ್ಞಾಗಯೋಸ್ ಡೆಲ್ ಮುಂದೋ ' (Exemplario Contra Los Enganos Del Mundo). ಇದು ಅಜ್ಞಾತ ಕವಿಯಿಂದ ಭಾಷಾಂತರಗೊಂಡು, ಮಧ್ಯಯುಗದಲ್ಲಿ ಅತ್ಯಂತ ಜನಪ್ರಿಯತೆಯನ್ನು ಗಳಿಸಿ, ಹದಿಮೂರು ಬಾರಿ ಅಚ್ಚಾಗಿದೆ. ಕ್ರಿ. ಶ. ೧೮೯೫ರಲ್ಲಿ ಫಿರಂಜುವೋಲಾ (Firenzuola) ಅವರಿಂದ

* ಜ್ಯೂಗಳ ಈಗಿನ ಭಾಷೆ.

'ಡೆಸ್ಕೋರ್ಸ್ರೀ ಡೆಲ್ಗಿ ಅನಿಮೊಲಿ'(Discorsi Delgi Animoli) ಎನ್ನುವ ಹೆಸರಿನಿಂದ ಇಟ್ಯಾಲಿಯನ್ ಭಾಷೆಗೆ ಪರಿವರ್ತನೆಗೊಂಡಿತು. ಈ ಕೃತಿಯೂ ಹದಿನೆಂಟು ಮುದ್ರಣಗಳನ್ನು ಕಂಡಿತು. ಈ ಇಟ್ಯಾಲಿಯನ್ ಕೃತಿಯನ್ನು ಕ್ರಿ. ಶ. ೧೫೫೬ರಲ್ಲಿ ಕೊಟಿಯರ್ (Cottier) ಅವರೂ, ಕ್ರಿ. ಶ. ೧೫೭೭ರಲ್ಲಿ ಡೆಲಾ ರಿವೇ(Dela Rivey)ಯೂ ಫ್ರೆಂಚ್ ಭಾಷೆಗೆ ಭಾಷಾಂತರಿಸಿದರು. ಇವರು ಡೊನಿ(Doni)ಯಿಂದ ರಚಿತವಾದ ಇಟ್ಯಾಲಿಯನ್ ಭಾಷೆಯ ಕೃತಿಯಿಂದಲೂ ಸಹಾಯ ಪಡೆದುಕೊಂಡಿದ್ದಾರೆ (ವಿವರಣೆಗೆ ಮುಂದೆ ನೋಡಿ). ಕ್ರಿ. ಶ. ೧೫೨೮ರಲ್ಲಿ ಕೊನಕೆ (Konac) ಜೆಕ್(Czech) ಭಾಷೆಗೂ, ಡೊನಿ(Doni) ಯವರು ಲಾ ಮೊರಾಲ್ ಫಿಲಸೋಫಿಯ (La Moral Philosofia)[18] ಎನ್ನುವ ಹೆಸರಿನಲ್ಲಿ ಇಟ್ಯಾಲಿಯನ್ ಭಾಷೆಗೆ ೧೫೫೨ ರಲ್ಲಿ ಭಾಷಾಂತರಿಸಿದರು. ಈ ಡೊನಿಯ ಭಾಷಾಂತರವನ್ನಾಧರಿಸಿಯೇ ೧೫೭೦ರಲ್ಲಿ ಸರ್ ಥಾಮಸ್ ನಾರ್ತ್ ' ಮೋರಲ್ ಫಿಲೋಸೋಫಿಯಾ ಆಫ್ ಡೊನಿ ' (Moral Philosofia of Doni)[19] ಎನ್ನುವ ಹೆಸರಿನಿಂದ ಪ್ರಪ್ರಥಮವಾಗಿ ಇಂಗ್ಲಿಷ್ ಭಾಷೆಗೆ ಪಂಚತಂತ್ರದ ಪರಿಚಯ ಮಾಡಿಕೊಟ್ಟಿರುವರು. ಇದು ಈ ಕೃತಿಯ ವೈಶಿಷ್ಟ್ಯ.

ಇಲ್ಲಿಗೆ ಅಲ್ ಮಖಫನ ಅರೇಬಿಯಾ ಭಾಷೆಯ ಪಂಚತಂತ್ರದ ಒಂದು ಪ್ರಮುಖ ಶಾಖೆಯನ್ನು ಗಮನಿಸಿದಂತಾಯಿತು.

ಅರೇಬಿಯಾಕ್‌ನಿಂದ ಪರ್ಷಿಯನ್‌ಗೆ

ಪಂಚತಂತ್ರದ ಪ್ರಪಂಚ ಪರ್ಯಟನದ ಎರಡನೆಯ ಮುಖ್ಯ ಶಾಖೆ ಪರ್ಷಿಯನ್ ಭಾಷೆಯಿಂದ ಪ್ರಾರಂಭವಾಗುತ್ತದೆ. ಆಧುನಿಕ ಪರ್ಷಿಯನ್‌ನಲ್ಲಿ ಮಖಫನ ' ಕಲಿಲ ಒ ದಮ್ನ 'ದ ಅನೇಕ ಭಾಷಾಂತರಗಳು ಪ್ರಚಾರದಲ್ಲಿವೆ. ಹತ್ತನೆಯ ಶತಮಾನದ ಪ್ರಾರಂಭದಲ್ಲಿ ಬುಖಾರದ ಸಮನೀದ್ (Samanid) ಆಸ್ಥಾನದಲ್ಲಿ ಪ್ರಖ್ಯಾತಿ ಪಡೆದಿದ್ದ, ಆಧುನಿಕ ಪರ್ಷಿಯಾದ ಪಿತೃವೆಂದು ಹೆಸರಾದ ರೂದ್‌ಕಿ (Rūdaki)ಯ ಪದ್ಯರೂಪದ ಪಂಚತಂತ್ರವೇ ಇವುಗಳಲ್ಲಿ ಅತಿ ಪ್ರಾಚೀನವಾದುದು. ಆದರೆ ಘಜ್ನಿ ಸುಲ್ತಾನನ ಆಸ್ಥಾನದಲ್ಲಿದ್ದ ನಸ್‌ರುಲ್ಲ (Naṣrulla) ಕ್ರಿ. ಶ. ೧೧೨೧ರಲ್ಲಿ ಇದನ್ನು ಗದ್ಯರೂಪಕ್ಕೆ ಭಾಷಾಂತರಿಸಿದನು. ಇದು ಬಹು ಪ್ರಮುಖ ಪಾತ್ರ ವಹಿಸಿದೆ ಈ ಪಂಚತಂತ್ರ ಪ್ರಸರಣದಲ್ಲಿ. ಇದರಿಂದಲೇ ಹಲವಾರು ಟರ್ಕಿಷ್ ಹಾಗೂ ಪೂರ್ವ ಟರ್ಕಿಷ್—(ಅಥವಾ Jagathai ಜಗಥೈ) ಭಾಷಾಂತರಗಳು ಮೈದೋರಿವೆ. ಅಲ್ಲದೆ ಪರ್ಷಿಯನ್ ಭಾಷೆಯಲ್ಲಿಯೇ, ಹದಿಮೂರನೆಯ ಶತಮಾನದಲ್ಲಿ ಕಾನಿಲ್(Kani'l) ಎನ್ನುವವನು, ಪಂಚತಂತ್ರವನ್ನು ಪದ್ಯರೂಪದಲ್ಲಿ ಭಾಷಾಂತರಿಸಿದನು. ಹಾಗೆಯೇ ಹದಿನೈದನೆಯ ಶತಮಾನದಲ್ಲಿ ಹಸೇನ್ ಇಬ್ನ್ ಅಲಿ ಅಲ್ ವಾಯಿಜ್ (Hussain Ibn Ali Al-Wa-'iz)ನ ಜಗತ್ಪ್ರಸಿದ್ಧವಾದ

'ಅನ್ವಾರಿ ಸುಹೈಲಿ' (Anwāri Suhaili)ಯೂ ಹದಿನೈದನೆಯ ಶತಮಾನದಲ್ಲಿಯೇ ರಚಿತವಾಯಿತು.

ಅನ್ವಾರಿ ಸುಹೈಲಿ (ಗೆಳೆಯನ ಬೆಳಕು)

ಪಂಚತಂತ್ರ ಕಥೆಗಳ ಪರ್ಯಟನದಲ್ಲಿ ಪರ್ಷಿಯನ್ ಭಾಷೆಯ 'ಅನ್ವಾರಿ ಸುಹೈಲಿ' ಅತ್ಯಂತ ಪ್ರಮುಖ ಪಾತ್ರ ವಹಿಸಿದೆ. ಏಕೆಂದರೆ, ಇದರಿಂದ ಯುರೋಪಿನ ಹಾಗೂ ಮಧ್ಯೆ ಏಷ್ಯಾದ ನೂರಾರು ಭಾಷೆಗಳಲ್ಲಿ ಸಂಪಾದನೆಗಳು ಪ್ರಕಟವಾಗಿರುವುದಷ್ಟೇ ಅಲ್ಲದೆ, ತನ್ನ ಮಾತೃಭೂಮಿಯಾದ ಭಾರತಕ್ಕೂ, ಮಾರುವೇಷದಿಂದ ಪ್ರವೇಶಿಸಿದೆ. ಇಂಗ್ಲಿಷ್ ಭಾಷೆಯಲ್ಲಿ ಇತ್ತೀಚೆಗೆ ಬಹು ಪ್ರಸಿದ್ಧಿಯನ್ನು ಪಡೆದ ಇದರ ಎರಡು ಭಾಷಾಂತರಗಳಿವೆ. ಅವೆರಡರ ಹೆಸರೂ ಒಂದೇ ಆಗಿದೆ.[20] ಕ್ರಿ. ಶ. ೧೬೪೪ರಲ್ಲಿ ಡೇವಿಡ್ ಸಾಹಿದ್ (David Sahid) ಮತ್ತು ಗೌಲ್‌ಮಿನ್ (Gaulmin) ಅವರು 'ಲೀವರ್ ದೆ ಲುಮಿಯೆರ್ ಉಲಕಾಂಡ್ವಿತೇ ದೆರ್ವ ಕಾಂಪೋಜೆ ಪಾರ್ ಸಾಷ್ ಪಿಲ್ಪೆ' (Liver Des Lumieres Ou La Conduite Des Roys Compose Par Sage Pilpay) ಎನ್ನುವ ಹೆಸರಿನಿಂದ ಫ್ರೆಂಚ್ ಭಾಷೆಗೆ ಪರಿವರ್ತಿಸಿದರು. ಈ ಪುಸ್ತಕ ಮತ್ತೊಮ್ಮೆ 'ಫೇಬಲ್ಸ್ ಡಿ ಪಿಲ್‌ಪೆ' (Fables de Pilpay) ಎನ್ನುವ ಹೆಸರಿನಿಂದ ಪ್ರಕಟವಾಯಿತು. ಇದನ್ನು ಜೆ. ಹ್ಯಾರಿಸ್[21] ಅವರು ಇಂಗ್ಲಿಷ್ ಭಾಷೆಗೂ, ವಿಲ್ಡ್ (Wilde) ಸ್ವೀಡಿಷ್ ಭಾಷೆಗೂ (೧೭೪೫), ವಿಬರ್ (Weber, 1802) ವೋಲ್‌ಗ್ರಾಫ್ (Vollgraff 1803), ಮತ್ತು ಮಥೇಯಿ (Mathaei, 1826 ಮತ್ತು 1829) ಅವರು ಜರ್ಮನ್ ಭಾಷೆಗೂ, ಅಜ್ಞಾತ ಕವಿಯೊಬ್ಬನಿಂದ ಪೋಲಿಷ್ ಭಾಷೆಗೂ (೧೭೭೦), ಲ್ಯಾಂಪ್ ನಿಟ್‌ಜಿಯೊಟಿಸ್ (Lampanitziotes, 1783) ಅವರಿಂದ ಗ್ರೀಕ್ ಭಾಷೆಗೂ ಪ್ರವೇಶಿಸಿತು. ಪೋಲಿಷ್ ಮತ್ತು ಗ್ರೀಕ್ ಭಾಷಾಂತರಗಳು 'ಫೇಬಲ್ಸ್ ಡಿ ಬಿಡಪೈ' ಎಂಬ ಫ್ರೆಂಚ್ ಕೃತಿಗೂ (ವಿವರಣೆಗೆ ಮುಂದೆ ನೋಡಿ) ಋಣಿಗಳಾಗಿವೆ.

ಹುಮಾಯೂನ್ ನಾಮೆ

ಪರ್ಷಿಯನ್ ಭಾಷೆಯ 'ಅನ್ವಾರಿಸುಹೈಲಿ', ಹದಿನಾರನೆಯ ಶತಮಾನದಲ್ಲಿ, ತುರ್ಕಿಭಾಷೆಯಲ್ಲಿ 'ಹುಮಾಯೂನ್ ನಾಮೆ' ಎನ್ನುವ ಹೆಸರಿನಿಂದ ಭಾಷಾಂತರಗೊಂಡು, ಅದು ತನ್ನದೇ ಆದ ಒಂದು ಪ್ರಬಲ ಶಾಖೆಯನ್ನೇ ನಿರ್ಮಿಸಿದೆ. ಈ ತುರ್ಕಿ ಭಾಷೆಯಲ್ಲಿಯೇ ಪಂಚತಂತ್ರದ ಎರಡು ಸಂಗ್ರಹಗಳು ಪ್ರಚಾರದಲ್ಲಿವೆ. ಈ ಗ್ರಂಥ ಸೌಬೈಬೆ (Souby Bey) ಎನ್ನುವವರಿಂದ ೧೯೦೩ರಲ್ಲಿ ಜರ್ಮನ್ ಭಾಷೆಗೆ ಪರಿವರ್ತನ ಹೊಂದಿದೆ. ಇಷ್ಟಲ್ಲದೆ, ರೂಬೆನ್ಸ್ (Rubens 1762, in part) ಎನ್ನುವವರಿಂದ ಸ್ವೀಡಿಷ್ ಭಾಷೆಗೂ, ೧೬೫೪–೫೮ರಲ್ಲಿ ಬ್ರೌಟಿ(Brauti)ಯವ

ರಿಂದ ಸ್ಪೇನಿಷ್ ಭಾಷೆಗೂ ಪ್ರಯಾಣ ಬೆಳೆಯಿಸಿದೆ. ಈ ಸ್ಪೇನಿಷ್ ಭಾಷಾಂತರ ಮತ್ತೆ ಎಬಿರ್ಟ್ (Ebert) ಎನ್ನುವವರಿಂದ ೧೭೫೫ರಲ್ಲಿ ಲ್ಯಾಟಿನ್ ಭಾಷೆಯಲ್ಲಿಯೂ ರೂಪ ತಳೆದಿದೆ !

ಫೇಬಲ್ಸ್ ಡಿ ಬಿಡ್‌ಪೈ

' ಹುಮಾಯೂನ್ ನಾಮೆ 'ಯ ಯೂರೋಪ್ ಭಾಷೆಗಳ ಭಾಷಾಂತರಗಳಲ್ಲಿ ಫ್ರೆಂಚ್ ಭಾಷಾಂತರ ಬಹು ಮುಖ್ಯವಾದುದು. ಗಾಲೆಂಡ್ (Galland) ಎನ್ನುವವರು ೧೭೨೪ರಲ್ಲಿ ' ಕಾಂತ್ ಎ ಫಾಬಲ್ ಇಂದಿಯನ್ ದ ಬಿದ್ ಪೈ' (Contes Et Fables Indiennes De Bidpai) ಎನ್ನುವ ಪಂಚತಂತ್ರದ ಸುಪ್ರಸಿದ್ಧ ಫ್ರೆಂಚ್ ಕೃತಿಯನ್ನು ಬರೆಯಲು ಪ್ರಾರಂಭಿಸಿದರು. ಇದನ್ನು ೧೭೭೮ರಲ್ಲಿ ಕಾರ್ಡೀನ್ ಎನ್ನುವವರು ಪೂರ್ಣಗೊಳಿಸಿದರು. ಈ ಕೃತಿಯು, ಯುರೋಪಿನಲ್ಲೇ ಅತ್ಯಂತ ಜನಪ್ರಿಯ ಕಥಾಸಂಗ್ರಹವಾದುದಲ್ಲದೆ, ಇದು ಏಷ್ಯಾಖಂಡದ ಭಾಷೆಗಳಿಗೂ ಭಾಷಾಂತರಗೊಂಡಿದೆ. ೧೭೪೫ರಲ್ಲಿ ಅಜ್ಞಾತ ಕವಿಯೊಬ್ಬನಿಂದ ಜರ್ಮನ್ ಭಾಷೆಯಲ್ಲಿಯೂ, ೧೭೮೩ರಲ್ಲಿ ಹಂಗೆರಿ ಭಾಷೆಯಲ್ಲಿಯೂ ಮೈದಾಳಿತು. ೧೭೮೧ರಲ್ಲಿ ಸ್ಟೊಪೆಂಡಾಲ್ ಅವರಿಂದ ಡಚ್ ಭಾಷೆಯಲ್ಲಿಯೂ ಮತ್ತೆ ೧೮೫೫ರಲ್ಲಿ ಜೇಡ್ (Jade) ಅವರಿಂದ ಜರ್ಮನಿಯಲ್ಲಿಯೂ ಭಾಷಾಂತರ ರೂಪದಲ್ಲಿ ಕಾಣಿಸಿಕೊಂಡಿತು. ೧೮೬೬ರಲ್ಲಿ ಗೋಂಗ್ರಿಪ್ (Gongrip) ಅನ್ನುವವರಿಂದ ಮಲಯಾ ಭಾಷೆಯಲ್ಲಿ ಭಾಷಾಂತರವಾಯಿತು. ಈ ಮಲಯಾ ಭಾಷೆಯ ಪಂಚತಂತ್ರ ತನ್ನ ಪ್ರಯಾಣವನ್ನು ಮುಂದುವರಿಸಿ ೧೮೭೫-೭೨ರಲ್ಲಿ ಕ್ರಮ ಪ್ರವುರಿಯಾ (Krama Prauria) ಹಾಗೂ ೧೮೭೮ರಲ್ಲಿ ಮತ್ತೊಬ್ಬ ಅಜ್ಞಾತ ಕವಿಯಿಂದ ಪದ್ಯರೂಪ ಧರಿಸಿ ಯವ ದ್ವೀಪೀಯ (Javanese) ಭಾಷೆಯಲ್ಲಿಯೂ ಮೈದೋರಿತು.

ಮತ್ತೊಮ್ಮೆ ಅನ್ವಾರೆ ಸುಹೈಲಿ

ಈ ಮೊದಲು ತಿಳಿಸಿದ ಇಂಗ್ಲಿಷ್, ಫ್ರೆಂಚ್, ಮತ್ತು ಟರ್ಕಿಷ್ ಭಾಷೆಗಳಲ್ಲಲ್ಲದೆ 'ಅನ್ವಾರೆ ಸುಹೈಲಿ'(ಪರ್ಷಿಯನ್ ಭಾಷೆ) ಇನ್ನು ಕೆಲವು ಭಾಷೆಗಳಲ್ಲಿಯೂ ಪ್ರಸಿದ್ಧವಾಗಿದೆ. ಅದೇ ಒಂದು ಬೇರೆಯ ಶಾಖೆಯಾಗಿಯೇ ಪರಿಣಮಿಸಿದೆ. ಮಹಮದ್ ಬಿನ್ ಅಬಿನಸರ್ ಖಜ್‌ವೀನಿ, ಈ ಕೃತಿಯನ್ನು ಮಂಗೋಲಿಯನ್ ಭಾಷೆಗೆ ಪರಿವರ್ತಿಸಿದನು. ಕಾಕಸಸ್ ಪರ್ವತ ಪ್ರಾಂತ್ಯದಲ್ಲಿ ಪ್ರಚಾರದಲ್ಲಿರುವ ಜಾರ್ಜಿಯನ್ ಭಾಷೆಗೆ, ರಾಜಕವಿ ವಖಟನ್ VI ಹಾಗೂ ಸಂನ್ಯಾಸಿ ಅರ್ಬೇಲಿಯಾನಿ (Orbeliani) ಅವರಿಂದ ಭಾಷಾಂತರಗೊಂಡಿತು. ವಖಟನ್ (Vakhtan VI,) ಗದ್ಯಭಾಗವನ್ನೂ, ಅರ್ಬೇಲಿಯಾನಿ ಪದ್ಯಭಾಗವನ್ನೂ, ಭಾಷಾಂತರಿಸಿದ್ದಾರೆ. ಇದು ೧೮೮೬ರಲ್ಲಿ ಟಿಫ್ಲಿಸ್ (Tiflis)ನಲ್ಲಿ ಪ್ರಕಟವಾಯಿತು. ಟರ್ಕಿಷ್ ಮತ್ತು

ಪೂರ್ವ ಟರ್ಕಿಷ್ (ಜಗಥೈ) ಭಾಷೆಗಳಲ್ಲಿ 'ಅನ್ವಾರಿ ಸುಹೈಲಿ'ಯ ಮೂರು ಭಾಷಾಂತರಗಳು ಪ್ರಚಲಿತವಾಗಿವೆ. ಅನಂತರ ಇದು ಅಫ್‌ಘನ್ ಭಾಷೆಯಲ್ಲಿಯೂ ಕಾಣಿಸಿಕೊಂಡಿದೆ. ಮೊಘಲರ ಕಾಲದಲ್ಲಿ, ಪರ್ಷಿಯನ್ ಭಾಷೆಯು ಆಸ್ಥಾನ ಭಾಷೆಯಾಗಿದ್ದರಿಂದ ಈ 'ಸುಹೈಲಿ' ಪರ್ಷಿಯಾ ದೇಶದ ಪುರಾಣ ಕೃತಿಯೆನ್ನುವ ಕಾರಣದಿಂದ ಹಿಂದೂದೇಶದಲ್ಲಿ ಮತ್ತೆ ಪ್ರವೇಶಿಸಿತು. ಅಕ್ಬರ್ ಚಕ್ರವರ್ತಿಯ ಇಚ್ಛೆಯ ಮೇರೆಗೆ ಆತನ ಮಂತ್ರಿಯಾಗಿದ್ದ ಅಬುಲ್ ಫಜಲ್ 'ಅಯಾರೆ ದಾನಿಷ್' (Iyari Dānish) ಎನ್ನುವ ಹೆಸರಿನಿಂದ ಸುಲಭ ಶೈಲಿಯಲ್ಲಿಯ ಪರ್ಷಿಯನ್ ಭಾಷೆಯಲ್ಲಿ ರಚಿಸಿದನು. ಈ ಫಜಲ್‌ನ ಕೃತಿಯಿಂದ ಹಿಂದೂಸ್ಥಾನಿಯ 'ಖಿರದ ಅಫ್ರೋಜ್' (Khirud Ufroz) ('ಸಂಸ್ಕೃತಿ ಪ್ರಚೋದಕ'– ಅನು.) ಎನ್ನುವ ಕೃತಿ ಅಹಮ್ಮದ್ ಮೌಲ್ವಿ ಹಫೀಜ್ ಉದ್ದೀನ್ ಅವನಿಂದ ೧೮೦೩ ರಲ್ಲಿ (ಅಚ್ಚಾದುದು ೧೮೧೫ರಲ್ಲಿ) ರಚಿತವಾಯಿತು. ಈ ಕೃತಿಯೇ ಮತ್ತೆ ೧೮೭೧ ರಲ್ಲಿ ಟಿ. ಪಿ. ಮ್ಯಾನ್ಯುಅಲ್ ಅವರಿಂದ, ಇಂಗ್ಲಿಷಿಗೆ ಭಾಷಾಂತರಗೊಂಡು, ಕಲ್ಕತ್ತದಲ್ಲಿ ಪ್ರಕಟವಾಯಿತು. ಪರ್ಷಿಯನ್ ಮಾತೃಕೆಯಾದ 'ಅನ್ವಾರಿ ಸುಹೈಲಿ' ಯಿಂದಲೂ ನೇರವಾಗಿ ಹಿಂದೂಸ್ಥಾನಿಯಲ್ಲಿ ಅನೇಕ ಭಾಷಾಂತರಗಳೂ, ೧೮ನೆಯ ಶತಮಾನದಲ್ಲಿ ಹಿಂದಿಯಲ್ಲಿಯೂ, ೧೮೫೫ರಲ್ಲಿ ಬಂಗಾಳಿ ಭಾಷೆಯಲ್ಲಿಯೂ ಮೂಡಿ ಬಂದಿವೆ.

ಮುಖಫನ ಕೃತಿಯ ಇತರ ಭಾಷಾಂತರಗಳು

ಅರೇಬಿಯಾ ಭಾಷೆಯ 'ಕಲೀಲ ಒ ದಮ್ನ'ದಿಂದ ಹೊರಟ ಮುಖ್ಯವಾದ ಶಾಖೆಗಳನ್ನು ಮಾತ್ರ ಇಲ್ಲಿನವರೆಗೆ ಗಮನಿಸಿದೆವು. ಇನ್ನು ಮುಂದೆ ಸಣ್ಣ ಪುಟ್ಟ ಶಾಖೆಗಳನ್ನು ನೋಡೋಣ. ಹದಿಮೂರನೆಯ ಶತಮಾನದಲ್ಲಿ ಜೋಕಬ್ ಬಿನ್ ಎಲ್‌ಸಾರ್ (Jacob Bin Elasar), ಆಧುನಿಕ ಹೀಬ್ರೂ ಭಾಷೆಗೆ ಪರಿವರ್ತಿಸಿದನು. ೧೨ನೆಯ ಶತಮಾನದಲ್ಲಿ ಲ್ಯಾಟಿನ್ ಭಾಷೆಯಲ್ಲಿ ಬಾಲ್ಡೊ (Baldo) ಎನ್ನುವವನ ಕೃತಿಯಾದ 'ನೊವುಸ್ ಏಸೊಪಸ್'(Novus Aesopus)ಗೆ ಮೂಲವಾದುದು ಮುಖಫನ ಕೃತಿಯ ಒಂದು ಪ್ರತ್ಯೇಕ ಭಾಷಾಂತರವೇ ಎಂದು ತಿಳಿದುಬರುತ್ತದೆ. ಆದರೆ, ಅದು ಯಾವುದೆಂಬುದು ಇನ್ನೂ ನಿರ್ಧರವಾಗಿಲ್ಲ. ಇತಿಯೋಪಿಯಾ ಭಾಷೆಯಲ್ಲಿ ೧೫೮೦ಕ್ಕಿಂತ ಹಿಂದೆಯೇ ಅಜ್ಞಾತ ಕವಿಕೃತವಾದ ಒಂದು ಭಾಷಾಂತರ ಕಾಣಿಸಿಕೊಂಡಿದೆ. ಉತ್ತರ ಆಫ್ರಿಕದ ಚೆಲಹ್ (Chelha) ಅಥವಾ ಬರ್‌ಬರ್ (Berber) ಎನ್ನುವ ಭಾಷೆಗೂ ಪಂಚತಂತ್ರ ಪ್ರವೇಶಿಸಿದೆ. ಪೂರ್ವರಷ್ಯಾದಲ್ಲಿರುವ ಕಜಾನ್ (Kazan)ದ ಆಡುಭಾಷೆಯಲ್ಲಿ ಅಬ್ದುಲ್ ಅಲ್ಲಾಂ ಫಯ್ಜೆಜ್‌ಖಾನ್ ಒಗ್ಲು (Abdal–'Allām Faiz Khān Oghlu) ಅರೇಬಿಯಾಕ್ ಭಾಷೆಯ 'ಕಲೀಲ ಒ ದಮ್ನ'ದ ಮುಖ್ಯಾಂಶಗಳ ಜೊತೆಗೆ ಪರ್ಷಿಯನ್ ಭಾಷೆಯ 'ಅನ್ವಾರಿ

ಸುಹೈಲಿ '(Kazan 1889)ಯ ಪ್ರಸ್ತಾವನೆಯ ಕೆಲವು ಸಂಗತಿಗಳನ್ನು ಜೋಡಿಸಿ ಒಂದು ಭಾಷಾಂತರವನ್ನು ಸಿದ್ಧಗೊಳಿಸಿದನು. ಈ ' ಮುಖಫ ' ನೇರವಾಗಿ ಐಸ್‌ಲ್ಯಾಂಡ್, ತಾರ್ತರ್ ಮತ್ತು ಜೂಡೇ (Judae) ಭಾಷೆಗಳನ್ನೂ ಪ್ರವೇಶಿಸಿದೆ. ೧೭೩೬ಕ್ಕಿಂತ ಮೊದಲೇ 'ಹಿಕಾಯತ್ (ಕಥೆ)ಕಲೀಲ ಒ ದಮ್ನ' ಎನ್ನುವ ಹೆಸರಿನಿಂದ ಮಲಯನ್ ಸಾಹಿತ್ಯದಲ್ಲಿ ಈ ' ಮುಖಫ' ಒಂದು ಸ್ಥಾನವನ್ನು ಗಳಿಸಿದ್ದಿತು. ಮಲಯಾದಿಂದ ಯವದ್ವೀಪೀಯ ಭಾಷೆಗೆ ೧೮೭೮ರಲ್ಲಿ ಜಯಸೆಪುತ್ರ (Jayaseputra) ನಿಂದಲೂ ೧೮೭೯ರಲ್ಲಿ ಅದಿಕರ(Adikara)ನಿಂದ ಮದುರಾದ್ವೀಪೀಯ(Madurese) ಭಾಷೆಗೂ, ಭಾಷಾಂತರಿಸಲ್ಪಟ್ಟಿತು.

ಹೀಗೆ ಭಾರತದ ಪಂಚತಂತ್ರ ಪಹೆಲ್ವಿಯ ಭಾಷಾಂತರದಿಂದ ಪ್ರಾರಂಭಿಸಿ ಹನ್ನೆರಡು ಅಥವಾ ಹದಿಮೂರನೆಯ ಶತಮಾನಗಳಲ್ಲಿ ದೇಶದೇಶಾಂತರಗಳನ್ನು ಪ್ರವೇಶಿಸಿ, ಭಾಷಾಂತರ, ಮರು–ಭಾಷಾಂತರ, ಪ್ರತಿ–ಭಾಷಾಂತರ, ಗದ್ಯದಿಂದ ಪದ್ಯ, ಪದ್ಯದಿಂದ ಗದ್ಯ–ರೂಪಾಂತರವನ್ನು ಹೊಂದಿ, ಏಷ್ಯಾ ಮತ್ತು ಯೂರೋಪ್ ಖಂಡದ ಬಹುಭಾಗವನ್ನಷ್ಟೇ ಅಲ್ಲದೆ, ಆಫ್ರಿಕಾ ಖಂಡದ ಕೆಲವು ಭಾಗದಲ್ಲಿಯೂ ಹಬ್ಬಿಹಸರಿಸಿದೆ. ಈ ಪಂಚತಂತ್ರ ವಿದೇಶೀಯ ಉಡುಪಿನಲ್ಲಿ ಹಾಗೂ ಹೊಸ ಹೆಸರಿನಿಂದ, ತನ್ನ ತವರುಮನೆಯಾದ ಭಾರತವನ್ನೂ ಪ್ರವೇಶಿಸಿರುವ ಸೋಜಿಗದ ಸದ್ದಿ, ಈ ಮೊದಲೇ ತಿಳಿಸಿರುವಂತೆ, ಈ ಪ್ರಪಂಚ ಪರ್ಯಟನದ ಅತಿಮುಖ್ಯ ಸಂಗತಿ ! ! !

ಪೌರಸ್ತ್ಯ ದೇಶಗಳಲ್ಲಿ ಪಂಚತಂತ್ರ

ಪಂಚತಂತ್ರದ ದಿಗ್ವಿಜಯ ಪಾಶ್ಚಾತ್ಯ ದೇಶಗಳಲ್ಲಿ ಮಾತ್ರ ನಡೆಯದೆ ಪೌರಸ್ತ್ಯ ದೇಶಗಳಲ್ಲಿಯೂ ಮುಂದುವರಿದಿದೆ. ಭಾರತ ಹಾಗೂ ಚೀನಾ ದೇಶಗಳಲ್ಲಿ ಧಾರ್ಮಿಕ ಹಾಗೂ ಸಾಹಿತ್ಯಿಕ ಕೊಡುಕೊಳ್ಳುವಿಕೆಯ ಸಂಬಂಧ ಪ್ರಾರಂಭವಾದ ಸುಪ್ರಭಾತದಲ್ಲಿಯೇ ಈ ಪಂಚತಂತ್ರದ ಕಥೆಗಳು ಟಿಬೆಟ್, ಚೀನಾ ದೇಶಗಳನ್ನು ಪ್ರವೇಶಿಸಿದುವು. ಆದ್ದರಿಂದ ಆಯಾ ಭಾಷೆಗಳ ಸಾಮಿಪ್ಯ ಹಾಗೂ ಸಂಪರ್ಕವನ್ನು ಹೊಂದಿರುವ ಟಿಬೆಟ್, ಚೀನಾ, ಹಾಗೂ ಜಪಾನ್ ಭಾಷೆಗಳಲ್ಲಿ ಪಂಚತಂತ್ರ ಕಥೆಗಳಿಗೆ ಸರಿಹೋಲಿಕೆಯಾದ ಅಂಶಗಳು ತುಂಬಿಕೊಂಡಿವೆ. ೧೮೮೨ರಲ್ಲಿ ಷೀಫ್‌ನರ್ (Schiefner) ಮತ್ತು ರಾಲ್‌ಸ್ಟನ್ (Ralston) ಅವರಿಂದ ಸಂಗ್ರಹಿತವಾಗಿ ಪ್ರಕಟವಾದ ' ಟಿಬೆಟ್ಟಿನ ಕಥೆಗಳು ' ಮತ್ತು ೧೯೦೭ರಲ್ಲಿ ಒ' ಕೊನ್ನಾರ್ (O' Connor) ಅವರಿಂದ ಸಂಗ್ರಹಿತವಾದ ' ಟಿಬೆಟ್ಟಿನ ಜನಪದ ಕಥೆಗಳು ' (Published in London 1907) ಎಂಬ ಕಥಾ ಸಂಗ್ರಹಗಳಲ್ಲಿ ಪಂಚತಂತ್ರದ ಅನೇಕ ಕಥೆಗಳಿವೆ. ಟ್ಯಾಂಗ್ ದೊರೆಗಳ ಆಳ್ವಿಕೆಯಲ್ಲಿ (ಕ್ರಿ. ಶ. ೬೧೮—೯೧೭) ಪಂಚತಂತ್ರ ಚೀನಾದೇಶವನ್ನು ಪ್ರವೇಶಿಸಿತು.[೨೧]

'ಮಖಫ'ದ ಮಂಗೋಲಿಯನ್ ಭಾಷೆಯ ಕೃತಿಯನ್ನು ಈ ಮುಂಚೆಯೇ ಉದಾಹರಿಸಲಾಗಿದೆ. ಹ್ಯಾನ್ ಕೊನಾನ್‌ವಾನ್ ಡೆರ್ ಗ್ಯಾಬ್ಲೆಟ್ಜ್ (Hans Conon Von Der Gabeletz)[೨೨] ಅವರು ಸಂಪಾದಿಸಿದ ಮಂಗೋಲಿಯಾದ ಐದು ಕಥೆಗಳಲ್ಲಿ 'ಹಿತೋಪದೇಶ'ದ ಒಂದು ಕಥೆ ಪ್ರಥಮ ಸ್ಥಾನವನ್ನು ಗಳಿಸಿದೆ. ಕೆಲವು ವರ್ಷಗಳ ಹಿಂದೆ ಮಂಗೋಲಿಯಾ ಭಾಷೆಯ ಪಂಚತಂತ್ರ ನೇರವಾಗಿ ಬಿ. ಜೆ. ವ್ಲಾಡಿಮಿರ್‌ಟ್ಸೋವ್ (B. J. Vladimirtsov) ಅವರಿಂದ[೨೩] ರಷ್ಯನ್ ಭಾಷೆಗೆ ಪರಿವರ್ತಿತವಾಗಿದೆ. 'ಹಿತೋಪದೇಶ'ದ ಪಾಳಿಭಾಷೆಯ ರೂಪಾಂತರವೊಂದು ಅಚ್ಚಾಗಿ ಪ್ರಚಾರದಲ್ಲಿದೆ. ಈ ಗ್ರಂಥದ ಸಿಂಹಳಭಾಷೆಯ ಭಾಷಾಂತರ ಹಾಗೂ ವಿಮರ್ಶೆಯನ್ನು ವೆರಿರೆವರೆಂಡ್ ಶ್ರೀ ಮೇಧಾಲಂಕಾರ ಮಹಾಥೆರೋ ಮತ್ತು ರೆವರೆಂಡ್ ವಿಲಿಗೋದ ಧರ್ಮಾನಂದ ಭಿಕ್ಕು ಅವರು ಸಿದ್ಧಗೊಳಿಸಿ ೧೯೧೩ರಲ್ಲಿ ಅಂಬಲನ್‌ಗೊಂಡದಲ್ಲಿ ಪ್ರಕಟಿಸಿದ್ದಾರೆ. ಮಧ್ಯಏಷ್ಯಾ ಹಾಗೂ ಪೂರ್ವ ಏಷ್ಯಾ ಖಂಡದ ದೇಶಗಳಲ್ಲಿ ಈ ಪಂಚತಂತ್ರ ವಿಸ್ತರಿಸಿರುವ ಸಂಗತಿ ಇನ್ನೂ ಸಂಶೋಧನೆಗೊಳ್ಳಬೇಕಾಗಿದೆ. ಅಂಥ ಸಂಶೋಧನೆಯಾದ ಮೇಲೆ, ಈ ಬಗ್ಗೆ ಹೆಚ್ಚು ಬೆಳಕು ತೋರಬಹುದು.[೨೩]

ವಸುಭಾಗನ ಪಂಚತಂತ್ರ

ಈ ಪಂಚತಂತ್ರದ ವಿಸ್ತರಣದ ಪ್ರವಾಹ ದೂರಪ್ರಾಚ್ಯದೇಶಗಳಲ್ಲಿಯೂ ನುಗ್ಗಿದೆ. ಪ್ರಚಲಿತವಿರುವ ಕೆಲವು ಭಾಷಾಂತರಗಳನ್ನು ಈಗಾಗಲೇ ಸೂಚಿಸಲಾಗಿದೆ. ಈ ದೇಶಗಳಲ್ಲಿ ಶತಶತಮಾನಗಳಿಂದ ಪ್ರಚಲಿತವಾಗಿರುವ ಸ್ಥಾನಿಕ ಪಂಚತಂತ್ರ ಕಥೆಗಳ ಮೂಲ, ಇದುವರೆಗೆ ಹೆಚ್ಚು ಪ್ರಸಿದ್ಧವಾಗಿಲ್ಲದ ವಸುಭಾಗನ 'ತಂತ್ರೋಪಾಖ್ಯಾನ'. ವಿಶೇಷವಾದ ಜನಪ್ರಿಯತೆಯನ್ನು ಗಳಿಸಿ, ಶಾಖೋಪಶಾಖೆಗಳಾಗಿ ಕವಲೊಡೆದ ವಿಷ್ಣುಶರ್ಮನ ಪಂಚತಂತ್ರದಂತೆ ವಸುಭಾಗನ ಈ ಸಂಪಾದನೆಯೂ (ತಂತ್ರೋಪಾಖ್ಯಾನವೂ) ಕೂಡಾ, ಮೂಲ ಪಂಚತಂತ್ರವನ್ನು ಕೇಂದ್ರವಾಗುಳ್ಳ ಒಂದು ಸ್ವತಂತ್ರ ಶಾಖೆಯೆಂದೇ ಹೇಳಲಾಗಿದೆ.[24] ಈ ವಸುಭಾಗನ ಕೃತಿಯೂ ಕೂಡಾ 'ವಿಷ್ಣುಶರ್ಮನ ಪಂಚತಂತ್ರದ ಗದ್ಯ, ಪದ್ಯಗಳ ಮರು ಸಂಯೋಜನೆ, ಸಂಪಾದನೆ' ಎಂದೂ ಹೇಳಲಾಗಿದೆ.[25] ಅದೇನೇ ಇರಲಿ, ಕಥಾಂತರಂಗ ಹಾಗೂ ಸಂಯೋಜನೆಗಳ ದೃಷ್ಟಿಯಿಂದ ಪರೀಕ್ಷಿಸಿದಾಗ, ವಸುಭಾಗನ ಕೃತಿಗೂ, ವಿಷ್ಣುಶರ್ಮನ ಕೃತಿಗೂ ಎದ್ದು ಕಾಣುವಷ್ಟು ಅಂತರವಿದೆ ಎಂಬುದು ಮಾತ್ರ ಸತ್ಯ. ಈ ವಸುಭಾಗನ ಕೃತಿಯನ್ನು ಆಗ್ನೇಯ ಏಷ್ಯಾ ದೇಶಗಳು ಚಾಚೂ ತಪ್ಪದೆ ಹಿಂಬಾಲಿಸಿವೆ ಎಂಬುದೂ ಗಮನೀಯವಾದ ಅಂಶ.

ಮಧ್ಯಜವಾನೀ (ಯವ ದ್ವೀಪದ ಭಾಷೆ) ಭಾಷೆಯಲ್ಲಿ ಈ ವಸುಭಾಗನ 'ತಂತ್ರೋಪಾಖ್ಯಾನ'ದ ಪದ್ಯರೂಪದ ಎರಡು ಕೃತಿಗಳೂ, ಗದ್ಯರೂಪದ ಒಂದು

ಕೃತಿಯೂ ಈಗ ಪ್ರಚಾರದಲ್ಲಿವೆ. ಇವೆಲ್ಲ ಕ್ರಿ. ಶ. ೧೨೦೦ಕ್ಕಿಂತ ಹಿಂದೆಯೇ ಪ್ರಚಾರದಲ್ಲಿದ್ದುವು! ಅವುಗಳನ್ನು ತಂತ್ರೈ, ತಂತ್ರಿಕಾಮಂದಕ ಮತ್ತು ತಂತ್ರಿ ಚರಿತ ಮುಂತಾದ ವಿವಿಧ ಹೆಸರುಗಳಿಂದ ಕರೆಯಲಾಗಿದೆ.[26] ಈ ಪದ್ಯ ಸಂಪಾದನೆಯಲ್ಲಿ ವಸುಭಾಗನೇ ಈ ಕೃತಿಯ ಮೂಲಕರ್ತೃವೆಂದು ಸ್ಪಷ್ಟವಾಗಿ ಹೇಳಲಾಗಿದೆ. ಆದರೆ ಗದ್ಯ ಸಂಪಾದನೆಗಳಲ್ಲಿ ಉದ್ಧೃತವಾಗಿರುವ ನೂರಾರು ಸಂಸ್ಕೃತ ಶ್ಲೋಕಗಳನ್ನೂ ವಸುಭಾಗನ ಕೊರಳಿಗೇ ಕಟ್ಟಲಾಗಿದೆ. ಬಾಲಿನೀಸ್ (ಬಲಿದ್ವೀಪದ ಭಾಷೆ) ಮತ್ತು ಮದುರೀಸ್ (ಮದುರಾ ದ್ವೀಪದ ಭಾಷೆ) ಭಾಷೆಗಳ ಪಂಚತಂತ್ರಗಳು ಜವಾನೀಸ್ ಭಾಷೆಯ ಪಂಚತಂತ್ರಕ್ಕೆ ಹೆಚ್ಚು ಸಮೀಪವಾಗಿವೆ. ಲೇಯಾಸ್ ದೇಶದ ಪಂಚತಂತ್ರ ೧೨೦೦ಕ್ಕಿಂತ ಹಿಂದೆಯೇ ರಚಿತವಾಗಿ ' ಮುಲ್ಲ ತಂತ್ರೈ ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಅದರ ಸಾರಾಂಶವನ್ನು ಎ. ಫಿನೋ (A. Finot)[27] ಅವರು ಫ್ರೆಂಚ್ ಭಾಷೆಯಲ್ಲಿ ಕೊಟ್ಟಿದ್ದಾರೆ. ಥಾಯಿಲ್ಯಾಂಡ್‌ನಲ್ಲಿ ವಸುಭಾಗನ ತಂತ್ರೋಪಾಖ್ಯಾನದ ಹಲವಾರು ಸಂಪಾದನೆಗಳು ' ನಂಗ್ ತಂತ್ರೈನ ಸಂಭಾಷಣೆಗಳು'[28] ಎನ್ನುವ ಹೆಸರಿನಿಂದ ಪ್ರಸಿದ್ಧವಾಗಿವೆ. ಮಲಯಾ ಭಾಷೆಯಲ್ಲಿ ಈ ಕೃತಿಯ ಎರಡು ಸಂಪಾದನೆಗಳು ಕಾಣಸಿಗುತ್ತವೆ. ಒಂದು ' ಪಂಡ್‌ಜ ತಂದರನ್ '[29], ಮತ್ತೊಂದು, ತಮಿಳು ಮೂಲದಿಂದ ಮಲಯನ್ ಭಾಷೆಗೆ ಪರಿವರ್ತಿತವಾದ ಅಬ್ದುಲ್ಲಾ ಬಿನ್ ಅಬ್ದುಲ್ ಖಾದಿರ್‌ನ ಕೃತಿ.[30]

ಇಲ್ಲಿನವರೆಗೆ ' ಪಂಚತಂತ್ರ 'ದ ಪ್ರಪಂಚ ಪರ್ಯಟನದ ಸೋಜಿಗದ ಕಥೆಯ ಸಕೃದ್ದರ್ಶನವನ್ನು ಮಾತ್ರ ವಿವರಿಸಿದ್ದಾಯಿತು. ಈ ವಿಸ್ತರಣೆ, ದೇಶದೇಶಾಂತರ ವಾಸ—ಪ್ರವಾಸದ ಸಂಗತಿ ನೂರಾರು ಸಂಶೋಧಕರನ್ನು ಆಹ್ವಾನಿಸುತ್ತಿದೆ. ಸಂಸ್ಕೃತ ಭಾಷೆಯ ಮೂಲ ಪಂಚತಂತ್ರದ ಒಂದು ಶಾಖೆ ಪೌರಸ್ತ್ಯ ದೇಶಗಳಲ್ಲಿಯೂ, ಇನ್ನೊಂದು ಶಾಖೆ ಔತ್ತರೇಯ ದೇಶಗಳಲ್ಲಿಯೂ, ಮತ್ತೊಂದು ಶಾಖೆ ಪಾಶ್ಚಾತ್ಯ ದೇಶಗಳಲ್ಲಿಯೂ ಹಬ್ಬಿ ಹಸರಿಸಿರುವುದು ಈ ವಿಕೇಂದ್ರೀಕರಣದಲ್ಲಿ ಎದ್ದು ಕಾಣುವ ಮುಖ್ಯ ಅಂಶ. ಈ ಕಥೆಗಳು ಯಾವುದೇ ದೇಶವನ್ನು ಪ್ರವೇಶಿಸಲಿ, ಯಾವುದೇ ಭಾಷೆಯಲ್ಲಿ ಮೈದೋರಲಿ, ಅಲ್ಲಿನ ಜನಮನವನ್ನು ಸೂರೆಗೊಂಡು, ಅವರ ಪ್ರೀತ್ಯಾದರ ಗೌರವಗಳನ್ನು ಸೆಳೆದುಕೊಂಡು, ಚಿರಂತನವಾಗಿ ಬಾಳಿ ಬದುಕಿವೆ. ಇದೇ ಅವುಗಳ ಚಿರಂತನತೆ ಹಾಗೂ ಚಿರನೂತನತೆಯ ರಹಸ್ಯ. ಈ ಬಗ್ಗೆ ಖಂಡಿತವಾಗಿಯೂ ಭಾರತ ಹೆಮ್ಮೆಪಟ್ಟುಕೊಳ್ಳಬಹುದಾಗಿದೆ.

ಮೂಲ : ಶ್ರೀ ಕೆ. ವಿ. ಶರ್ಮ

ಅನು : ಎಸ್. ಎಂ. ವೃಷಭೇಂದ್ರಸ್ವಾಮಿ

(ಶ್ರೀ ಕೆ. ವಿ. ಶರ್ಮ, ಎಂ. ಎ. ಅವರು ಮದ್ರಾಸ್ ವಿಶ್ವವಿದ್ಯಾನಿಲಯದ ಸಂಸ್ಕೃತ ಶಾಖೆಯಲ್ಲಿರುವರು. ಅವರು ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ

'ಸಂಸ್ಕೃತ ಸಂಘ'ದಲ್ಲಿ ಮಾಡಿದ ಭಾಷಣವನ್ನೇ ಇಲ್ಲಿ ಭಾಷಾಂತರಿಸಲಾಗಿದೆ. ಈ ಭಾಷಾಂತರ ಹಾಗೂ ಪ್ರಕಟನೆಗೆ ಒಪ್ಪಿಗೆಯನ್ನಿತ್ತ ಶ್ರೀಯುತರಿಗೆ ಕೃತಜ್ಞತೆಗಳು ಸಲ್ಲಬೇಕಾಗಿದೆ. ಈ ಭಾಷಾಂತರ ಕಾರ್ಯದಲ್ಲಿ ವಿಶೇಷವಾದ ಸಲಹೆಗಳನ್ನು ನೀಡಿದ ಶ್ರೀ. ಅ. ವೆಂಕಟಸುಬ್ಬಯ್ಯನವರಿಗೂ, ಪರ್ಷಿಯನ್, ಅರೇಬಿಯನ್, ಟರ್ಕಿಷ್ ಪದಗಳನ್ನು ಭಾಷಾಂತರಿಸಲು, ನೆರವು ನೀಡಿದ, ಬಳ್ಳಾರಿಯ ವೀರಶೈವ ಕಾಲೇಜಿನ ಉರ್ದು ಪ್ರೊಫೆಸರ್ ಎಂ. ಕೆ. ರಹಮಾನ್ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲಬೇಕಾಗಿದೆ.—ಅನು.)

ಅಡಿ ಟಿಪ್ಪಣಿಗಳು

1. J. Hertel: Das Panchatantra, Seine Geschichte unde Seine Verbreitung, Leipzig und Berlin, 1914.
2. The Panchatantra Reconstructed, Vol. II, Am. Or. Series, 3, 1924.
3. ವಸುಭಾಗನ ಪಂಚತಂತ್ರ: ಶ್ರೀ. ಅ. ವೆಂಕಟಸುಬ್ಬಯ್ಯ. ಅಭಿವಂದನೆ (ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳ ಸಂಭಾವನೆ ಗ್ರಂಥ), ಪುಟ 513-523.
4. ಜರ್ಮನ್ ಭಾಷೆಯ ಭಾಷಾಂತರಗಳು: (ಅ) Ed. and Tr. G. Bickwell, Leipzig, 1876. (ಆ) Kalila und Dimna: Syrisch und Deuisch Von F. Schulthess, Berlin, 1911.
5. ಮಜ್‍ದೆಯಿಜಂ:—ಈ ಧರ್ಮ ಪರ್ಷಿಯಾ ದೇಶದಲ್ಲಿ ಪ್ರಚಾರದಲ್ಲಿದೆ. ಅವರು ಅಗ್ನಿ ಮತ್ತು ಸೂರ್ಯನ ಉಪಾಸಕರು. ಭಾರತದಲ್ಲಿರುವ ಪಾರ್ಸಿಗಳ ಧರ್ಮ ಇದು.
6. English (Knatchbull, 1819, 1905);
   German (i) Holmboe And Hansen, 1832; (ii) Wolff 1837; 1839);
   Danish (Holmboe, 1880); French (Pihan 1886);
   Russian (Attai, 1889); Italian (Moreno, 1910);
   Spanish (Conde; Not Published.);
   Czech. (i) Trebovsky, 1846-50 (ii) Valecka C. 1894.
7. Greek Version by Symeon Seth (Ed. Stark, 1697; Puntoni, Rome-Florence-Turin, 1889).
8. Old Slavonic (Bulgarian) Anon: 12th–13th Cent. Ed. Viktorov Moscow 1881.
9. Italian (Nuti. 1583).

10. Latin (i) Poussin, 1666; (ii) Stark, 1697 and Aurivillivs, 1789.
11. German (Lehmus, 1778).
12. Old Spanish, Ed. (i) Gayangos, Madrid, 1860.
    (ii) Allen Macon, 1906.
13. Raymond De Beziers (Ed. Herviux, 1899).
14. Rubbi Joel, Ed. with French Tr. J. Derenbourg, Paris 1881.
15. Ex: Holland, Stuttgart, 1860.
16. Danish—Nielsson, 1618.
17. Dutch—(i) Heyns, 1623, (ii) Duikerius c. 1693.
18. La Moral Philosofia—Venice, 1552, two parts.
19. Morall Philosophie of Doni, London, 1570, 1601.
    Ed. Jacobs with useful introduction and Bibliography, 1888.
20. Lights of Canopus–Eastwick, 1854 and Wallzston, 1877, 1894.
21. Indian Literature in China-by Chi-Hsien-Lin, 'Chines Literature,' Bimonthly, Peking, July-August; 1958, Pp. 123-30.
22. ZDMG 52 (1893, 283 ff.)
23. Petrograd, 1921.
23. (1) ಲಾವೊಸ್ (ಲೇಯೂಸ್) ದೇಶದ ಪಂಚತಂತ್ರ—ಶ್ರೀ. ಅ. ವೆಂಕಟಸುಬ್ಬಯ್ಯ (ಮೊದಲ ಭಾಗ), ಪ್ರಬುದ್ಧ ಕರ್ಣಾಟಕ—ವಿಳಂಬಿ ಸಂವತ್ಸರ, ಸಂಪುಟ, 40' ಸಂಚಿಕೆ 4, ಪುಟ 5-22.
    (2) ಇದರ ಎರಡನೆಯ ಭಾಗ—ವಿಕಾರಿ ಸಂವತ್ಸರ, ಸಂ. 40, ಸಂ. 1.
24. A. Venkatasubbaiah—'The Panchatantra of Vasubhaga' IHQ. 10 (1934), Pp. 104-11.
25. George T Artola, 'Panchatantra Manuscripts for South India' ALB 21 (1957), 185-262.
    1938 ರಲ್ಲಿ ತ್ರಿವೆಂಡ್ರಂ ಸಂಸ್ಕೃತ ಮಾಲೆಯ 132 ನೆಯ ಪ್ರಕಟನೆಯಾದ 'ತಂತ್ರಾಖ್ಯಾಯಿಕಾ' (ಅಜ್ಞಾತ ಕವಿಕೃತ) ಕೂಡಾ, ವಸುಭಾಗನ ಕೃತಿಯ ಒಂದು ರೂಪಾಂತರವೆಂಬುದನ್ನು ಶ್ರೀ. ಅಟೋರ್ಲಾ ಮೇಲಿನ ಲೇಖನದಲ್ಲಿ ಸೂಚಿಸಿದ್ದಾರೆ. ಅಲ್ಲದೆ, ಡಾ|| ಎ.ವೆಂಕಟಸುಬ್ಬಯ್ಯನವರಿಂದ ಸೂಚಿತವಾದ ಕನ್ನಡ ಭಾಷೆಯ, ವಸುಭಾಗನ ಪಂಚತಂತ್ರದ ರೂಪಾಂತರವಾದ ದುರ್ಗಸಿಂಹನ ಪಂಚ

ತಂತ್ರದಂತೆಯೇ, ತಮಿಳು ಭಾಷೆಯಲ್ಲಿಯೂ ಒಂದು ವಸುಭಾಗನ ರೂಪಾಂತರವಿದೆ ಎನ್ನುವುದನ್ನೂ ಸೂಚಿಸಿದ್ದಾರೆ.

26. (1) Ed. with Dutch Tr. C. Hooykaas, Bandoeng 1931.
    (2) ಈ ಬಗ್ಗೆ ಡಾ॥ ಅ. ವೆಂಕಟಸುಬ್ಬಯ್ಯನವರ ಲೇಖನ ನೋಡಿ. (ಪ್ರಬುದ್ಧ ಕರ್ಣಾಟಕದ ಲೇಖನಗಳನ್ನೂ ನೋಡಿ.)

27. B.E.F.E.O. 17 (1917).

28. Conversations of Nang Tantrai (Tr. in French, E. Lorgeau Entretiens de Nang Tantrai, Paris, 1924; English, portion by J. Crosby, **Journal of the Siam Society, VII**, (1910) ii, 1-80.

29. PAIVDJA TANDARAN, Ed. K. C. Klinkert, Zalt-Bomnel 1871.

30. Ed. H. N. Vander Tuuk, Maleisch Leesboek...Leiden, 1866, 1875, 1881.

ಗ್ರಂಥಸೂಚಿ

Hertel, J: Das Panchatantra, Seine Geschichte und Seine Verbreitung, Leipzig und Berlin, 1914.

Chauvin, V: Bibliographie Des Ouvrages Arabes, Vol. II Kalila Wa-Dimna, Leige and Leipzig, 1897.

Edgerton, F: The Panchatantra Reconstructed, Vol. 2, New Haven, 1924. Am. Or. Series, 3.

Tawney and Penzer: The Ocean of Story, Vol. V, London, 1926. (Foreword by E. Denison Ross and App. on Panchatantra by Penzer and Edgerton.)

Finot, A: Researches Surla Literateur Laotienne, Bulletin de L'ecole Francaise D'Extreme Orient, 17 (1917), Article V, Sn. V. 84-115.

Hooykaas C. Tantri: De Middle-Javaansche Pancatantra Bewerking. Leiden, 1929.

Venkatasubbaiah, A: (1) ' On the Reconstruction of Vasubhaga's Panchatantra ', Zeitschrift Fur Indologie and Iranistik VI, VII. (2) The Panchatantra of Vasubhaga ', Indian Historical Quarterly, 10 (1934), Pp. 104–11.

Artola G.A: Panchatantra Manuscripts From South India, Adyar Library Bulletin 21 (1957), Pp. 185-262

ಆಶ್ಚರ್ಯಚೂಡಾಮಣಿ

ಸಾಮಾನ್ಯವಾಗಿ ಹಾಗೂ ಒಂದೇ ಮಾತಿನಲ್ಲಿ ಹೇಳುವುದಾದರೆ ಉತ್ತಮವಾದ ಕವಿಕೃತಿಗಳನ್ನು 'ಕಾವ್ಯ'ವೆಂದು ಸುಲಭವಾಗಿ ತಿಳಿಸಬಹುದು. ಕಾವ್ಯಕ್ಕೆ ತನ್ನದೇ ಆದ ಒಂದು ವಿಶಿಷ್ಟಸ್ಥಾನ ಆದಿಯಿಂದಲೂ ಬಂದಿದೆ. ಈ ಕಾವ್ಯ ಪ್ರಪಂಚವನ್ನು ನಾಶಗೊಳಿಸುವುದು ಯಾರಿಂದಲೂ ಸಾಧ್ಯವಿಲ್ಲ. ಅಪಾರವಾದ ಕಾವ್ಯ ಪ್ರಪಂಚದಲ್ಲಿ ಕವಿಯೊಬ್ಬನೇ ಪ್ರಜಾಪತಿಯಾಗಿದ್ದುಕೊಂಡು ತನ್ನ ಮನಸ್ಸಿಗೆ ಬಂದ ಹಾಗೆ ವಿಶ್ವವನ್ನು ಸೃಜಿಸುತ್ತಾನೆ. ಸಹೃದಯರ ಮನಸ್ಸಿಗೆ ಆಹ್ಲಾದ ವನ್ನುಂಟುಮಾಡುವುದೇ ಕಾವ್ಯದ ಮುಖ್ಯ ಉದ್ದೇಶ.

ಈ ಕಾವ್ಯವನ್ನು ಆಲಂಕಾರಿಕರು 'ದೃಶ್ಯ' ಮತ್ತು 'ಶ್ರವ್ಯ' ಎಂದು ಎರಡು ಭಾಗ ಮಾಡಿದ್ದಾರೆ. ನಾಟಕ, ಪ್ರಹಸನ, ಭಾಣ ಮೊದಲಾದ ನೋಡಿ ಆನಂದಪಡಬಹುದಾದ ಕಾವ್ಯವನ್ನು 'ದೃಶ್ಯ'ವೆಂದು ಕರೆದಿದ್ದಾರೆ. ನಾಟಕ ಮೊದಲಾದುವುಗಳನ್ನು ರಂಗದ ಮೇಲೆ ಅಭಿನಯಿಸಿ, ಪಾತ್ರವರ್ಗದವರ ಕಲಾ ಚಾತುರ್ಯದಿಂದ ಸಭಿಕರನ್ನು ಆನಂದಗೊಳಿಸಬಹುದು. ಉಳಿದ ಪದ್ಯ, ಗದ್ಯ ಮತ್ತು ಚಂಪೂಗಳನ್ನು ಕೇಳಿ ಆನಂದ ಹೊಂದಬಹುದಾದ್ದರಿಂದ ಇವಕ್ಕೆ ಶ್ರವ್ಯ ಕಾವ್ಯವೆನ್ನುತ್ತಾರೆ.

ಆಶ್ಚರ್ಯಚೂಡಾಮಣಿಯು ದೃಶ್ಯ ಕಾವ್ಯಕ್ಕೆ ಸೇರಿದ ನಾಟಕಗಳಲ್ಲೊಂದು. ಇದನ್ನು ರಂಗದಮೇಲೆ ಅಭಿನಯಿಸಲೂ ಹಾಗೂ ಪ್ರೇಕ್ಷಕರನ್ನು ಮುಗ್ಧಗೊಳಿಸಲೂ ಸಾಧ್ಯವಿದೆ. ಇದೊಂದು ಉತ್ತಮವಾದ ಕೃತಿ. ಪಂಡಿತರ ಹಾಗೂ ಸಹೃದಯರ ಗಮನಕ್ಕೆ ಬಂದು ಹೆಚ್ಚು ವರುಷಗಳೇನೂ ಕಳೆದಿಲ್ಲ. ಮೊಟ್ಟಮೊದಲನೆಯ ಬಾರಿ ಈ ಗ್ರಂಥವು ಅಚ್ಚಾಗಿ ಬಂದದ್ದು ೧೯೨೬ರಲ್ಲಿ. ಮದರಾಸಿನ ಬಾಲಮನೋರಮಾ ಪ್ರೆಸ್ಸಿನವರು ಆರು ಹಸ್ತಲಿಖಿತ ಓಲೆಗಳ ಆಧಾರದ ಮೇಲೆ 'ಶಂಕರ' ನೆಂಬವನು ಬರೆದ ವಿವೃತಿಯೊಂದಿಗೆ ಪ್ರಕಾಶಗೊಳಿಸಿದರು. ಅಲ್ಲಿಯತನಕ ಮಲಬಾರು ಪ್ರಾಂತ್ಯದಲ್ಲಿ ಮಾತ್ರ ಈ ನಾಟಕವು ಬಹಳ ಪ್ರಸಿದ್ಧಿ ಹೊಂದಿತ್ತೇ ವಿನಾ ಮತ್ತಾರಿಗೂ ಇದರ ವಿಚಾರವೇ ತಿಳಿದಿರಲಿಲ್ಲ. ಈ ನಾಟಕವನ್ನು ಬರೆದವನು ಶಕ್ತಿಭದ್ರ.

ನಾಟಕವನ್ನು ಬರೆಯುವ ಕವಿಗಳು ಸಾಮಾನ್ಯವಾಗಿ ರಾಮಾಯಣ, ಭಾಗವತ, ಮಹಾಭಾರತ ಮುಂತಾದ ಕಾವ್ಯಗಳನ್ನು ಆಧಾರವಾಗಿಟ್ಟುಕೊಂಡಿರು ತ್ತಾರೆ. ಅಲ್ಲಿ ಬರುವ ದೃಶ್ಯಗಳನ್ನು ತಮ್ಮ ತಮ್ಮ ಪ್ರೌಢಿಮೆಯಿಂದ ನಾಟಕಕ್ಕೆ ಅಳವಡಿಸಿಕೊಂಡು, ಜೀವಕಳೆ ತುಂಬಿ, ಕಥೆಯನ್ನು ತಮ್ಮ ಉದ್ದೇಶಕ್ಕೆ ತಕ್ಕಹಾಗೆ ಸೇರಿಸಿ, ಮಾರ್ಪಾಟುಗಳನ್ನು ಮಾಡುತ್ತಾರೆ. ಈ ಮಾರ್ಪಾಡು ಕವಿಗೆ ಸೇರಿದ್ದು. ಅದು ಅವನ ಉದ್ದೇಶದ ಮೇಲೆ ನಿಂತಿರುತ್ತದೆ. ಮೂಲಕ್ಕಿಂತಲೂ ಬಹಳ ಬದಲಾವಣೆಗಳನ್ನು ನಾಟಕದಲ್ಲಿ ಕಾಣುವುದಕ್ಕೆ ಇದೇ ಕಾರಣ. ಹೀಗೆ

ರಾಮಾಯಣವನ್ನು ಆಧಾರವಾಗಿಟ್ಟುಕೊಂಡಿದ್ದ ಭಾಸ, ಭವಭೂತಿ ಮುಂತಾದವರು ತಮ್ಮ ತಮ್ಮ ನಾಟಕಗಳನ್ನು ಬರೆದರು. ಅಂತೆಯೇ 'ಆಶ್ಚರ್ಯಚೂಡಾಮಣಿ'ಯೂ ಸಹ ರಾಮಾಯಣ ನಾಟಕಗಳಲ್ಲೊಂದು. ಏಳು ಅಂಕಗಳುಳ್ಳ ಈ ನಾಟಕವು ಶೂರ್ಪಣಖಾವೃತ್ತಾಂತದಿಂದ ಹಿಡಿದು ರಾಮನು ಲಂಕೆಯನ್ನು ಬಿಟ್ಟುಬರುವ ವರೆಗಿನ ರಾಮಾಯಣದ ಕಥೆಯನ್ನು ಪ್ರತಿಪಾದಿಸುತ್ತದೆ. ಬಾಲಕಾಂಡದ ವಿಚಾರ ಮಾತ್ರ ಬರುವುದಿಲ್ಲ. ಈ ಸಂದರ್ಭದಲ್ಲಿ ಕೆಲವು ಮುಖ್ಯವಾದ ರಾಮಾಯಣ ನಾಟಕಗಳನ್ನು ಹೇಳಿದರೆ ಉಚಿತವೆನ್ನಿಸುತ್ತದೆ. ಭಾಸ ಮಹಾಕವಿಯ ಪ್ರತಿಮಾ ಮತ್ತು ಅಭಿಷೇಕ; ಮುರಾರಿಯ ಅನರ್ಘ್ಯರಾಘವ ಮತ್ತು ಭವಭೂತಿಯ ಉತ್ತರ ರಾಮಚರಿತ.

ನಾಟಕದ ಪ್ರಸ್ತಾವನೆಯಲ್ಲಿ ಕವಿಯು ತನ್ನ ವಿಚಾರವನ್ನು ಸ್ವಲ್ಪ ಮಾತ್ರ ತಿಳಿಸಿದ್ದಾನೆ. ಇದರ ಪ್ರಕಾರ ಆಶ್ಚರ್ಯಚೂಡಾಮಣಿಯನ್ನು ಬರೆದವನು ದಕ್ಷಿಣ ದೇಶಕ್ಕೆ ಸೇರಿದ ಶಕ್ತಿಭದ್ರನೆಂದೂ ಹಾಗೂ ಈತನ ಹೆಸರು ಈ ನಾಟಕವನ್ನು ಬರೆಯುವ ಮುಂಚೆಯೇ ಪ್ರಸಿದ್ಧಿ ಹೊಂದಿತ್ತೆಂದೂ ಗೊತ್ತಾಗುತ್ತದೆ.

ಶಕ್ತಿಭದ್ರನ ಕೃತಿಗಳ ಬಗ್ಗೆ ಹೆಚ್ಚಾಗಿ ಹೇಳಲು ಸರಿಯಾದ ಆಧಾರ ವಿಲ್ಲದಿದ್ದರೂ ಆಶ್ಚರ್ಯಚೂಡಾಮಣಿಯೊಂದೇ ಈತನ ಕೃತಿ ಎಂದು ಹೇಳುವ ಹಾಗಿಲ್ಲ. ನಾಟಕದ ಪ್ರಸ್ತಾವನೆಯಲ್ಲಿನ ವಾಕ್ಯಗಳನ್ನು ನೋಡಿ: ದಕ್ಷಿಣ ದೇಶದಿಂದ ಬಂದಿರುವ ಆಶ್ಚರ್ಯಚೂಡಾಮಣಿಯನ್ನು ಅಭಿನಯಿಸುವ ಆಶಯ ವನ್ನು ಸೂತ್ರಧಾರನು ತಿಳಿಸಿದಾಗ ನಟಿಯು, "ಆರ್ಯ, ಅತ್ಯಾಹಿತಂ ಖಲು ಏತತ್, ಆಕಾಶಂ ಪ್ರಸೂತೇ ಪುಷ್ಪಂ, ಸಿಕತಾಃ ತೈಲಂ ಉತ್ಪಾದಯಂತಿ, ಯದಿ ದಕ್ಷಿಣಸ್ಯಾ ದಿಶಃ ಆಗತಂ ನಾಟಕ ನಿಬಂಧನಂ" ಎಂಬುದಾಗಿ ಆಶ್ಚರ್ಯವನ್ನು ಸೂಚಿಸು ತ್ತಾಳೆ. ಅವಳ ಸಂದೇಹ ನಿವೃತ್ತಿಗಾಗಿ ಸೂತ್ರಧಾರನು ಹೀಗೆ ಉತ್ತರ ಕೊಡುತ್ತಾನೆ—"ಆರ್ಯೆ! ಶ್ರೂಯತಾಂ ಉನ್ಮಾದ ವಾಸವದತ್ತಾ ಪ್ರಭೃತೀನಾಂ ಕಾವ್ಯಾನಾಂ ಕರ್ತುಃ ಕವೇಃ ಶಕ್ತಿಭದ್ರಸ್ಯೇದಂ ಪ್ರಜ್ಞಾವಿಲಸಿತಮ್ |" 'ಆದ್ದರಿಂದ ಶಕ್ತಿಭದ್ರನು ಸಾಕಷ್ಟು ಪ್ರಸಿದ್ಧಿಯನ್ನು ಹೊಂದಿ ಉನ್ಮಾದ ವಾಸವ ದತ್ತಾ ಮೊದಲಾದ ಕಾವ್ಯಗಳನ್ನು ಬರೆದಿದ್ದನೆಂದು ಹೇಳಬಹುದು. ಈ ಕಾವ್ಯವು ಈಗ ನಮಗೆ ದೊರೆತಿರುವ ಪ್ರತಿಜ್ಞಾಯೌಗಂಧರಾಯಣವೆಂದು ಕೆಲವರ ಅಭಿಪ್ರಾಯ. 'ಸಾರ ಸಂಗ್ರಹ ಮೊದಲಾದ ತಾಂತ್ರಿಕಗಳನ್ನು ಈತನೇ ಬರೆದ ನೆಂದೂ, ಗೀರ್ವಾಣೇಂದ್ರನೆಂಬ ಹೆಸರಿನವನೂ ಈತನೇ ಎಂದೂ ಹೇಳಬಹುದು. ಅಭಿಷೇಕವನ್ನು ಸಹ ಈತನೇ ಬರೆದನೆಂದು ಹೇಳಲು ಆಧಾರಗಳಿವೆ' ಎಂದು ಪಂಡಿತರ ಮತ.[1]

---

[1] See Introduction, Abhisekanātaka, Ed. by Mm. P. V. Venkatarama Sastry

ಕೇರಳದ ಒಂದು ಪ್ರತೀತಿಯ ಪ್ರಕಾರ ಶಕ್ತಿಭದ್ರನೆಂಬುದು ಈತನ ನಿಜವಾದ ಹೆಸರಲ್ಲವೆಂಡೂ, ಮಿಥ್ಯಾನಾಮವೆಂದೂ ತಿಳಿಯಬರುತ್ತದೆ. ಈತನ ನಿಜವಾದ ಹೆಸರು 'ಶಂಕರ'ನೆಂದು ಹೇಳುವರು. ಈ ನಾಟಕದ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ : "ಶಕ್ತ್ಯಾ ಕವಿತ್ವನಿದಾನ ಭೂತೇನ ಸಂಸ್ಕಾರೇಣ ಭದ್ರ ಇತಿ ಅರ್ಥಾನುಗತಮೇವನಾಮ",–ಆಶ್ಚರ್ಯಚೂಡಾಮಣಿ (ಪು. ೧೦).

ಸಾಂಪ್ರದಾಯಿಕವಾಗಿ ಬಂದಿರುವ ಪ್ರಕಾರ ಶಕ್ತಿಭದ್ರನು ಶಂಕರಾಚಾರ್ಯರ ಶಿಷ್ಯನಾಗಿದ್ದನೆಂದು ತಿಳಿಯಬರುತ್ತದೆ. ಆದ್ಯಶಂಕರಾಚಾರ್ಯರಂತೆ ಪ್ರಸಿದ್ಧರಾದ ಶಂಕರಾಚಾರ್ಯರೆಂದು ಹೆಸರುಳ್ಳವರನೇಕರು ೮ ಮತ್ತು ೯ನೆಯ ಶತಮಾನಗಳಲ್ಲಿದ್ದರು. ಇದರ ಪ್ರಕಾರ ಶಕ್ತಿಭದ್ರನು ಕ್ರಿ. ಶ. ೮೦೦—೯೦೦ರಲ್ಲಿದ್ದನೆನ್ನಬಹುದು. ಭಾಮಹನಿಂದ ಹಿಡಿದು ಪಂಡಿತ ಜಗನ್ನಾಥ ಮುಂತಾದವರ ಪ್ರಸಿದ್ಧ ಆಲಂಕಾರಿಕರ ಗ್ರಂಥಗಳಲ್ಲಿ ಈತನ ಹೆಸರೇ ಉಕ್ತವಾಗಿಲ್ಲ. ಹಾಗೂ ಈತನ ಕೃತಿಯಿಂದ ನಿದರ್ಶನಕ್ಕಾಗಿ ಯಾವ ಭಾಗವೂ ಕಂಡುಬರುವುದಿಲ್ಲ. ಶಕ್ತಿಭದ್ರನು, ಕಾಳಿದಾಸ ಮತ್ತು ಭಟ್ಟನಾರಾಯಣ ಇವರುಗಳ ನಂತರ ಬಂದವನೆಂದು ಹೇಳಲು ನಾಟಕದಲ್ಲೇ ಪ್ರಮಾಣವಿದೆ ಎನ್ನಬಹುದು. ಕಾಳಿದಾಸನ 'ಮಾಲವಿಕಾಗ್ನಿ ಮಿತ್ರ' ಮತ್ತು 'ಅಭಿಜ್ಞಾನ ಶಾಕುಂತಲ'ದ ಶ್ಲೋಕಗಳ ಮತ್ತು ಭಟ್ಟನಾರಾಯಣನ 'ವೇಣೀಸಂಹಾರ'ದ ಶ್ಲೋಕಗಳ ಅನುಕರಣಗಳು ಆಶ್ಚರ್ಯಚೂಡಾಮಣಿಯಲ್ಲಿ ಬರುತ್ತವೆ. ಸಾದೃಶ್ಯಗಳನ್ನು ನೋಡಿದರೆ ಶಕ್ತಿಭದ್ರನು ೮ನೆಯ ಶತಮಾನದ ನಂತರ ಬಂದವನೆಂಬುದು ನಿರ್ವಿವಾದ. ಹಾಗೂ ಕುಲಶೇಖರವರ್ಮನೆಂಬ ಕೇರಳ ದೇಶದ ಮಹಾರಾಜನು ಕ್ರಿ. ಶ. ೧೦ನೆಯ ಶತಮಾನದಲ್ಲಿ 'ತಪತೀ ಸಂವರಣ' ಮತ್ತು 'ಸುಭದ್ರಾಧನಂಜಯ' ಮೊದಲಾದ ನಾಟಕಗಳನ್ನು ರಚಿಸಿದ್ದಾನೆ. ಅವನ ಕಾಲದಲ್ಲಿ ಸಂಸ್ಕೃತ ನಾಟಕಗಳನ್ನು ರಂಗಭೂಮಿಯ ಮೇಲೆ ಪ್ರದರ್ಶನ ಮಾಡುತ್ತಿದ್ದರೆಂದೂ ತಿಳಿಯಬರುತ್ತದೆ. ಮಲಯಾಳದಲ್ಲಿ 'ಶಾಕ್ಕಿಯಾರ್' ಎಂಬ ನಟರ ವಂಶದವರು ಇದ್ದಾರೆ. ಕುಲಶೇಖರನ ಕಾಲದಲ್ಲಿ ರಚಿತವಾದ 'ಆಟ್ಟ ಪ್ರಕಾರಕಂ' ಎಂಬ ನಾಟಕಾಭಿನಯ ಗ್ರಂಥದಲ್ಲಿ ಹರ್ಷನ ನಾಗಾನಂದ ಮತ್ತು ಶಕ್ತಿಭದ್ರನ 'ಆಶ್ಚರ್ಯ ಚೂಡಾಮಣಿ'ಯೂ ತಿಳಿಸಲ್ಪಟ್ಟಿದೆ. ಆದ್ದರಿಂದ ಶಕ್ತಿಭದ್ರನು ೧೦ನೆಯ ಶತಮಾನಕ್ಕಿಂತಲೂ ಹಿಂದಿನವನೆಂದೂ ೮ನೆಯ ಶತಮಾನದ ತರುವಾಯ ಬಂದವನೆಂದೂ ನಿರ್ವಿವಾದ.

'ಶಕ್ತಿಭದ್ರನು ಕೇರಳ ದೇಶದ ನಂಬೂದರಿ ಬ್ರಾಹ್ಮಣನು. ತಿರುವಾಂಕೂರು ಸಂಸ್ಥಾನದಲ್ಲಿರುವ ಚೆಂಗನೂರು (ಶೋಣಾಚಲ ಗ್ರಾಮ) ಈತನ ಸ್ಥಳವೆಂದೂ ಪ್ರತೀತಿಯಿದೆ. ಚೆಂಗನೂರಿನ ದೇವಸ್ಥಾನಕ್ಕೆ ಒಂದು ಮೈಲಿ ದೂರದಲ್ಲಿ ಈತನು ವಾಸಿಸುತ್ತಿದ್ದನೆಂದು ತಿಳಿಯಬರುತ್ತದೆ.[೨] ಶಕ್ತಿಭದ್ರನು ತನ್ನ ಕೃತಿಯಾದ

---

[೨]. See ABORI. Vol. pp. 431 ff.

ಆಶ್ಚರ್ಯಚೂಡಾಮಣಿಯನ್ನು ಬರೆದನಂತರ ಗುರುಗಳಾದ ಶ್ರೀ ಶಂಕರಾಚಾರ್ಯರಿಗೆ ತೋರಿಸಿ ಅವರ ಎದುರಿಗೆ ಅದನ್ನು ಓದಿದನು. ಅದ್ಭುತವಾದ ಕೃತಿಯನ್ನು ನೋಡುತ್ತಿರುವೆನೆಂದು ತಿಳಿದ ಅವರು ಅದರ ಬಗ್ಗೆ ತಮ್ಮ ಅಮಿತವಾದ ಮೆಚ್ಚುಗೆಯನ್ನು ತೋರ್ಪಡಿಸಿಕೊಂಡರೆ ಶಿಷ್ಯನಿಗೆ ಗರ್ವ ಬರಬಹುದೆಂದು ಸುಮ್ಮನಿದ್ದರು. ಅದರಿಂದ ಅಸಮಾಧಾನಗೊಂಡು, ಅವರು ಹೊರಟು ಹೋದ ತಕ್ಷಣವೇ ಶಕ್ತಿಭದ್ರನು ತನ್ನ ಕೃತಿಯನ್ನು ಸುಟ್ಟು ಭಸ್ಮಮಾಡಿದನು. ಆದರೆ, ಶ್ರೀ ಶಂಕರಾಚಾರ್ಯರು ಮತ್ತೊಮ್ಮೆ ಬಂದಾಗ ಶಿಷ್ಯನನ್ನು ಸಂಧಿಸಿ, ‘ ಅಪಿ ಕುಶಲಂ ತೇ ಭುವನಭೂತ್ಯೈ ? ’ ಎಂದು ಪ್ರಶ್ನಿಸಿದರು. ತಕ್ಷಣವೇ ಶಕ್ತಿಭದ್ರನಿಗೆ ತನ್ನ ನಾಟಕದಲ್ಲಿದ್ದ ಈ ಶ್ಲೋಕವು ಗಮನಕ್ಕೆ ಬಂದಿತು :

> ‘ ತ್ರಿಭುವನ ರಿಪುರಸ್ಯಾ ರಾವಣಃ ಪೂರ್ವಜಶ್ಚೇ-
> ದ ಸುಲಭ ಇತಿ ನೂನಂ ವಿಶ್ರಮಃ ಕಾರ್ಮುಕಸ್ಯ ।
> ರಜನಿ ಚರ ನಿಬದ್ಧಂ ಪ್ರಾಯಶೋ ವೈರಮೇತ-
> ದ್ಭವತು ಭುವನ ಭೂತ್ಯೈ ಸರ್ವರಕ್ಷೋ ವಧೇನ ॥ ’
>
> ಆಶ್ಚರ್ಯಚೂಡಾಮಣಿ, ೨-೧೯.

ಆಗ ಶಿಷ್ಯನು ತನ್ನ ನಡತೆಯ ಮೂಲಕಾರಣವನ್ನೂ ಹಾಗೂ ಹಾಗೆ ಬಂದ ಅವಕಾಶವನ್ನೂ ವಿಸ್ತಾರವಾಗಿ ವಿವರಿಸಿದನು. ಶಕ್ತಿಭದ್ರನನ್ನು ಬಿಟ್ಟು ಹೋಗುವ ಮುನ್ನವೇ ಶಂಕರಾಚಾರ್ಯರು ತಮ್ಮ ಅಮಿತವಾದ ಜ್ಞಾಪಕಶಕ್ತಿಯಿಂದ ತಾವು ಹಿಂದೆ ಕೇಳಿದ ಆಶ್ಚರ್ಯಚೂಡಾಮಣಿ ನಾಟಕವನ್ನು ಮೊದಲಿನಿಂದ ಹಿಡಿದು ಕೊನೆಯತನಕ ಹೇಳಿ ಶಕ್ತಿಭದ್ರನ ಕೈಯಿಂದ ಬರೆಸಿದರು. ಹೀಗೆ ವಿಶ್ವಖ್ಯಾತಿಯುಳ್ಳ ಮಹಾತ್ಮರಾದ ಗುರುಗಳ ಮನಸ್ಸಿನಿಂದ ಪುನೀತಗೊಂಡು ಈ ಕೃತಿಯು ಅದ್ವಿತೀಯವಾದ ಗುಣವುಳ್ಳ ನಾಟಕವಾಗಿದೆ.

ಆಶ್ಚರ್ಯಚೂಡಾಮಣಿ ನಾಟಕದ ಮೇಲೆ ಶಂಕರನೆಂಬ ಪಂಡಿತನಿಂದ ಬರೆದ ವಿವೃತಿ ಇದೆ. ವ್ಯಾಖ್ಯಾನಕಾರನೇ ತನ್ನ ವಿಚಾರವನ್ನು ಹೇಳಿಕೊಂಡಿದ್ದಾನೆ:

> “ ಭಾರದ್ವಾಜ ಗ್ರಾಮವಾಸೀ ಕುಮಾರಿಲ ಮತಾನುಗಃ ।
> ವಿಪ್ರಃ ಕಶ್ಚಿತ್ ಶಕ್ತಿಭದ್ರಕೃತಂ ವ್ಯಾಕೃತ ನಾಟಕಮ್ ॥
>
> ಆಶ್ಚರ್ಯಚೂಡಾಮಣಿ, ಪು. ೨೩೭.

ಆದ್ದರಿಂದ ಈತನು ಭಾರದ್ವಾಜ ಗ್ರಾಮದಲ್ಲಿ ವಾಸಿಸುತ್ತಿದ್ದನೆಂದೂ ಹಾಗೂ ಕುಮಾರಿಲ ಮತವನ್ನು ಅನುಸರಿಸುತ್ತಲಿದ್ದ ಬ್ರಾಹ್ಮಣನೆಂದೂ ಗೊತ್ತಾಗುತ್ತದೆ. ಹಾಗೆಯೇ ತಾನು ಪರಮ ರಾಮಭಕ್ತನೆಂದೂ ತಿಳಿಸಿದ್ದಾನೆ.

> “ ರಘುನಾಥೇ ಭವೇನ್ನಿತ್ಯಂ ಹನೂಮಂತ ಇವಾಚಲಾ ।
> ಭಕ್ತಿಃ ಮಮಾಶುಧ್ವಾಂತ ಸಮುತ್ಸಾರಣ ಭಾಸ್ಕರೇ ॥
>
> ಆಶ್ಚರ್ಯಚೂಡಾಮಣಿ, ಪು. ೨೩೪.

ನಾಟಕವನ್ನು ಸರಿಯಾಗಿ ವಿವೇಚಿಸಲು ಹಾಗೂ ಅನೇಕ ಉಪಯುಕ್ತವಾದ ವಿಷಯಗಳನ್ನು ಗ್ರಹಿಸಲು ಈ ವ್ಯಾಖ್ಯೆಯು ಬಹಳ ಸಹಕಾರಿಯಾಗಿದೆ. ಉತ್ತಮ ಅಲಂಕಾರ ಗ್ರಂಥಗಳಾದ ಧ್ವನ್ಯಾಲೋಕ, ದಶರೂಪಕ, ಕಾವ್ಯಪ್ರಕಾಶ ಹಾಗೂ ಅಲಂಕಾರ ಸರ್ವಸ್ವ ಮುಂತಾದುವುಗಳಿಂದ ನಿದರ್ಶನಗಳು ಅಲ್ಲಲ್ಲಿ ಕಂಡುಬರುತ್ತವೆ. ಹಾಗೂ ಕುಮಾರಿಲನ ಶ್ಲೋಕವಾರ್ತಿಕದ ಈ ಶ್ಲೋಕವು ಬಂದಿದೆ :

" ಉಪಾಯಾನಾಂ ತು ನಿಯಮೋ ನಾವಶ್ಯಮವತಿಷ್ಠತೇ |
ಉಪಾದಾಯಾಪಿ ಯೇ ಹೇಯಾಃ ತಾನುಪಾಯಾನ್ ಪ್ರಚಕ್ಷತೇ ॥ "
ಆಶ್ಚರ್ಯಚೂಡಾಮಣಿ, ಪು. ೧೬೦.

ಹಾಗೂ 'ಪಾಠಕ್ರಮಾತ್ ಅರ್ಥಕ್ರಮೋ ಬಲೀಯಾನ್' ಎಂಬ ಲೋಕೋಕ್ತಿಯನ್ನು ಪಯೋಗಿಸಿದ್ದಾನೆ. ಆದ್ದರಿಂದ ಈತನ ಮೀಮಾಂಸಾ ಶಾಸ್ತ್ರದ ಪರಿಶ್ರಮವೂ ಸಹ ತಿಳಿದುಬರುತ್ತದೆ. ಶ್ರೀಮದ್ಭಗವದ್ಗೀತೆ ಹಾಗೂ ಮಲಬಾರು ಪ್ರಾಂತ್ಯದ ನಾರಾಯಣಭಟ್ಟ (ಕ್ರಿ. ಶ. ೧೫೫೦) ಬರೆದಿರುವ ನಾರಾಯಣೀಯಂ ಈತನ ಮೇಲೆ ಪ್ರಭಾವ ಬೀರಿರಬಹುದು. ವ್ಯಾಖ್ಯಾನದಿಂದಲೇ ಈತನಿಗೆ ಯೋಗ, ವೇದಾಂತಗಳಲ್ಲಿದ್ದ ಪೂರ್ಣ ಪಾಂಡಿತ್ಯವು ತಿಳಿದುಬರುತ್ತದೆ. ವ್ಯಾಖ್ಯಾನಕಾರನ ಕಾಲ ಸುಮಾರು ಹದಿನಾರನೆಯ ಶತಮಾನವೆನ್ನಬಹುದು.

ಶಂಕರನು ವ್ಯಾಖ್ಯಾನಕಾರನೆಂದು ತಿಳಿಸಿದೆ. ಆದರೆ ಆತನು ಹೌದೇ ಅಲ್ಲವೇ ಎಂಬ ಸಂಶಯವು ತೋರಿಬರುತ್ತದೆ. ಶಂಕರನೆಂಬ ಹೆಸರು ಕಂಡುಬರುವುದು ವ್ಯಾಖ್ಯೆಯ ಅಂತ್ಯದಲ್ಲಿ. ಈತನು ವ್ಯಾಖ್ಯೆಯ ಪ್ರತಿಯನ್ನು ಬರೆದವನೆಂದು ಮಾತ್ರ ತಿಳಿದು ಬರುತ್ತದೆಯೇ ಹೊರತು ವ್ಯಾಖ್ಯಾನಕಾರನೆಂದು ತಿಳಿದು ಬರುವುದಿಲ್ಲ.

ನಾಂದಿಯಾದ ನಂತರ ಸೂತ್ರಧಾರನು ಪ್ರವೇಶಿಸಿ ಶಕ್ತಿಭದ್ರಕೃತಿಯಾದ ಆಶ್ಚರ್ಯಚೂಡಾಮಣಿಯನ್ನು ಅಭಿನಯಿಸುವ ವಿಚಾರವನ್ನು ತಿಳಿಸುವನು. ಕಾಡಿನಲ್ಲಿ ವಾಸಮಾಡಲು ಲಕ್ಷ್ಮಣನು ಪರ್ಣಶಾಲೆಯನ್ನು ನಿರ್ಮಿಸಿ ದುಷ್ಟ ಮೃಗಗಳನ್ನು ಓಡಿಸುತ್ತಾನೆ. ಆಗ ಸುಂದರವಾದ ಅಲಂಕಾರವುಳ್ಳ ಶೂರ್ಪಣಖಿಯು ಲಕ್ಷ್ಮಣನನ್ನು ಬಯಸಿ ಬರುವಳು. ಅವರಿಬ್ಬರ ಸಂಭಾಷಣೆಯಿಂದ ಆಕೆಯು ರಾಮನನ್ನು ಆಗಲೇ ನೋಡಿ ಬಂದಿರುವಳೆಂದು ಗೊತ್ತಾಗುತ್ತದೆ. ಅವಳನ್ನು ನಿವಾರಿಸುವುದು ಕಷ್ಟವೆಂದು ತೋರಲು ಸೀತಾರಾಮರು ಪರ್ಣಶಾಲೆಯನ್ನು ಸೇರಿದನಂತರ ನಿಯತವಾದ ಸ್ಥಳದಲ್ಲಿ ನೋಡುವೆನೆಂದು ಅವಳಿಗೆ ಲಕ್ಷ್ಮಣನು ತಿಳಿಸುತ್ತಾನೆ. ರಾಮನು ಸೀತೆಯೊಡನೆ ಬರುತ್ತಾನೆ. ಅವರ ವೇಷವನ್ನು ನೋಡಿ ಇಷ್ಟಕ್ಕೆಲ್ಲಾ ಕಾರಣಳಾದ ತನ್ನ ಮಾತೆಯಾದ ಕೈಕೆಯನ್ನು ಕೋಪದಿಂದ ಜರಿಯುತ್ತಲಿದ್ದ ಲಕ್ಷ್ಮಣನನ್ನು ರಾಮನು ಶಾಂತಗೊಳಿಸುವಷ್ಟರಲ್ಲಿ ಅವರೆಲ್ಲರೂ ಪರ್ಣಶಾಲೆಯನ್ನು ಸೇರುತ್ತಾರೆ. ವಿಶ್ರಾಂತಿ ತೆಗೆದುಕೊಳ್ಳಲು ಲಕ್ಷ್ಮಣನನ್ನು ಕಳುಹಿಸಿ ರಾಮ, ಸೀತೆ ಪರ್ಣಶಾಲೆಯನ್ನು ಪ್ರವೇಶಿಸುತ್ತಾರೆ.

ಇತ್ತಲಾಗಿ ಶೂರ್ಪಣಖಿಯು ಲಕ್ಷ್ಮಣನಿಗಾಗಿ ಕಾದು ಸಾಕಾಗಿ ಪುನಃ ರಾಮನನ್ನೇ ಬಂದು ಕಾಡುತ್ತಾಳೆ. ಆಗ ರಾಮನು ಮತ್ತೆ ಅವಳನ್ನು ಲಕ್ಷ್ಮಣನಲ್ಲಿಗೆ ಕಳುಹಿಸುತ್ತಾನೆ. ನಂತರ ಸೀತೆಯು ತನ್ನ ಸೌಂದರ್ಯಾತಿಶಯದಿಂದ ಆಕರ್ಷಿತನಾದ ರಾಮನನ್ನು ನೋಡಿ ತನ್ನ ಮನಸ್ಸಿನಲ್ಲೇ ಅನಸೂಯೆಯು ತನಗೆ ಕೊಟ್ಟ ವರವನ್ನು ಹೇಳಿಕೊಳ್ಳುವಳು. ಅನಸೂಯೆಯ ಆಶ್ರಮದಿಂದ ಬರುವಾಗ ಸೀತೆಗೆ ಅವಳು ಹೀಗೆ ವರ ಕೊಟ್ಟಿರುವಳು—'ನಿನ್ನ ಪತಿಯ ಕಣ್ಣಿಗೆ ನೀನು ಸರ್ವಾಲಂಕೃತೆಯಾಗಿ ಕಾಣು' ಎಂದು. ಇದು ರಾಮನಿಗೆ ತಿಳಿದಿರಲಿಲ್ಲ. ಇತ್ತ ಶೂರ್ಪಣಖಿಯು ರಾಕ್ಷಸಿಯ ಅವತಾರ ತಾಳಲು ಸೀತೆಯು ಭಯದಿಂದ ಗಾಬರಿ ಹೊಂದುತ್ತಾಳೆ. ಬಹಳ ಕಷ್ಟಪಟ್ಟು ಆ ರಕ್ಕಸಿಯ ಕಿವಿ ಮೂಗುಗಳನ್ನು ಲಕ್ಷ್ಮಣನು ಕತ್ತರಿಸಿ ರಾಮನಲ್ಲಿಗೆ ಬಂದು ವಿಷಯವನ್ನು ತಿಳಿಸುತ್ತಾನೆ. ಈತನು ಮಾಡಿದ್ದೇ ಸರಿಯೆಂದು ರಾಮನು ವ್ಯಕ್ತಗೊಳಿಸುತ್ತಾನೆ. ಅವಮಾನಿತೆಯಾದ ಶೂರ್ಪಣಖಿಯು ಖರದೂಷಣರಿಗೆ ಹೇಳಿ ಅವರನ್ನು ಶಿಕ್ಷಿಸುತ್ತೇನೆಂದು ಬೆದರಿಸಿ ತೊಲಗುತ್ತಾಳೆ.

ಜನಸ್ಥಾನದಲ್ಲಿ ಋಷಿಗಳಿಗೆ ತೊಂದರೆ ಮಾಡಿ ಅವರ ಯಜ್ಞಯಾಗಾದಿಗಳನ್ನು ಕೆಡಿಸುತ್ತಲಿದ್ದ ಖರ ದೂಷಣರ ಸಂಹಾರದಿಂದ ವನಪ್ರದೇಶದಲ್ಲಿ ನೆಲಸಿದ ಶಾಂತತೆಯನ್ನು ಋಷಿಕುಮಾರನು ತಿಳಿಸುತ್ತಾನೆ. ಈ ಕಾರಣದಿಂದ ಕೋಪಗೊಂಡ ರಾವಣನೇ ಅಲ್ಲಿದ್ದ ಮಾರೀಚಾಶ್ರಮಕ್ಕೆ ಬಂದು ಅವನನ್ನು ಹೆದರಿಸಿ ಹುಲ್ಲೆಯ ರೂಪದಿಂದ ಸೀತಾರಾಮರನ್ನು ದೂರಮಾಡಿ ಸೀತಾಪಹರಣಕ್ಕೆ ಸಹಾಯಕನಾಗಲು ಒಪ್ಪಿಸುತ್ತಾನೆಂದೂ ತಿಳಿಸುವನು. ರಾಕ್ಷಸರ ಬಾಧೆಯನ್ನು ದೂರ ಮಾಡಿದ ಫಲವಾಗಿ ಲಕ್ಷ್ಮಣನಿಗೆಂದು ಕವಚವನ್ನೂ, ಸೀತಾರಾಮರಿಗೆಂದು ಆಶ್ಚರ್ಯ ಚೂಡಾಮಣಿ ಮತ್ತು ಅದ್ಭುತಾಂಗುಲೀಯಕಗಳನ್ನೂ ಋಷಿಗಳು ಅನುಗ್ರಹ ಮಾಡಿ, ಲಕ್ಷ್ಮಣನಿಗೆ ಕೊಡುತ್ತಾರೆ. ಕ್ರಮವಾಗಿ ಅವರುಗಳು ಧರಿಸುತ್ತಾರೆ. ಅವುಗಳ ಮಹಿಮೆಯಂತೆ ಅವು ತಗಲಿದರೆ ರಾಕ್ಷಸರ ಮಾಯಾವೇಷವು ತೊಲಗಿ ನಿಜಸ್ವರೂಪವನ್ನು ಹೊಂದಬಹುದಾಗಿತ್ತು. ಇತ್ತಲಾಗಿ ಅವಮಾನಿತೆಯಾದ ಶೂರ್ಪಣಖಿಯು ರಾವಣನನ್ನು ಕರೆತರುವಳು. ಕಾಂಚನ ಮೃಗದ ಮಾಯೆಯಿಂದ ರಾಮ ಲಕ್ಷ್ಮಣರು ಬೇರೆಯಾಗಲು ರಾಮನ ಸ್ವರೂಪದಲ್ಲಿರುವ ರಾವಣನೂ, ಲಕ್ಷ್ಮಣನ ವೇಷದ ಸಾರಥಿಯೂ ಬರುವರು. ಭರತನನ್ನು ರಕ್ಷಿಸಲು ತಾವು ಶೀಘ್ರವಾಗಿ ಅಯೋಧ್ಯೆಗೆ ಹೋಗಲು ಋಷಿಗಳು ದಿವ್ಯ ರಥವನ್ನು ಕಳುಹಿಸಿದ್ದಾರೆಂದು ತಿಳಿಸಿ ಸೀತೆಯನ್ನು ರಥದಲ್ಲಿ ಕರೆದುಕೊಂಡು ಹೋಗುವರು. ಇತ್ತ ಶೂರ್ಪಣಖಿಯು ಸೀತೆಯ ವೇಷದಲ್ಲಿ ರಾಮನನ್ನು ವಂಚಿಸುತ್ತಾಳೆ. ಲಕ್ಷ್ಮಣನಂತಿರುವ ಮಾರೀಚನೂ ಸಹ ಹಾಗೆಯೇ ವಂಚಿಸುತ್ತಾನೆ. ಕ್ರಮೇಣ ಈ ಮಾಯೆಯು ಚೂಡಾಮಣಿ, ಅಂಗುಳೀಯಕಗಳ ಸ್ಪರ್ಶದಿಂದ ಬಯಲಿಗೆ ಬರುತ್ತದೆ.

ಸೀತೆಯನ್ನು ಮೋಸಗೊಳಿಸಲು ಯತ್ನಿಸುತ್ತಿದ್ದ ರಾಮನ ವೇಷದಲ್ಲಿರುವ

ರಾವಣನು ಚೂಡಾಮಣಿಯ ಸೋಂಕಿನಿಂದ ನಿಜಸ್ವರೂಪವನ್ನು ಹೊಂದಬೇಕಾಗುತ್ತದೆ. ಅಂತೆಯೇ ಸಾರಥಿಯೂ ನಿಜಸ್ವರೂಪ ಹೊಂದಲು ಸೀತೆಯು ತಲ್ಲಣಿಸಿ ರಕ್ಷಣೆಗಾಗಿ ಕೂಗಿಕೊಳ್ಳುವಳು. ಸೀತೆಯನ್ನು ಕಾಪಾಡಲು ಬಂದ ಜಟಾಯು ರಾವಣನಿಂದ ಹತನಾಗಲು ಸೀತೆಯು ಮರುಗುವಳು. ಸಾರಥಿಯು ಕುದುರೆಯನ್ನು ವೇಗವಾಗಿ ಓಡಿಸುವನು.

ಮದನಾವಸ್ಥೆಯಲ್ಲಿರುವ ರಾವಣನು ಸೀತೆಯೊಡನೆ ಹೇಗೆ ವರ್ತಿಸುತ್ತಾನೆಂದು ತಿಳಿಯಲು ಮಂಡೋದರಿ, ಚೇಟಿಯರು ಅಶೋಕವನದಲ್ಲಿ ಅಡಗಿ ಕುಳಿತಿರುವರು. ಮಂತ್ರಿಯು ಪ್ರವೇಶಿಸಿ, ಸೀತಾನ್ವೇಷಣಕ್ಕಾಗಿ ರಾಮನ ಭಟರು ಪ್ರಯತ್ನ ಮಾಡುತ್ತಲಿದ್ದಾರೆಂದೂ ರಾಮನು ಅಜೇಯನೆಂದೂ ರಾವಣನಿಗೆ ತಿಳಿಸುವನು. ಸೀತೆಯನ್ನು ಒಲಿಸಿಕೊಳ್ಳಲು ಹೋದ ರಾವಣನು ಅವಮಾನಿತನಾಗುತ್ತಾನೆ. ಸೀತೆಯು ಶುದ್ಧಮಾಡಿಕೊಳ್ಳಲು ಸಮೀಪದಲ್ಲಿನ ಕೊಳಕ್ಕೆ ತೆರಳುತ್ತಾಳೆ.

ಇತ್ತಲಾಗಿ ಸೀತೆಯನ್ನರಸಿಕೊಂಡು ಉಂಗುರ ಸಮೇತನಾದ ಹನುಮಂತನು ಅಶೋಕವನಕ್ಕೆ ಬರುತ್ತಾನೆ. ಸೀತೆಯನ್ನು ಕಂಡು ತಾನು ರಾಮನ ಸೇವಕನೆಂದೂ ಅದಕ್ಕೆ ಸಾಕ್ಷಿಯನ್ನು ತಿಳಿಸಿ, ಹನುಮಂತನು ತಾನು ಬಂದ ಕಾರಣವನ್ನೂ ಹೇಳುವನು. ಸೀತೆಗೆ ಬಹಳ ಸಂತೋಷವಾಗುತ್ತದೆ. ರಾಮನ ಸಂದೇಶವನ್ನು ತಿಳಿಸಿದ ಹನುಮಂತನು ಅದ್ಭುತ ಉಂಗುರವನ್ನು ಸೀತೆಗೆ ಕೊಡುತ್ತಾನೆ. ಸೀತೆಯು ತನ್ನ ವೃತ್ತಾಂತವನ್ನು ತಿಳಿಸಿ ಚೂಡಾಮಣಿಯನ್ನು ರಾಮನಿಗೆ ಕಳುಹಿಸುವಳು. ರಾಮನನ್ನು ಪುನಃ ಕಾಣುವ ಆಶಾಂಕುರವು ಸೀತೆಯಲ್ಲಿ ಹುಟ್ಟುತ್ತದೆ.

ವಿದ್ಯಾಧರ, ಸೌಧಾಮಿನಿಯರ ಸಂಭಾಷಣೆಯ ಮೂಲಕ ರಾಕ್ಷಸರೆಲ್ಲರ ಹಾಗೂ ರಾವಣನ ವಧೆಯ ವಿಚಾರ ತಿಳಿಯುತ್ತದೆ. ರಾಮನು ತನ್ನ ಮನೋರಥದಂತೆ ವಿಭೀಷಣನಿಗೆ ಲಂಕೆಯಲ್ಲಿ ಪಟ್ಟಗಟ್ಟುತ್ತಾನೆ. ಸೀತೆಯು ಲಂಕೆಯಿಂದ ಹೊರಟ ನಂತರ ತಾನು ಲಂಕೆಯನ್ನು ಪ್ರವೇಶಿಸುತ್ತೇನೆಂದು ವಿಭೀಷಣನು ಹೇಳಲು, ಸೀತೆಯನ್ನು ಕರೆತರಲು ರಾಮನು ಸುಗ್ರೀವನನ್ನು ಕಳುಹಿಸುತ್ತಾನೆ. ವಿಚಾರಪರನಾದ ರಾಮನಿಂದ ಸೀತೆಯು ನಿಂದೆಗೆ ಆಸ್ಪದವಾಗಬಹುದೆಂಬ ಸಂಶಯವು ಲಕ್ಷ್ಮಣನಿಂದ ಪುಷ್ಟಿಗೊಳ್ಳುತ್ತದೆ. ಅಷ್ಟರಲ್ಲೇ ಸೀತೆಯ ಪ್ರವೇಶ. ಅವಳ ಅನುಪಮವಾದ ಸರ್ವಾಲಂಕಾರ ಸೌಂದರ್ಯವನ್ನು ನೋಡಿ ರಾಮನಿಗೆ ಅನುಮಾನವಾಗುತ್ತದೆ. ಅನಸೂಯೆಯು ತನಗೆ ಕೊಟ್ಟ ವರವೇ ತನಗೆ ಶಾಪವಾಯಿತಲ್ಲ ಎಂದು ಸೀತೆಯು ಅಂದುಕೊಳ್ಳುತ್ತಾಳೆ. ಹನುಮಂತನೂ ಸಹ ಸಂಶಯ ಹೊಂದಿದವನಾಗಿ ಈಕೆಯು ತಾನು ಕಂಡ ಸೀತೆಯಲ್ಲವೆನ್ನುತ್ತಾನೆ. ಸೀತೆಯ ಅಭಿಲಾಷೆಯಂತೆ ಅಗ್ನಿಪ್ರವೇಶ ಮಾಡಲು ರಾಮ ಲಕ್ಷ್ಮಣರು ಒಪ್ಪಿಗೆ ಕೊಡುತ್ತಾರೆ. ಅಗ್ನಿಪರೀಕ್ಷೆಯಲ್ಲಿ ಯಶಸ್ವಿಯಾಗಲು ನಾರದರ ಮುಖಾಂತರ ಇಂದ್ರಾದಿ ದೇವತೆಗಳು ಬರುವುದು ತಿಳಿಯುತ್ತದೆ. ಅನಸೂಯೆಯು ಸೀತೆಗೆ ಕೊಟ್ಟ ವರದಂತೆ ಅವಳ ಶರೀರದ ಮೇಲಿರುವುವುಗಳೆಲ್ಲಾ

ಆಭರಣದಂತೆ ರಾಮನಿಗೆ ತೋರಬೇಕಾಗಿತ್ತು. ಆದ್ದರಿಂದ ಅವಳ ತಲೆಯ ಮೇಲಿದ್ದ ಹಣ್ಣೆಲೆಯೇ ಆಭರಣದಂತೆಯೂ, ಧೂಳೀ ಚಂದನದಂತೆಯೂ ರಾಮನಿಗೆ ಕಾಣಿಸುತ್ತಿದೆ ಎಂದು ನಾರದರು ತಿಳಿಸುತ್ತಾರೆ. ಈ ಘಟನೆಯ ಫಲವಾಗಿ ಎಲ್ಲರ ಸಂಶಯವೂ ದೂರವಾಗಿ ಸಂತೋಷವಾಗುತ್ತದೆ. ಲಂಕಾಜನಗಳಿಗಂತೂ ಸ್ವತಃ ಶುದ್ಧಳಾದ ಸೀತೆಯ ಅಗ್ನಿಪ್ರವೇಶವೇ ಬೇಕಿರಲಿಲ್ಲ. ಕುಬೇರನ ರಥದಲ್ಲಿ ಕುಳಿತು ಅಯೋಧ್ಯೆಗೆ ಹೋಗುವಂತೆ ರಾಮ ಸೀತೆ ಲಕ್ಷ್ಮಣರಿಗೆ ನಾರದನು ತಿಳಿಸುತ್ತಾನೆ. ನಾಟಕವು ಸುಖದಲ್ಲಿ ಅಂತ್ಯವಾಗುತ್ತದೆ.

ರಾಮಾಯಣದ ನಾಟಕಗಳ ಪೈಕಿ ಆಶ್ಚರ್ಯಚೂಡಾಮಣಿ ಸಣ್ಣದೇನೋ ಹೌದು. ಆದರೆ ಕವಿಯು ಇದನ್ನು ರಂಗದ ದೃಷ್ಟಿಯಿಂದಲೇ ಬರೆದಂತಿದೆ. ಉತ್ತರ ರಾಮಚರಿತೆಯನ್ನು ಬಿಟ್ಟರೆ ಈ ನಾಟಕವನ್ನೇ ಉತ್ತಮಕೃತಿ ಅನ್ನಬಹುದು. ಮ. ಮ|| ಪ್ರೊ. ಕುಪ್ಪುಸ್ವಾಮಿ ಶಾಸ್ತ್ರಿಯವರು ಈ ನಾಟಕದ ಬಗ್ಗೆ "The best of the Rama plays, perhaps barring Bhavabhuti's Uttararāma carita in certain respects," ಎಂದು ಹೇಳಿದರೆ, ಪ್ರೋ. ವಿಂಟರ್ ನಿಟ್ಸರವರು, "Bhavabhuti, the sovereign master of Sanskrit poetical language, is the greater poet. But, as regards the dramatic action and appropriateness for the stage, Saktibhadra's drama surpasses even the Uttararāmacarita" ಎನ್ನುತ್ತಾರೆ.[3] "ಕಥಾ ಸಂಗ್ರಹದಲ್ಲಿ ಕೌಶಲವೂ ಪಾತ್ರಗಳಲ್ಲಿ ಜೀವಕಳೆಯೂ ಅವರ ಮಾತಿನಲ್ಲಿ ಸರಳತೆಯೂ ಇವೆ. ಕೃತಕ ಚಮತ್ಕಾರದ ಪ್ರಯತ್ನವಿದ್ದರೂ ಒಟ್ಟಿನಲ್ಲಿ ಭಾಸನ ನಾಟಕದ ಛಾಯೆ ಇದ್ದು ಮಹಾವೀರ ಚರಿತಾದಿಗಳನ್ನು ಓದಿ ಭಾರಯಿಸಿದ ಬುದ್ಧಿ ಹಗುರವಾಗುತ್ತದೆ. ವೀರಾದ್ಭುತಗಳೆರಡೂ ಕವಿಗೆ ಉದ್ದಿಷ್ಟವಾಗಿದ್ದರೂ ವೀರಕ್ಕಿಂತ ಅದ್ಭುತವೇ ಹೆಚ್ಚಾಗಿವೆ."[4]

ಈ ನಾಟಕದಲ್ಲಿ ಅದ್ಭುತರಸವೇ ಪ್ರಧಾನ. ಆಶ್ಚರ್ಯಚೂಡಾಮಣಿ ವ್ಯಾಖ್ಯಾನಕಾರನೇ ಹೀಗೆ ಹೇಳುತ್ತಾನೆ: "ವೀರಕಾರ್ಯಾದ್ಭುತರಸ ಭೂಯಿಷ್ಠೇನ ಆಶ್ಚರ್ಯಕರಾಣಾಂ ಚೂಡಾಮಣಿರಿತ್ಯಾಶ್ಚರ್ಯಚೂಡಾಮಣಿರಿತಿಸಂಜ್ಞಾ. ಆಶ್ಚರ್ಯಭೂತಶ್ಚೂಡಾಮಣಿಃ ಯಸ್ಮಿನ್ ಪ್ರತಿಪಾದ್ಯತ್ವೇನ ಅಂಗೀಕೃತ ಇತಿ ವಾ" (ಪು. ೭). ಈ ನಾಟಕದ ಹೆಸರೇ ಆಶ್ಚರ್ಯಚೂಡಾಮಣಿ. ಶಕ್ತಿಭದ್ರನ ಅದ್ಭುತವಾದ ಕೃತಿ ಎಂದು ನಾಟಕದ ಪ್ರಸ್ತಾವನೆಯಲ್ಲೇ ಉಕ್ತವಾಗಿದೆ. ಸ್ವಭಾವತಃ ಕ್ರೂರಾಕೃತಿಯುಳ್ಳ, ನೋಡಲು ಭಯಂಕರವಾದ ಶೂರ್ಪಣಖಿಯು ಉತ್ತಮವಾದ ಸ್ತ್ರೀ ಪಾತ್ರಧರಿಸಿ ಪರ್ಣಶಾಲಾಂಕದಲ್ಲಿ ಬಂದಾಗಲೇ ಅದ್ಭುತರಸದ ಪ್ರಾರಂಭ (ಅಂಕ ೧). ಸೀತೆಯ ಸೌಂದರ್ಯವನ್ನು ರಾಮನು ಮೆಚ್ಚುತ್ತಲಿರುವಾಗ ಆ ರಸವು

---

[3] Mm. S. Kuppuswamy Sastri Commemoration Volume, P. 3.

[4] ಸಂಸ್ಕೃತ ನಾಟಕ, ಶ್ರೀ. ಎ. ಆರ್. ಕೃಷ್ಣಶಾಸ್ತ್ರೀ, ಪು. ೨೫೧–೨೫೨.

ಅಭಿವೃದ್ಧಿಗೊಳ್ಳುತ್ತದೆ (ಅಂಕ ೨). ಮಾಯಾಸೀತಾಂಕ(ಅಂಕ ೩)ದಲ್ಲಿ ಅದ್ಭುತ ರಸವು ಪುಷ್ಟಿಗೊಂಡು ಆಶ್ಚರ್ಯಕರವಾದ ದೃಶ್ಯಗಳನ್ನು ನೋಡುತ್ತೇವೆ. ರಾಮ, ಸೀತೆ ಮತ್ತು ಲಕ್ಷ್ಮಣರು ದಿವ್ಯಾಭರಣಗಳನ್ನು ಹೊಂದುವುದು; ಬಂಗಾರದ ಜಿಂಕೆಯಲ್ಲಿನ ಸೌಂದರ್ಯಕ್ಕೆ ಮರುಳಾಗುವುದು—ಇವೆಲ್ಲಾ ಅದ್ಭುತವೇ! ಜಟಾಯು ವಧಾಂಕ(ಅಂಕ ೪)ದಲ್ಲಿ ಅದ್ಭುತವನ್ನು ಅನಾದರಿಸದಂತೆ ಚಮತ್ಕಾರದಿಂದ ಅದ್ಭುತ ಮಹಿಮೆಯುಳ್ಳ ಆಶ್ಚರ್ಯಚೂಡಾಮಣಿಯ ಸಹಾಯದಿಂದ ರಾವಣನು ರಾಮನ ವೇಷದಲ್ಲಿದ್ದಾನೆಂದು ಸೀತೆಯು ಪತ್ತೆ ಹಚ್ಚುತ್ತಾಳೆ. ಅಶೋಕ ವನಿಕಾಂಕದಲ್ಲಿ (ಅಂಕ ೫) ತಾನೇ ತಾನಾಗಿ ಅದ್ಭುತ ರಸವು ಉಕ್ಕಿ ಬರುತ್ತದೆ. ಸೀತೆಯ ಧೈರ್ಯಕ್ಕೆ ಸೋತ ಮಂಡೋದರಿಯ ಬಾಯಿಂದ ಈ ಮಾತು ಬರುತ್ತದೆ: "ಧೀರಾ ಖಲು ಏಷಾ, ಮಹಾರಾಜಸ್ಯ ಶೀರ್ಷಂ ಪಂಕಮಿವ ಪಾದೇನ ಪರಿಹರತಿ. ಸತ್ಯಮಿದಾನೀಂ ಕೌಲೀನಂ ಪೃಥಿವೀಸುತಾ ಸೀತಾ ಪದ್ಮನಾಭೋ ರಾಮ ಇತಿ" (ಪು. ೧೭೩). ಅಂಗುಲೀಯಕಾಂಕದಲ್ಲಿ, ಅದ್ಭುತ ಮಹಿಮೆಯುಳ್ಳ ಹನುಮಂತನು ರಾಮನ ಸಂದೇಶದೊಂದಿಗೆ ಅಂಗುಲೀಯಕವನ್ನು ಕೊಟ್ಟು, ಸೀತೆಯ ಪ್ರತಿಸಂದೇಶವನ್ನೂ ಹಾಗೂ ಆಶ್ಚರ್ಯಚೂಡಾಮಣಿಯನ್ನೂ ರಾಮನಿಗೆ ತಲಪಿಸಲು ಪಡೆಯುತ್ತಾನೆ. ಆಗ ಸೀತೆಯೇ ಅಂಗುಲೀಯಕದ ಮಹಿಮೆಯನ್ನು ತಿಳಿಸುತ್ತಾಳೆ: "ಇದಂ ಲೋಕಾಭರಣಸ್ಯಾಭರಣಂ, ಇದಂ ಬಾಣಾಸನ ಗುಣ ಪರಿಖಿನ್ನಂ, ಇದಂ ರಾಕ್ಷಸ ಮಾಯಾ ಪಿಶುನಂ, ಇದಂ ರಜನೀಷು ರತ್ನದೀಪಃ, ಇದಂ ವದನಾಲಂಕಾರ ವಿಕಲ್ಪಾದರ್ಶಃ" (ಪು. ೧೯೭). ಕೊನೆಯ ಅಂಕದಲ್ಲಿ ಉತ್ತಮವಾದ ಅದ್ಭುತರಸ ಸವಿಯಬಹುದು. ಅದು ಸೀತೆಯ ಪಾತಿವ್ರತ್ಯ ಪರೀಕ್ಷೆ. ಅಗ್ನಿಪ್ರವೇಶದಲ್ಲಿ ಜಯಶಾಲಿನಿಯಾಗಿ ಬರುತ್ತಾಳೆ. ಅನಂತರ ದಿವ್ಯವಾದ ರಥವನ್ನು ತೆಗೆದುಕೊಂಡು ನಾರದನು ಬರುತ್ತಾನೆ. ಹೀಗೆ ನಾಟಕದಲ್ಲಿ ಪ್ರಧಾನವಾಗಿರುವುದು ಅದ್ಭುತ ರಸವೇ. "The characteristic feature of the Cūdāmaṇi is the dominating adbhutarasa. It will be difficult to find such an accumulation of wonders in any other Sanskrit play"[5] ಎಂದು ಹೇಳಿರುವ ವಾಕ್ಯ ಸಮರ್ಪಕವೆನ್ನಬಹುದು.

ಪಾತ್ರಗಳ ಬೆಳವಣಿಗೆ ಬಹಳ ಚೆನ್ನಾಗಿದೆ. ರಾಮನ ಪಾತ್ರವು ಮೊದಲನೆಯ ಅಂಕದಲ್ಲೂ, ರಾವಣನ ಪಾತ್ರವು ಮೂರನೆಯ ಅಂಕದಲ್ಲೂ ಹಾಗೂ ಲಕ್ಷ್ಮಣ, ಸೀತೆಯರ ಪಾತ್ರ ಪೋಷಣೆಯು ನಾಟಕದಲ್ಲಿ ಮೊದಲಿನಿಂದ ಕೊನೆಯ ತನಕವೂ ಸಾಗಿದೆ. ಅದ್ಭುತಾಂಗುಲೀಯಕ, ಆಶ್ಚರ್ಯಚೂಡಾಮಣಿಗಳನ್ನು ಶಕ್ತಿಭದ್ರನು ಅತ್ಯಂತ ಚಮತ್ಕಾರದಿಂದ ಸೇರಿಸಿ ಸೀತಾಪಹರಣಕ್ಕೆ ಯಶಸ್ವಿಯಾಗಿ ಯಾವ

[5] Mm. S. Kuppuswami Sastri Commemoration Volume, P. 3, Prof. M. Winternitz.

ಸಂದೇಹಕ್ಕೂ ಆಸ್ಪದ ಬಾರದಂತೆ ಅಳವಡಿಸಿಕೊಂಡಿದ್ದಾನೆ. ಈ ವಿಚಾರದಲ್ಲಂತೂ ಸಂದೇಹವೇ ಇಲ್ಲ. ಮಾಯಾಮೃಗವನ್ನು ಸೀತೆಗಾಗಿ ತರಲು ರಾಮನು ಆಶ್ರಮವನ್ನು ಬಿಡಲು, ನಂತರ ಲಕ್ಷ್ಮಣನಿಲ್ಲದಿರುವಾಗ ರಾಮನಂತೆಯೇ ವೇಷಧಾರಿಯಾದ ರಾವಣನು ಹಾಗೂ ಅವನನ್ನನುಸರಿಸಿದ ಸಾರಥಿಯು ಲಕ್ಷ್ಮಣನ ವೇಷದಲ್ಲೇ ಬಂದು ಭರತನಿಗೆ ಸಹಾಯಕರಾಗಿ ತಾವು ಹೋಗಲು ಋಷಿಗಳೇ ದಿವ್ಯ ರಥವನ್ನು ಕಳುಹಿಸಿದ್ದಾರೆ, ತಕ್ಷಣವೇ ಹೊರಡಬೇಕೆನ್ನಲು ಸೀತೆಗೆ ಹೇಗೆ ತಾನೆ ಸಂದೇಹ ಬರುತ್ತದೆ? ಹಿಂದೆ ಋಷಿಗಳಿಂದಲೇ ಅವರು ದಿವ್ಯವಾದ ಆಭರಣಗಳನ್ನು ಪಡೆದಿದ್ದುದು. ಆದ್ದರಿಂದ ತಕ್ಷಣವೇ ಒಪ್ಪಿಗೆಯನ್ನು ಕೊಡುತ್ತಾಳೆ. ಈ ಅನುಕೂಲ ವಾದ ಸನ್ನಿವೇಶವನ್ನು ಕಲ್ಪಿಸಿ ಶಕ್ತಿಭದ್ರನು ಸೀತಾಪಹರಣವನ್ನು ಸಂಯೋಜಿ ಸಿದ್ದಾನೆ.

ಸ್ತ್ರೀಯರು ತಮ್ಮ ಪಾತಿವ್ರತ್ಯದಿಂದ ಶೀಲವನ್ನು ಕಾಪಾಡಿಕೊಂಡಿರಬಹು ದೆಂಬ ಅಂಶವು ಈ ನಾಟಕದಲ್ಲಿ ಪ್ರತಿಪಾದ್ಯವಾಗಿದೆ. ನಾಟಕದ ನಾಯಿಕೆಯಾದ ಸೀತೆಯೇ ಇದಕ್ಕೆ ನಿದರ್ಶನ. ಅವಳಿಗೆ ತನ್ನ ಪಾತಿವ್ರತ್ಯದ ಮೇಲೆ ಸಂಪೂರ್ಣ ನಂಬಿಕೆ. ರಾಮನು ಮಾಯಾಮೃಗವನ್ನರಸಿಕೊಂಡು ಹೋಗುತ್ತಿದ್ದಾಗ ಅವನ ಧ್ವನಿಯಂತೆ ಶಬ್ದ ಕೇಳಿಬರಲು ಲಕ್ಷ್ಮಣನನ್ನು ಹೋಗಲು ಹೇಳುತ್ತಾಳೆ. ಇವೆಲ್ಲವೂ ರಾಕ್ಷಸರ ಮಾಯೆಯೆಂದೂ ಸೀತೆಗೆ ವಿಘ್ನವಾಗಬಹುದೆಂದೂ ಲಕ್ಷ್ಮಣನು ಹೇಳಲು ಸೀತೆಯು ಹೀಗೆ ಉತ್ತರ ಕೊಡುವಳು—" ಸಮಾಧೀ ರಕ್ಷತಿ ಸ್ತ್ರೀಜನಂ ನ ಬಾಣಾಃ" (ಪು. ೧೧೦). ಪಾತಿವ್ರತ್ಯವು ಹೆಂಗಸರನ್ನು ಕಾಪಾಡುವುದೇ ವಿನಾ ಬಾಣವಲ್ಲ ವೆನ್ನುವಳು. ಕೊನೆಯವರೆವಿಗೂ ಅವಳು ತನ್ನ ಪಾತಿವ್ರತ್ಯವನ್ನುಳಿಸಿಕೊಂಡು ಅಗ್ನಿಪ್ರವೇಶದಲ್ಲಿ ಸಹ ಜಯಶಾಲಿನಿಯಾಗಿ ಪತಿವ್ರತಾ ಶಿರೋಮಣಿ ಎನ್ನಿಸಿ ಕೊಳ್ಳುತ್ತಾಳೆ.

ರಾಕ್ಷಸರ ಮಾಯೆಯನ್ನು ಹಾಗೂ ಅದರ ವಿಶೇಷವನ್ನೂ ಕೇಳಿದ್ದೇವೆ. ಆದರೆ ಈ ನಾಟಕದಲ್ಲಿ ಆ ಮಾಯೆಗಿಂತಲೂ ಹೆಚ್ಚಿನ ಮಾಯೆ ಕಂಡುಬರುತ್ತದೆ. ರಾಕ್ಷಸರು ಮಾಯಾಶಕ್ತಿಯಿಂದ ಸ್ವೇಚ್ಛೆಯಾಗಿ ವರ್ತಿಸಿ ದುರುಪಯೋಗಪಡಿಸಿ ಕೊಂಡು ಕೆಟ್ಟ ಹೆಸರನ್ನು ಗಳಿಸಿದ್ದಾರೆ. ಆದರೆ ಇಲ್ಲಿ ರಾಕ್ಷಸೀಮಾಯೆಗೆ ಎದುರಾಗಿ ಹೋರಾಟವೆಸಗಿದ ದೈವಿಕವಾದ ಮಾಯೆಯು ಜಯಗಳಿಸುವುದನ್ನು ಕಾಣಬಹುದು. ಈ ದೈವಿಕ ಮಾಯಾಶಕ್ತಿಯೇ ಆಶ್ಚರ್ಯಚೂಡಾಮಣಿ, ಅದ್ಭುತಾಂಗುಲೀಯಕ ಗಳಲ್ಲಿ ಅಡಗಿರುವುದು. ಅವುಗಳ ಮಹಿಮೆಯಿಂದ ನಿಜಸ್ವರೂಪವು ಬಯಲಾಗು ವುದು. ಮೋಸದ ಪ್ರಮೇಯ ಬರುವುದಿಲ್ಲ. ಈ ಆಭರಣಗಳ ಸಂಪರ್ಕವಾದಾಗ ಕಪಟವೇಷವು ತೊಲಗಿ ನಿಜರೂಪವು ತಾನೇ ಹೊರಬೀಳುತ್ತದೆ. ರಾಕ್ಷಸರ ಮಾಯೆಗಿಂತಲೂ ಹೆಚ್ಚಿನ ಮತ್ತು ಅದ್ಭುತವಾದ ಶಕ್ತಿಯನ್ನು ನಿರ್ಮಿಸಿದ ಶಕ್ತಿಭದ್ರನು ನಿಜವಾಗಿಯೂ ಕವಿಯೇ ಸರಿ.

ಮಹಾಮಹೋಪಾಧ್ಯಾಯ ಶ್ರೀಮಾನ್ ಟಿ. ಗಣಪತಿ ಶಾಸ್ತ್ರಿಗಳವರು ತಾಳಪತ್ರ ಸಂಗ್ರಹಣದಲ್ಲಿ ತೊಡಗಿದ್ದಾಗ ದೈವವಶಾತ್ ಹದಿಮೂರು ನಾಟಕಗಳ ನ್ನೊಳಗೊಂಡ ಓಲೆಗರಿ ಅವರಿಗೆ ಸಿಕ್ಕಿತು. ನಾಟಕಗಳೆಲ್ಲ ಚೆನ್ನಾಗಿದ್ದುವು. ಆದರೆ ಒಂದರಲ್ಲೂ ಸಹ ಕವಿಯ ಹೆಸರೇ ಉಕ್ತವಾಗಿರಲಿಲ್ಲ. ಸ್ವಪ್ನವಾಸವದತ್ತವೆಂಬ ನಾಟಕವು ಅವುಗಳಲ್ಲೊಂದು. ಈ ನಾಟಕವನ್ನು ಆಲಂಕಾರಿಕರು—"ಯಥಾ ಸ್ವಪ್ನವಾಸವದತ್ತಾಯಾಂ', 'ಯಥಾ ಸ್ವಪ್ನವಾಸವದತ್ತ ನಾಟಕೇ' ಎಂಬುದಾಗಿ ವಾಕ್ಯಗಳಿಂದ ಉದಾಹರಿಸಿದ್ದಾರೆ; ಹಾಗೂ 'ಯಥಾ ಭಾಸಕೃತೇ ಸ್ವಪ್ನವಾಸವ ದತ್ತೇ' ಎಂದು ಕಂಡುಬರುತ್ತದೆ. ಮತ್ತು ರಾಜಶೇಖರನ ಈ ಶ್ಲೋಕದಿಂದ ಸ್ವಪ್ನ ವಾಸವದತ್ತವು ಭಾಸಕೃತವೆಂದು ಸ್ಪಷ್ಟ.

> " ಭಾಸನಾಟಕಚಕ್ರೇऽಪಿ ಛೇಕೈಃ ಕ್ಷಿಪ್ತೇ ಪರೀಕ್ಷಿತುಮ್ |
> ಸ್ವಪ್ನವಾಸವದತ್ತಸ್ಯ ದಾಹಕೋऽಭೂನ್ನ ಪಾವಕಃ ||" [6]

ಈ ಹದಿಮೂರು ನಾಟಕಗಳನ್ನೂ ಒಬ್ಬನೇ ಬರೆದವನೆಂದು ನಿರ್ಣಯಿಸಿದ ಮೇಲೆ, ಆ ಹದಿಮೂರರ ಪೈಕಿ ಒಂದಾದ 'ಸ್ವಪ್ನವಾಸವದತ್ತ'ವು ಭಾಸಕೃತವೆಂದು ದೃಢವಾದದ್ದರಿಂದ ಭಾಸನೇ ಹದಿಮೂರು ನಾಟಕಗಳ ಕರ್ತೃವೆಂದು ತೀರ್ಮಾನಕ್ಕೆ ಬಂದಿರುವರಷ್ಟೆ. ಅಂತೆಯೇ ಶಕ್ತಿಭದ್ರನ ಕೃತಿಯಾದ 'ಆಶ್ಚರ್ಯ ಚೂಡಾಮಣಿ' ಯಲ್ಲಿಯೂ ಭಾಸನದೆಂದು ತಿಳಿದುಬರುವ ಹದಿಮೂರು ನಾಟಕಗಳನ್ನು ಹೋಲುವಂತೆ ಕೆಲವು ಸಾಮ್ಯ ತೋರಿಬರುತ್ತದೆ. 'ನಾಂದ್ಯಂತೇ ಪ್ರವಿಶತಿ ಸೂತ್ರಧಾರಃ' ಎಂಬುದು ಸಾಮಾನ್ಯವಾಗಿ ನಾಟಕದ ಪ್ರಾರಂಭ. ಆದರೆ ಭಾಸನಾಟಕಗಳಲ್ಲಿ ಹಾಗೂ ಆಶ್ಚರ್ಯಚೂಡಾಮಣಿಯಲ್ಲಿ ಮಾತ್ರ 'ನಾಂದ್ಯಂತೇ ತತಃ ಪ್ರವಿಶತಿ ಸೂತ್ರ ಧಾರಃ' ಎಂದು ಇದೆ. ಹಾಗೂ ಪ್ರಸ್ತಾವನೆಯ ಬದಲು 'ಸ್ಥಾಪನಾ' ಎಂದಿದೆ. ಇದೂ ಅಲ್ಲದೆ 'ಅಯೇ ಕಿಂ ನು ಖಲು ವಿಜ್ಞಾಪನವ್ಯಗ್ರೇ ಶಬ್ದ ಇವ ಶ್ರೂಯತೇ ; ಅಂಗಪಶ್ಯಾಮಿ' ಎಂಬುದಾಗಿ ಚೂಡಾಮಣಿಯಲ್ಲೂ ಭಾಸನದೆಂದು ತಿಳಿಸಿರುವ ಹದಿಮೂರರ ಪೈಕಿ ಒಂಬತ್ತು ನಾಟಕಗಳಲ್ಲೂ ಇವೆ. ಈ ಗಮನಾರ್ಹವಾದ ಸಾದೃಶ್ಯ ಗಳಿಂದ ಭಾಸಕೃತವೆಂದು ತೀರ್ಮಾನಕ್ಕೆ ಬಂದಿದ್ದ ಶ್ರೀ ಟಿ. ಗಣಪತಿ ಶಾಸ್ತ್ರಿಗಳವರ ಅಭಿಪ್ರಾಯವನ್ನು ಕೇರಳದ ಕೆಲವು ವಿದ್ವಾಂಸರು ಒಪ್ಪದಿರುವುದುಂಟು.

ಪ್ರತಿಮಾ, ಅಭಿಷೇಕ ಹಾಗೂ ಆಶ್ಚರ್ಯಚೂಡಾಮಣಿ ನಾಟಕಗಳು ಒಂದನ್ನೊಂದು ಬಹಳವಾಗಿ ಹೋಲುತ್ತವೆ. ಅದರಲ್ಲೂ ಅಭಿಷೇಕ ಮತ್ತು ಚೂಡಾಮಣಿಗಳಲ್ಲಿರುವ ಸಾದೃಶ್ಯಗಳು ಗಮನಾರ್ಹವಾದದ್ದು. ರಚನೆಯಲ್ಲಿ ಮಾತ್ರವಲ್ಲ, ಉಕ್ತಿಸಾದೃಶ್ಯದಲ್ಲೂ ಸಹ ಒಂದೇ. ಮಲಯಾಳದಲ್ಲಿ ವಿಶೇಷಾರ್ಥದಲ್ಲಿ

---

[6] ಜಲ್ಹಣನ 'ಸೂಕ್ತಿಮುಕ್ತಾವಳಿ', ಗಾಯಕವಾಡ ಗ್ರಂಥಮಾಲೆ, IV, 48.

ಉಪಯೋಗಿಸುವ ' ಸಂಬಂಧ ' ಎಂಬ ಶಬ್ದದ ಪ್ರಯೋಗವಿದೆ. ಒಂದೇ ರೀತಿಯ ಪಾಣಿನಿಯ ವಿರುದ್ಧ ಪದಗಳು ಕಂಡು ಬರುತ್ತವೆ. ಭರತನ ನಾಟ್ಯಶಾಸ್ತ್ರದ ನಿಯಮದ ಉಲ್ಲಂಘನೆಯನ್ನು ಎರಡು ನಾಟಕಗಳಲ್ಲೂ ನೋಡಬಹುದು. ಮರಣ ಇಲ್ಲವೇ ಯುದ್ಧವನ್ನೇ ಆಗಲಿ ರಂಗದ ಮೇಲೆ ತೋರಿಸಬಾರದು. ಆದರೆ ಜಟಾಯು ರಾವಣರ ಯುದ್ಧ ಆಶ್ಚರ್ಯಚೂಡಾಮಣಿ(೪ನೇ. ಅಂಕ)ಯಲ್ಲಿ ಬಂದಿದೆ. ಅಂತೆಯೇ ಅಭಿಷೇಕದಲ್ಲಿಯೂ ಸಹ ಬರುತ್ತದೆ. ಇದೂ ಅಲ್ಲದೆ ಮಲಬಾರು ದೇಶದ ಶ್ರೀತಾಳ ಓಲೆ ಗ್ರಂಥದಲ್ಲಿ ಸ್ಪಷ್ಟವಾದ ಹೋಲಿಕೆಯುಳ್ಳ ಚೂಡಾಮಣಿ, ಅಭಿಷೇಕ, ಮತ್ತು ಪ್ರತಿಮಾ ನಾಟಕಗಳು ಇವೆ. ಈ ಕಾರಣಗಳಿಂದಾಗಿ ಪ್ರೊ|| ಕುಪ್ಪುಸ್ವಾಮಿ ಶಾಸ್ತ್ರಿಯವರು ಶಕ್ತಿಭದ್ರನೇ ಈ ಮೂರು ನಾಟಕಗಳ ಕರ್ತೃವೆಂದು ಹೇಳುವುದರಲ್ಲಿ ಔಚಿತ್ಯವಿದೆ ಎನ್ನುವತನಕ ಹೋಗಿದ್ದಾರೆ. ಅವರ ಪ್ರಕಾರ, ಶಕ್ತಿಭದ್ರನು ಪ್ರಸ್ತಾವನೆಯಲ್ಲಿ ತಿಳಿಸಿದ 'ಉನ್ಮಾದ ವಾಸವದತ್ತ'ವು ಭಾಸಕೃತವೆಂದು ಭಾವಿಸಿರುವ ' ಪ್ರತಿಜ್ಞಾ ಯೌಗಂಧರಾಯಣ 'ದ ನಾಮಾಂತರವಿರಬಹುದೆಂದು. ಆದರೆ ಈ ಬಗ್ಗೆ ಯಾವ ಇತ್ಯರ್ಥಕ್ಕೂ ಬಾರದೆ ಸಮಸ್ಯೆಯಾಗಿ ಉಳಿದಿದೆ.

ಭಾಸಕೃತವೆಂದು ಹೇಳಿರುವ ಹದಿಮೂರು ನಾಟಕಗಳು ಹಾಗೂ ಚೂಡಾಮಣಿಗಳಲ್ಲಿ ಕಂಡುಬರುವ ಸಾದೃಶ್ಯಗಳಿಗಾಗಿ ಕೇರಳದ ಘನ ವಿದ್ವಾಂಸರಾದ ಶ್ರೀ ಟಿ. ಕೆ. ಮೆನನ್‌ರವರು ಹೀಗೆ ಹೇಳಿದ್ದಾರೆ—"Who knows, it may be that the so called Bhāsa plays, or at any rate, some of them, might be the works of Śaktibhadra, who, trying his apprentice hand at these might have produced this work Cūdāmaṇi of outstanding merit. I believe it is no heresy now to say that, in spite of the strenous efforts of the late Ganapati Sastri, it has been made abundantly clear that they could not have been the works of the great Bhāsa himself."[7]

ಶಕ್ತಿಭದ್ರನೇ ಪ್ರತಿಮಾ ಮತ್ತು ಅಭಿಷೇಕ ನಾಟಕಗಳ ಕರ್ತೃವೆಂದು ಹೇಳುವವರು ಇರುವಂತೆಯೇ ಶಕ್ತಿಭದ್ರನಲ್ಲವೆಂದು ವಾದಮಾಡುವವರೂ ಇದ್ದಾರೆ. ಈ ನಾಟಕಗಳಲ್ಲಿ ಹೋಲಿಕೆಗಳು ಕಂಡುಬಂದರೂ ಕಥಾದೃಷ್ಟಿಯೇ ಬೇರೆಯಾಗಿದೆ. ವ್ಯತ್ಯಾಸಗಳಿವೆಯೆಂಬುದನ್ನೂ ಮರೆಯಬಾರದು. ರಾಮಾಯಣದ ಆಧಾರದ ಮೇಲೆ ಪ್ರತಿಮಾ ಮತ್ತು ಚೂಡಾಮಣಿಗಳನ್ನು ಬರೆದಿರುವುದು ನಿಜ. ಈ ಎರಡನ್ನೂ ಒಬ್ಬನೇ ಬರೆದನೆಂದು ಹೇಳಿದಲ್ಲಿ ಒಂದು ನಾಟಕದಲ್ಲಿನ ಘಟನೆಯನ್ನು ಮತ್ತೊಂದರಲ್ಲಿ ಖಂಡಿತವಾಗಿಯೂ ಪುನಃ ಹೇಳುತ್ತಲೇ ಇರಲಿಲ್ಲ. ಸೀತಾಪಹರಣ ಮತ್ತು ಜಟಾಯುವಿನೊಡನೆ ರಾವಣನ ಯುದ್ಧ ಎರಡು ನಾಟಕಗಳಲ್ಲೂ ಬರುತ್ತವೆ. ಭವಭೂತಿಯು

[7] ABORI, VIII, 433.

ಮಹಾವೀರ ಚರಿತ, ಉತ್ತರ ರಾಮಚರಿತಗಳನ್ನು ರಾಮಾಯಣದ ಆಧಾರದ ಮೇಲೆ ಬರೆದಿದ್ದರೂ ಕಥಾವಸ್ತುವು ಬೇರೆ ಬೇರೆ ಅಲ್ಲವೇ? ಅಂತೆಯೇ ಅಭಿಷೇಕ ಹಾಗೂ ಪ್ರತಿಮಾ ನಾಟಕಗಳ ಕಥಾವಸ್ತು ಬೇರೆ ಬೇರೆಯಲ್ಲವೇ? ಎರಡು ನಾಟಕಗಳೂ ರಾಮಾಯಣದ ಆಧಾರದ ಮೇಲೆ ಬರೆದದ್ದು. ಇಷ್ಟೇ ಅಲ್ಲದೆ, ಸೀತೆಯ ಅಗ್ನಿ ಪ್ರವೇಶದ ಬಗ್ಗೆ ಅಭಿಷೇಕ ಮತ್ತು ಆಶ್ಚರ್ಯಚೂಡಾಮಣಿಗಳೆರಡರಲ್ಲೂ ಬಂದಿವೆ. ಇವುಗಳ ಕರ್ತೃವು ಒಬ್ಬನೇ ಆದ ಪಕ್ಷದಲ್ಲಿ ಈ ರೀತಿ ಪುನರುಕ್ತಿ ಖಂಡಿತ ಬರುತ್ತಲೇ ಇರಲಿಲ್ಲ. ಆದ್ದರಿಂದ ಚೂಡಾಮಣಿ ಮತ್ತು ಅಭಿಷೇಕ ನಾಟಕಗಳ ಕರ್ತೃವು ಬೇರೆ ಬೇರೆ. ಶ್ರೀ ಪರಂಜಪೆಯವರ ಈ ವಾಕ್ಯವನ್ನೂ ನೋಡಿ. "It appears that the author of the Cūdāmaṇi must be a different personage from the author of the Abhiṣeka and Pratimā."[8]

ಇನ್ನೊಂದು ಪ್ರಬಲವಾದ ಕಾರಣದಿಂದ ಪ್ರತಿಮಾ ಮತ್ತು ಚೂಡಾಮಣಿ ನಾಟಕಗಳ ಕರ್ತೃವು ಬೇರೆ ಅನ್ನಬಹುದು. ಸೀತಾಪಹರಣವು ಎರಡು ನಾಟಕಗಳಲ್ಲೂ ಬರುತ್ತದೆ. ಆದರೆ ಸೀತಾಪಹರಣ ನಡೆದ ರೀತಿಯಲ್ಲಿ ಬಹಳ ವ್ಯತ್ಯಾಸವಿದೆ. ಪ್ರತಿಮಾನಾಟಕದಲ್ಲಿನ ಸೀತಾಪಹರಣವು ಹೀಗಿದೆ. ಶೋಕಸಂತಪ್ತನಾದ ರಾಮನು ಮಾರನೆಯ ದಿನ ನಡೆಸಬೇಕಾಗಿದ್ದ ಶ್ರಾದ್ಧವಿಧಿಯ ಬಗ್ಗೆ ಸೀತೆಯೊಡನೆ ಚರ್ಚಿಸುತ್ತಿದ್ದಾಗ. ರಾವಣನು ತಾಪಸವೇಷದಲ್ಲಿ ಬಂದು ಧರ್ಮಶಾಸ್ತ್ರದಲ್ಲಿ ತನಗಿರುವ ಪಾಂಡಿತ್ಯವನ್ನು ಹೇಳಿಕೊಂಡು ಅನೇಕ ಧರ್ಮಶಾಸ್ತ್ರಗಳ ಹೆಸರನ್ನು ಹೇಳುತ್ತಾನೆ. ಅನಂತರ ಹಿಮಾಲಯದಲ್ಲಿ ವಾಸಿಸುತ್ತಲಿರುವ ಕಾಂಚನ ಮೃಗಗಳ ಮಹಿಮೆಯನ್ನು ತಿಳಿಸಿ ಅವುಗಳಿಂದ ಪಿತೃಗಳನ್ನು ತೃಪ್ತಿಪಡಿಸಬಹುದೆಂದು ಹೇಳಿ ತನ್ನ ಮಾಯೆಯಿಂದ ಅಂತಹ ಒಂದು ಮೃಗವನ್ನು ನಿರ್ಮಿಸುತ್ತಾನೆ. ಲಕ್ಷ್ಮಣನು ಅತಿಥಿಸತ್ಕಾರ ಕಾರ್ಯದಲ್ಲಿ ತೊಡಗಿರುತ್ತಾನೆ. ರಾಮನು ಮೃಗದ ಬೇಟೆಗಾಗಿ ತೆರಳಿದ್ದ ಸಮಯದಲ್ಲಿ ರಾವಣನು ತನ್ನ ನಿಜಸ್ವರೂಪದಲ್ಲಿ ಬಂದು ಸೀತೆಯನ್ನು ಅಪಹರಿಸಿಕೊಂಡು ಹೋಗುತ್ತಾನೆ. ಆದರೆ ಆಶ್ಚರ್ಯಚೂಡಾಮಣಿಯಲ್ಲಿ ಹಾಗೆ ಆಗುವುದಿಲ್ಲ. ಅಲ್ಲಿನ ಸೀತಾಪಹರಣದ ರೀತಿಯೇ ಬೇರೆ. ಲಕ್ಷ್ಮಣನನ್ನು ಸೀತೆಯ ರಕ್ಷಣೆಗೆಂದು ಆಶ್ರಮದಲ್ಲಿ ಬಿಟ್ಟು, ರಾಮನು ಬಂಗಾರದ ಜಿಂಕೆಯನ್ನು ಹೊಡೆಯಲು ಹೊರಡುತ್ತಾನೆ. ಬಹಳ ದೂರ ಹೋದಮೇಲೆ ರಾಮನ ಸ್ವರವನ್ನು ಸೀತೆ, ಲಕ್ಷ್ಮಣರು ಕೇಳುತ್ತಾರೆ. ರಾಕ್ಷಸರ ಮಾಯೆಯೆಂದು ಲಕ್ಷ್ಮಣನು ಹೇಳುತ್ತಾನೆ. ಆದರೆ ಸೀತೆಯ ಮಾರ್ಮಿಕ ಹಾಗು ಕಠೋರೋಕ್ತಿಗಳಿಂದ ರಾಮನನ್ನು ಹುಡುಕಲು ಲಕ್ಷ್ಮಣನು ಹೋಗುತ್ತಾನೆ. ಆ ಸಮಯದಲ್ಲಿ ರಾವಣನು ರಾಮನಂತೆ ವೇಷ ಧರಿಸಿ ಮೃಗವು ತಪ್ಪಿಸಿಕೊಂಡುಹೋದ ರೀತಿಯನ್ನು ಸೀತೆಗೆ ವಿವರಿಸುತ್ತಿರಲು

---

[8] ABORI, IX, 6.

ರಾವಣನ ಸಾರಥಿಯು ಲಕ್ಷ್ಮಣನ ವೇಷದಲ್ಲಿ ಬಂದು—'ಆರ್ಯ, ಸಮಾಧಿ ಚಕ್ಷುಷಾ ಭರತಸ್ಯ ಪರ ಚಕ್ರಭಯಮುಪನತಂ ದೃಷ್ಟ್ವಾ ತೂರ್ಣಂ ಯುಷ್ಮಾಭಿರಭಿಗಂತವ್ಯಮಿತಿ ತಪಸಾ ರಥಂ ನಿರ್ಮಾಯ ಮಹ್ಯಂ ದತ್ವಾ ವನಾಂತರೇಷು ಅಂತರ್ಹಿತಃ ತಪಸ್ವಿ ಜನಃ (ಪು. ೧೧೪)' ಎಂದು ಹೇಳಿ ದಿವ್ಯರಥದಲ್ಲಿ ಕುಳಿತುಕೊಳ್ಳಲು ರಾಮನ ವೇಷದ ರಾವಣನಿಗೆ ಲಕ್ಷ್ಮಣನ ವೇಷದ ಸಾರಥಿಯು ಹೇಳುತ್ತಾನೆ. ಸೀತೆಯು ಇದೆಲ್ಲವೂ ನಿಜವೆಂದು ನಂಬಿ ತಾನೂ ಸಂದೇಹವಿಲ್ಲದೆ ಕುಳಿತುಕೊಳ್ಳುತ್ತಾಳೆ. ಹಿಂದೆ ಆಶ್ಚರ್ಯಚೂಡಾಮಣಿಯನ್ನು ತಪಸ್ವಿಗಳೇ ಕೊಟ್ಟಿದ್ದರಿಂದ ಎಲ್ಲವೂ ಸತ್ಯವೆಂದೇ ತಿಳಿದಳು. ಯಾವ ಸಂಶಯವೂ ಆಗುವುದಿಲ್ಲ. ರಾವಣನು ಹೀಗೆ ಸೀತೆಯನ್ನು ಅಪಹರಿಸಿಕೊಂಡುಹೋಗುತ್ತಾನೆ. ಹೀಗೆ ಎರಡು ನಾಟಕಗಳಲ್ಲೂ ವ್ಯತ್ಯಾಸವು ಇರುವುದರಿಂದ ಭಿನ್ನ ಕರ್ತೃವೇ ಆಗಿರಬೇಕು. ಪ್ರತಿಮಾದಲ್ಲಿ ಯಾವ ಕಾರಣದಿಂದಲೂ ರಾಮನು ಅಯೋಧ್ಯೆಗೆ ಹಿಂದಿರುಗುವುದಿಲ್ಲವೆನ್ನುತ್ತಾನೆ. ಆದರೆ ಶಕ್ತಿಭದ್ರನ ರಾಮನು (ರಾವಣನೇ ಅಹುದು) ಭರತನನ್ನು ಕಾಪಾಡಲು ಅಯೋಧ್ಯೆಗೆ ಹೋಗಲು ನಿರ್ಧರಿಸುತ್ತಾನೆ. ಆದ್ದರಿಂದ ಪ್ರತಿಮಾ ಮತ್ತು ಆಶ್ಚರ್ಯಚೂಡಾಮಣಿಗಳ ಕರ್ತೃವು ಒಬ್ಬರಲ್ಲ.

ರಾವಣನ ಸಾವಿನ ವಿವರವು ಅಭಿಷೇಕ ಹಾಗೂ ಚೂಡಾಮಣಿಗಳಲ್ಲಿವೆ. ಒಬ್ಬನೇ ಕವಿಯಾಗಿದ್ದಲ್ಲಿ ಈ ರೀತಿ ಪುನಃ ಪುನಃ ಹೇಳುವುದು ಅಸಂಗತ ಮತ್ತು ಅನುಚಿತ. ಮಹಾಭಾರತದ ಆಧಾರದಮೇಲೆ ಒಬ್ಬನೇ ಮಧ್ಯಮವ್ಯಾಯೋಗ, ಪಂಚರಾತ್ರ, ದೂತವಾಕ್ಯ, ದೂತಘಟೋತ್ಕಚ, ಕರ್ಣಭಾರ ಮತ್ತು ಊರುಭಂಗಗಳನ್ನು ಬರೆದಿದ್ದರೂ ಒಂದು ನಾಟಕದಲ್ಲಿನ ಘಟನೆ ಮತ್ತೊಂದರಲ್ಲಿಲ್ಲ. ಆದ್ದರಿಂದಲೇ ಅಭಿಷೇಕ ಮತ್ತು ಚೂಡಾಮಣಿ ನಾಟಕಗಳನ್ನು ಬರೆದ ಕವಿಗಳು ಬೇರೆ ಬೇರೆಯೇ ಹೊರತು ಒಬ್ಬರಲ್ಲ.

ಇನ್ನೂ ಅನೇಕ ಕಾರಣಗಳಿಂದ ಅಭಿಷೇಕ ಮತ್ತು ಪ್ರತಿಮಾ ನಾಟಕಗಳು ಶಕ್ತಿಭದ್ರನ ಕೃತಿಯಲ್ಲವೆನ್ನಬಹುದು. ಶಕ್ತಿಭದ್ರನು ನಾಟಕದಲ್ಲಿ ತನ್ನ ಹೆಸರನ್ನು ಹೇಳಿಕೊಂಡಿರುವುದಲ್ಲದೆ ಇತರ ಗ್ರಂಥದ ವಿಚಾರವನ್ನೂ ತಿಳಿಸಿದ್ದಾನೆ. ಆದರೆ ಇದು ಭಾಸನಾಟಕದ ಸಂಪ್ರದಾಯವಲ್ಲ. ಚೂಡಾಮಣಿಯ ನಾಂದೀಪದ್ಯವು ದೊಡ್ಡದು ಹಾಗೂ ಸ್ರಗ್ಧರಾ ವೃತ್ತದಲ್ಲಿದೆ. ಪ್ರಸ್ತಾವನೆಗೆ ಬದಲಾಗಿ ಸ್ಥಾಪನೆ ಎಂದಿದ್ದರೂ ಭಾಸನ ಸ್ಥಾಪನೆಯಂತಿಲ್ಲ. ಚೂಡಾಮಣಿಯ ಭರತವಾಕ್ಯವೂ ಸಹ ಸ್ರಗ್ಧರಾದಲ್ಲಿದೆ. ಆದರೆ ಇವೆಲ್ಲವೂ ಭಾಸನಲ್ಲಿ ಕಂಡುಬರುವುದಿಲ್ಲ.

ಈ ನಾಟಕಗಳಲ್ಲಿ ಸಾದೃಶ್ಯಗಳು ಕಂಡುಬರುವುದಕ್ಕೆ ಏನಾದರೂ ಕಾರಣವಿರಲೇಬೇಕಲ್ಲವೇ? ಈ ನಾಟಕಗಳ ಆಧಾರವು ಒಂದೇ ಆಗಿದ್ದು ಕೇರಳ ದೇಶದಲ್ಲಿ ಪ್ರಚಾರದಲ್ಲಿದ್ದ ನಾಟಕ ಕರ್ತರ ಗುಂಪಿಗೆ ಸೇರಿದ್ದುದಾಗಿರಬಹುದು. ಪ್ರೊ|| ವಿಂಟರ್‌ನಿಟ್ಸ್‌ರವರು—"It is certain that they belong to the

same circle or school of dramatists whose home was the Kerala country. It would be absurd to think that one and the same poet should have dramatised exactly the same subject in two different ways."[9] ಎಂದಿದ್ದಾರೆ. ಆದ್ದರಿಂದ ಭಾಸನದೆಂದು ತಿಳಿದಿರುವ ನಾಟಕಗಳ ಕರ್ತೃವು ಆಶ್ಚರ್ಯಚೂಡಾಮಣಿಯ ಕರ್ತೃವಾದ ಶಕ್ತಿಭದ್ರನಂತೂ ಅಲ್ಲವೆಂದು ನಿರ್ವಿವಾದವಾಗಿ ಹೇಳಬಹುದು.

—ಯನ್. ಆರ್. ಸುಬ್ಬಣ್ಣ

[9] Mm. Kuppuswami Sastri Commemoration Volume, p. 8.

ಪ್ರಾಚೀನ ಕವಿಸೂಕ್ತಿ

ಕವಿದುವು ಘೇನು ಮುಂಚೆ ತುಱುಗಳ್ ಪೊಲದತ್ತಣಿನೂರ್ಗೆ ಬಾನಲಾ
ದುವು ಪಡುವಣ್ಗೆ ಪಾಱಿದುವು ಗೂಡಿನ ಸಾರ್ಕೆಗೆ ಪಕ್ಕಿ ಕೊಂಬುಗೊಂ
ಡುವು ಮೃಗಮೂಠ ಪೊರ್ದುಗೆಯ ಬಟ್ಟೆಗೆ ಮೇಪಿನ ಕಾಪಿನಿಂ ಮರ
ಳ್ದುವು ದಿನನಾಯಕಂ ವರುಣ ದಿಙ್ನಗಮಂ ಮಱೆಗೊಳ್ವ ಕಾಲದೊಳ್

ಜಲರುಹ ಮಿತ್ರನೊಳ್ ನೆರೆವ ಸಂಜೆಯ ನಿರ್ಭರಕಂಠನಾದಮಂ
ನಲವಿನೊಳೆಯ್ದೆ ಕಲ್ತು ಪರಿಮಿಕ್ಕಿರೆ ಪಕ್ಕೆಗೆ ಸಾರ್ವ ಪಕ್ಕಿಗಳ್
ಚಿಲಿವಿಲಿವಿಚ್ಚ್ಟ ವಿಚ್ಚ್ಟ ಚಿಲಿಚಿಲ್ಪಿಲಿ ಕರ್ಕುಕಹುರ್ಕು ಬಾರ್ಕುಳಿ
ಘುಲಘುಲಲೆಂದದೇನುಲಿಯುತಿರ್ದುದೊ ನೀಳ್ದ ಮಹೀರುಹಂಗಳೊಳ್

ವಾರಿಜಮಿತ್ರನಿಂ ಬಹನೆ ಕೂ ಶಶಿ ನೀಂ ಪೆಱಸಾರು ಸಾರು ಕೂ
ನಾರಿಯರಂಗದೊಳ್ ಪುದಿದ ಜಾರರೆನಿಪ್ಪವರೋಡಿಯೋಡಿ ಕೂ
ಕೀರ ಮದಾಳಿ ಕೋಗಿಲೆ ವಿಹಂಗ ಕಳಿಂಗಗಳೇೞಿಯೇೞಿ ಕೂ
ತಾರೆ ತಮಂಧ ಸಾರೆನುತೆ ಕೂಗುತಲಿರ್ದುದು ತಾಮ್ರಚೂಡನುಂ

ಸರಸಿಜಮಿತ್ರ ಕೂ ತಮವಿದಾರಣ ಕೂ ಹಿಮಧೂಮಕೇತು ಕೂ
ನರರ ಜಡಾರಿ ಕೂ ಖಗಮೃಗಂಗಳ ಜೀವನರಕ್ಷಪಾಲ ಕೂ
ಪಿರಿದುಮುದಾರದಿಂದೆ ತಿಮಿರಂಗಳ ನುಂಗಿಪ ಜಾರಚೋರರಾ
ಹರಣವಿರೋಧಿ ಕೂ ಎನುತ ಕೂಗುತಲಿರ್ದುದು ತಾಮ್ರಚೂಡನುಂ

ಪಕ್ಕ ದ್ವಂದ್ವಂಗಳಂ ಝಾಡಿಸಿ ಕೆಲಕೆ ನಿಮಿರ್ದೊತ್ತಿ ಮೂಗಿಂದೆ ಗೋಣಂ
ಪಿಕ್ಕುತ್ತಂ ಬಂದು ಗೇಹಂಗಳನಡರಿ ನಿಶಾದೇವಿ ನೀಂ ಪೋಗು ಪೋಗಂ
ದರ್ಕಂ ಪೂರ್ವಾಚಲಕ್ಕೆಯ್ದಿದನೆನುತೆ ಕರಂ ಸಾಱುವಂದಂದದಿಂದಂ
ಕುಕ್ಕುಕೂ ಎಂಬ ನಾದಂ ನೆಗೞೆ ನಗರದೊಳ್ ಕೂಗಿತಾ ತಾಮ್ರಚೂಡಂ

—"ಸೂಕ್ತಿ ಸುಧಾರ್ಣವ"ದಿಂದ

ಕಾವ್ಯಾನಂದರ ದೃಷ್ಟಿ ಮತ್ತು ಕಾವ್ಯಸೃಷ್ಟಿ

(ಒಂದು ರಸದರ್ಶನ)

೧

ಕವಿಯೊಬ್ಬ ರಸಋಷಿ. ಅವನು ರಸಿಕನಾಗಿರುವಷ್ಟೇ ಋಷಿಯೂ ಆಗಿರುತ್ತಾನೆ. ಕವಿಯ ರಸಿಕತೆಯನ್ನು ಜನ ಸಾಮಾನ್ಯರು ಸಹಜವಾಗಿ ಗುರುತಿಸಬಹುದು. ಆದರೆ ಅವನ ಋಷಿತ್ವವನ್ನು ಕಂಡುಹಿಡಿಯುವುದು ಅಷ್ಟು ಸುಲಭವಲ್ಲ. ಅದಕ್ಕೆ ಅವನ ಕಾವ್ಯದ ಅಭ್ಯಾಸ, ಸಹವಾಸ ಮತ್ತು ನಿರೀಕ್ಷಣೆಗಳ ಆವಶ್ಯಕತೆಯು ಇದೆ, ಇವುಗಳನ್ನೆಲ್ಲ ಸಾಧಿಸಿಯೂ ಒಬ್ಬ ಕವಿಯನ್ನು ಇಲ್ಲವೆ ಅವನ ಕಾವ್ಯವನ್ನು ಸಂಪೂರ್ಣವಾಗಿ ಅರಿಯುವೆನೆನ್ನುವುದು ಕೂಡ ಸಾಹಸದ ಸಂಗತಿಯಾಗಿದೆ. ಅದರೊಡನೆ ವಿಮರ್ಶಿಸುವೆನೆನ್ನುವದಂತೂ, ದಿಟ್ಟತನವೆನಿಸುವುದು. ಅದರಲ್ಲೂ ಈಗ ನಮ್ಮೊಡನೆ ಕೂಡಿ, ಆಡಿ, ಬಾಳಿ, ಬೆಳೆಯುತ್ತಿರುವ ಕವಿಯ ಕಾವ್ಯವನ್ನು ಸಮಾಲೋಚಿಸುವುದು ಇನ್ನೂ ಕಷ್ಟದ ಕಾರ್ಯವಾಗಿದೆ. ಆದರೆ, ಕನ್ನಡದಲ್ಲಿ ಈ ಕಾರ್ಯವು ಈಗ ನಡೆಯಬೇಕಾಗಿದೆ. ಹೊಸಗನ್ನಡ ಕವಿಗಳನ್ನು ಕುರಿತು ವಿಮರ್ಶೆಯು ನಡೆಯಬೇಕು. ಆಯಾ ಕವಿಗಳ ಕಾವ್ಯದ ಬೆಲೆಯು ನಿಶ್ಚಿತಗೊಳ್ಳಬೇಕು. ಗುಣವುಳ್ಳದ್ದು ಬೆಳಕಿಗೆ ಬರಬೇಕು. ನಿರ್ಗುಣವಾದುದು ನಿರಾಕಾರದಲ್ಲಿ ಲಯಗೊಳ್ಳಬೇಕು. ಹೊಸಸೃಷ್ಟಿಗೆ ಅದರಿಂದ ಆಸ್ಪದವು ಒದಗೀತು. ಸಾಹಿತ್ಯ ಪ್ರಪಂಚದೊಳಗಿನ ಗೊಂದಲವೂ ತಪ್ಪೀತು. ಇವೆಲ್ಲ ಅಪೇಕ್ಷೆಯಿಂದ ಶ್ರೀ 'ಕಾವ್ಯಾನಂದ'ರ ಕಾವ್ಯಸೃಷ್ಟಿಯನ್ನು–ಹದಿನೈದು ವರ್ಷಗಳಿಂದ ಸತತವಾಗಿ ನಡೆದ ಅವರ ಕಾವ್ಯ ಕೃಷಿಯನ್ನು—ಸಮಾಲೋಚಿಸುವುದು ಅನಪೇಕ್ಷಿತವಾಗಲಿಕ್ಕಿಲ್ಲವಷ್ಟೆ? ಇದರಿಂದ ಹೆಚ್ಚಿನ ಲಾಭವಾಗದಿದ್ದರೂ ಹೊಸಗನ್ನಡ ಕಾವ್ಯಪ್ರೇಮಿಗಳಿಗೆ ಒಂದಿಷ್ಟು ರಸವನ್ನು ಸವಿಯುವುದಕ್ಕೆ ಸಹಾಯವಾದರೂ ಆಗಬಹುದಲ್ಲ. ಇಷ್ಟಾದರೂ ವಿಮರ್ಶೆಯ ಕಾರ್ಯ ಸಫಲವೆನ್ನಬಹುದಾಗಿದೆ. ಅಷ್ಟೇ ಈ ಲೇಖನದ ಉದ್ದೇಶವಾಗಿದೆ.

೨

'ಋಷಿಯಾಗದವ ಕವಿಯಾಗಲಾರ'—ಎಂಬುದೊಂದು ಆರ್ಷವಾಚನವಿದೆ. ಕವಿ ಪ್ರತಿ ಸೃಷ್ಟಿಕರ್ತ. ಅವನಲ್ಲಿಯ ಆ ಸೃಜನ ಶಕ್ತಿಗೆ ಮೂಲ ಕಾರಣವು ಅವನಲ್ಲಿರುವ ಋಷಿತ್ವವೇ. ಈ ಋಷಿತ್ವದಿಂದಲೇ ಕವಿಯು ಬ್ರಹ್ಮನೆನಿಸುತ್ತಾನೆ. ಈ ಕವಿಬ್ರಹ್ಮನಿಗೆ ಒಂದು ಮೂಲ ದೃಷ್ಟಿ ಇರುತ್ತದೆ. ಅದು ವಿಶ್ವಕವಿ ಪ್ರಪಂಚಕ್ಕೇನೇ ಸಾಧಾರಣವಾದುದು. ಆದರೂ ಆಯಾ ಕವಿಗಳ ಆತ್ಮರುಚಿ, ಪೂರ್ವಜನ್ಮದ ಸಿದ್ಧಿ, ಇಹದ ಸಾಧನೆಗಳಿಂದ ಆ ಮೂಲದೃಷ್ಟಿಯು ವಿವಿಧ ಅಂಶಗಳಲ್ಲಿ ವ್ಯಕ್ತವಾಗುತ್ತದೆ. ಆ ಅಂಶಿತ ರೂಪವು ಮೂಲ ಬೃಹತ್ ಶಕ್ತಿಯ ಒಂದು ಎಸಳೇ

ಎಂಬುದರಲ್ಲಿ ಸಂಶಯವಿಲ್ಲ. ಆ ಎಸಳು ಕವಿಯ ಸಾಧನೆಗೆ ಅನುಸರಿಸಿ ಸುಗಂಧವನ್ನು ಬೀರಲು ಸಮರ್ಥವಾಗುತ್ತದೆ.

ಕವಿಯು ಸಾಧಕ, ಆರಾಧಕ. ಅವನ ಆರಾಧನೆಯು ಯಾವುದೋ ಒಂದು ಅನಂತವನ್ನು ಸಾಂತಗೊಳಿಸಿ ಪ್ರಕಟಿಸಲು ಯತ್ನಿಸುತ್ತಿರುತ್ತದೆ. ಆ ಯತ್ನ ಏನು, ಏಕೆ,—ಎಂಬುದರ ಅರಿವೂ ಕೂಡ ಕವಿಯ ಹೊರ ಮನಸ್ಸಿಗೆ ನಿಲುಕುವುದಿಲ್ಲ. ಅವನಿಗೆ ತನ್ನ ಅಂತರ್ಯದಲ್ಲಿ 'ಎಲ್ಲೊ ಒಂದೆಡೆ ಭಾವ ಬುದ್ಧಿಯು ಹಸೆಗೆ ನಿಲ್ಲುವ ಹಾಗಿದೆ.'[1]—ಎಂದೇನೋ ಎನ್ನಿಸುತ್ತದೆ. ಆಗ 'ಕವನ ಜನನ'ವಾಗುತ್ತದೆ. ಇಂಥ ರಸೋದಯದ ಕಾಲ—ಮಂಗಳ ಸಮಯ—ಜೀವನದಲ್ಲಿ ಮೇಲಿಂದ ಮೇಲೆ ಒದಗುತ್ತಿರುವುದಿಲ್ಲ. ಭಾವ ಬುದ್ಧಿಗಳ ಲಗ್ನದ ಸುಮೂರ್ತ ಹೊಂದಿಬರಬೇಕು. ಅದಕ್ಕೆ 'ಎನಿತೊ ದಿನಗಳು ಕಳೆದ ಮೇಲಿದೊ ಮತ್ತೆ ಮಸಗಿದೆ ಮಂಗಳ.' ಈ ಮಂಗಲ ಸಮಯಕ್ಕಾಗಿ ಕವಿಯ ಆತ್ಮವು ಒಂದೇ ಸವನೆ ಹಾತೊರೆಯುತ್ತಿರುತ್ತದೆ. ಹೊರಗಿನ ಜೀವನದಲ್ಲಿ ಕವಿಯು ಹೇಗೆ ಹೇಗೋ ಹೊಂದಿಕೊಂಡು ತನ್ನ ಬಾಳ ನೌಕೆಯನ್ನು ನೂಕುತ್ತಿದ್ದರೂ ಅವನ ಅಂತರಂಗವೆಲ್ಲ ಆ ಭಾವ ಕನ್ನಿಕೆಯ ಮಂಗಳ ಕಾರ್ಯಕ್ಕೇನೇ ಧಾರೆಯೆರೆದು ಹೋಗಿರುತ್ತದೆ. ಅಂತಲೇ ಅವನ 'ಬಗೆಯ ಬಾನಲಿ ಬಣ್ಣವೇಳರ ಬಿಲ್ಲ ದಿಬ್ಬಣ ಸಾಗಿದೆ.' ಅದರಲ್ಲಿ 'ನೀಲಮೇಘದ ಮೇಣೆ ನೂರಿವೆ.' ಅವು ಮಿಂಚಿನ ಹೆಂಗಳನ್ನು ಹೊತ್ತು ಸಾಗುತ್ತಿವೆ. ನಡು ನಡುವೆ 'ಮೇಣೆ ಮೇಣೆಗೂ ಇಣಿಕಿ ನೋಡುವ :ಮಿಂಚಿನಂಗನೆಯಾಸ್ಯವು' ಕವಿಯ ದೃಷ್ಟಿಗೆ ಬೀಳುತ್ತಿದೆ. ಎಲ್ಲೆಡೆಗೂ ಆಕಾಶದಲ್ಲಿ ಬಣ್ಣಬಣ್ಣದ ಹಕ್ಕಿಗಳ ಬಾವುಟಗಳು! ಎಲ್ಲೆಡೆ ಚಂದ ಚಲ್ಲುವರಿದಿದೆ. ಶುಭದಲ್ಲಿ ಶೋಭೆ ಸೇರಿದೆ. ಸತ್ಯ ಸೌಂದರ್ಯಗಳು ಸೇರಿ ಶಿವನನ್ನು ರೂಪಿಸುತ್ತಿವೆ. ಆ ಸುಲಗ್ನದಲ್ಲಿ,

'ಹೊಳೆವ ತುಂತುರ್ವನಿಯೆ ಅಕ್ಷತೆ
ಸಾಂಧ್ಯಸ್ವರ್ಣಿಮೆ ಅರಿಶಿನ
ಹೊಂಗದಿರ ಮಾಂಗಲ್ಯ ಸಂಜೆಯ
ಕೆಂಪು ಕುಂಕುಮ ಚಂದನ'[2]

ವಾಗಿ ಪ್ರಕೃತಿಯೇ ಕವಿಯ ಭಾವಕನ್ನಿಕೆಯ ಲಗ್ನಕ್ಕೆ ಸಿದ್ಧವಾಗಿ ನಿಂತಿದೆ ಇಲ್ಲಿ. ಬುದ್ಧಿ ಮದುಮಗನಾದರೂ ಅವನ ಸದ್ದೇ ಇಲ್ಲಿ ಇಲ್ಲ. ಬುದ್ಧಿ ಹಿಂದೆ ದೂರದಲ್ಲಿ ಸರಿದು ನಿಂತಾಗಲೇ ಭಾವ ಪ್ರವಣತೆಯಿಂದಾಗುವದಲ್ಲವೇ ಕಾವ್ಯ ಜನನ? ಆ ವಿಶ್ವ ದೃಷ್ಟಿಯ ಸಂದೇಶ ಇಲ್ಲಿದೆ.

ಹೀಗೆ 'ಕವನ ಜನನ'ವಾಗುವ ಕಾಲಕ್ಕೆ ಕವಿ ಹೃದಯದಲ್ಲಿ ಒಂದು ತರದ

---

1 ಕಾವ್ಯಾನಂದರ 'ಮಾನಸ ಸರೋವರ' ಪು. ೫.

2 'ಮಾನಸ ಸರೋವರ' ಪು. ೬.

ಪ್ರಸೂತಿವೇದನೆಯೇ ನಡೆದಿರುತ್ತದೆ. ಆಗ ಹೊರಗಿನ ಯಾವ ಶಕ್ತಿಗಳೂ ಆ ಜನ್ಮಕ್ಕೆ ತಡೆಯನ್ನು ಒಡ್ಡಲಾರವು. ಎಲ್ಲೆಲ್ಲಿಂದಲೋ ಭಾವದ ಹೊನಲುಗಳು ಪ್ರವಾಹಗಳಾಗಿ ಅಲ್ಲಿ ಧುಮುಕುತ್ತವೆ. 'ಕಲ್ಪನಾ ವಿಲಾಸ'ದಲ್ಲಿ 'ಭಾವಸುಂದರಿ'ಯು ಮೈವೆತ್ತಿ ನಿಲ್ಲುತ್ತಾಳೆ. ಆಗ 'ಕಲೆಗಾರ'ನ ಮನಸ್ಸೊಂದು 'ಜಲಪಾತ'. ಅದರ ಅಬ್ಬರಕ್ಕೆ ಈ ಹೊರಗಣ್ಣು ಮುಚ್ಚಿ ಬಗೆಗಣ್ಣು ಅರಳುತ್ತದೆ. ಪ್ರಾತಿಭ ಚಕ್ಷು ಅನಿಮಿಷ ನೇತ್ರವಾಗಿ ನಿಂತು ತನ್ನ ಕಾರ್ಯವನ್ನು ಎಸಗುತ್ತದೆ. ಆಗ ಅರೂಪವಿದ್ದುದು ರೂಪುಗೊಂಡು ಅವತರಿಸುವಾಗ ಭಾವ ಸೃಷ್ಟಿಯ ಮೂಲ ಪದಾರ್ಥ ಎಲ್ಲಿಂದ, ಏನು ಎಂಬುದನ್ನು ಯಾರು ಅರಿಯಬಲ್ಲರು? ಇದನ್ನೇ ಕವಿಯು,

> ಯಾವ ಕಡಲಿನ ಉಗಿಯೊ ಯಾವ ಸರಸಿಯ ಉಸಿರೊ
> ಮೋಡವಾಗಿಹುದೆಲ್ಲಿ ತಂಪುವಡೆದು
> ಭಾರವಾಯಿತು ಎಲ್ಲಿ ತೂರಿ ತಂದಿದು ಯಾವ
> ಗಾಳಿಯಿಲ್ಲಿಗೆ ಇದನು ಅರಿವುದರಿದು![1]

ಎಂದು ಉಸುರುತ್ತಾನೆ. ಕಾವ್ಯ ಸೃಷ್ಟಿಯ ಉಗಮವೇ ಹಾಗಿರುತ್ತದೆ. ಕವಿಯ 'ಮನಶ್ಶೈಲ ಶಿಖರಕೆ' ಅದು ತಾನಾಗಿಯೇ ಸಾರಿ ಬಂದು ಎರಗುತ್ತದೆ. ಭಾವ ನೀರದ ಕವಿಯ ಮನಶ್ಶೈಲ ಶಿಖರಕ್ಕೆ ಎರಗುವುದೇನೋ ನಿಜ. ಆದರೆ ಕವಿಯ ಮನಸ್ಸು ಶೈಲ ಶಿಖರದಂತೆ ಸುತ್ತಲಿನ ನೆಲವನ್ನು ಬಿಟ್ಟು ಮೇಲೆದ್ದಿರಲಿಕ್ಕೆ ಬೇಕು. ಸಾಗಿಹೋಗುವ ಮೋಡಗಳನ್ನು ಸೆಳೆದು ಮಳೆ ಸುರಿಯಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದಿರಬೇಕು. ಅದಕ್ಕೆ ಕವಿಯ 'ಬಾಳರುಚಿ'ಯು ಹಸನಾಗಿರಲಿಕ್ಕೆ ಬೇಕು. ಅದು ನಾಲ್ಕು ಮುಖವಾಗಿರಬಹುದು, ಇಲ್ಲವೇ ನಲವತ್ತು ಮುಖವಾಗಿರಬಹುದು. ಜಡ ಸೃಷ್ಟಿಯೊಳಗಿನ ಜೋಗಿನ ಜಲಪಾತವೇನೋ ನಾಲ್ಕು ಮುಖವಾಗಿ ಹಾರುತ್ತಿರಬಹುದು. ಅದರಿಂದ ಪ್ರಚೋದನಗೊಂಡ ಕಾವ್ಯ ಸೃಷ್ಟಿಯೊಳಗಿನ ಜಲಪಾತಕ್ಕೆ ಅನಂತ ಮುಖ. ಅದು 'ಹಾರಿ ಹರಿಯುತಲಿಹುದು, ಹಾಡಿ ಮೊರೆಯುತಲಿಹುದು, ಹಾಡಾಗಿ ಹರಿಯುವುದೆ ಬಾಳ ಸುಖವಾಗಿ!' ಕವಿಯ ಜೀವನದ ಸುಖವು ಅವನ ಕಾವ್ಯ ಸೃಷ್ಟಿಯಲ್ಲಿದೆ. ಅಂತಲೇ ಅದು ಧೈರ್ಯವಾಗಿ 'ತನಗಾಗಿ ಆರಿಸಿಹ ದಾರಿಯೇ ಬೇರೆಯಿದೆ' ಎಂದು ಧ್ವನಿಗೈಯುತ್ತಿದೆ. ಮಾರ್ಗವೇ ವೈಶಿಷ್ಟ್ಯಪೂರ್ಣವಾಗಿದ್ದಾಗ ಅದರಲ್ಲಿ ಎಲ್ಲಿಂದ ಬಂದು, ಯಾರ ನೀರು ಹರಿದರೇನು? ವೃಕ್ಷವು ಭೂಮಿಯೊಳಗಿನ ರಸವನ್ನು ಹೀರಿ, ತನ್ನ ತನಿವಣ್ಣಿನ ರಸವನ್ನು ನೀಡಿದಂತಲ್ಲವೇ ಕಾವ್ಯರಸ ಸೃಷ್ಟಿ? ಆ ಇನಿದಾದ ಮಾವಿನಲ್ಲಿರುವ ರಸದ ಆತ್ಮವಾಗಿರುವ ನೀರು, ರುಚಿ, ಬಣ್ಣಗಳು ಎಲ್ಲೆಲ್ಲಿಂದ ಬಂದು ಅಲ್ಲಿ ಸೇರಿವೆ ಎಂಬುದನ್ನು ವಿಂಗಡಿಸುವುದು ಸಾಧ್ಯವೇ? ಆ

---

[1] ಕಾವ್ಯಾನಂದರ 'ಜಲಪಾತ' ಪುಟ ೧.

ರಸ ಸೃಷ್ಟಿಗೆ ವೃಕ್ಷವೇ ಕಾರಣ. ಅದರ ಬಾಳ್ವೆ, ತಾಳ್ಮೆಗಳೇ ಮೂಲ. ಆದರೂ ಅವು ರಸದ ಅಭಿವ್ಯಕ್ತಿಗೆ ಮೂಲವೆನಿಸಬಲ್ಲುವೇ ಹೊರತಾಗಿ, ಆ ಮೂಲ ಕಾವ್ಯಗಂಗೆಯ ಗಂಗೋತ್ರಿಯನ್ನು ಕಂಡವರಾರೊ? ಇದನ್ನೇ ಕವಿಯು,

> ಯಾರಿಂದ ಬಂದುದೀ ನೀರೆಂದು ವಿಂಗಡಿಸಿ
> ಬೇರೆ ಬೇರಾಗಿದನು ತೋರಿಸಲು ಬಹುದೆ?

ಎಂದು ಪ್ರಶ್ನಿಸಿರುವನು. ಕಾವ್ಯೋದಯದ ಅಗಮ್ಯತೆಯನ್ನು ಸಾರಿರುವನು.

ಕವಿತೆಗೆ ರಸ, ಭಾವ, ಕಲ್ಪನಾವಿಲಾಸಗಳು ರತ್ನತ್ರಯಗಳಿದ್ದಂತೆ. ಇವಲ್ಲದೆ ಕಾವ್ಯಕ್ಕೆ ಸಿದ್ಧಿಯಿಲ್ಲ. ರಸದ ಇರವು ಸೃಷ್ಟಿಯಲ್ಲಿ ವಿವಿಧ ಎಡೆಗಳಲ್ಲಿದೆ. ವಿವಿಧ ದೃಷ್ಟಿಗೆ ವಿವಿಧ ರೂಪದಲ್ಲಿ ವ್ಯಕ್ತವಾಗುತ್ತದೆ. ರಸದರ್ಶನದಲ್ಲಿ ಕಾವ್ಯಾನಂದರ ದೃಷ್ಟಿಯು,

> ಬಡವರಿಗೆ ಹಿಡಿಬೋನ ಮಜ್ಜಿಗೆಯೆ ರಸವು,
> ತತ್ತ್ವವಿದರಿಗೆ ಸಚ್ಚಿದಾನಂದವೇ ರಸವು-
> ನನ್ನ ರಸನೆಗೆ ನಿನ್ನ ಹೆಸರೆ ರಸವು![1]

ಹೀಗೆ ವಿಶ್ವವ್ಯಾಪಿಯಾಗಿದೆ. ಅನ್ನಬ್ರಹ್ಮನಿಂದ ಆನಂದಬ್ರಹ್ಮನವರೆಗೆ ಅವರ ದೃಷ್ಟಿಯು ಹರಿದಿದೆ. ಕಬ್ಬಗಳಿಗೆ ಕಲ್ಪನೆಯೆ ರಸ, ಹುಬ್ಬುಗಳಿಗೆ ಹಾವಭಾವ ರಸ, ಕೆನ್ನೆಗಳಿಗೆ ನಸು ಲಜ್ಜೆ ರಸ, ಪ್ರಣಯಕ್ಕೆ ಹುಸಿ ಕಲಹ ರಸ, ರೂಪಕ್ಕೆ ಯೌವನವೆ ರಸ, ತಂಬೆಲರ ಚುಂಬನವು ಹೂವುಗಳಿಗೆ ರಸವೆನಿಸುತ್ತದೆ. ಅದರಂತೆ ಕೋಗಿಲೆಗೆ ಚಿಗುರೆಲೆಯೆ ರಸ, ಅರಗಿಳಿಗೆ ಮಧುರ ಫಲಗಳೆ ರಸ. ಆಯಾ ಜೀವಗಳ ಅಭಿರುಚಿಗೆ ತಕ್ಕಂತೆ ಸೃಷ್ಟಿಯಲ್ಲಿ ರಸವು ವ್ಯಕ್ತವಾಗುತ್ತದೆ. ಆದರೆ ಆ ಎಲ್ಲ ರಸದ ಜೀವ-ಜೀವಾಳವಾದ ಆದಿರಸವು ಈ ಕವಿಯುು ಹೇಳುವಂತೆ,

> ರಸೋವೈಸಃ, ರಸಾನಾಂ ರಸತಮಃ, ಶಿವನೆ ರಸವು-
> ನನ್ನ ರಸನೆಗೆ ನಿನ್ನ ಹೆಸರೆ ರಸವು[2]

ಎಂದಿದೆ. ಈ ರಸದೃಷ್ಟಿಗೆ ರಸಋಷಿಯ ಋತದರ್ಶನವೂ ಒಂದಿದೆ. ಅದು ಕವಿಯ ಜೀವನದ ತತ್ತ್ವ; ಸತ್ವ; ಸ್ವತ್ವ. ಅದು ಜೀವನ ಒಂದು ಜೇನ್ ಕೊಡವೆಂದು ಭಾವಿಸಿದೆ. ಅದರಲ್ಲಿ ಕಲಾಪ್ರೇಮವೇ ರಸ. ಆ ಕಲೆಯ ಫಲವು ಸೌಂದರ್ಯ ದರ್ಶನ. ಆ ಸೌಂದರ್ಯಕ್ಕೆ ಒಲವೇ ಅಮೃತ. ಅದು ಸ್ಥಾಯಿಯಾದ ರಸ, ಇದು ತಿಳಿವಿನ ತೆನೆಯಲ್ಲಿ ಕಾಳುತುಂಬಿ ನಿಲ್ಲುವ ತನಿರಸವಾಗಿದೆ. ಅದು ನಲವಿನಿಂದ

---

1 ಕಾವ್ಯಾನಂದರ 'ಕರುಣಾ ಶ್ರಾವಣ' ಪು. ೧೦.

2 ,, ,, ಪು. ೧೧.

ಪುಷ್ಟಿಗೊಂಡುದಾಗಿದೆ. ಹೀಗೆ ಕಲಾಪ್ರೇಮ, ಸೌಂದರ್ಯಾರಾಧನೆ, ಪ್ರೇಮ-ಆನಂದ, ಜ್ಞಾನೋಪಾಸನೆಗಳೆಲ್ಲ ಕವಿಯ ರಸದೃಷ್ಟಿಯನ್ನು ರೂಪಿಸಿವೆ, ಮಾಗಿಸಿವೆ.

ಕಾವ್ಯಕಾಮಿನಿಗೆ ರಸವೇ ಆತ್ಮ. ಭಾವ ಪ್ರಾಣ. ಪ್ರಾಣಸ್ಪಂದನ ನಿಂತರೆ ಆತ್ಮನ ಇರುವಿಕೆ ಮಾಯವಾಗುವುದು. ಅಂಥ ಕಾವ್ಯವೊಂದು ಕೊರಡು. ಅದರಿಂದ ರಸಬ್ರಹ್ಮನ ಆರಾಧನೆಗೆ 'ಭಾವಸುಂದರಿ'ಯ ಆರತಿಯ ಆವಶ್ಯಕತೆಯು ಇದೆ. ಈ ಭಾವಸುಂದರಿಯ ಪ್ರಕೃತಿಯು ಬಹು ಸೂಕ್ಷ್ಮ. 'ಮುಖ ನೋಡಿ ಮಣೆ ಹಾಕುವಂಥ ವಂಚಕವೃತ್ತಿ ಇವಳಲ್ಲಿಯೂ' ಇದೆ! ಇವಳೂ ಭೇದನೀತಿಯನ್ನು ಬಲ್ಲಳು! 'ಪ್ರತಿನರನ ಮತಿಯಷ್ಟೆ ಗುಣರೂಪ ಸಿಂಗರದಿ ತೋರುವುದೆ ಇವಳ ರೀತಿ!' ಆದುದರಿಂದ 'ಭಾವಸುಂದರಿ'ಯನ್ನು ಮೆಚ್ಚಿಸಲು ಕವಿಯು ಮತಿವಂತನಾಗಬೇಕು. ಆ ಮತಿಯು ವಿಶಾಲವಾಗಿರಬೇಕು. ವಿಶ್ವದ ವಿವಿಧ ಎಲ್ಲೆಗಳನ್ನೂ ಅದು ಮೀರಿ ನಿಲ್ಲುವಂತಿರಬೇಕು. ಅದಕ್ಕಾಗಿ ಕವಿಗೆ ಸತತ ತಪಸ್ಸು ಬೇಕೆಂದು ಬಲ್ಲವರು ಆಗಾಗ ಹೇಳುವರು. ಯಾಕೆಂದರೆ ಭಾವಸುಂದರಿಯು,

> ಮಿತಭಾಷಿಯಾದರೂ ಹಿತಭಾಷಿಯೀ ಚೆಲುವೆ—
> ವೃತ್ತಿಯಲಿ ಬಹಳ ಕೃಪಣೆ!
> ಆದರೂ ತನ್ನ ತಪಗೈದವಗೆ ತನ್ನನೇ
> ಕೊಟ್ಟು ಬಿಡುವವಳು ನಿಪುಣೆ! [1]

ಇಂಥ ನಿಪುಣೆಯನ್ನು ವಶಪಡಿಸಿಕೊಳ್ಳುವುದಕ್ಕೆ ಬಹು ನಿಪುಣನಿಗೇ ಸಾಧ್ಯ. ಹೇಗೆಂದರೆ ಇವಳು ಸರ್ವತಂತ್ರಸ್ವತಂತ್ರಳು; ಯಾರ ದಾಕ್ಷಿಣ್ಯವೂ ಇವಳಿಗೆ ಇಲ್ಲ! ಬಾರೆನಲು ಬರುವವಳಲ್ಲ! ಒಂದೆಡೆಗೆ ಇರುವವಳಲ್ಲ. ಇವಳು ವಿಶ್ವವಿಹಾರಿ! ಮೇಲಾಗಿ ವಿಶ್ವಮೋಹಿನಿ! ಅದರಲ್ಲೂ ಎಲ್ಲರನ್ನೂ ತಣಿಸುವುದೇ ಇವಳ ಚಿಂತೆ! ಇಂಥವಳಿಗೆ ನಮ್ಮ ವ್ಯಕ್ತಿತ್ವವು ಯಾವ ಗಿಡದ ತೊಪ್ಪಲು? ಆದರೂ ಕವಿಯು ಈ ಭಾವಸುಂದರಿಯ ಪಾದ ಪೂಜಿಸದೆ ಗತಿಗಾಣ, ಮತಿಗಾಣ. ಇವಳ ಪಾದವ ತೊಳೆದ ಗಂಧೋದಕದಿಂದಲೇ ಕವಿಯ ಸಿರಿಮುಡಿಯು ಪಾವನಗೊಳ್ಳಬೇಕು. ಮುಟ್ಟಿದರೆ-ಅಲ್ಲ-ಕಂಡರೆ ಮಾಸೀತು ಇವಳ ಚಲುವಿಕೆ ಎನ್ನುವಂತೆ ಕಾವ್ಯಾನಂದರು ಭಾವಸುಂದರಿಯನ್ನು ಕಂಡರಿಸಿರುವರು. ಆ ಚಿತ್ರವನ್ನು ಎಷ್ಟು ಸಲ ಕಂಡರೂ ಮನಸ್ಸು ತಣಿಯದು. ನೋಡಿ ಈ ಭಾವಸುಂದರಿಯನ್ನ!

> ಕೇದಗೆಯ ರಸದಲ್ಲಿ ಕೇಸರದ ಹುಡಿಗಲಸಿ
> ಮಾಡಿರುವ ಮುದ್ದಾದ ಕನ್ನೆ-
> ಅರುಣರಾಗದ ಕುಸುಮರಸಗೆಂಪಿನೊಳು ತೆಯ್ದು
> ಆಗಿವೆಯೆ ನಿನ್ನ ಕೆನ್ನೆ? [2]

---

[1] 'ಕರುಣಾ ಶ್ರಾವಣ' ಪು. ೯.

[2] 'ಕರುಣಾ ಶ್ರಾವಣ' ಪು. ೭.

ಇಂಥ ಅಪೂರ್ವವಾದ ಭಾವಮೂರ್ತಿಯನ್ನು-ಅರೂಪವಾದುದನ್ನು—ರೂಪಿಸುವುದರಲ್ಲಿ ಕವಿಯ ಯತ್ನವು ಇಲ್ಲಿ ನಡೆದಿದೆ. ಅವಳನ್ನು ನಮಗೆ ತೋರಿಸಲೆಂದು ಕವಿಯ ಅಂತರ್ ದೃಷ್ಟಿಯು ವಿವಿಧ ಉಪಮೆಗಳ ಮಾಲೆಯನ್ನೇ ಹೆಣೆದು ಅವ್ಯಕ್ತವನ್ನು ವ್ಯಕ್ತಗೊಳಿಸಲು ಹೆಣಗಿದೆ ಇಲ್ಲಿ. ಇವಳ ಹೆರಳು, ಕರಿಮೋಡಗಳ ಬಾಚಿಚಿಕ್ಕೆ ಹೂಗಳನಿಟ್ಟು ಹೆಣೆದಂತೆಯಂತೆ! ಇವಳ ನಗೆ ಹೂವು ಬಾಯ್ದೆರೆದಂತೆ!-ಅಲ್ಲಲ್ಲ-ಹಸುವು ಹಾಲ್ ಕರೆದಂತೆ!-ಅದೂ ಅಲ್ಲ-ಮುತ್ತುಗಳನ್ನು ಸುರಿದಂತೆ!! ಇಲ್ಲಿ ಚಿತ್ತವು ನಮ್ಮ ಬಗೆಗಣ್ಣಿಗೆ ಕಟ್ಟುವಂತೆ ಹೇಳುವ ಕವಿಯ ಕಾವ್ಯವೈಖರಿಯ ಬಗೆಯನ್ನು ಗಮನಿಸಿ. ಹೂವು ಅರಳುತ್ತಿರುವುದನ್ನು ಕಾಣುವವರು ಎಷ್ಟು ಜನ? ಕಂಡವರಿಗಂತೂ ಸರಿಯೇ ಅರ್ಥವಾಯಿತು. ಕಾಣದವರು ಹಸುವು ಹಾಲು ಕರೆಯುವುದನ್ನು ನೋಡ ಬನ್ನಿ! ಬಹು ಜನರು ಒದಗಿಯಾರು. ಆ ಸಮಯಕ್ಕೂ ಒದಗದವರು ಮುತ್ತುಗಳು ಸುರಿಯುವುದನ್ನು ಎಂದೂ ಕಾಣಬಹುದಲ್ಲ. ಕಾವ್ಯ ರಸಿಕರಲ್ಲಿ ಅಂಥವರೂ ಇರತಕ್ಕವರೇ ಅಲ್ಲ. ಇಂಥವರಿಗೆ ಹೂವನ್ನು ಅರಳಿಸುವ ಆ ಚೈತನ್ಯದ ಅರಿವು ಆಗದು. ಹಸುವಿನ ಕೆಚ್ಚಲನ್ನು ತೊರೆಯಿಸಿ, ಹಾಲನ್ನು ಕರೆಯಿಸುವ ಅಕ್ಕರೆಯ ಕಲ್ಪನೆಯೂ ಬಾರದು. ಆದರೂ ಅಂಥವರಿಗೂ ಕಾವ್ಯದ ಭಾವ ನಿಲುಕಬೇಕಷ್ಟೆ. ಹಾಗೆ ಜನಸಾಮಾನ್ಯರವರೆಗೂ ಕಾವ್ಯರಸ ನಿರ್ಝರಿಣಿಯು ಹರಿದಾಗಲಲ್ಲವೆ, ಆ ಕಾವ್ಯವು ಮಹಾಕಾವ್ಯವಾಗುವುದು? ಅದರ ಕರ್ತೃವೂ ಮಹಾಕವಿ ಎನ್ನಿಸುವುದು?

ಇದೆಲ್ಲ ಸಾಧಿಸಲಿಕ್ಕೆ ಕವಿಯ 'ಕಲ್ಪನಾವಿಲಾಸ'ವು ಶಕ್ತವಿಲ್ಲದಿದ್ದರೆ ಸಾಧ್ಯವಿಲ್ಲ. ಕವಿಯ ಅನುಭವದಿಂದ ಕಲ್ಪನೆ ಕುದುರುವುದು. ಕಲ್ಪನೆಯ ವೇದಿಕೆಯೆ ಕಾವ್ಯನಟಿಯ ರಂಗಸ್ಥಳ. ಅಚಿಂತ್ಯವಾದುದನ್ನು ಕಲ್ಪನೆಯ ಕೈಚಾಚಿಯೇ ಅಪ್ಪಲೆತ್ನಿಸುವುದು ಸಾಧ್ಯ. ಇದನ್ನೇ ನಮ್ಮ ಹಿಂದಿನ ಕಾಲದ ಮಂತ್ರದ್ರಷ್ಟಾರರೆಲ್ಲ ಸಾಧಿಸಿದರು. 'ನಮ್ಮ ರಸಋಷಿವರರೆಲ್ಲ ಕಲ್ಪನೆಯ ಮೃದು ಗತಿಗೆ ಕುಣಿದ ನರ್ತಕರು; ಎಂದೆಂದಿಗೂ ಇವರೆ ಯುಗಪ್ರವರ್ತಕರು; ಇವರೆ ದರ್ಶನದ ದ್ರಷ್ಟಾರರು; ಹೊಸ ರುಚಿಯ ಕರ್ತಾರರು. ಅದರಿಂದ ಕವಿಯ ಕರ್ಮದಲ್ಲಿ ಕಲ್ಪನೆಗೆ ಅಪೂರ್ವವಾದ ಸ್ಥಾನವಿದೆ. ಇದನ್ನು ಗಮನಿಸಿಯೇ ಕಾವ್ಯಾನಂದರು,

ಕಲ್ಪನೆಯು ಕೂಡಿದರೆ ಮಾತೆ ಜ್ಯೋತಿರ್ಲಿಂಗ;
ಪ್ರತಿಭಾಗ್ನಿಯಿಂ ಸಿಡಿವ ವಿಸ್ಫುಲಿಂಗ
ಪ್ರಣವನಾದದ ಮಧುರ ಮಂಗಲ ತರಂಗ;
..... ಈ ಸೃಷ್ಟಿ ಕಲ್ಪನೆಯ ಕಾರ್ಯರಂಗ[1]

[1] 'ಕರುಣಾ ಶ್ರಾವಣ' ಪು. ೬.

ಕಲ್ಪನೆಯ ಮಹತಿಯನ್ನು ಸಾರಿದ್ದಾರೆ. ಪ್ರತಿಭೆ ಎಂಬ ಅಗ್ನಿಯು ಪ್ರಜ್ವಲಿಸಿ, ವಿಸ್ಫುಲಿಂಗಗಳು ಸಿಡಿಯುವಂಥ ಸ್ಥಿತಿಯು ಒದಗುವುದು. ಕಲ್ಪನೆಯ ವೈಖರಿಯಿಂದಲೇ, ಕವಿಯ ಕಲ್ಪನಾಶಕ್ತಿಯು ಏನನ್ನು ಸಾಧಿಸಲಿಕ್ಕಿಲ್ಲ? ಕಲ್ಪನೆಯ ಹೆಜ್ಜೆಯಲ್ಲಿ ಕಲ್ಪಲತೆ ಹುಟ್ಟುವುದು, ಇದರಿಂದಲೇ ತಂದೆತಾಯಿತನ; ಸ್ನೇಹ ಕರುಣೆಯ ಸತ್ಯದ ಉದ್ಯಾನ; ಸತ್ಯದ ನೆಲದಲ್ಲಿ ಕಲ್ಪನಾವೃಕ್ಷದ ಬೇರುಗಳು ಊರಿರುತ್ತವೆ. ತಿರುಗಿ ಆ ಕಲ್ಪನಾವೃಕ್ಷದಿಂದಲೇ ಮೇಲೆ ಸುಂದರವಾದ ಸತ್ಯದ ಉದ್ಯಾನವೇ ನಿರ್ಮಾಣವಾಗುತ್ತದೆ!—ಎನ್ನುವ ಈ ಕವಿಯ ಮಾತಿನ ಮಥಿತಾರ್ಥವನ್ನು ನಾವು ಭಾವಿಸಬೇಕು. ಕಲ್ಪನೆಯಿಂದ ಸತ್ಯಸ್ಯಸತ್ಯ ಯಾವುದೋ ಅದನ್ನು ಧ್ವನಿಸಬಹುದೆಂದು ಕವಿಯ ಅನುಭವವು ಇಲ್ಲಿ ಸಾರುತ್ತಿದೆ. ಅಂತಲೇ ಅವನ ದೃಷ್ಟಿಯಲ್ಲಿ,

> ಕಲ್ಪನಾಲಾಸ್ಯವಿದು ಸೃಷ್ಟಿಯಧರದ ಹಾಸ;
> ಇದರ ನಿಶ್ವಾಸವೇ ಜೀವನ ವಿಕಾಸ;
> ಇದನುಳಿದ ಜೀವನವು ಜೀವನದ ಅಭ್ಯಾಸ
> ಕಲ್ಪನೆಯ ವರದಾನ ಜೀವಸೃಷ್ಟಿಯ ಗಾನ [1]

ಹೀಗೆ ಈ ಕವಿಯ ಕಲ್ಪಕತೆಯು ಜೀವಸೃಷ್ಟಿಯ ಗಾನವಾಗಿರುವುದರಿಂದಲೇ ಅವರ ಕಾವ್ಯವು 'ಬಾಳಪೂರ್ಣತೆಯ ಹೋರಾಟಕೆ ಅಣಿಯಾಗಿ' ನಿಲ್ಲುವುದು. ಅದಕ್ಕಾಗಿ ಇವರ ಕಾವ್ಯವು ಜೀವನವನ್ನುಳಿದು ದೂರ ಸರಿಯುವದಿಲ್ಲ. ಹಾಡಿದ್ದನ್ನೇ ಹಾಡುವ ಗೊಡವೆಗೆ ಹೋಗುವುದಿಲ್ಲ. ಅಂತಲೇ 'ಕವಿತೆಗೆ' ಕವಿಯು ಆಹ್ವಾನವೀಯುವುದು ಹೀಗೆ—

> ಬಾ, ಬಾಳದೇಗುಲಕೆ ಭಾವನರ್ತಕಿಯಾಗಿ,
> ಹೊಸ ಭಾವ-ದೀಪಗಳ ದಿವ್ಯ ಕಾರ್ತಿಕವಾಗಿ,
> ಮೃಣ್ಮಯಕೆ ಋತ-ಸತ್ಯ-ಪ್ರೇಮ ಮಾತೃಕೆಯಾಗಿ,
> ನೀರಸತೆ ರಸ-ರೂಪ-ರುಚಿಯು ನಾಯಿಕೆಯಾಗಿ,
> ಬಾ ಚಿದಾನಂದ ಕನ್ಯೆ ಮನಕೆ-
> ತಾ ವಸಂತವನು ಹೃದಯಕೆ! [2]

ಇಲ್ಲಿ ಚಿದಾನಂದ ಕನ್ಯೆಯಾದ ಕಾವ್ಯದೇವಿಗೆ ಸಲ್ಲುವ ಗೌರವ ಎಂಥದೆಂಬುದನ್ನು ನಾವು ಭಾವಿಸಿಕೊಳ್ಳಬೇಕು. ಕಾವ್ಯವು ಜೀವನಕ್ಕೆ ಸ್ಫೂರ್ತಿಯನ್ನೀಯಬೇಕು. ಜನಾಂಗಕ್ಕೆ ನವಜೀವನ ರಸವನ್ನು ಎರೆಯಬೇಕು ಎಂಬುದಾಗಿ ಆಧುನಿಕ ವಿಮರ್ಶಕರು ನುಡಿಯುವುದುಂಟು. ಇವರ ಕಾವ್ಯವಂತೂ 'ಮೃಣ್ಮಯಕೆ

---

1 'ಕರುಣಾ ಶ್ರಾವಣ' ಪು. ೫. ೨ ಅದೇ ಸಂಗ್ರಹ, ಪು. ೩.

ಋತ-ಸತ್ಯ-ಪ್ರೇಮ ಮಾತೃಕೆಯಾಗಿ' ನಿಲ್ಲಲು ಮೂಡಿ ಬರುವುದು. ಅಂಥ ಕವಿತೆಗೇನೇ ಕವಿಯ ಹೃದಯದಲ್ಲಿ ಎಡೆಯಿದೆ. 'ಹೊನ್ನಿಯಾ ಹುಳುವಿನಲಿಯ ಕುಡಿನೋಟ'ಕ್ಕೆ ಇಲ್ಲಿ ಆಸ್ಪದವಿಲ್ಲ. ನಿರಂತರವಾಗಿ, ಚಿರಂತನವಾಗಿ ನಿಲ್ಲುವಂಥ ಚಿತ್-ಆನಂದ ಕನ್ಯೆಗೇನೇ ಈ ಕವಿಯ ಹೃದಯವನದಲ್ಲಿ ಸ್ಥಾನವಿದೆ, ಮಾನವಿದೆ.

ಹೀಗೆ ನಿತ್ಯ ನೂತನವಾಗಿ, ಹೊಸ ಬಾಳ ನರ್ತನದ ನೂಪುರ ಧ್ವನಿಯಾಗಿ, ಹೊಸ ಜಗದ ಹೊಸ ಯುಗದ ಚಿಂತನದ ಖಣಿಯಾಗಿ ನಿಲ್ಲುವ ಕಾವ್ಯವನ್ನೇ ಬರೆದೇನೆನ್ನುವ ಹಂಬಲವಿರುವುದೇನೂ ಸಾಮಾನ್ಯ ಸಂಗತಿಯಲ್ಲ. ಇದು 'ಕಲೆಗಾರ'ನಲ್ಲಿರುವ ಕೆಚ್ಚಿನ ನಿದರ್ಶನವಾಗಿದೆ. ಈ ಕೆಚ್ಚು ನೆಚ್ಚನ್ನು ಕೂಡಿಕೊಂಡಿರಬೇಕಾದರೆ ಕವಿ ಹೃದಯದ ಶಿವ ಶಕ್ತಿಯು ಸದಾ ಜಾಗೃತವಾಗಿರಬೇಕಾಗುತ್ತದೆ. ಅದಕ್ಕೆ ಸೃಷ್ಟಿಕರ್ತನ ಸಾಮರ್ಥ್ಯದ ಹೊಲಬಿನ ಅರಿವುಂಟಾಗಬೇಕು. ಆಗ ಕಲೆಗಾರನ ದೃಷ್ಟಿಯಲ್ಲಿ ಈ ವಿಶ್ವವೇ ಒಂದು ಶಿವ ಸ್ವರೂಪವನ್ನು ಹೊಂದಿ ನಿಲ್ಲುವುದು. ಅಲ್ಲಿ ಕಲೆಗಾರ ಬೇರೆಯಲ್ಲ, ಶಿವ ಬೇರೆಯಲ್ಲ! 'ಓಂಕಾರದ ಝೇಂಕಾರಕ್ಕೆ ಕುಣಿವನು ಕಲೆಗಾರ!' ಯೋಗವೇ ಅವನ ಡಮರುಗ, ಸಾಗರಗಳ ರಾಗಗಳೇ ಸಂಗೀತ, ಇನ-ಶಶಿಗಳೇ ಅವನ ಕೈತಾಳಗಳು. ಇಂಥ ದಿವ್ಯನರ್ತನವನ್ನು ಮಾಡುವ ಕಲೆಗಾರನು ಈ ಪ್ರಾಣದೇವನಿಗಾಗಿ ದೇಹದ ದಿವ್ಯದೇಗುಲವನ್ನು ದಿನ ದಿನವೂ ಕಟ್ಟುವ ಕುಶಲಮತಿಯಾಗಿದ್ದರೆ ಅಚ್ಚರಿಪಡುವ ಕಾರಣವಿಲ್ಲ. ಇಲ್ಲಿ ಕವಿಯ ದೃಷ್ಟಿಯಲ್ಲಿ ಕಲೆಗಾರನ ಮಹತಿಯೆಷ್ಟು! ಮಹಿಮೆ ಎಂಥದು! ಅವನು ಬರೆಯುವ ಕಾವ್ಯವಾದರೂ ಏನು, ಎಂಥದು ನೋಡುವ:

"ನೆಲವ ಕಾಗದ ಮಾಡಿ, ಜಲವ ಮಸಿಯನು ಮಾಡಿ,
ಸುಳಿದು ಬೀಸುವ ಗಾಳಿಯನೆ ಭಾವ ಮಾಡಿ,
ನೆಲವನಪ್ಪಿಹ ಮುಗಿಲ ನಾದಲೀಲೆಯ ಮಾಡಿ,
ಹೊಳೆವ ಬೆಂಕಿಯಲಲಂಕಾರಗಳ ಮಾಡಿ,
ಕೊಲುವ ಬಿದಿ ಯತಿ ಕಾಲತಾಲಗಳ ಮಾಡಿ-
ಸಲೆ ಸೃಷ್ಟಿ ಕಾವ್ಯವನು ಬರೆಯುತಿಹ ಕಲೆಗಾರ! [1]

ಇಲ್ಲಿ ಕವಿಯ ದೃಷ್ಟಿಯಲ್ಲಿ ಸೃಷ್ಟಿ ಬೇರೆಯಲ್ಲ; ಕಾವ್ಯ ಬೇರೆಯಲ್ಲ. ಸೃಷ್ಟಿಕರ್ತ ಬೇರೆಯಲ್ಲ; ಕಲೆಗಾರ ಬೇರೆಯಲ್ಲ. ಕವಿಯ ಎಂಥ ಕೆಚ್ಚಿದು. ಆತ್ಮವಿಶ್ವಾಸದ ಅದೆಂಥ ಪ್ರತೀಕವಿದು. ತನ್ನಲ್ಲಿರುವ ಶಿವ ಶಕ್ತಿಯ ಮೇಲಿರುವ ಅಚಲ ವಿಶ್ವಾಸದ ಉಸಿರಿದು! ಇಂಥ ಉಸಿರಿನ ಗಾಳಿಯಿಂದಲೇ ಇಂದಿನ ಕನ್ನಡ ನಾಡವರಲ್ಲಿ ನವ ಸ್ಫೂರ್ತಿಯು ಹೊಮ್ಮಬೇಕು; ನವ ಉತ್ಸಾಹವು ಚಿಮ್ಮಬೇಕು. ನಾಡಿನ ಹೃದಯದ ಮಿಡಿತ ಒಂದಾಗಬೇಕು. ಈ ಕವಿದೃಷ್ಟಿಯಲ್ಲಿ ಅಂಥ ಭಾವಸೃಷ್ಟಿಗೆ ಕಾವ್ಯ ಶಕ್ತಿಯು ಪ್ರೇರಕವಾಗಿದೆ, ಪ್ರಚೋದಕವಾಗಿದೆ.

---

1 'ಕರುಣಾ ಶ್ರಾವಣ' ಪು. ೧೭.

೩

ನಿಜವಾದ ಮಹಾಕವಿಯೊಬ್ಬನ ಜನನವಾಗುವುದು ಲೋಕದ ಭಾಗ್ಯದಿಂದ, ನುಡಿಯ ಪುಣ್ಯದಿಂದ. ಕವಿತ್ವಶಕ್ತಿಯೆಂಬುದು ಕೇವಲ ಇಹಜನ್ಮದ ಸಾಧನೆಯ ಫಲದಿಂದ ಲಭಿಸುವಂಥದಲ್ಲ. ಅದನ್ನು ಹಿಂದಿನ ಹಲವು ಜನ್ಮಗಳ ತಪಸ್ಸಿನ ಫಲವಾಗಿ ಪಡೆದು ಬಂದಿರಬೇಕಾಗುವುದು. ಆ ಭಾಗ್ಯವನ್ನು ಪಡೆದ ವ್ಯಕ್ತಿಯೂ ಕೂಡ ಯೋಗ್ಯ ಪರಿಸರವು ಒದಗದೆ ಹೋದರೆ ಹುಟ್ಟಿದ ತಪ್ಪಿಗಾಗಿ ಬಾಳಿ ಮುಂದಿನ ಭವಕ್ಕೆ ಆ ಪುಣ್ಯವನ್ನು ಪಡೆಯಲು ಸಾಗಬೇಕಾದೀತು. ಸಮಾಲೋಚಕನ ಇಂಥ ಮಾತುಗಳಿಂದ ಕವಿಗಳಾಗಬೇಕೆಂಬ ಹಲವರು ನಿರಾಶೆಯನ್ನು ಹೊಂದಬಹುದೇನೊ? ಆದರೆ ಆತ್ಮ ಸಂಸ್ಕಾರವೆಂಬುದೊಂದಿದೆ ಎನ್ನುವ ಯಾರೂ ಈ ಮಾತನ್ನು ಅಲ್ಲಗಳೆಯರು. ಅಲ್ಲದೆ ವಾಲ್ಮೀಕಿ, ವ್ಯಾಸ, ಕಾಲಿದಾಸ, ಷೇಕ್ಸ್‌ಪಿಯರ್ ಮತ್ತು ಟಾಗೋರರಂಥ ಕೆಲವರನ್ನು ನಾವು ಜಗತ್ತಿನಲ್ಲಿ ವಿಶ್ವಕವಿಗಳ ಸಾಲಿನಲ್ಲಿ ಕಾಣುತ್ತೇವೆಯೇ ಹೊರತಾಗಿ ಬಹುಜನರನ್ನಲ್ಲ. ಆದರೂ ಮಹಾಕವಿತ್ವವೆಂಬುದು ಒಬ್ಬ ಕವಿಯ ಸಕಲ ಕೃತಿಗಳಲ್ಲೆಲ್ಲ ವ್ಯಕ್ತವಾಗಿ ನಿಂತೀತೆಂದೂ ಹೇಳಲಾಗುವದಿಲ್ಲ. ಕೆಲವರ ಕೃತಿಗಳಲ್ಲಿ, ಅಲ್ಲಲ್ಲಿ ಮಿಂಚಿ ಹೋಗಿರುವ ಸಂಭವವೂ ಇದೆ. ಆಯಾ ಕವಿಗಳ ಆತ್ಮವಿಕಾಸ, ಸಂಸ್ಕಾರಬಲ, ತಪಸ್ಸಿದ್ಧಿಗಳಿಂದ ಆ ಮಿಂಚಿನ ಪ್ರಕಾಶ, ದೀರ್ಘತ್ವಗಳು ರೂಪುಗೊಳ್ಳುತ್ತವೆ. ಅದರಿಂದ ಜಗತ್ತಿನಲ್ಲಿ ಅನೇಕ ಜನ ಹಿರಿ-ಕಿರಿ ಕವಿಗಳನ್ನು ನಾವು ಕಾಣಲು ಸಾಧ್ಯವಿದೆ.

ಏನಿದ್ದರೂ ನಿಜವಾದ ಕವಿಯ ವ್ಯಕ್ತಿತ್ವವೆಂಬುದು ಜನಸಾಮಾನ್ಯರಂತೆ ಇರುವುದಿಲ್ಲ. ಅವನು ಜನಸಾಮಾನ್ಯರಲ್ಲಿ ಬಾಳಿ, ಎಲ್ಲರಂತೆ ಒಬ್ಬನಾಗಿ ನಮಗೆ ಕಾಣುತ್ತಿದ್ದರೂ ಅವನ ಆಂತರಿಕ ಜೀವನವೆಂಬುದು ಬೇರೆಯಾಗಿರುತ್ತದೆ. ಅವನು ಓದುವ 'ಬಾಳ ಹೊತ್ತಿಗೆ'ಯೇ ಬೇರೆ. ಅದರ ಪ್ರತಿಯೊಂದು ಪುಟವು ಅವನ ಸಫಲ ಜೀವನದಿಂದ ರೂಪುಗೊಂಡುದಾಗಿರುತ್ತದೆ. ಸರಿಯಾದ ಜೀವನಸಾಫಲ್ಯವನ್ನು ಪಡೆದವನೇ ಸಾರ್ಥಕ ಸಾಹಿತ್ಯವನ್ನು ಸೃಜಿಸಲು ಶಕ್ತನಾಗಿರುತ್ತಾನೆ. ಅವನು ತನ್ನ ಜೀವನದ ಹೊತ್ತಿಗೆಯ ಯಾವ ಪುಟವನ್ನೂ 'ಬರಿ ಹಾಳೆಗಳನುಳಿಸಿ ಪಾಳ್ಗೈಯ'ನು. ಅದರಲ್ಲಿ ಅಳಲ ಹಾಡಿದ್ದೀತು, ಯೌವನದ ಚಂಚಲ ಮಿಂಚಿದ್ದೀತು, ಸೋಲಿನ ಶೂಲವಿದ್ದೀತು. ಅವನ ಲೆಕ್ಕಣಿಕೆ ಒಮ್ಮೆ ಅಮೃತದಲ್ಲಿ ಅದ್ದಿ ಬರೆದದ್ದಾದರೆ ಇನ್ನೊಮ್ಮೆ ವಿಷದಲ್ಲಿ ಮುಳುಗಿದ್ದೀತು. ಏನಿದ್ದರೇನು? 'ಬಾಳ ಹೊತ್ತಿಗೆ'ಯದು!

ಬಾಳ ಹೊತ್ತಿಗೆಯಲ್ಲಿ ಬರಿಯ ಗೆಲವಿನ ಗಲಗೆ
ಬರೆಯಬೇಕೆಂದಾರು ಕಟ್ಟು ಹಾಕಿಲ್ಲ:
ಆಸೆಯಾಗಸಬುಟ್ಟ ಒಡೆದಿಳೆಗೆ ಇಳಿವುದನು
ಬಣ್ಣಿಸಲು ಅದರಲ್ಲಿ ತಾಣವೇಕಿಲ್ಲ? [1]

---

[1] 'ಕರುಣಾ ಶ್ರಾವಣ' ಪುಟ ೩.

ಅದರಲ್ಲಿ ಎಲ್ಲದಕ್ಕೂ ಸ್ಥಾನವಿದೆ. ಆದರೆ ಅದು ಸಾಹಿತ್ಯವಾಗಿ ಬರಬೇಕು. ಓದುವವರ ಆಸೆ, ಆಕಾಂಕ್ಷೆಗಳನ್ನು ನೋಡಿ ಬರೆಯುವುದು ಕವಿಯ ಲಕ್ಷಣವಲ್ಲ. ಓದುವವರನ್ನು ಒಲಿಸುವುದಕ್ಕಾಗಿ ಗುರಿಯನ್ನು ಬಿಡುವವನು ಕವಿಯೇ ಅಲ್ಲ. ಓದುಗರೇ ಕವಿಯ ಎತ್ತರಕ್ಕೆ ಬೇಕಾದರೆ ಬರಲಿ, ಸಾಕಾದರೆ ಬಿಡಲಿ. 'ಮುಡಿವವರ ಮುಖನೋಡಿ ಅರಳವು ಪುಷ್ಪಗಳು?' ಅದಕ್ಕಾಗಿ ನಿನ್ನ ಕಾವ್ಯಕ್ಕೆ ಧಿಕ್ಕಾರವೇ ಸಿಗಲಿ ಸತ್ಕಾರವೇ ಸಿಗಲಿ ನೀನು ಮಾತ್ರ ನಿನ್ನ ಸ್ವಭಾವಕ್ಕನುಸರಿಸಿ ಬರೆ! ಬರೆಯದೆ ನಿಲ್ಲದಿರು! ಎಷ್ಟಾದರೂ ನೀನೊಬ್ಬ ಪಥಿಕನಷ್ಟೆ.

ಪಥಿಕನ ಗುರಿಯೇನು? ತನ್ನ ದಾರಿಯಿಂದ ತಾನು ಮುಂದೆ ಮುಂದೆ ಸಾಗುವುದು. ಎಷ್ಟು ದೂರ ಬಂದೆ, ಮುಂದೆ ದಾರಿ ಇನ್ನೂ ಎಷ್ಟುದೂರ? ಎನ್ನುವ ವಿಚಾರ ನಡೆವವನಿಗೇಕೆ? ತಾನು ಸಾಗುವ ದಾರಿ ಒಳ್ಳೆಯದಿದ್ದರಾಯಿತು. 'ಬಾಳ ಬಟ್ಟೆಗಳೆನಿತೊ' ಇವೆ. ಅದಕ್ಕೆ ಹಲವು ಕವಲುಗಳು. ಮಂಕು ಕವಿಸುವ ತಾಣಗಳು ಅನೇಕ. ವೇದ, ವಾದ, ವಿಜ್ಞಾನ, ಪ್ರಜ್ಞಾನ, ಧರ್ಮ, ದರ್ಶನ ಹೀಗೆ ಒಂದೋ ಎರಡೋ 'ಎನಿತು ಪಥಗಳು ಒಬ್ಬ ಪಥಿಕನೆದುರಿಗೆ ಅಬ್ಬ!' ಒಂದೊಂದು ಪಥದಲ್ಲಿ 'ಎನಿಬರೋ ಹೋಗಿಹರು, ಎನಿಬರೋ ಹೊರಟಿಹರು, ಎನಿಬರೋ ಹೊರಟಾರು ಇನ್ನು ಮುಂದೆ.' ಅದರಿಂದ ಯಾರನ್ನು ಕಂಡು ನೀನು ದಾರಿಯನ್ನು ಹಿಡಿಯ ಬಲ್ಲಿ? ಗೊಂದಲಮಯ ಸಂಸಾರವಿದು. ಇದರಲ್ಲಿ ನಿನಗೆ ನೀನೇ ಬೆಳಕು. ಆ ಬೆಳಕನ್ನೇ ನಂಬಿ ನಿನ್ನ 'ಮೈತಡೆವತನಕ, ಒಳಗಿರುವ ಚೈತನ್ಯ ಕೈ ಹಿಡಿವತನಕ' ಮುಂದೆ ನಡೆ. ಎಷ್ಟಾದರೂ ನೀನು ಪಥಿಕ, ಯಾತ್ರೆಗೆ ಹೊರಟ ಯಾತ್ರಿಕ.

ಈ ಜನ್ಮದಲಿ ಪಯಣ ಮುಗಿಯದಿದ್ದರು ಮತ್ತೆ
ಹೊಸ ಜನ್ಮ ಸಿಕ್ಕಾವು ಓ ಯಾತ್ರಿಕ!
ಪಯಣ ಪೂರಣಕಾಗಿ ನೀನೆ ದಾರಿಗನಾಗಿ
ಮತ್ತೆ ಬರದಿದ್ದರೂ ಬೇರೆ ಪಥಿಕ
ನೀಮುಟ್ಟಿದೆಡೆಯಿಂದ ಮುಂದೆ ಸಾಗಲು ಬಹುದು
ಸರಿದೋರೆ ಈ ದಾರಿ ಓ ಯಾತ್ರಿಕ!
ಪಯಣ ಮುಗಿಯಲಿ ಮುಗಿಯದಿರಲಿ ಮತ್ತೊಬ್ಬರು
ಮುಂದುವರಿಸಲಿ ಪಯಣ, ಬಿಡಲಿ, ಪಥಿಕ
ನೀನು ನಡೆದಷ್ಟರೊಳೆ ನಿನ್ನ ಸಫಲತೆ ಮುಕ್ತಿ
ಬಿಡಬೇಡ ಯಾತ್ರೆಯನು ಓ ಯಾತ್ರಿಕ![1]

ಎಂಥ ಮುತ್ತಿನಂಥ ಮಾತುಗಳಿವು! ಇದಕ್ಕಿಂತ ಹೆಚ್ಚಿನ ಜೀವನ ತತ್ವಜ್ಞಾನ ಬೇರಿನ್ನೇನು? ಸಂಸಾರಿಯಾಗಿಯೂ ಮುಮುಕ್ಷುವಾಗಿರುವ ಕವಿಯ ಅನುಭಾವ

---

1 'ಕರುಣಾ ಶ್ರಾವಣ' ಪುಟ ೯೨.

ವಾಣಿಯಿದು. 'ಜನುಮ ಜನುಮದ ಜಾತ್ರೆ'ಯಲ್ಲಿ ಪಥಿಕನಾಗಿ ಸಾಗಿ, ಸಂಪಾದಿಸುತ್ತ ಬಂದ ಅನುಭವದ ಅಮೃತ ಬಿಂದುಗಳಿವು.

ಜೀವನವು ಹೀಗೆ ನಿಗೂಢವಾಗಿರುವಾಗ ಎಂಥ ಮೇಧಾವಿಯಾಗಿದ್ದರೂ 'ವಿಶ್ವರಂಗದಲ್ಲಿ ನರನ ಪಾತ್ರವು ಅತಿ ಅತಂತ್ರವು'. ಅವನು ತನ್ನ ದೈವ ಒಯ್ದತ್ತ ಪ್ರವಾಹ ಪತಿತನಾಗಿ ಸಾಗುವನು. ಆದರೂ ಸಮ್ಯಗ್ ದೃಷ್ಟಿಯುಳ್ಳ ಜೀವಿಯಾಗಿದ್ದರೆ ಚಿತ್ರವಿಚಿತ್ರ ಸಂಸಾರದಲ್ಲಿಯೂ ತ್ಯಾಗದಲ್ಲಿ ಸುಖವಿದೆಯೆಂದು ನಂಬಿ 'ಅತಿ ಸ್ವತಂತ್ರ'ತೆಯನ್ನಾದರೂ ಪಡೆದು ಬಾಳನ್ನು ಕಟ್ಟುವನು. ಅದಕ್ಕೆ ಸಮ್ಯಕ್ತ್ವಬೇಕು, ಶರಣಭಾವಬೇಕು.

ನೀನಿರದ ಬದುಕೆ ಬಂಧ, ನೀನೆ ಬಾಳಿನ ಅಂದ.
ನಿನ್ನ ಸವಿಯನು ಕಾಂಬೆ ನೀ ಬಿಟ್ಟ ತೆನೆಯಲ್ಲಿ!
ನೀ ಸತತ ಪೀಡಿಸಲು ನನಗದುವೆ ಬಾಳ ಬಲ.
ನಿನ್ನ ಕೊಂಡಿಯೇ ನನ್ನ ಲೇಖನಿಯ ಮೊನೆಯು[1]; —

ಈ ಭಾವವು ಮೂಡಬೇಕಾದರೆ ಕವಿಯಲ್ಲಿ ಒಂದು ತರಹ ಸತತ ಸಂವೇದನೆಯು ವ್ಯಾಪಿಸಿರಬೇಕಾಗುವುದು. ಅದೊಂದು 'ಸವಿನೋವು' ಸಾಂತದಿಂದ ಜಾರಿ ಅನಂತತೆಯನ್ನು ಪಡೆಯುವ ಬಯಕೆ. ಅದು ಕೇವಲ ಬಯಕೆ ಮಾತ್ರವಲ್ಲ, ನಿಧಿಧ್ಯಾಸ, 'ಮನಕಂಟಿದ ಪೂರ್ಣತೆಯ ಪಿಪಾಸೆ. ಎಂದಿಗಾದರೂ ಒಮ್ಮೆ ಅದನು ಪಡೆದೇನೆನ್ನುವ ಆಸೆ.' ಕವಿಗೆ ಪೂರ್ಣತೆಯನ್ನು ಪಡೆಯಬೇಕೆಂದಿರುವ ಚಿಂತೆಯೂ ಕೂಡ ಒಂದು ವರವೇ! ಸಾಧಕನಿಗೆ ಅದೂ ಜೊತೆಗಾರ. ಚಿಂತೆಯೆಂಬ ಜೊತೆಗಾರನಾದರೂ ಪೂರ್ಣತೆಯನ್ನು ಪಡೆಯುವತನಕ ಹತ್ತಿರ ಇರುವೆನೆಂದು ಭಾಷೆಯನ್ನು ಕೊಟ್ಟರೂ ಸಾಕು. ಚಿಂತೆಯೊಂದು ಕರಗಸವಿದ್ದಂತೆ; ಅದು ಹೋಗುವಾಗಲೂ ಕೊರೆಯುವುದು, ಬರುವಾಗಲೂ ಕೊರೆಯುವುದು. ತನ್ನ ಅಪೂರ್ಣತೆಯ ಅರಿವಿನ ಅಂಥ ಕೊರಿತ ಇರಲಿ ಎನ್ನುವ ಕವಿಯ ಪೂರ್ಣತೆಯ ಹಂಬಲ ಎಂಥದು! ಅದರ ಆಳ ಅಗಲಗಳು ಎಷ್ಟು!

ಇಂಥ ಹಂಬಲ ಇರುವುದರಿಂದಲೇ, ಅದು ಜಾಗೃತ, ಸ್ವಪ್ನ, ಸುಷುಪ್ತಿ ಈ ಅವಸ್ಥಾತ್ರಯದಲ್ಲಿಯೂ ಕವಿಯ ಮನಸ್ಸಿನ ಒಳಗಿನ 'ಒಳಗಿನಸ್ತರದಲ್ಲಿ ನೆಲೆಗೊಂಡಿರುವುದರಿಂದಲೇ—ಅವನ 'ಕಂಡೊಲಿವ ಕಣ್ಮನಕೆ'[2] ಶೃಂಗಾರ ಸೌಂದರ್ಯ, ಆನಂದಗಳು ಸೃಷ್ಟಿಯಲ್ಲಿ ಎಲ್ಲೆಲ್ಲಿಯೂ ಕಾಣುವವು. ತಂಗಾಳಿಯ ಸುಳಿಯಿರಲಿ, ತಿಂಗಳಿನ ಕಳೆಯಿರಲಿ, ಹೊಂದಾವರೆ ಇರಲಿ, ಸಂಧ್ಯಾರಾಗವಿರಲಿ, ಅರಗಿಳಿಯ ಸಾಲಿರಲಿ, ಮಳೆಬಿಲ್ಲು—ಮಿಂಚುಗಳಿರಲಿ ಯಾವುದರಲ್ಲಿಯೂ ಚೆಲುವು ಕಾಣುವುದು,

---

[1] 'ಕರುಣಾ ಶ್ರಾವಣ' ಪು. ೧೯.

[2] 'ಕರುಣಾ ಶ್ರಾವಣ' ಪು. ೫೦.

ಆನಂದವನ್ನು ಕವಿಮನಕ್ಕೆ ಈಯುವುದು. ಸೃಷ್ಟಿಯ ಈ ವಸ್ತುಗಳು—ತಂಗಾಳಿ ಮೊದಲುಗೊಂಡು ಮಿಂಚಿನವರೆಗೆ—ಎಷ್ಟು ಅಸ್ಥಿರ! ಏನು ಕ್ಷಣ ಭಂಗುರತೆ! ಆದರೆ ಅವುಗಳಲ್ಲಿ ಅಡಗಿರುವ ಶಿವತ್ವವನ್ನು ಕವಿಯ ದರ್ಶನವು ಗುರುತಿಸಿದೆ:— 'ಸರ್ವವೂ ಶಿವವಿಲ್ಲಿ ಸರ್ವವೂ ಶಿವವಲ್ಲಿ, ಅರಿದೊಲಿವ ಹೃದಯಕ್ಕೆ ಈ ಧಾತ್ರಿಯಲ್ಲಿ'. ಇದೇ ತಿಳಿವು, ಒಲವುಗಳಿಂದ ಕವಿಹೃದಯ ತುಂಬಿ ತುಳುಕುತ್ತಿದೆಯೆಂಬುದಕ್ಕೆ ಸಾಕ್ಷಿ.

೪

ಕಾವ್ಯಾನಂದರು ಒಂದೆಡೆಗೆ ಕವಿಗೆ ಹೀಗೆ ಆಹ್ವಾನವಿತ್ತಿದ್ದಾರೆ.—"ಕವಿಯೆ ಮನಮುಟ್ಟಿ ಚಿಂತಿಸಿ ಚಿತ್ರಿಸಬೇಕೆನ್ನುವೆ–ನಿನ್ನ ಮನ ಶುದ್ಧವಿದೆಯೆ? ಕೈಮುಟ್ಟಿ, ಬರೆಯಬೇಕೆನ್ನುವೆ—ನಿನ್ನ ಕೈ ಶುದ್ಧವಿದೆಯೆ? ಭಾವಗೀತೆ ಹಾಡಬೇಕೆನ್ನುವೆ—ನಿನ್ನ ಭಾವ ಶುದ್ಧವಿದೆಯೆ? ಪಂಚಶುದ್ಧಿಗಳ ಸಿದ್ಧಿಯಾಗಿದೆಯೆ ನಿನಗೆ? 'ವಿಶ್ವಾನಿದೇವ ಸವಿತರ್ ದುರಿತಾ ನಿರಾಸುವ| ಯದ್ ಭದ್ರಂ ತನ್ನ ಆಸುವ||' ಎಂಬ ಪ್ರಾರ್ಥನೆ ನಿನ್ನ ನಿತ್ಯ ಜೀವನದ ಉಸಿರಾಗಿದೆಯೆ? ಇಲ್ಲದಿದ್ದರೆ ನಿನ್ನ ಮತಿದರ್ಪಣದಲ್ಲಿ ವಿಶ್ವವೇ ಹೇಗೆ ಪ್ರತಿಫಲಿಸುವುದು? ಅನುಕಂಪ, ಅನುಭೂತಿ ಉಗಮಿಸುವುದು ಹೇಗೆ? ರಸಸಾಕ್ಷಾತ್ಕಾರವಾಗುವುದು ಹೇಗೆ? ಪ್ರಸಾದ, ಸಮತೆ, ಮಾಧುರ್ಯ, ಸುಕುಮಾರತೆ, ಅರ್ಥವ್ಯಕ್ತಿ, ಉದಾರತ್ವ, ಓಜಸ್ಸು, ಕಾಂತಿ, ಸಮಾಧಿಗಳು ಅಳವಡುವುದು ಹೇಗೆ? ದಿಟವಾಗಿ ಹೃದಯವು ಶಿವಮಯವಾಗಿ ಸ್ಫುಟವಾಗಿ ಎಲ್ಲೆಲ್ಲೂ ಶಿವಮಯವಾಗಿಯೇ ಬೆಳಗುವುದು ಹೇಗೆ?[1] ಇದು ಕವಿಗಳಿಗೆ ನಿಜವಾಗಿಯೂ ಒಂದು ಒರೆಗಲ್ಲು. ನಿಜವಾದ ಕಾವ್ಯದ ಜನನವಾಗಬೇಕಾದರೆ ಕವಿ ಹೃದಯವು ಶಿವಮಯವಾಗಬೇಕು. ಅದಕ್ಕೆ ಮೊದಲು ಮನ, ಬುದ್ಧಿ, ಭಾವಗಳೆಲ್ಲ ಪರಿಶುದ್ಧವಾಗಿರಬೇಕು. ಅದನ್ನು ಗಮನಿಸಿಯೇ ಕವಿಯು 'ಬಿಂದು-ಸಿಂಧು'ವಿನಲ್ಲಿ

ಕ್ಷಣಕಾಲ ಬದುಕಿದರು ತಿಳಿ–ಬಾಳು ಬಾಳುವೆನು
ನನ್ನ ಪಾವಿತ್ರ್ಯವೇ ನನ್ನ ಬಾಳಸಿದ್ಧಿ ![2]

ಎಂದು ಘಂಟಾಘೋಷವಾಗಿ ಸಾರುವನು. ಅವನು ವ್ಯಕ್ತಿತ್ವಹೀನವಾದ ಬೃಹದ್ ರೂಪ, ನಿತ್ಯತ್ವ, ಚಿರಜೀವನ, ಅಮರತ್ವಗಳೇನಿದ್ದರೂ ಅವು ತನಗೆ ಬೇಡವೆನ್ನುವನು. ಆದರೆ ಈ ವ್ಯಕ್ತಿಜೀವನ ಪ್ರಿಯತೆ, ವ್ಯಕ್ತಿತ್ವ ನಿಷ್ಠೆಗಳೆಂದರೆ ಸುತ್ತಲಿನ ಜಗತ್ತಿನಿಂದ ಸಿಡಿದು ನಿಲ್ಲುವುದೆಂದಲ್ಲ. ಸಮಷ್ಟಿಯ ಸಮರಸತೆಯನ್ನು ಸಾನಂದದಿಂದಲೇ ಕವಿಯು ಸ್ವೀಕರಿಸುವನು. ಅವನಿಗೆ ವಿಶ್ವದ ಆದಿರೂಪದ ಲೀಲೆಯು 'ಒಂದೊಡೆದು

[1] ಬೀದರ್ ಕನ್ನಡ ಸಾಹಿತ್ಯ ಸಮ್ಮೇಲನದ ಕವಿಗೋಷ್ಠಿಯ ಅಧ್ಯಕ್ಷ ಭಾಷಣದಿಂದ.

[2] 'ಜಲಪಾತ' ಪುಟ ೩೨.

ಹಲವಾಗಿ ಹಲವು ಮತ್ತೊಂದಾಗಿ ' ಸಾಗಿಹುದೆಂಬುದರ ಅರಿವು ಇದೆ. ಅದರಿಂದ ಕವಿಯು ' ಆತ್ಮನಿಗೆ ಆಹ್ವಾನ 'ವೀಯುತ್ತ,

ಓ ಉತ್ತಮೋತ್ತಮ!
ಒಳಗಿನ ಪುರುಷೋತ್ತಮ!
ಪ್ರಖರವಾಗಿ ಪ್ರಕಟವಾಗು
ನರನ ಮತಿಯ ನರೋತ್ತಮ,
ಓ ಅಂತರಾತುಮ ![1]

ಎಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತಾನೆ. ಅವನಿಗೆ ಈ ಜನನ-ಮರಣ ಜಾಲದಲ್ಲಿ ಸಿಕ್ಕಿ ಸುತ್ತಿ ಸುತ್ತಿ ಸಾಕಾಗಿದೆ. ಅದಕ್ಕಾಗಿ

ಏಸು ಸಲ ಬರಿದೆ ಸತ್ತು
ಹುಟ್ಟಿ ಮತ್ತೆ ಸಾಯಲಿ ?
ಹಿಂದೆ ನೊಂದ ನೋವಿನಲ್ಲೆ
ಇಂದು ಮತ್ತೆ ನೋಯಲಿ ? [1]

ಎಂದು ಕೇಳಿಕೊಳ್ಳುವನು. ಆದರೆ ಇದು ಜೀವನದ ಹೋರಾಟಕ್ಕೆ ಬೇಸತ್ತು, ಸಂಸಾರ ವಿಮುಖನಾಗಿ ಎಲ್ಲಿಯಾದರೂ ಓಡಿಹೋಗುವ ಹೊಣೆಗೇಡಿಯ ಕ್ಷಣಿಕ ಅನಿಸಿಕೆಯಲ್ಲ. ತನ್ನಲ್ಲಿಯ ನರತ್ವದ ಅಂತರಾಳದಲ್ಲಿ ಅಡಗಿರುವ ಬೆಳಕಿನ ಕಿಡಿಯಾಗಿರುವ-ಅಂತುರಾತುಮನನ್ನು ನರೋತ್ತಮತ್ವವನ್ನು ಆರಾಧಿಸುವ ಬಗೆಯಾಗಿದೆ. ಅದರಿಂದ ಈ ಸಾಧಕನಿಗೆ ಆತ್ಮ ಹೆಚ್ಚು, ದೇಹ ಹೀನ ಎಂಬ ಭಾವನೆಯೂ ಇಲ್ಲ. ಅದಕ್ಕಾಗಿ ಅವನು ' ಚಿನ್ನಬಣ್ಣಗಳ ನಡುವೆ ಭಿನ್ನತ್ವ ಸಾಧ್ಯವೆ? ಏಕೆ ಜಗಳಾಡುವಿರಿ ಆತ್ಮ-ದೇಹಗಳೆ? ' ಎಂದು ಕೇಳುವನು. ಅಧ್ಯಾತ್ಮದಲ್ಲಿ ಇದು ಜಡ, ಅದು ಚೇತನ ಎನ್ನುವುದೆಲ್ಲ ಬರಿ ಭ್ರಮೆಯಾಗಿದೆ. ಅವು ಕೂಡ ಆದಿಬೀಜದ ಬೇಳೆಗಳಿದ್ದಂತೆ. ಅಂತಲೇ ಅವೂ ಸಹ ಕವಿಗೆ

' ನೀವು ಸಹ ಆ ದಿವ್ಯ ಯೋಜನೆಯ ಅಂಶಗಳು
ನಿಮಗೆಲ್ಲಿ ಭಿನ್ನತ್ವ ಬೇರೆ ಅಸ್ತಿತ್ವ ' [2]

ಎನ್ನುವ ಹಾಗೆ ದಿವ್ಯಶಕ್ತಿಯ ಕೈಗೊಂಬೆಗಳೆಂದು ನಂಬುಗೆಯಿದೆ. ಅಚಲ ಶ್ರದ್ಧೆಯಿದೆ. ಅದರಿಂದ ಆತ್ಮನಿಗೆ ದೇಹವೊಂದು ಬೇಡಿಪಂಜರವಲ್ಲ, ಜಡದ ಜಂಜಡವಲ್ಲ, ಬಾಡಿಗೆಯ ಮನೆಯಲ್ಲ. ಅದು ಆತ್ಮನ ದಿವ್ಯ ಪಯಣಕ್ಕೆ ಸಾಧನವಾಗಿರುವ ನೌಕೆ. ಅದು ಮುಳುಗುವಂಥದು. ಕಾಲನ ಬಂಡೆಗೆ ಅಪ್ಪಳಿಸಿ

---

1 ' ಕರುಣಾ ಶ್ರಾವಣ ' ಪು. ೨೦-೨೧.

2 ' ಜಲಪಾತ ' ಪು. ೪೧.

ಒಡೆಯುವಂಥದು. ಝುಂಝಾವಾತಕ್ಕೆ ತಳವನ್ನು ಕಾಣುವಂಥದು. ಆದರೂ ಈ ಆತ್ಮನಿಗೆ ನೂರು ಜನ್ಮದಲ್ಲಿ ನೂರು ಸಲ, ನೂರುನೌಕೆಯಾಗಿ ಬಂದುದಾಗಿದೆ. ಅದಕ್ಕೆ ಹೆಚ್ಚಿನ ಹಂಬಲವೇಕೆ? ತೆರೆಯನ್ನು ತುಳಿಯುತ್ತ ತುಳಿಯುತ್ತ ಮುಂದರಿಯುವುದೊಂದೇ ಕರ್ಮ. ಕೊನೆಯನ್ನು ಮುಟ್ಟೇತೀರುವೆನೆಂಬ ಹಟವಾದರೂ ಏಕೆ ಬೇಕು? ಅದಕ್ಕೆ ತನ್ನ ಕಾರ್ಯವೆಸಗುವುದರಲ್ಲಿಯೇ ಸಮಾಧಾನ. ಅದೇ ಜೀವನ ನಿಷ್ಠೆ:—

ಮುಂದೆ ನಡೆದರೆ ದಿವ್ಯ ಪಯಣವು
ಮುಳುಗೆ ಸಲಿಲ ಸಮಾಧಿಯು!
ನಡೆಯದಿದ್ದರೆ ಮಡಿಯದಿರುವೆಯ?
ನಡೆವುದೊಂದೇ ಹಾದಿಯು! [1]

ಇಂಥ ನಿಷ್ಠೆಯೇ ಮಾನವನನ್ನು ಮಹಾಮಾನವತೆಗೆ ಎತ್ತುವ ಶಕ್ತಿ. ಈ ಶಕ್ತಿಯ ಅಂಶವಿದ್ದವರಿಗೆ ಈ ದಿವ್ಯ ಜಗತ್ತಿನ ಮೇರೆಯೂ ಕೂಡ 'ದೂರವಿಲ್ಲ' ಎಂದೆನಿಸುವುದು. ಸಂಸಾರದ ಏರುಪೇರುಗಳು, ಸುಖ-ದುಃಖಗಳು ಕ್ಷಣಿಕ. ಹಗಲು ಇರುಳುಗಳಿದ್ದಂತೆ; ನೆರಳು ಬಿಸಿಲುಗಳಿದ್ದಂತೆ. ಅದರಿಂದ 'ಜಗವ ಮೂದಲಿಸಿ ಗೋಗರೆ'ಯುವುದು ತರವಲ್ಲ. ಯಾಕೆಂದರೆ ಒಳಗಿರುವುದು ಚೈತನ್ಯ, ಹೊರಗೆ ಕಾಣುವುದು ಜಡ. ಒಂದು ಆತ್ಮ, ಇನ್ನೊಂದು ದೇಹ. ಇವೆರಡೂ ಒಂದೇ ನಾಣ್ಯದ ಎರಡು ಮೈಗಳಿದ್ದಂತೆ. 'ಒಬ್ಬರೊಬ್ಬರ ಎರಕವೇ ಇಬ್ಬರಿಗೂ ಪೂರಕ'ವಾಗಿರುತ್ತದೆ. ಇಬ್ಬರಲ್ಲಿಯೂ ತಾಳ-ಮೇಳ ಇದ್ದರೇನೇ ಹಿತ. ಅಂತಲೇ,

ಒಳಹೊರಗು ಒಂದಾಗೆ ತಳತಳಿಸಿ ಬೆಳಗೀತು
ಜೀವನದ ದೇವತೆಯ ದಿವ್ಯದೇಗುಲವು!
ಒಳಹೊರಗಿನಿಬ್ಬಣವೆ ಕಳವಳದ ಕಾರಂಜಿ!
ಸೃಜಿತ ಸಮ್ಮಿಳನವೇ ಸುಖದ ಬಾಗಿಲವು! [1]

ಎಂದು ಕವಿಯು ನಿಸ್ಸಂಶಯವಾಗಿ ನುಡಿಯುತ್ತಾನೆ. ಈ ನಿಶ್ಚಿತ ದೃಷ್ಟಿಯೂ ಅವನಲ್ಲಿ ಸರ್ವಾರ್ಪಣಭಾವನೆಯನ್ನು ಉದಿಸಿದೆ; ಇಷ್ಟೇ ಅಲ್ಲ, ಸ್ಥಿರಗೊಳಿಸಿದೆ.

ಅಧ್ಯಾತ್ಮಿಕ ಜೀವನದಲ್ಲಿ ಸಾಧಕನ ಸರ್ವಾರ್ಪಣಸ್ಥಿತಿಗೆ ಬಹಳ ಮಹತ್ವದ ಸ್ಥಾನವಿದೆ. ಆ ಅವಸ್ಥೆಯಲ್ಲಿ ಶರಣ ಬೇರೆಯಲ್ಲ, ಶಿವ ಬೇರೆಯಲ್ಲ. ಅವನ ಕರುಣೆಯಿಂದಲೇ ಎಲ್ಲ, ಎಂಬ ನಿಷ್ಠೆಯು ಸಾಧಕನ ಜೀವನದಲ್ಲಿ ಎಲ್ಲೆಲ್ಲೂ ರೂಪುತಾಳಿ ನಿಲ್ಲುವುದು. ಆಗ ಆತನ 'ಮಾನಸ ಸರೋವರ'ದಲ್ಲಿ ಆಗಾಗ ತೆರೆಗಳು ಏಳುವವು. ನನ್ನ ಮನಸ್ಸೆಂಬುದು 'ತೂತು ಬಿದ್ದಿಹ ಮಡಕೆ'. ಅದನ್ನು

---

1 'ಕರುಣಾ ಶ್ರಾವಣ' ಪು. ೪೨.

1 'ಜಲಪಾತ' ಪುಟ ೪೨.

ತುಂಬುವೆನೆನ್ನುವವ ' ನಾ ' ಎಂಬ ಸೋರುತಿಹ ಚಿಪ್ಪು ! ' ನಾ ' ಎನ್ನುವ ಗರ್ವದ ಭಾವ ಅಳಿಯದೆ ಮಾನಸಸರೋವರವನ್ನು ತುಂಬುವದಂತಿರಲಿ, ಅದರ ಆಳ ಅಗಲ ಗಳನ್ನು ಅರಿಯುವುದೂ ಸಹಿತ ಸಾಧ್ಯವಾಗದು. ಅದಕ್ಕಾಗಿ ಅವನ ಕರುಣೆಯೇ ಬೇಕು. ಆ ಕರುಣೆಯ ಪ್ರವಾಹವೇ ಈ ತೆರೆಯನ್ನು ತುಂಬಬಲ್ಲುದು. ನೀನು ತುಂಬು ಎಂದಾಗ ತುಂಬುವದು. ಬರಿದಾಗು ಎಂದಾಗ ಬರಿದೇ ಆಗುವದು. ಎಲ್ಲವೂ ನಿನ್ನಾಧೀನ. ನಾನು ನಿನಗೆ ಶರಣು. ಯಾಕೆಂದರೆ,

ಈ ತೆರೆಯ ಕಟ್ಟಿದವ ನಾನಲ್ಲ. ಈ ತೆರೆಯ
ತುಂಬಿಸುವ ಭಾರವೂ ನನ್ನದಲ್ಲ !
ತುಂಬದಿದ್ದರು ನನಗೆ ಅಪಮಾನವೇನಿಲ್ಲ
ತುಂಬು, ಬಿಡು, ಭರಭಾರ ನಿನ್ನದೆಲ್ಲ! [1]

ಎನ್ನುವ ಸಂಪೂರ್ಣ ಆತ್ಮಾರ್ಪಣೆಯ ಭಾವವು ಇಲ್ಲಿ ಮೂಡಿ ನಿಂತಿದೆ. ತನ್ನ ಸುಖಕ್ಕಾಗಿ, ಸ್ವಾರ್ಥಕ್ಕಾಗಿ ಯಾವುದನ್ನೂ ಹಿಂದೆ ಇಟ್ಟುಕೊಂಡಿಲ್ಲ. ಎಲ್ಲವೂ ಶಿವನಿಗೆ ಅರ್ಪಣ. ಶಿವಸ್ವರೂಪಿಯಾದ ಜನತಾ ಜನಾರ್ದನನಿಗೆ ಅರ್ಪಣ. ಅದರಿಂದ ಎಲ್ಲೆಲ್ಲೂ ಕವಿಗೆ ಅವನ ' ರೂಪ'ವೇ ಕಾಣುತ್ತದೆ. ಸದ್ರೂಪವಿರಲಿ, ಚಿದ್‌ರೂಪವಿರಲಿ, ಆನಂದರೂಪವಿರಲಿ, ಯಾವ ರೂಪದಲ್ಲಿಯೇ ಇರಲಿ, ಅದು ಅವನ ' ಬಾಳ ದೀಪವೆ ' ಆಗಿರುವುದು. ಇಂಥ ನಿಧಿಧ್ಯಾಸದಲ್ಲಿರುವ ಕವಿಗೆ ಪುಷ್ಪ ಗಳ ವರ್ಣದಲ್ಲಿ, ಪಕ್ಷಿಗಳ ವಾಣಿಯಲ್ಲಿ, ದಿನದ ಬೆಳಗು-ಬೈಗುಗಳಲ್ಲಿ, ಆಕಾಶದ ನೂರಾರು ತಾರೆಗಳಲ್ಲಿ ಕಾಣುವ ಚೆಲುವಿನಲ್ಲಿರುವ ಅಂದವೆಂಬುದೆಲ್ಲ ಆ ಪರಮಾತ್ಮನ ರೂಪವೇ ಆಗಿ ತೋರುವುದು. ಈ ಸದ್ರೂಪವನ್ನಲ್ಲದೆ,—

' ಎಲ್ಲ ತೋರ್ಕೆಯಾಚೆ ನಿನ್ನ ಚೆಲುವು ಸೊಬಗು ಬೆಡಗಿದೆ
ಶಿಲೆಯ ಮರೆಯ ಶಿಖಿಯ ತೆರದಿ ನೀನೆ ಎಲ್ಲು ಅಡಗಿದೆ ' [2]

ಎಂದು ಚಿದ್ರೂಪವನ್ನೂ ಸಹ ಅವನ ಬಗೆಗಣ್ಣು ಕಾಣಲು ಶಕ್ತವಾಗಿದೆ. ಇಷ್ಟೇ ಅಲ್ಲ, ಕವಿಯ ಹೃದಯವು ' ಆನಂದ ರೂಪ'ವನ್ನು ಕಂಡು, ಹಿಗ್ಗಿ ' ನಮೋ ನಮೋ ರೂಪವೆ-ನಮೋ ಬಾಳ ದೀಪವೆ!' ಎಂದು ಹಾಡಿ ನಲಿಯುವುದು. ಈ ಆನಂದಬ್ರಹ್ಮನ ಇರವಿನ ತಾಣವು ಎಲ್ಲಿ ಗೊತ್ತೆ? 'ನೆಲವು ಮುಗಿಲನಪ್ಪಿದಲ್ಲಿ, ಗಿರಿಯು ಗಗನ ಮುದ್ದಿಪಲ್ಲಿ'; ಇದರಂತೆಯೇ ' ಶಶಿಯ ಸೆಳೆತದಿಂದ ಶರಧಿ ಹಿಗ್ಗಿ ಮೇಲೆ ಹರಿ'ಯುವಲ್ಲಿಯೂ ಆನಂದರೂಪವಿದೆ. ಈ ಸ್ಥಾನಗಳ ಸಂಕೇತದಲ್ಲಿ ಸಾಧಕನ ಅಂತರಂಗದ ಮೇಲ್‌ಮೊಗವಾಗಿ ಸಾಗುವ ಬುದ್ಬುದ-ಅಲ್ಲ-ಕಾರಂಜಿಯೂ ಅದೂ

---

1 ' ಮಾನಸ ಸರೋವರ ' ಪು. ೯೪.

2 ' ಮಾನಸ ಸರೋವರ ' ಪುಟ ೨೪.

ಅಲ್ಲ-ಮೇಲೆ ಮೇಲೆಯೇ ಏರುವ, ತಿರುಗಿ ಕೆಳಗೆ ಬೀಳದ ವಿಕಾಸವೂ ಇದೆ. ಅಂಥ ವಿಕಾಸವನ್ನು ಗುರುತಿಸಿ ಅಲ್ಲಿ ಅವತರಿಸುವ-ಅಲ್ಲ-ಕೆಳಗಿನದನ್ನು ಮೇಲೆ ಸೆಳೆದುಕೊಳ್ಳುವ ಅಪಾರ ಕರುಣೆಯ ಸೂಚನೆಯೂ ಇದೆ. ಈ ಸಂಕೇತವನ್ನು ಇನ್ನೂ ಸ್ಪಷ್ಟಗೊಳಿಸುವ 'ರಾಧೆಯೆದೆಯ ಕೃಷ್ಣನಾಗಿ, ಕೃಷ್ಣನೆದೆಯ ರಾಧೆಯಾಗಿ'-ಎಂಬ ಉಪಮೆಯಲ್ಲಿ ಎಂಥ ಔಚಿತ್ಯವಿದೆ, ಅದೆಂಥ ದಿವ್ಯ ಅರ್ಥದ ಅಭಿವ್ಯಕ್ತಿಯಿದೆ! ಅದನ್ನು ಅರಿತು ಅನುಭವಿಸುವ ರಸಿಕನೂ ಆನಂದರೂಪದಲ್ಲಿ ತನ್ಮಯನಾಗುವುದರಲ್ಲಿ ಆಶ್ಚರ್ಯವಿಲ್ಲ. ಹೀಗೆ ಓದುಗರನ್ನು ಜಾಗೃತಗೊಳಿಸಿ ಮೇಲ-ಮೇಲಕ್ಕೆತ್ತುವ ಕಾವ್ಯವೇ ಋಷಿವಾಕ್ಯವಲ್ಲವೆ? ಇಂಥ ಪದ್ಯಗಳಲ್ಲಿ ಮಂತ್ರಶಕ್ತಿಯನ್ನು ಅನುಭವಿಸದಿರುವ ಕಾವ್ಯಪ್ರೇಮಿಗಳೇ ವಿರಳ.

೫

ಜೀವನವು ಕವಿಗೆ ಸ್ಫೂರ್ತಿಯನ್ನೀಯುತ್ತದೆ. ಯಾವ ಕವಿಯೇ ಆಗಲಿ, ಸಾಹಿತಿಯೇ ಆಗಲಿ ತನ್ನ ಸುತ್ತಲಿನ ಜೀವನವನ್ನು ಅಲ್ಲಗಳೆದು ಕೃತಿಯನ್ನು ನಿರ್ಮಿಸಲಾರ. ಅದರಿಂದ ಕವಿಯ ವಾಣಿಯಲ್ಲಿ ಅಂದಿನ ಯುಗದ ಧ್ವನಿಯು ಮೂಡದೆ ಇರುವುದಿಲ್ಲ. ತಾನು ಬಾಳುತ್ತಿರುವ ರಾಷ್ಟ್ರ, ಜನಾಂಗ, ಸಮಾಜ, ಕಾಲಗಳ ಅಂತರ್ವಾಣಿಯನ್ನು ಅರ್ಥಮಾಡಿಕೊಳ್ಳದೆ, ಆ ಕೂಗಿಗೆ ಕಿವಿಗೊಡದೆ ಮುಂದೆ ಸಾಗುವುದು ಸಾಧ್ಯವಿಲ್ಲ. ಶ್ರೀ ಕಾವ್ಯಾನಂದರೇ ಒಂದೆಡೆಗೆ ಹೇಳುವಂತೆ "ಸಾಹಿತ್ಯವು ನಮ್ಮನ್ನು ಅನ್ನಮಯದಿಂದ ಆನಂದಮಯಕ್ಕೆ ಕರೆದೊಯ್ಯುವ ದಿವ್ಯಧ್ವನಿ. ಈಗ ಅನ್ನಮಯವೇ ಬರಿದಾಗಿ ಉರಿಯುತ್ತಲಿದೆ-ಆನಂದಮಯಕ್ಕೇರುವೆವೆಂಬ ಮಾತು ಗಾಳಿಗೋಪುರವೆನ್ನುವವರೂ ಇದ್ದಾರೆ. ಅದರಲ್ಲಿ ನಿಜಾಂಶವಿಲ್ಲದೆ ಇಲ್ಲ.[1]" ಕಾವ್ಯದ ದಿವ್ಯಧ್ವನಿ, ಸುತ್ತಲಿನ ಜೀವನ ಪ್ರಜ್ಞೆ ಇವೆರಡರಲ್ಲಿಯೂ ಇಂದಿನ ವಿಜ್ಞಾನದ ಹೋರಾಟದ ಯುಗದಲ್ಲಿ ಅಂತರಗೊಳ್ಳುತ್ತ ನಡೆದಿದೆ. ಅದಕ್ಕಾಗಿ ನಿಜವಾದ ಕವಿಯಾದವನು 'ನವಯುಗ ಲಕ್ಷ್ಮಿ'ಯನ್ನೇ ಇಂಥ ಸಂದರ್ಭದಲ್ಲಿ ಕೇಳಬೇಕಾಗುತ್ತದೆ.

ನಿಜವನೆ ನುಡಿ ಮರೆಮಾಜದೆ ಓ ನವಯುಗ ಲಕ್ಷ್ಮಿ
ವರವಾವುದ ದಯಗೈಯುವೆ, ಒರೆ ಸರ್ವರ ಸಾಕ್ಷಿ[12]

ಈ ಸಂದಿಗ್ಧ ಸಮಯದಲ್ಲಿ ಸರ್ವರ ಸಾಕ್ಷಿಯೆನಿಸುವ ನವಯುಗಲಕ್ಷ್ಮಿಯೂ ಕೂಡ ನಿಜವನ್ನೇ ನುಡಿದಾಳೆನ್ನುವ ಭರವಸೆಯು ಕವಿಗೆ ತೋರುವುದಿಲ್ಲವೇನೊ! ಯಾಕೆಂದರೆ ಜಗತ್ತಿನಲ್ಲಿ ಉದ್ಭವಿಸಿದ ಮಹಾಯುದ್ಧಗಳು ವ್ಯಕ್ತಪಡಿಸಿದ

---

1 ಶ್ರೀ ಸಿದ್ಧಯ್ಯ ಪುರಾಣಿಕರ 'ಪ್ರಬಂಧ ಮಾಲೆ' ಯಿಂದ.

2 ಜಲಪಾತ, ಪುಟ. ೨೪.

'ಕ್ರೌರ್ಯವನ್ನು ಹಿಂದಿನ ಯುಗವಾವುದೂ ನೋಡಿಲ್ಲ.' ಇಂಥ ನಾಶದ ನಾಟ್ಯವನ್ನು ಜನರು ಹಿಂದೆಂದೂ ಆಡಿಲ್ಲ. ಅದರಲ್ಲೂ ವೈರದ ಬೇರುಗಳನ್ನು ಬಿಟ್ಟು ರಣವು ಮುಗಿಯುತ್ತಲಿದೆ. ಕೀಳು ಮೇಲುಗಳ ಕಾಳಕೂಟದ ವಿಷವು ಎಲ್ಲೆಲ್ಲೂ ಹಬ್ಬಿದೆ. ಇನ್ನು ಹೃದಯಶುದ್ಧಿಗೆ ಸಮಯವು ದೂರವಿದೆ. ಅಂದಮೇಲೆ ಜಗತ್ತಿನ ಜನಕ್ಕೆ ಶಾಂತಿ ಸುಖಗಳು ಎಲ್ಲಿಂದ ಬಂದಾವು? ಮೂಲತಃ 'ಮಾನವ ಸಮಾಜ'ವೇ ರೂಪವತಿಯಾದರೂ ಪಾಪಮತಿ. ಇತಿಹಾಸವೇ ಹಾಗಿದೆ.

ಆದರ್ಶವಾದಿಗಳ ಶಿಲುಬೆಗೇರಿಸಿ ಅವರ
ಕನಸುಗಳ ಕುಟ್ಟಿ–ಸ್ವಾರ್ಥಿಗಳಿಗುಣಿಪೆ
ಜ್ಞಾನಯೋಗಿಯ ಕೈಗೆ ವಿಷದ ಬಟ್ಟಲ ಕೊಟ್ಟು
ನೀಚ ನರನಾಯಕರ ಮನವ ತಣಿಪೆ[1]

ಎಂದು ನಿಷ್ಕರುಣಿಯಾದ ನಿರ್ಲಕ್ಷ್ಯ ಮಾನವ ಸಮಾಜವನ್ನು ಕವಿಯು ಸ್ಪಷ್ಟವಾಗಿ ವಿಮರ್ಶಿಸುತ್ತಾನೆ. ಕೇವಲ ವಿಮರ್ಶಿಸಿ ಸುಮ್ಮನೆ ಕೂಡುವುದಿಲ್ಲ. ಸಮಾಜಕ್ಕೆ 'ನಿನ್ನ ಸರಿಪಡಿಸಿತೊ, ಅನ್ಯಾಯಗಳ ಹೂಳು, ಎಲ್ಲರನು ಸಮನಾಗಿ ಕಾಣು' ಎಂದು ಎಚ್ಚರಿಸುತ್ತಾನೆ. ಅಲ್ಲದೆ ಇದನ್ನು ನೀನು ಬೇಗನೆ ಮಾಡದಿದ್ದರೆ 'ನಿನ್ನನ್ನೇ ಮುರಿದು ಕರಗಿಸಿ ಮತ್ತೆ ನಮಗೆ ಬೇಕಾದಂತೆ ರೂಪಿಸುವೆವು' ಎಂದು ಧೈರ್ಯವಾಗಿ ಹೇಳುತ್ತಾನೆ ಕವಿ. ನವಸಮಾಜ ನಿರ್ಮಾಣದ ಸಂದೇಶ ಇಲ್ಲಿದೆ. ಅದನ್ನು ಕಾರ್ಯಗತಗೊಳಿಸುವ ಪ್ರೇರಕ ಶಕ್ತಿಯು ಕವಿಯ ವಾಣಿಗಿದೆ.

ಇಷ್ಟೇ ಅಲ್ಲ, ಕವಿಯ ಅಂತರ್ ದೃಷ್ಟಿಯು ನಮ್ಮ ಸಮಾಜದ ಸ್ವರೂಪವನ್ನೂ ಅದರ ರೂಪು-ರೇಷೆಗಳನ್ನು ಕಲ್ಪಿಸದೆ ಇಲ್ಲ. ಅವನ ನಿಡುನೋಟವು 'ಬರುತಿದೆ ಬಡವರ ಯುಗ' ಎಂಬುದನ್ನು ಕಂಡುಕೊಂಡಿದೆ. ಇದರ ಬರುವಿಕೆಯೊಂದು ಅಬ್ಬರದ ತಡಸಲಿದ್ದಂತೆ. ಮಹಾ ಜಲಪಾತದ ಒಂದಂಗವಿದು. ಇದನ್ನು ಇಂಥ ಯಾವ ಶಕ್ತಿಯೂ ತಡೆಯಲು ಸಾಧ್ಯವಿಲ್ಲ. ಯಾಕೆಂದರೆ ಈ ಕಾಲದಲ್ಲಿ ಸಮಾಜ ನಿರ್ಮಾಣದ ಅಧಿಕಾರ ಅಥವಾ ಶಕ್ತಿಯು ಧನಿಕನ ಕಡೆಗೆ ಉಳಿದಿಲ್ಲ.

ಹೊಸಲೋಕವ ಕಟ್ಟುವ ಹೊಣೆ ಇಂದಿನ ಬಡವನದು
ಹೊಸ ಬಾಳನು ರಚಿಸುವ ಹೊಣೆ ನಾಳಿನ ದುಡಿವನದು[2]

ಆಗಿದೆ. ಧನಪಿಶಾಚಿಯು ಮಾನವತೆಯನ್ನೇ ನುಂಗಿದ ಮೇಲೆ, ಸಿರಿವಂತರ ಸಿರಿ ಹೆಚ್ಚಿದಂತೆ ಬಡಹೊಟ್ಟೆಯ ಉರಿಯೇ ಹೆಚ್ಚುತ್ತ ನಡೆದರೆ, ಜನತೆಯಾದರೂ ಹೇಗೆ ಸುಮ್ಮನಿದ್ದೀತು. ಸೆಟ್ಟಿಗೊಂದು ಬುದ್ಧಿಯಾದರೆ ಎತ್ತಿಗೊಂದು ಬುದ್ಧಿಯು ಬಂದೇ

---

1 'ಜಲಪಾತ' ಪು. ೩.

2 'ಜಲಪಾತ' ಪುಟ ೯.

ಬರುತ್ತದೆ. ಹೆಚ್ಚಿನ ಧನ, ಹೆಚ್ಚಿನ ಹಣ, ನನಗೂ ಬೇಡ. ರಾಷ್ಟ್ರದ ಆಸ್ತಿಯಾಗಲಿ ಎನ್ನುವನು ಬಡವ. ಎಲ್ಲರೂ ಕೂಡಿ ದುಡಿಯೋಣ, ಬಂದದ್ದನ್ನು ಕೂಡಿ ಸರಿಯಾಗಿ ಹಂಚಿಕೊಂಡು ಬಾಳೋಣ, ಹೆಚ್ಚಾದುದನ್ನು ಎಲ್ಲರಿಗಾಗಿ ಇಡೋಣ ಎಂದೂ ನಿರ್ಧರಿಸಿರುವನು. ಇದರಲ್ಲಿ ತಪ್ಪೇನು?

ಬಡವ ಹೀಗೆ ನಿರ್ಧಾರಕ್ಕೆ ಬಂದುದು ಒಮ್ಮೆಲೆ ಅಲ್ಲ. ಅದಕ್ಕೆ ಹಲವು ತಪಗಳನ್ನು—ಅಲ್ಲ ಶತಮಾನಗಳನ್ನು—ಅವನು ಹಾಗೆಯೇ ಕಳೆದಿದ್ದಾನೆ. ಈ ಜನರ ರೀತಿಯನ್ನು ಅರಿಯಲು ಯತ್ನಿಸಿದ್ದಾನೆ. ದೇವಧರ್ಮಗಳನ್ನು ನಂಬಿ ನೋಡಿದ್ದಾನೆ. ಅಂತೂ ದೈವುಳ್ಳವನ ಪಾಲೆಂದು ಅವನು ಅನುಭವದಿಂದ ತಿಳಿದಿದ್ದಾನೆ. ತಾನು 'ದುಡಿದುಡಿದು ಸತ್ತರೂ ಮಡದಿ ಸುತರತ್ತರೂ ಬಡವನಳಲದು ಕೊಳ್ಳಕೂಡು'ತ್ತದೆ. ಅವನ ಮಕ್ಕಳೆಲ್ಲ ಚೊಕ್ಕಮತಿಗಳಿದ್ದರೂ ರೊಕ್ಕಕ್ಕೆ ಗತಿಯಿಲ್ಲ. ತುಣುಕು ಮಿದುಳಿಲ್ಲದ ಸಿರಿವಂತ ಮಕ್ಕಳಿಗೆ ಲಕ್ಷಗಟ್ಟಲೆ ದುಡ್ಡನ್ನು ಸುರಿಯುತ್ತಾರೆ. 'ಹುರುಳಿಲ್ಲದಿಹ ಸಭೆಗೆ ಹೊರೆ ಹೊರೆ ಹಾರಗಳ ಕ್ಷಣಮಾತ್ರದಲಿ ತೊಟ್ಟು ಕೆಡಿಸುವರು. ಗುಡಿಸಲಿಗು ಗತಿಯಿರದ ಬಡ ಹೆಣ್ಣು ಗಂಡುಗಳು' ಅರೆ ಹೊಟ್ಟೆಯುಂಡು ದುಡಿಯಬೇಕು. ಇದೆಲ್ಲಿಯ ನ್ಯಾಯ, ಏನು ಅನ್ಯಾಯ?' ಎಲೆ ನೀನು ಸುಮ್ಮನಿದ್ದರೆ

> ಆಳಲೊಂದೆ ನಿನಗುಳಿದ ಸಿರಿಯು ಬಡವ
> ಹೆಚ್ಚು ಹೇಳುವದೇನು ? ನಿನಗೆ ನೀನೇ ಗತಿಯು
> ಇಲ್ಲದಿರೆ ನಿನ್ನಿರವೆ ನರಕ ಬಡವ[1]

ಎಂದು ಕವಿವಾಣಿಯು ಬಡವನಿಗೆ ಸಲಹೆಯನ್ನು ನೀಡುತ್ತಿದೆ. ನವಸಮಾಜ ನಿರ್ಮಾಣಕ್ಕೆ ಹುರಿದುಂಬಿಸುತ್ತಿದೆ. ಇಲ್ಲಿ ನಿಷ್ಕರುಣೆಯಾದ ಸಮಾಜವನ್ನು ಕಂಡು ಕವಿಹೃದಯವೂ ಕೆರಳಿ ನುಡಿದಿದೆಯಾದರೂ ಇದು ಕಟ್ಟುವ ಕೈಯೇ ಹೊರತಾಗಿ ಕೆಡಿಸುವ ಕೈಯಲ್ಲ. ಹೇಗೆಂದರೆ ಅವನು ಹೊತ್ತಿ ಸಿದ 'ಬೆಟ್ಟದುರಿ'ಯು

> " ಸುಟ್ಟು ಸಗ್ಗವ ತಟ್ಟಿ ಬೆಟ್ಟದುರಿ ಹೊತ್ತಿಸಿದೆ
> ನೆಂಬ ನುಡಿ ನಿಜವಿರಲು ಸುಡು ಸಿಕ್ಕುದನು ಕೈಗೆ ! [2]

ಎಂಬ ಪ್ರಬಲ ಭಾವನೆಯ ಗಾಳಿ, ಬಿರುಗಾಳಿ, ದೆವ್ವ ಗಾಳಿಯಿಂದ ಪ್ರಜ್ವಲಿತವಾಗಿದೆ. ಆದರೂ ಈ ಗಾಳಿಗೆ ಕವಿಯ ಸದಸದ್ವಿವೇಕವು 'ಬಲು ಜೋಕೆ ಗಾಳಿಯೇ ಬಾಯಿಂದ ಆಡಿದುದು, ಕೃತಿಯಲ್ಲಿ ಮಾಡಿದುದು ಬೇರಾಗದಿರಲಿ' ಎಂದು ಸದಾ ಎಚ್ಚರಿಸುತ್ತ ಇರುವುದು. ಈ ಬೆಟ್ಟದುರಿ ಹುಟ್ಟಿದ ಬಗೆ, ಹಬ್ಬಿದ ರೀತಿಯಲ್ಲೆಲ್ಲ

---

1 'ಜಲಪಾತ' ಪು. ೧೨

2 'ಜಲಪಾತ' ಪು. ೧೬

ಒಂದು ಸುಂದರ ರೂಪಕದಿಂದ ಕವಿಯು ಈ ಯುಗದ ವಾಣಿಯನ್ನು ಸಾರಿದ್ದಾನೆ. ಸಮಾಜವೊಂದು ಕಾನನ. ಅದರಲ್ಲಿ ಇಲ್ಲಿಯವರೆಗೆ ಒಂದನ್ನೊಂದು ಆಶ್ರಯಿಸಿ ಮಿತ್ರತ್ವದಿಂದ ಇದ್ದ ಬಿದಿರಬಾಂಧವರು ಕೆದರಿ ಕದನವನು ತೆಗೆದರು. ಆಗ ಈ 'ವಂಶ' ಮಾಡಿದ ಪಾಪವು ವಿಪಿನವನ್ನೆಲ್ಲ ಸುಡತೊಡಗಿತು. ಹಿಂದೆ 'ಕಾಡು ಜನರನು ಪೊರೆದ' ಗಾಳಿಯೇ ಇಂದು ಈ ದಳ್ಳುರಿಗೆ ಸಹಾಯಕವಾಗಿ ನಿಂತಿತು. ದೋಷವಿಲ್ಲದ ಅನೇಕ ಜೀವಿಗಳೂ ಕೂಡ ಉರಿಗೆ ಆಹುತಿಯಾದುವು. ಆದರೆ 'ಇದು ಅನಿವಾರ್ಯ! ಮುಂಬರುವ ಹಿರಿದುಃಖ ತಡೆಯಲಿಕೆ ಈ ದುಃಖ ಅನುಭವಿಸಲೇ ಬೇಕು!' ಇದು ತಾಯಿಯು ಹೆರಿಗೆಯ ಕಾಲಕ್ಕೆ ಬೇನೆಯನ್ನು ಅನುಭವಿಸುವಂಥ ಸ್ಥಿತಿ. ಮುಂದೆ ಉದಿಸುವ ನವಸಮಾಜ ಪುತ್ರನ ಜನನಕ್ಕೆ ಇದೆಲ್ಲ ಅವಶ್ಯಕ, ತೀರ ಅವಶ್ಯಕ. ಈ ಮಾತನ್ನು ನಿಷ್ಕಲ್ಮಷವಾದ ಕವಿಯ ಅಂತರಂಗವು ನುಡಿಯುತ್ತಿದೆ. ಇದಕ್ಕೆ ಯಾವ ರೋಷ, ಮಾತ್ಸರ್ಯ, ಭೀತಿಗಳ ಸೋಂಕಿಲ್ಲ. ವಿವೇಕದ ವಿಕಾಸ ಧ್ವನಿಯಿದು.

ಇದು ವಿವೇಕದ ವಿಕಾಸದ ಗುರುತೆಂಬುದಕ್ಕೆ ಕವಿಯ 'ಸಲಾಮ್ ಸಾಬ್' ದಲ್ಲಿ ವ್ಯಕ್ತವಾದ ಹೃದಯದ ಹೊಯ್ದಾಟ-ಅಲ್ಲ-ಬುದ್ಧಿ, ರಾಜಕೀಯ ವಿಚಾರಗಳ ಪ್ರಾಬಲ್ಯ ಅದನ್ನು ತಡೆದು ತನ್ನ ವಿಜಯುವನ್ನು ಪಡೆದ ಅಂತಃಕರಣದ ಚಿತ್ತವನ್ನು ನಾವಿಲ್ಲಿ ಗಮನಿಸಬೇಕು. ನಡುಹಗಲಿನಲ್ಲಿ ನಿಲ್ದಾಣ ಒಂದರಲ್ಲಿ ಕವಿಯು ನಿಂತಾಗ ಹಿಂದಿನಿಂದ ಒಬ್ಬ ಭಿಕ್ಷುಕನು ಬಂದು 'ಸಲಾಮ್ ಸಾಬ್ ಸಲಾಮ್ ಸಾಬ್!' ಎಂದು ಭಿಕ್ಷೆಗಾಗಿ ಕೂಗುತ್ತಾನೆ. ಆಗ ನಡೆದ ಸಂಗತಿಯಿದು. ಅಲ್ಲಿ ಕವಿ ಮನದಲ್ಲಿ ನಡೆದ ಮಂಥನವಿದು.

ಹಿಂದಿರುಗಿ ನೋಡಿದೆನು ಹೆದರಿ ಹೌಹಾರಿದೆನು ?
ದೈನ್ಯತೆಯ ನಿಟ್ಟುಸಿರೆ ನರನಾಗಿ ನಿಂತಂತೆ
ದಾರಿದ್ರ್ಯದುಮ್ಮಳವೆ ಮೈದಾಳಿತೆಂಬಂತೆ
ಅಳಲಿ ಚೀತ್ಕಾರವೇ ಚರ್ಮ ತೊಟ್ಟಿರುವಂತೆ
ಕನಿಕರದ ಕಣ್ಣೀರೆ ಕೈಕಾಲ ತಳೆದಂತೆ
. . . .
ಬಾಯ್ಬಿಡುತ ನಿಂತಿತ್ತು ನರನ ಆಕೃತಿಯೊಂದು !

* * * * * * *

ಕಂಡೊಡನೆ ಕಲ್ಲೆದೆಯ ಕರಗಿಸುವ ಕನಿಕರವು
ಕಲಕಿದರು ಎದೆಯನ್ನು ಕನಲಿ ನುಡಿಯಿತು ಬುದ್ಧಿ–
" ಇವ ತುರುಕ-ಭಾರತದ ಅರಮನೆಯ ಮುರುಕ !
ಇವ ಮ್ಲೇಂಛ-ಭಾರತವ ಹಂಚಿ ಹೂಡಿಹ ಸಂಚ !
ಹಾವ್ಗೆ ಹಾಲೆರೆಯದಿರು-ಸಾಯಲಿವರೀ ರೀತಿ ! "
ಎಂದು ಗುಡಗಿದ ದನಿಗೆ " ಕನಲದಿರು ಬುದ್ಧಿಯೇ !
ಭಾರತದ ವೈರಿಗಳು ಬಡ ತುರುಕರಲ್ಲ . . . . .

ಬೆಚ್ಚಿದೆನು ಮನದಲ್ಲಿ! ನಿಶ್ಚಯವು ಈ ಮಾತು–
ಬಡ ತುರುಕ ಬೇಡುವುದು ಅನ್ನ–ಅಲ್ಲ ಪಾಕಿಸ್ತಾನ! [1]

ಭಾವನೆಯು ಗೆದ್ದಿತು. ನಾಲ್ಕಾಣೆಗಳನ್ನು ಕೊಡಲು ಆ ಭಿಕ್ಷುಕನು ಪಟ್ಟ ಸಂತಸ ಎಂಥದು! ‘ಅವನ ಹಿಗ್ಗನು ಕಂಡು ಹಿಗ್ಗಿತೆನ್ನೆದೆ.’ ಹಸಿದ ಹೊಟ್ಟೆಗೆ, ಹೃದಯದ ಭಾಷೆಗೆ, ಬಡತನ-ಕರುಣೆಗಳಿಗೆ ಕುಲವುಂಟೆ? ಹುಟ್ಟಿನಲ್ಲಿ, ವೇಷದಲ್ಲಿ, ಕರಿ-ಬಿಳಿಯ ವರ್ಣದಲ್ಲಿ ಕುಲವು ಇದ್ದೀತು. ಅಲ್ಲಿಯೂ ಆತ್ಮವು ಒಂದೇ ಅಲ್ಲವೆ? ಅದಕ್ಕೆ ಕುಲವೆಲ್ಲಿ? ಇಂಥ ವಿಶಾಲವಾದ ಆತ್ಮೀಯತೆಯಿಂದಲೇ ಕವಿಯ ನುಡಿಯು ನಾಡ ನುಡಿಯಾಗುವುದು; ಜನತೆಯ ಹೃದಯದುಸಿರೆನಿಸುವುದು. ಯುಗದ ವಾಣಿಯಾಗುವುದು. ಈ ವಾಣಿಯು ಚೇತನಕೆ ಚೈತನ್ಯವನ್ನು ನೀಡಿ ಮುನ್ನಡೆಯಿಸುವುದು. ಇದನ್ನೆಲ್ಲ ಗಮನಿಸಿಯೇ ಕವಿವರ್ಯ ಶ್ರೀ ದ. ರಾ. ಬೇಂದ್ರೆ ಎಂ. ಎ. ಅವರು, ‘ಜಲಪಾತ’ದ ಮುನ್ನುಡಿಯಲ್ಲಿ ‘ಕಾವ್ಯಾನಂದರ ಕಾವ್ಯರಚನೆಯ ಅಸ್ತಿಭಾರಕ್ಕೆ ತತ್ವಗಳ ತೂಕವಿರುವುದರಿಂದಲೆ ಅವರ ರಾಗದ ತ್ವೇಷದ)ದ್ವೇಷದ ಅಲ್ಲ!) ನುಡಿಗಳಲ್ಲಿ ಬೆಂಕಿಯ ಜತೆಜತೆಗೆ ಬೆಳಕು ನುಗ್ಗುತ್ತದೆ’ ಎಂದು ಹೇಳಿದ್ದಾರೆ.

—ಮಿರ್ಜಿ ಅಣ್ಣಾರಾಯ

(ಸಶೇಷ)

1 ‘ಜಲಪಾತ’ ಪುಟ ೨೮, ೨೯.

ಕಾವ್ಯಾವಲೋಕನ

ಕರುಳಿನ ಸೆಳೆತ : ಲೇಖಕರು: ಶ್ರೀ ಸಿ. ಅಂಕಪ್ಪ, ಬಿ.ಎ.; ಪ್ರಕಾಶಕರು: ಸಾಧನ ಸಾಹಿತ್ಯ ಮಂದಿರ, ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು ; ಪುಟಗಳು ೪೪ ; ಬೆಲೆ : ನ ಪೈ. ೭೫.

ಸಾಹಿತ್ಯದೃಷ್ಟಿಯಿಂದ ಅಷ್ಟೇನೂ ಯಶಸ್ವಿಯಾಗಿರದ ಈ ಕಿರುನಾಟಕದ ಬಗ್ಗೆ ಹೆಚ್ಚಾಗಿ ಹೇಳುವುದೇನೂ ಇಲ್ಲ. 'ಎಂತಹ ತ್ಯಾಗಿಯಾದರೂ ಮಾತೆಯ ಮಮತೆಯ ಕರೆಗೆ ಓಗೊಡಲೇಬೇಕಾಗುತ್ತದೆ ಎಂಬುದೇ ಈ ನಾಟಕದ ಕಥಾವಸ್ತು' ಎಂದು ಲೇಖಕರು ('ನನ್ನ ಮಾತಿ'ನಲ್ಲಿ) ಹೇಳಿಕೊಂಡಿದ್ದಾರೆ. ಆದರೆ ಹಣದಾಸೆ, ದೊಡ್ಡಸ್ತಿಕೆಯ ಅಟ್ಟಹಾಸಗಳ ಅಂತ್ಯಕ್ಕಾಗಿ ತ್ಯಾಗದ ಮಹಿಮೆಯನ್ನು ಮೆರೆಯ ಬೇಕೆಂಬುದೇ ಇಲ್ಲಿನ ಕಥಾವಸ್ತುವೆಂಬುದು ಥಟ್ಟನೆ ಯಾರಿಗಾದರೂ ಗೊತ್ತಾಗ ದಿರದು.

ಎಂಬತ್ತು ವಯಸ್ಸಿನವನಾದರೂ ಹಣವೇ ಪ್ರಧಾನವೆಂದು ತಿಳಿದುಕೊಂಡು, ಬರಿಯ ನೂರು ರೂಪಾಯಿಗಳ ಬಡ್ಡಿಗಾಗಿ ಸಿದ್ದನಿಂದ ಜೀವಮಾನವಿಡೀ ದುಡಿಸಿ ಕೊಳ್ಳುತ್ತಿರುವ ಲಿಂಗಣ್ಣ ಹೊಸಳ್ಳಿಯ ಸಾಹುಕಾರ. ಮಾದಪ್ಪ (ಸನ್ಯಾಸಿ) ಅವನ ಎರಡನೇ ಮಗ ; ಷಡಕ್ಷರೀಧರ. ಅವನು ತನ್ನ ತಂದೆಯ ಅತಿ ಆಸೆಗೆ, ಲೋಭಿತನಕ್ಕೆ, ನೀಚತನಕ್ಕೆ ಹೇಸಿ ವೈರಾಗ್ಯ ತಾಳಿ ಮನೆ ಬಿಟ್ಟು ಹೊರಟುಹೋಗಿ ಇಪ್ಪತ್ತು ವರ್ಷ ಗಳಾಗಿವೆ. ತಾಯಿ ಪಾರ್ವತಮ್ಮ ದೇಶಾಂತರ ಹೋಗಿರುವ ಮಗನಿಗಾಗಿ ಕೊರಗಿ ಕೊರಗಿ ಸಾಯುವ ಹಂತದಲ್ಲಿದ್ದಾಳೆ. ಮಾದಪ್ಪನ ಅಣ್ಣ ಚನ್ನಪ್ಪನಿಗೆ ಸುಮಾರು ಇಪ್ಪತ್ತೈದು ವಯಸ್ಸಿನ ಬಸವಣ್ಣನೆಂಬ ಬಿ. ಎ. ಓದಿದ ಮಗನಿರುತ್ತಾನೆ. ಅವನು ಆಧುನಿಕ ನಯ ನಾಜೂಕು, ಆಡಂಬರಗಳ ಪ್ರತಿಮೂರ್ತಿ. ಅವನ ಪಾಲಿಗೆ ಅಜ್ಜ ಲಿಂಗಣ್ಣ old goose ಉ, peon ಉ; ಸನ್ಯಾಸಿ semi-crack ಉ. ಅವನ ಹೆಂಡತಿ ಗೌರಮ್ಮ ಗಂಡನಿಗೆ ಅನುರೂಪಳಾದವಳು: "ನಾನು ಕೂಲಿ ಕೆಲಸ್ದವಳಲ್ಲ ಟ್ರಂಕ್ಹಿಡ್ಕೊಳ್ಳೋದಕ್ಕೆ. ನಮ್ಮಪ್ಪ ಅಮ್ಮ ನಮ್ಮ ಕೈಲಿ ಕೆಲ್ಸ ಮಾಡ್ಸಿ ಬೆಳ್ಸಿಲ್ಲ. ತಾತ-ಮೊಮ್ಮಗ ಬೇಕಾದ್ರೆ ಹೊತ್ಕೊಂಡು ನಡೀರಿ"—ಎಂದು ಗಂಡನೆದುರಿಗೇ ಹೇಳುವಷ್ಟು ಮುಂದುವರಿದವಳು. ನಾಟಕ, ದೇವರ ಪೂಜೆಗೆ ಊರಿಗೆ ಹೋಗಿದ್ದ ಬಸವಣ್ಣ ತನ್ನ ತಂಗಿಯ ಮದುವೆಯ ಆರತಕ್ಷತೆಗೆ ಬಸ್ ಕೆಟ್ಟುಹೋದ ಕಾರಣ ದಿಂದಾಗಿ ಸಕಾಲದಲ್ಲಿ ತಲುಪಲಾರದೆ ದಾರಿಯಲ್ಲಿ ಟ್ರಂಕ್ ಹಾಸಿಗೆಗಳೊಡನೆ ತನ್ನ ಹೆಂಡತಿ ಮತ್ತು ಅಜ್ಜ ಲಿಂಗಣ್ಣರೊಂದಿಗೆ ಫಜೀತಿ ಪಡುವ ದೃಶ್ಯದಿಂದ ಮೊದಲಾಗು ತ್ತದೆ. ಈ ದೃಶ್ಯದಲ್ಲಿ ಬರುವ ಅವನ ಸ್ನೇಹಿತ ರಾಮರಾವ್ "oh! this old man-ur-ur-our peon" ಎಂದು ಬಸವಣ್ಣ ಹೇಳಿದರೂ ಸುಮ್ಮನಾಗದೆ ಲಿಂಗಣ್ಣನ ಹತ್ತಿರ ಹೋಗಿ "ತಾತ ನೀವು ಬಸವಣ್ಣನ್ಗೇನಾಗ್ಬೇಕು? . . . . ನಿಮಗೂ ನಿಮ್ಮ

ಬಡತನ, ದೇವರು ಮೊದಲಾದುವುಗಳ ಮೇಲೆ ಈ ನಾಟಕದ ಸನ್ಯಾಸಿ ಮಾತನಾಡುವುದೀಗ ತುಂಬ ಸ್ವಾರಸ್ಯಕರವಾದ ಅಂಶ. ಮಗ ತಾಯಿಗೇ 'ತಿರುಮಂತ್ರ' ಹೇಳಿ ಕೊಟ್ಟು ದೇವಲೋಕದ ಗಡಿದಾಟಿಸುವ ಸನ್ನಿವೇಶವಂತೂ ಚಲನಚಿತ್ರವನ್ನೂ ಮೀರಿಸುವಂಥದು. ಅತಿ ಆದರ್ಶದ, ಸುಲಭ ವೈರಾಗ್ಯದ ಕೃತಕತೆ, ಭಾವಾತಿರೇಕ ನಾಟಕದುದ್ದಕ್ಕೂ ಕಂಡುಬರುತ್ತದೆ. ಗೌರಮ್ಮನ ಪಾತ್ರದ ಆವಶ್ಯಕತೆ ಅನಿವಾರ್ಯವಾದುದೇನೂ ಅಲ್ಲ. ಅವಳಿಲ್ಲದೆಯೇ ಎರಡನೇ (ಇಲ್ಲಿ ಅವಳಾಡುವ ಎರಡು ಮಾತುಗಳನ್ನು ಬಿಟ್ಟರೆ) ಮತ್ತು ಮೂರನೇ ದೃಶ್ಯಗಳು ಸಾಂಗವಾಗಿ ನಡೆದು ನಾಟಕ ಕೊನೆಗಾಣುತ್ತದೆ. ಮೊದಲನೇ ದೃಶ್ಯದಲ್ಲಿ ಅವಳಿಲ್ಲದೇ ಹೋಗಿದ್ದರೂ ಯಾವ ಧಕ್ಕೆಯೂ ಉಂಟಾಗುತ್ತಿರಲಿಲ್ಲ. ರಾಮರಾವ್, ಚಿಂದಿ ಉಟ್ಟ ವ್ಯಕ್ತಿಯ ಪಾತ್ರಗಳೂ ಅನವಶ್ಯ. ನಾಟಕದ ಮೆಚ್ಚತಕ್ಕ ಒಂದೇ ಒಂದು ಗುಣ ಅದರ ಸಂಭಾಷಣೆಯ ಸೊಗಸು. ಸಂಭಾಷಣೆ ಗ್ರಾಮ್ಯ ಭಾಷೆಯಲ್ಲಿದ್ದರೂ ಸಾಕಷ್ಟು ಚೆನ್ನಾಗಿದೆ.

ಒಟ್ಟಿನಲ್ಲಿ, ಅತಿಭಾವುಕತೆಯ ಹೆಣ್ಣು ಮಕ್ಕಳು, ಇಲ್ಲವೇ ಸಾಮಾನ್ಯರು ನೋಡಿ ಬಹುಶಃ ಮೆಚ್ಚಬಹುದಾದ ನಾಟಕ ಇದು. ಹತ್ತಾರು ಸಾರಿ ಇದರ ಪ್ರಯೋಗವಾಗಿದೆಯೆಂಬ ಲೇಖಕರ ಮಾತು ಅಂಥವರು ಮೆಚ್ಚಿಯೂ ಇದ್ದಾರೆಂಬುದಕ್ಕೆ ಸಾಕ್ಷಿಯಾಗಿದೆ. ರಂಗದ ಮೇಲೆ ನಾಟಕ ಸ್ವಲ್ಪಮಟ್ಟಿಗೆ ಯಶಸ್ವಿಯಾದೀತೆಂಬುದಕ್ಕೆ ಅದು ಸೂಚನೆಯೇನೊ!

—ಕರುಣಾಕರನ್

ವರ್ಡ್ಸ್‌ವರ್ತ್ ಮಹಾಕವಿಯ "ಕಾವ್ಯ ಮತ್ತು ಕಾವ್ಯದ ಶಬ್ದರೀತಿ": "ಭಾಷಾಂತರ-ಸಂಗ್ರಹ" ಕಾರರು : ಶ್ರೀ ಜಿ. ಗುಂಡಣ್ಣ, ಎಂ. ಎ.; ಪ್ರಕಾಶಕರು : ಶ್ರೀ ಜಿ. ಗುಂಡಣ್ಣ, ಎಂ.ಎ., ಪ್ರಥಮದರ್ಜೆಕಾಲೇಜು, ಚಿತ್ರದುರ್ಗ; ಪುಟ ೩೧. ಬೆಲೆ: ನ. ಪೈ. ೦-೪೦ ; ಅಧಿಕೃತ ಮಾರಾಟಗಾರರು : ಸಾಧನ ಪುಸ್ತಕ ಭಂಡಾರ, ಮೈಸೂರು.

ಇದು ಇಂಗ್ಲಿಷ್ ಕಾವ್ಯಪ್ರಪಂಚದಲ್ಲಿ 'ಪೋಯೆಟ್ ಲಾರೇಟ್' ಎಂಬ ಮಹಾ ಪ್ರಶಸ್ತಿ ವಿಜೇತನಾದ ವರ್ಡ್ಸ್‌ವರ್ತ್ ಕವಿ ತನ್ನ "ಲಿರಿಕಲ್ ಬ್ಯಾಲಡ್ಸ್" ಎಂಬ ಕವನ ಸಂಕಲನದ ದ್ವಿತೀಯ ಸಂಸ್ಕರಣಕ್ಕೆ ೧೮೦೦ರಲ್ಲಿ ಬರೆದ "Poetry And Poetic Diction" ಎಂಬ ಮುನ್ನುಡಿಯ "ಭಾಷಾಂತರ ಸಂಗ್ರಹ." ಜನಪದದ ಜೀವಂತ ಭಾಷೆಯನ್ನು ತನ್ನ ಕಾವ್ಯವಾಹಿನಿಗೆ ಮುಖ್ಯ ಪಾತ್ರವನ್ನಾಗಿ ಮೊತ್ತ ಮೊದಲು ಮಾಡಿಕೊಂಡ ಕೀರ್ತಿ ವರ್ಡ್ಸ್‌ವರ್ತ್ ಕವಿಯದು. ಈ ದಾರಿಯಲ್ಲಿ ಜಗತ್ತಿನ ಬೇರೆ ಬೇರೆ ಸಾಹಿತ್ಯದಲ್ಲಿ ಅನೇಕ ಕವಿಗಳು ಮುಂದರಿದು ಯಶಃಶಿಖರವನ್ನೇರುವಂತಾಯಿತು. ಹೊಸಗನ್ನಡದ ಕವಿಗಳ ಕಣ್ಮಣಿ, ಮಹಾಕವಿ ಬೇಂದ್ರೆಯವರು ಕನ್ನಡದ ಜೀವಂತ ಭಾಷೆಯನ್ನು ತಮ್ಮ ಕಾವ್ಯವಾಹಿನಿಗೆ ಅಳವಡಿಸಿಕೊಂಡು ಜನಪ್ರಿಯ ಕವಿಗಳಾಗಿ ಜನತೆಯ, ಜಗತ್ತಿನ ಆಶೋತ್ತರಗಳನ್ನು ಆಡು

ಮಾತಿನಲ್ಲಿ ಮಿಡಿದರು. ಹೀಗೆ ಕಾವ್ಯದ ಭಾಷೆಯಲ್ಲಿ ಕ್ರಾಂತಿಮಾಡಿದವನು ವರ್ಡ್ಸ್‌ವರ್ತ್ ಕವಿ. ಅವನು ಹಿಂದಿನ ಸಂಪ್ರದಾಯಬದ್ಧ ಜಟಿಲ, ಕೃತಕ ಭಾಷೆಯನ್ನು ಬದಿಗೊತ್ತಿ ಕಾವ್ಯಶ್ರೀಯನ್ನು ಸರ್ವಜನಗ್ರಾಹ್ಯವನ್ನಾಗಿ ಮಾಡಿ, ಮನಸ್ಸನ್ನು ಮುಟ್ಟಿ, ಹೃದಯವನ್ನು ಮುತ್ತಿ ರಸಾನುಭವವನ್ನುಂಟುಮಾಡುವ ವಚೋವಿಲಾಸವನ್ನು ಮೆರೆದನು.

ವರ್ಡ್ಸ್‌ವರ್ತ್ ಕವಿಯ ಕಾವ್ಯ ತತ್ತ್ವವನ್ನು ವಿವರಿಸುವ ಈ ಮುನ್ನುಡಿಯನ್ನು ಶ್ರೀ ಜಿ. ಗುಂಡಣ್ಣ, ಅವರು ಬಹು ಶ್ರಮಪೂರ್ವಕವಾಗಿ ಕನ್ನಡಕ್ಕೆ ತಂದಿದ್ದಾರೆ. ಅದರ ಸಾರಾಂಶವಿಷ್ಟು: ಈ ಪ್ರಬಂಧದಲ್ಲಿ ಕವಿ, ಕಾವ್ಯವಸ್ತು, ಕಾವ್ಯತತ್ತ್ವ, ಛಂದಸ್ಸು, ಕಾವ್ಯ ಭಾಷೆಗಳ ಮೇಲೆ ವರ್ಡ್ಸ್‌ವರ್ತ್ ಕವಿ ತನ್ನದೇ ಆದ ವಿಚಾರ ಸರಣಿಯನ್ನು ಹರಿಸಿದ್ದಾನೆ. ಇದರಲ್ಲಿ ಅನೇಕ ಸುಂದರ, ಉಪಾದೇಯಾಂಶಗಳಿದ್ದು, ಸಹೃದಯರ ಗೌರವಕ್ಕೆ ಪಾತ್ರವಾಗುವ ಅನಿರ್ವಚನೀಯ ಗೂಢ ಸತ್ಯವಿದೆ. ಇದು ಲೋಕವೃತ್ತಕ್ಕೂ, ಕಾವ್ಯವೃತ್ತಕ್ಕೂ ವರ್ಡ್ಸ್‌ವರ್ತ್ ಕವಿ ನಿರ್ಮಿಸಿದ ಒಂದು ಸೌಹಾರ್ದ ಸೇತು! ಆಡುಮಾತಿಗೂ ಕಾವ್ಯಯೋಗದ ಕಾಂತಿಯನ್ನಿತ್ತ ಆತನ ಔದಾರ್ಯ ಚಿರಸ್ಮರಣೀಯವಾದುದು.—ಈ ರೀತಿಯ ಅರ್ಥ ಬರುವಂತೆ "ಭಾಷಾಂತರ-ಸಂಗ್ರಹ"ಕಾರರು ಪ್ರಸ್ತಾಪಿಸಿದ್ದಾರೆ.

"ವಿಶದವಾದ ಭಾವೋದ್ದೀಪನವಾದಾಗ ಸಾಮಾನ್ಯ ಜನರು ಮಾತಾಡುವ ನಿಜವಾದ ಜೀವಂತ ಭಾಷೆಯಿಂದ ಆರಿಸಿದ ಪದಬಂಧ(Diction)ವನ್ನು ಛಂದಸ್ಸಿನಲ್ಲಿ ಅಳವಡಿಸಿದರೆ ಕವಿಯ ಉದ್ದೇಶ ಸಾರ್ಥಕವಾಗುತ್ತದೆ" ಎಂದು ಕವಿ ತನ್ನ ಕವನಸಂಕಲನದ ಉದ್ದೇಶವನ್ನು ಮೊತ್ತಮೊದಲು ನಿವೇದಿಸಿದ್ದಾನೆ. "ಸಾಮಾನ್ಯ ಜೀವನದ ಪ್ರಸಂಗಗಳನ್ನೂ, ಸನ್ನಿವೇಶಗಳನ್ನೂ ಆರಿಸಿಕೊಳ್ಳುವುದು; ಅವುಗಳನ್ನು ಕೊನೆಯವರೆಗೂ, ಸಾಮಾನ್ಯ ಜನರು ನಿಜವಾಗಿ ಬಳಸುವ ಭಾಷೆಯಿಂದ ಆಯ್ದ ಪದಬಂಧದಲ್ಲಿ ಅಭಿವ್ಯಕ್ತಮಾಡುವುದು ಅಥವಾ ವರ್ಣಿಸುವುದು; ಅಲ್ಲದೆ, ಅವುಗಳಿಗೆ ಸ್ವಲ್ಪ ಕಲ್ಪನೆಯ ಬಣ್ಣ ಬಳಿದು, ಓದುವವನ ಮನಸ್ಸಿಗೆ ಸಾಮಾನ್ಯ ವಸ್ತುಗಳೂ ಅಸಾಮಾನ್ಯ ರೂಪದಲ್ಲಿ ಕಾಣುವಂತೆ ತೋರಿಸುವುದು; ಎಲ್ಲದಕ್ಕಿಂತ ಮೇಲಾಗಿ, ಪ್ರಸಂಗ, ಸನ್ನಿವೇಶಗಳನ್ನು ಸ್ವಾರಸ್ಯಗೊಳಿಸುವುದಕ್ಕಾಗಿ ಮನಸ್ಸನ್ನು ಆಕರ್ಷಿಸುವ ಆಶೆಯಿಂದಲ್ಲದಿದ್ದರೂ, ಪ್ರಾಮಾಣಿಕ ಬುದ್ಧಿಯಿಂದ ನಮ್ಮ ಪ್ರಕೃತಿಯ ಮೂಲಭೂತ ನಿಯಮಗಳನ್ನು ಅವುಗಳಲ್ಲಿ ಗುರುತಿಸುವುದು" ಎಂದು ಕವಿ ತನ್ನ ಕವನ ಸಂಕಲನದಲ್ಲಿ ಉದ್ದೇಶಿತವಾದ ಮುಖ್ಯ ಧ್ಯೇಯವನ್ನು ಹೇಳಿಕೊಂಡಿದ್ದಾನೆ.

ಕಾವ್ಯಲಕ್ಷಣವನ್ನು ಹೇಳುತ್ತ, "ಎಲ್ಲ ಉತ್ತಮ ಕಾವ್ಯಗಳೂ ಸಹಜ ಸಾಧಿತವಾಗಿ ಅಭಿವ್ಯಕ್ತವಾದ ಅಗಾಧ ಚಿತ್ತವೃತ್ತಿಗಳು" ಎಂದು ಕವಿ ಸೂತ್ರಪ್ರಾಯವಾಗಿ ನಿರೂಪಿಸಿದ್ದಾನೆ. ಮುಂದೆ ಕಾವ್ಯಶೈಲಿಯನ್ನು ಕುರಿತು, "ನಾನು ಸಹೃದಯನನ್ನು ನನ್ನ ಕವನಗಳಲ್ಲಿ ಕಾಣಿಸಿಕೊಳ್ಳುವ ಪಾತ್ರಗಳೊಡನೆ ಜೀವಂತವಾಗಿ ವ್ಯವಹರಿಸು

ವಂತೆ ಮಾಡಲು ಪ್ರಯತ್ನಿಸಿದ್ದೇನೆ. ಇದರಿಂದ ಸಹೃದಯನಾದವನು ಕಾವ್ಯ ವಸ್ತುಗಳ ವಿಷಯದಲ್ಲಿ ಹೆಚ್ಚು ರಸಾನುಭವ ಹೊಂದುತ್ತಾನೆಂದು ನನ್ನ ಭಾವನೆ. ಬೇರೆ ಮಾರ್ಗವನ್ನು ಅನುಸರಿಸಿದ ಇತರ ಕವಿಗಳೂ ಕೂಡ ಅವರಲ್ಲಿ ಇಂಥದೇ ರಸಾನುಭವವನ್ನುಂಟುಮಾಡಬಹುದು. ಅವರ ಸಾಮರ್ಥ್ಯದ ಬಗ್ಗೆ ನಾನು ವಿರೋಧಿಸುವುದಿಲ್ಲ; ಆದರೆ ನನ್ನ ಸ್ವಂತ ಸಾಮರ್ಥ್ಯದ ಬಗ್ಗೆ ನನಗೆ ಅತ್ಯಂತ ಅಭಿಮಾನವಿದೆ" ಎಂದು ಕವಿ ನಿರೂಪಿಸಿದ್ದಾನೆ. ಕಾವ್ಯತತ್ತ್ವಗಳಲ್ಲೊಂದಾದ ಕಾವ್ಯದ ಪದಬಂಧ(Poetic Diction)ವನ್ನು ಕುರಿತು ವರ್ಡ್ಸ್‌ವರ್ತ್ ಕವಿ ಹೀಗೆ ಅಭಿಪ್ರಾಯ ಪಡುತ್ತಾನೆ: "'ಕಾವ್ಯದ ಪದಬಂಧ' ಎಂದು ಕರೆಸಿಕೊಳ್ಳುವ ಉಕ್ತಿ ವೈಚಿತ್ರ್ಯದ ವಿಶಿಷ್ಟ ಭಾಷೆಯನ್ನು ಈ ಸಂಕಲನದಲ್ಲಿ ನೀವು ಹೆಚ್ಚು ಕಾಣಲಾರಿರಿ. ಅದನ್ನು ಸೃಷ್ಟಿಸುವುದಕ್ಕಾಗಿ ಕವಿಗಳು ಎಷ್ಟು ಶ್ರಮವಹಿಸುತ್ತಾರೋ, ಅದನ್ನು ಕೈಬಿಡುವ ಕಾರ್ಯದಲ್ಲಿ ನಾನು ಅಷ್ಟೇ ಪ್ರಯತ್ನ ವಹಿಸಿದ್ದೇನೆ. . . . ನನ್ನ ಶ್ರದ್ಧಾದೃಷ್ಟಿಯನ್ನು ನನ್ನ ಕಾವ್ಯವಸ್ತುವಿನಲ್ಲಿ ಕೇಂದ್ರೀಕರಿಸಲು ನಾನು ಸದಾ ಯತ್ನಿಸಿದ್ದೇನೆ. ಇದರ ಪರಿಣಾಮವಾಗಿ ನನ್ನ ಕವನಗಳಲ್ಲಿ ಸ್ವಕಲ್ಪಿತವಾದ ಕೃತಕ ವರ್ಣನೆಗಳು ಇಲ್ಲವೆಂದೇ ನನ್ನ ನಂಬಿಕೆ. ನನ್ನ ಭಾವನೆಗಳು ಆಯಾ ವಸ್ತುಗಳ ಬೆಲೆಗನುಗುಣವಾದ ಭಾಷೆಯಲ್ಲೇ ಅಭಿವ್ಯಕ್ತವಾಗಿವೆ. ಇದರಿಂದ ಒಂದು ಒಳ್ಳೆಯ ಅಂಶ ಸಾಧಿತವಾಗಿದೆ. ಅದೇ ಎಲ್ಲ ಉತ್ತಮ ಕಾವ್ಯಗಳ ಮುಖ್ಯ ಲಕ್ಷಣವಾದ ಸದಸದ್ವಿವೇಕ."

ಕಾವ್ಯದ ಗದ್ಯತೆಯ ವಿಚಾರ ಪ್ರಸ್ತಾಪಿಸುತ್ತ ಕವಿ ಹೀಗೆ ಹೇಳುತ್ತಾನೆ: "ಪ್ರತಿಯೊಂದು ಉತ್ಕೃಷ್ಟ ಕಾವ್ಯದ ಹೆಚ್ಚಿನ ಭಾಗ, ಅದರಲ್ಲೂ ಅತ್ಯುತ್ಕೃಷ್ಟ ಪಂಕ್ತಿಗಳೂ ಕೂಡ, ಛಂದಸ್ಸಿಗೆ ಅಳವಟ್ಟಿರುವ ನಿಯಮವೊಂದನ್ನು ಬಿಟ್ಟರೆ, ಅದು ಉತ್ಕೃಷ್ಟ ಗದ್ಯದ ಭಾಷೆಯಿಂದೇನೂ ಭಿನ್ನವಲ್ಲ ಎಂದು ತೋರಿಸಿಕೊಡುವುದು ಸುಲಭಸಾಧ್ಯ. ಅತ್ಯುತ್ತಮ ಕವನಗಳ ಅತ್ಯಂತ ಸ್ವಾರಸ್ಯವಾದ ಭಾಗಗಳು ಉತ್ಕೃಷ್ಟ ಗದ್ಯದ ಭಾಷೆಯಲ್ಲಿರುತ್ತವೆ." ಈ ಮಾತು ಆಧುನಿಕ ಕಾವ್ಯಗಳಲ್ಲಿ ಇಂದಿಗೂ ಸತ್ಯವಾಗಿದೆ ಎಂಬುದನ್ನು ನಿದರ್ಶಿಸುತ್ತದೆ. ಗದ್ಯದಲ್ಲೂ ಒಂದು ನಿಯತವಾಗಿ ನಿಲುಕುವ ಲಯವಿನ್ಯಾಸವಿದೆ ಎಂಬುದನ್ನು ವರ್ಡ್ಸ್‌ವರ್ತ್‌ನ ಈ ಮಾತು ಪರೋಕ್ಷವಾಗಿ ಪ್ರತಿಪಾದಿಸುತ್ತದೆ: "ಕಾವ್ಯ ದೇವತೆಗಳ ಕಣ್ಣೀರನ್ನೇನೂ ಸುರಿಸುವುದಿಲ್ಲ. ಅದು ಸುರಿಸುವುದು ಸ್ವಾಭಾವಿಕವಾದ ಮಾನವರ ಕಣ್ಣೀರನ್ನೇ. ಅದರಲ್ಲಿ ಹರಿಯುವುದು ದೇವತೆಗಳ ಧಮನಿಗಳಲ್ಲಿ ಪ್ರವಹಿಸುವ ಸೂಕ್ಷ್ಮದ್ರವ್ಯವೇನೂ ಅಲ್ಲ. ಕಾವ್ಯದಲ್ಲಿ ಹರಿಯುವ ಜೀವರಸ ಗದ್ಯದಲ್ಲಿ ಹರಿಯುವ ಜೀವರಸದಿಂದೇನೂ ಭಿನ್ನವಾಗಿಲ್ಲ. ಎರಡರಲ್ಲೂ ಹರಿಯುವುದು, ಒಂದೇ ಮಾನವರಕ್ತ."

ಕಾವ್ಯದಿಂದ ಲಭಿಸುವ ದರ್ಶನವನ್ನು ಪ್ರಸ್ತಾಪಿಸುತ್ತ ಕವಿ ಹೀಗೆ ಹೇಳುತ್ತಾನೆ: "ಬರವಣಿಗೆಗಳಲ್ಲೆಲ್ಲ ಕಾವ್ಯ ಅತ್ಯಂತ ತಾತ್ತ್ವಿಕವಾದುದು ಎಂದು ಅರಿಸ್ಟಾಟಲ್

ಹೇಳಿರುವುದನ್ನು ನಾನು ಬಲ್ಲೆ. ಅದರ ಗುರಿ ಸತ್ಯ. ವೈಯಕ್ತಿಕವಾದ ಅಥವಾ ಪರಿಮಿತ ಸತ್ಯವಲ್ಲ. ಅದು ವಿಶ್ವಸಾಮಾನ್ಯ ಸತ್ಯ; ಪ್ರಾಯೋಗಿಕ ಸತ್ಯ. ಅದು ಬಾಹ್ಯ ಪ್ರಮಾಣಗಳ ಮೇಲೆ ನಿಂತಿರುವ ಸತ್ಯವಲ್ಲ; ಭಾವಾವೇಶದ ಮೂಲಕ ಹೃದಯಮಂದಿರಕ್ಕೆ ಜೀವಂತವಾಗಿ ಪ್ರವೇಶಿಸುವ ಸತ್ಯ; ಅದು ಸ್ವಯಂ ಪ್ರತ್ಯಕ್ಷ ಸತ್ಯ."

ಈ ಕೆಳಗಿನ ಮಾತುಗಳು ವರ್ಡ್ಸ್‌ವರ್ತ್ ಕವಿಯ ಮುನ್ನುಡಿಯಲ್ಲಿ ಕಂಡು ಬರುವ ಇನ್ನು ಕೆಲವು ಸ್ವಾರಸ್ಯಾಂಶಗಳು: "ಮಾನವ ಬುದ್ಧಿ ಪ್ರಕೃತಿಯ ಅತ್ಯಂತ ಸುಂದರ ಗುಣ, ಪ್ರಿಯಗುಣಗಳನ್ನು ಪ್ರತಿಬಿಂಬಿಸಬಲ್ಲ ಸ್ವಾಭಾವಿಕವಾದ ಕನ್ನಡಿ." "ಕವಿ ಒಂದು ಕಾವ್ಯವನ್ನು ಕಟ್ಟುತ್ತಾನೆ; ಸರ್ವ ಮಾನವ ಕುಲವೂ ಆ ಕಾವ್ಯ ಗಾನದಲ್ಲಿ ಭಾಗಿಯಾಗುತ್ತದೆ." "ಕಾವ್ಯವಸ್ತು ಸರ್ವವ್ಯಾಪಿ; ವಸ್ತುತಃ ಕಣ್ಣು, ಕಿವಿ ಮುಂತಾದ ಬಾಹ್ಯೇಂದ್ರಿಯಗಳು ಕವಿಯ ಆಪ್ತ ನಿರ್ದೇಶಕರಾದರೂ ಕೂಡ, ಅವನ ರೆಕ್ಕೆಗಳಿಗೆ ಬೀಸಲನುಕೂಲವಾದ ಭಾವಪರಿಸರಣ ನಿರ್ಮಿತವಾಗುವಲ್ಲೆಲ್ಲ ಅವನು ತನ್ನ ಒಲವಿನ ಲೋಕವನ್ನು ಕಾಣುತ್ತಾನೆ. ಕಾವ್ಯ ಸರ್ವ ಜ್ಞಾನಗಳ ಆದಿ, ಅಂತ್ಯ; ಮಾನವ ಹೃದಯವೆಷ್ಟು ಅಮರವೋ ಕಾವ್ಯವೂ ಅಷ್ಟೇ ಅಮರವಾದುದು." "ಕವಿ ಮಾನವರ ಇಷ್ಟಾನಿಷ್ಟ ಭಾವಾನುಭವಗಳಲ್ಲಿ ಏಕಾತ್ಮನಾಗಿ ಭಾವಿಸುತ್ತಾನೆ; ಅನುಭವಿಸುತ್ತಾನೆ." "ಕವಿಗಳು ಬರೆಯುವುದು ಕವಿಗಳಿಗಾಗಿಯಲ್ಲ; ಜನಗಳಿಗಾಗಿ, ಜನತೆಗಾಗಿ . . . ಇದನ್ನು ಸಾಧಿಸುವಾಗ ಅವನು ಜನಜೀವನದ ನಿಜವಾದ ಭಾಷೆಯಿಂದ ತನ್ನ ಕಾವ್ಯಭಾಷೆಯನ್ನು ಕಟ್ಟಿಕೊಳ್ಳುವುದರಿಂದ, ಅವನ ಮಾರ್ಗ ಸುಗಮವಾಗುತ್ತದೆ; ಸುರಕ್ಷಿತವೆನಿಸುತ್ತದೆ." "ಛಂದಸ್ಸಿನ ವಿಚಾರದಲ್ಲಿ ಮಾತ್ರ ಕವಿ ಸಹೃದಯರಿಬ್ಬರೂ ಸ್ವೇಚ್ಛೆಯಿಂದ ವಿಧೇಯರಾಗಿ ಅದನ್ನು ಸ್ವೀಕರಿಸುತ್ತಾರೆ. ಭಾವಾನುಭವದ ಸಹಜತೆಯನ್ನು ಕೆಡಿಸದೆ ಇದ್ದರೆ ಆ ಛಂದಸ್ಸು ತನ್ನ ಗುಣ ಸಾಮರ್ಥ್ಯದಿಂದ ರಸಾನುಭವವನ್ನು ಉತ್ಕರ್ಷಿಸುವುದೆಂದು ಯುಗಯುಗಗಳ ಅನುಭವಕ್ಕೆ ಬಂದಿದೆ."

ವರ್ಡ್ಸ್‌ವರ್ತ್ ಕವಿ ತಾನೇಕೆ ಗದ್ಯ ಪದ್ಯ ಪ್ರಕಾರಗಳಲ್ಲಿ ಪದ್ಯವನ್ನೇ ಆರಿಸಿಕೊಂಡನೆಂದು ತನ್ನ ಮುನ್ನುಡಿಯಲ್ಲಿ ಹೇಳುತ್ತಾನೆ: "ಜಗತ್ತಿನ, ಜೀವನದ ವಿವಿಧ ಪ್ರವೃತ್ತಿಗಳು ನಾನಾರೀತಿಯ ರೂಪಚಿತ್ರಗಳನ್ನು ಒದಗಿಸುವುದರಿಂದ ಅವುಗಳನ್ನು ವಿಶದವಾಗಿ, ಸುಂದರವಾಗಿ ಗದ್ಯದಲ್ಲಿ ಚಿತ್ರಿಸಿದರೂ ತಪ್ಪೇನಿಲ್ಲ. ಅದಕ್ಕೆ ಛಂದಸ್ಸಿನ ಸೊಗಸೂ ಸಂಮಿಳಿತವಾಗುವುದಾದರೆ ಅದನ್ನು ನಾನೇಕೆ ಬಳಸಬಾರದು? ಎಲ್ಲ ರಾಷ್ಟ್ರಗಳೂ ಛಂದೋಮಯ ಭಾಷೆಯಲ್ಲಿ ಆ ಸೊಬಗು ಇದೆಯೆಂದು ಒಪ್ಪಿಕೊಂಡಿರುವುದರಿಂದ ಅದನ್ನು ಬಳಸುವುದರಲ್ಲಿ ನನ್ನ ಕಾರ್ಯ ಇನ್ನೂ ಅಧಿಕ ಪ್ರಶಂಸಾರ್ಹವೆನಿಸಿತು."

ಕಾವ್ಯಭಾಷೆಯನ್ನು ಪ್ರಸ್ತಾಪಿಸುತ್ತ ವರ್ಡ್ಸ್‌ವರ್ತ್ ಕವಿ ಹೀಗೆ ಬರೆಯುತ್ತಾನೆ:

"ಎಲ್ಲ ರಾಷ್ಟ್ರದ ಆದಿಕವಿಗಳು ಜೀವನದ ಸಹಜ ಸನ್ನಿವೇಶಗಳಿಂದ ಪ್ರೇರಿತರಾಗಿ ಕಾವ್ಯಸೃಷ್ಟಿಯಲ್ಲಿ ತೊಡಗಿದರು. ಅವರು ಸ್ವಾಭಾವಿಕ ರೀತಿಯಲ್ಲಿ ಮಾನವರಾಗಿ ಬರೆದರು; ಅಗಾಧ ಭಾವಸಂವೇದನೆಯಲ್ಲಿ ಮಗ್ನರಾಗಿ ಬರೆದರು. ಇದರಿಂದ ಅವರ ಭಾಷೆ ಗಂಭೀರವಾಯಿತು; ಸಹಜವಾಯಿತು; ಸಾಂಕೇತಿಕವಾಯಿತು. ಅನಂತರದ ಕವಿಗಳು 'ಕವಿ' ಎಂಬ ಕೀರ್ತಿಗೆ ಮನಸ್ಸು ಸೋತವರಾಗಿ .... ಸಹಜ ಅನುಭಾವವಿಲ್ಲದ ಭಾವಚಿಂತನೆಗಳಿಗೆ ವಶರಾಗಿ ಕಾವ್ಯಭಾಷೆಯನ್ನು ನಿರ್ಜೀವಗೊಳಿಸಿದರು."

"ಜನರಾಡುವ ಭಾಷೆಯಿಂದ ದೂರವಾದಷ್ಟು ಕಾವ್ಯದ ಗೌರವ ಹೆಚ್ಚುತ್ತದೆ ಎಂಬ ಭಾವನೆಯಿಂದ ಕಾವ್ಯವಾಹಿನಿಯ ಪಕ್ಕದಲ್ಲಿಯೇ ಪಾಂಡಿತ್ಯದ ಕಗ್ಗಾಡುಗಳನ್ನು ಬೆಳೆಸಿಬಿಟ್ಟರು" ಎಂದು ವರ್ಡ್ಸ್‌ವರ್ತ್ ಕವಿ ತನ್ನ ಕಾವ್ಯಭಾಷೆಯ ವೈಶಿಷ್ಟ್ಯ, ಮಹತ್ತ್ವಗಳನ್ನು ವಿಶದವಾಗಿ ಹೇಳಿಕೊಂಡಿದ್ದಾನೆ.

ವರ್ಡ್ಸ್‌ವರ್ತ್ ಕವಿಯ "Poetry and poetic diction" ಎಂಬ ಮುನ್ನುಡಿಯ ಸಾರಾಸಾರಗಳನ್ನು ವಿಮರ್ಶಿಸುವುದು ನನ್ನ ಕರ್ತವ್ಯವಲ್ಲ. ಅದರ "ಭಾಷಾಂತರ ಸಂಗ್ರಹ"ದ ವಿಮರ್ಶನ ಕಾರ್ಯ ಪ್ರಸ್ತುತವಾದುದು. ಭಾಷಾಂತರ ಪರಕಾಯ ಪ್ರವೇಶದಷ್ಟು ಕಷ್ಟಸಾಧ್ಯವೆಂದು ಹಿರಿಯರು ಹೇಳುತ್ತ ಬಂದಿದ್ದಾರೆ. ಆದರೂ, ನಮ್ಮ ಕನ್ನಡದಲ್ಲಿ ಅನುವಾದ ಸಾಹಿತ್ಯ ನಿರಂತರವಾಗಿ ಸಾಗುತ್ತ ಬಂದಿದೆ. ಆದರೆ ಆ ಭಾಷಾಂತರ ರಾಶಿಯಲ್ಲಿ ಮೂಲಕೃತಿಯ ಸ್ವಾರಸ್ಯವನ್ನು 'ಚ,ಚು' ತಪ್ಪದೆ ತಂದ ಕೃತಿಗಳು ಕೇವಲ ಕೆಲವು. ಭಾಷಾಂತರ ಶಬ್ದ ಶಬ್ದಗಳನ್ನು ಕೃತಕವಾಗಿ ಇನ್ನೊಂದು ಭಾಷೆಯಲ್ಲಿ ಇಳಿಸುವ ಶಸ್ತ್ರಚಿಕಿತ್ಸೆಯಾಗಬಾರದು; ಹಾಗೆ ಮಾಡಿದಲ್ಲಿ ಮೂಲಕೃತಿಯ ಸೌಂದರ್ಯ, ಸ್ವಾರಸ್ಯ, ರಸಗಳು ಅನುವಾದ ಕೃತಿಯಲ್ಲಿ ಉಳಿಯದು.

"ಕಾವ್ಯ ಮತ್ತು ಕಾವ್ಯದ ಶಬ್ದರೀತಿ" ಎಂಬ "ಭಾಷಾಂತರ ಸಂಗ್ರಹ" ಯಶಸ್ವಿಯಾದ ಭಾಷಾಂತರ ಕೃತಿಯಾಗಿಲ್ಲ. ಅಸಂಖ್ಯ ಲೋಪದೋಷಗಳು ತಲೆಹಾಕಿವೆ. ಮೊದಲನೆಯದಾಗಿ, ಇದನ್ನು "ಭಾಷಾಂತರ ಸಂಗ್ರಹ"ವಾಗಿ ತರಬಾರದಿತ್ತು ಎನಿಸುತ್ತದೆ. ಮೂಲಕೃತಿಯನ್ನು ಸಮಗ್ರವಾಗಿ ಕನ್ನಡಕ್ಕೆ ಇಳಿಸಿದ್ದರೆ ಹೆಚ್ಚು ಉಪಾದೇಯವಾಗುತ್ತಿತ್ತು; ಉಪಕಾರವಾಗುತ್ತಿತ್ತು. ಈ "ಭಾಷಾಂತರ ಸಂಗ್ರಹ" ಬಂದರೂ ಕೂಡ, ಮೂಲಕೃತಿಯನ್ನು ನೋಡುವ ಕಾರ್ಯ ಇನ್ನೂ ಉಳಿದುಕೊಂಡಿರುವಂತಾಯಿತು!

ಭಾಷಾಂತರಕಾರರ ಅಧಿಕಶ್ರಮ ಪುಟ ಪುಟದಲ್ಲೂ, ಪದ ಪದದಲ್ಲೂ ಕಂಡು ಬರುತ್ತದೆ. "Poetic diction" ಎಂಬುದನ್ನು ಕನ್ನಡಕ್ಕೆ ತರುವುದು ತುಂಬ ಕಷ್ಟ, ನಿಜ. ಇದಕ್ಕೆ ಸಂವಾದಿಯಾಗಿ "ಕಾವ್ಯಭಾಷೆ" ಅಥವಾ "ಕಾವ್ಯದ ಪದಬಂಧ" ಎಂದಿಟ್ಟುಕೊಂಡರೆ ಹೆಚ್ಚು ಉಚಿತವೆಂದೆನಿಸುತ್ತದೆ. ಅಂತೂ, ಮೂಲಕೃತಿಯನ್ನು

ಓದಿ ತಿಳಿಯಲಾರದವರಿಗೆ ಈ ಕನ್ನಡ "ಭಾಷಾಂತರ ಸಂಗ್ರಹ" ಉಪಕಾರವಾದೀತು.

ಭಾಷಾಂತರದ ಭಾಷೆಯ ಬಂಧದಲ್ಲಿ ಬಿಗಿಯಿಲ್ಲ. ಅನುವಾದ ಕೇವಲ ಪದಶಃ ಭಾಷಾಂತರವಾದಂತಿದೆ. ಭಾಷಾಂತರ ಭಾವಗ್ರಹಣವಾದಾಗ ಮಾತ್ರ ಮೂಲ ಕೃತಿಯ ಸ್ವಾರಸ್ಯ ಅನುವಾದ ಕೃತಿಯಲ್ಲಿ ಒಡಮೂಡೀತು. ಭಾಷಾಂತರ ಎಷ್ಟು ಕೃತಕವಾಗಿದೆ ಎಂಬುದಕ್ಕೆ ನಿದರ್ಶನವಾಗಿ ಒಂದೆರಡು ವಾಕ್ಯಗಳನ್ನು ಕೊಡುತ್ತೇನೆ: "ಈ ಕವನಗಳ ಮೊದಲ ಸಂಪುಟವು ಈಗಾಗಲೇ ಎಲ್ಲರ ತಿಳಿವಿನೋದಿಗಾಗಿ ನಿವೇದಿಸಲ್ಪಟ್ಟಿದೆ." "**ಈ ಸಂಪುಟಗಳಲ್ಲಿ** "Poetic diction" (ಕಾವ್ಯದ ಶಬ್ದರೀತಿ) ಎಂದು ಕರೆಯಲ್ಪಡುವ ಉಕ್ತಿ ವೈಚಿತ್ರ್ಯವೆನಿಸಿಕೊಳ್ಳುವ ವಿಶಿಷ್ಟ ಜಾತಿಯ ಭಾಷೆಯನ್ನು **ಈ ಸಂಪುಟಗಳಲ್ಲಿ** ನೀವು ಹೆಚ್ಚು ಕಾಣಲಾರಿರಿ." "**ತಕ್ಷಣದ** ಸಂತೋಷವನ್ನುಂಟುಮಾಡುವ ಈ ಅಗತ್ಯತೆಯಿಂದ ಕವಿಯ ಕಲೆಗೆ ಅವನತಿಯುಂಟಾಗುತ್ತದೆ ಎಂದು ಯಾರೂ ಭಾವಿಸದಿರಲಿ." "ಆದರೂ ಅವುಗಳಲ್ಲಿ ಬಹುಭಾಗಗಳು ಈ ಅಭಿಪ್ರಾಯವನ್ನು ಸಮರ್ಥಿಸುತ್ತವೆ; ಮತ್ತು ನನಗೆ ನಂಬಿಕೆ ಇದೆ."—ಇಂಥ ಕೃತಕ ಭಾಷೆ ಭಾಷಾಂತರದ ಉದ್ದಕ್ಕೂ ಬೇಕಾದಷ್ಟು ಸಿಗುತ್ತದೆ.

ಕನ್ನಡ ಭಾಷೆಗೆ ಸಹಜವಲ್ಲದ ಕರ್ಮಣಿ ಪ್ರಯೋಗದ ಹಾವಳಿ ಇದರ ಉದ್ದಕ್ಕೂ ಬೇಸರ ಹಿಡಿಸುವಷ್ಟು ಬಂದಿದೆ. ಇಂಗ್ಲಿಷ್ ಭಾಷೆಗೆ ಕರ್ಮಣಿ ಪ್ರಯೋಗ ಸಹಜ. ಪದಶಃ ಅನುವಾದ ಮಾಡಿದುದರಿಂದ ಈ ದೋಷ ಉದ್ದಕ್ಕೂ ಉಳಿದು ಬರಬೇಕಾಯಿತು. ನಿವೇದಿಸಲ್ಪಟ್ಟಿದೆ, ಪ್ರಕಟಿಸಲ್ಪಟ್ಟಿದೆ, ಬೆಳೆಸಲ್ಪಟ್ಟಿರುವ, ಪರಿಷ್ಕರಿಸಲ್ಪಟ್ಟದ್ದೇ ಆದರೆ, ತಿದ್ದಲ್ಪಟ್ಟು, ನಾಶಮಾಡಲ್ಪಟ್ಟಿದ್ದರೂ, ಬರೆಯಲ್ಪಟ್ಟಿವೆ, ಧ್ಯಾನಿಸಲ್ಪಟ್ಟುದಕ್ಕೆ, ಮುಂದುವರಿಸಲ್ಪಡುತ್ತದೆ, ನಿರ್ವಹಿಸಲ್ಪಟ್ಟಿದ್ದರೂ, ಉಪಯೋಗಿಸಲ್ಪಟ್ಟಿರುವ, ಪ್ರಶಂಸಿಸಲ್ಪಡುತ್ತದೆ, ಸ್ವೀಕರಿಸಲ್ಪಡುತ್ತದೆ, ವಕ್ರಗೊಳಿಸಲ್ಪಟ್ಟ—ಇವು ಅನುವಾದಕಾರರ ಗದ್ಯದ ವೈಶಿಷ್ಟ್ಯವೆನ್ನುವಷ್ಟರಮಟ್ಟಿಗೆ ಉದ್ದಕ್ಕೂ ವಿರಾಜಿಸುತ್ತಿವೆ.

ಭಾಷೆಯ ಬಂಧದಲ್ಲಿ ಕೃತಕವಾಗಿ ಕಾಣುವ ಇನ್ನೊಂದು ಅಂಶ, ಪ್ರಥಮಾ ವಿಭಕ್ತಿ ಪ್ರತ್ಯಯದ ಪ್ರಯೋಗ. ಒಂದೇ ವಾಕ್ಯದಲ್ಲಿ ಮೂರು ಬಾರಿ ಅವು ಬಂದಿರುವುದನ್ನು ಈ ವಾಕ್ಯದಲ್ಲಿ ಕಾಣಬಹುದು: "ಹೀಗೆ **ಭಾವವು** ಸ್ವಾಭಾವಿಕವಾಗಿ ಸೂಚಿಸುವ ಭಾಷೆಯೊಂದಿಗೆ **ಕವಿಯು** ಅನ್ಯರೀತಿಯ ಠೀವಿ, ವೈಖರಿಗಳನ್ನು ಸೇರಿಸಿದ್ದೇ ಆದರೆ ಅದರ **ಅಸಂಬದ್ಧತೆಯು** ಬುದ್ಧಿವಂತನಾದ ಓದುಗನನ್ನು ಅಸಮಾಧಾನದಿಂದ ಬೇಯಿಸುತ್ತದೆ ಎಂಬುದನ್ನು ನಾನು ಹೇಳಬೇಕಾದುದಿಲ್ಲ." "**ಕೋತಿಯು** ನ್ಯೂಟನನಲ್ಲವೆಂದು ಹೇಳಲು ಹೆಚ್ಚಿಗೆ **ಶ್ರಮವು** ಬೇಕಾಗಿಲ್ಲ."

ಇನ್ನು ಅನುವಾದಿತ ಕೃತಿಯ ಭಾಷೆಯಲ್ಲಿ ತುಂಬ ಅಸಾಧುರೂಪಗಳಿವೆ. ತತ್ವ, ಮಹತ್ವ, ನಂತರ, ತಕ್ಷಣ ಎಂಬ ರೂಪಗಳು ಹಾಗಿರಲಿ; ಕೆಲವು ಅತ್ಯಂತ

ಸಾಮಾನ್ಯ ಶಬ್ದಗಳೇ ತಪ್ಪು ತಪ್ಪಾಗಿ ಪ್ರಯೋಗವಾಗಿರುವುದು ಶೋಚನೀಯ. ಮೊದಲು ಅದರ ಅಸಾಧುರೂಪವನ್ನು ಕೊಟ್ಟು, ಅನಂತರ ಅದರ ಸಾಧುರೂಪವನ್ನು ನಿರೂಪಿಸಿದ್ದೇನೆ: ಉದ್ದಿಶ್ಯ—ಉದ್ದೇಶ; ವೈವಿಧ್ಯತೆ-ವೈವಿಧ್ಯ ; ಅವಶ್ಯಕ-ಆವಶ್ಯಕ; ಅಥವ-ಅಥವಾ ; ಪಾವಿತ್ರ್ಯತೆ-ಪಾವಿತ್ರ್ಯ ; ಪ್ರಶಂಶೆ-ಪ್ರಶಂಸೆ ; ಪ್ರಶಂಶಿತ-ಪ್ರಶಂಸಿತ; ಅವಿರ್ಗಳ-ನಿರರ್ಗಳ. ಭಾಷೆ ಬೆಳೆಯಬೇಕು, ನಿಜ ; ಆದರೆ ಅದು ಅನಾವಶ್ಯಕವಾದ ಅಸಾಧುರೂಪಗಳಿಂದಾಗಬೇಕಿಲ್ಲ !

ಕೆಲವು ಮಾತುಗಳು ಕೇಳಲು ಹಿತವೆನಿಸುವುದಿಲ್ಲ. ಅದನ್ನು ಹಿತವಾಗಿ ಹೇಗೆ ಪ್ರಯೋಗಿಸಬಹುದೆಂಬುದನ್ನು ಪಕ್ಕದಲ್ಲೇ ನಿರೂಪಿಸಿದ್ದೇನೆ : ಆಯ್ಕೆ ಗೈದ-ಆಯ್ದ ; ಇತರೆ-ಇತರ ; ಅನುಭವಮಾಡುತ್ತಾನೆ-ಅನುಭವಿಸುತ್ತಾನೆ; ಯಾವಾಗಿನಂತೆಯೇ-ಎಂದಿನಂತೆಯೇ ; ಒಟ್ಟಂಶ-ಸಾರಾಂಶ ; ಇತರೆಡೆ-ಬೇರೆಡೆ ; ಓದುಗ—ಸಹೃದಯ ; ಚಾಲ್ತಿ-ರೂಢಿ, ಬಳಕೆ ಇತ್ಯಾದಿ.

ಏನೆಂದರೆ, ಏಕೆಂದರೆ, ಆದುದರಿಂದ—ಇವುಗಳ ಪ್ರಯೋಗ ವಿಶೇಷವಾಗಿದೆ. ಇವೂ ಕೂಡ ಕನ್ನಡ ಭಾಷೆಗೆ ಸಹಜವಲ್ಲ ; ಸುಂದರವಲ್ಲ.

ಮುದ್ರಣ ದೋಷಗಳು ವಿಶೇಷವಾಗಿವೆ. ''ತಿದ್ದುಪಡಿ'' ಎಂಬ ಹಾಳೆಯನ್ನು ಹೆಚ್ಚಾಗಿ ಸೇರಿಸಿದುದರಿಂದ ನಾನು ಈ ವಿಚಾರ ಪ್ರಸ್ತಾಪಿಸಬೇಕಾಗಿದೆ. ಅದರಲ್ಲಿ ಕೇವಲ ಮೂರೇ ಮೂರು ತಪ್ಪುಗಳನ್ನು ಹೇಳಿದ್ದಾರೆ. ಅದೂ ಕೇವಲ ಪೂರ್ಣ ವಿರಾಮಚಿಹ್ನೆಗಳ ದೋಷಗಳನ್ನು ಹೇಳಿ, ದೊಡ್ಡ ದೊಡ್ಡ ಎಷ್ಟೋ ತಪ್ಪುಗಳನ್ನು ಸೂಚಿಸದಿರುವುದು ಆಶ್ಚರ್ಯಕರವಾಗಿದೆ. ಮುದ್ರಣ ದೋಷಗಳಲ್ಲಿ ಕೆಲವು ಇವು: ಹುಟುತ್ತವೆ ; ಧೀರ್ಘವಾದ ; " ಅಷ್ಟೇ ಏಕೆ, ಅತ್ಯುತ್ತಮವಾದ ಕವನಗಳ ಅತ್ಯಂತ ಸ್ವಾರಸ್ಯವಾದ **ಭಾಗಗಳು** ಅವಶ್ಯವಾಗಿಯೂ, ಉತ್ತಮವಾಗಿ ಬರೆದ ಗದ್ಯದ ಭಾಷೆಯೇ **ಆಗಿರುತ್ತದೆ.**"; ಛಂಧಸ್ಸೂ; ಜ್ಯೋತಿಷ್ಯಕಾರ; ಸಖಕರವೂ ; ಉದ್ಭುವ **ಗೊಳಿ**ಸಿಕೊಳ್ಳುತ್ತಾನೆ; ಕಟ್ಟು ಕಟ್ಟಳೆಗಳು ; ಉದ್ದರಿಸುವವನು ; ಇಚ್ಚಿಸಿರುತ್ತಾನೆ; ಭಾಷಯಂತಿಲ್ಲದೆ—ಇತ್ಯಾದಿ.

ಅಂತೂ, ಈ ಅನುವಾದವನ್ನು, ಇಂಗ್ಲಿಷ್ ಸಾಹಿತ್ಯದ ಉತ್ತಮ ವಿಮರ್ಶನ ವೊಂದರ ಶ್ರಮಪೂರ್ಣವಾದ "ಭಾಷಾಂತರ ಸಂಗ್ರಹ" ಎನ್ನಬಹುದೇ ವಿನಾ, ಲೇಖಕರ ಪ್ರಯತ್ನವು ನಾವು ನಿರೀಕ್ಷಿಸಬಹುದಾದಷ್ಟು ಸಮರ್ಪಕವಾಗಿಯೂ ಸಾರ್ಥಕವಾಗಿಯೂ ನೆರವೇರಿಲ್ಲವೆಂದು ಹೇಳಬಯಸುತ್ತೇವೆ. ಇಂಗ್ಲಿಷ್ ತಿಳಿಯ ದವರು ಇದನ್ನು ಓದಿ ತೃಪ್ತಿಪಡಬಹುದು.

—ಗುಂಡ್ಮಿ , ಚಂದ್ರಶೇಖರ ಐತಾಳ

ಹೊಸಗನ್ನಡ ಪ್ರಬಂಧ ಸಂಕಲನ : ಸಂಪಾದಕರು : ಶ್ರೀ ಗೊರೂರು ರಾಮಸ್ವಾಮಿ ಐಯಂಗಾರ್ ; ಪ್ರಕಾಶಕರು : ಸಾಹಿತ್ಯ ಅಕಾಡೆಮಿಯ ಪರವಾಗಿ ಕನ್ನಡ ಕವಿಕಾವ್ಯಮಾಲೆ, ಶಾರದಾಮಂದಿರ, ರಾಮಯ್ಯರ್‌ರಸ್ತೆ; ಮೈಸೂರು ಕಿರೀಟ ಅಷ್ಟದಳ; ಪು. xiv+೨೭೧; ಬೆಲೆ: ರೂ. ೪-೫೦.

ಆಧುನಿಕ ಕನ್ನಡ ಗದ್ಯಸಾಹಿತ್ಯದಲ್ಲಿ ಪ್ರಬಂಧಗಳಿಗೇ ಒಂದು ಪ್ರತ್ಯೇಕ ಸ್ಥಾನವು ಮೀಸಲಾಗಿದೆ. ಈವರೆಗೆ ಅನೇಕ ಪ್ರಬಂಧಕಾರರು ಬಿಡಿಬಿಡಿಯಾಗಿ ತಮ್ಮ ಸಂಕಲನ ಗ್ರಂಥಗಳನ್ನು ಪ್ರಕಟಿಸಿರುತ್ತಾರೆ. ಇವುಗಳಲ್ಲದೆ, ಈಗ್ಗೆ ಕೆಲವು ವರ್ಷಗಳ ಹಿಂದೆ ಮನೋಹರ ಗ್ರಂಥಮಾಲೆಯ ಆಶ್ರಯದಲ್ಲಿ, ಪ್ರೊ. ವಿ. ಕೃ. ಗೋಕಾಕರ ನೇತೃತ್ವದಲ್ಲಿ "ಸುಳವು-ಹೊಳವು" ಎಂಬ ಒಂದು ಸಂಕಲನ ಗ್ರಂಥವೂ, ಅಲ್ಲಿಂದ ಇತ್ತೀಚಿಗೆ ಉಷಾ ಸಾಹಿತ್ಯಮಾಲೆಯ ಆಶ್ರಯದಲ್ಲಿ ಶ್ರೀ ಎಸ್. ಅನಂತನಾರಾಯಣ ಅವರ ಸಂಪಾದಕತ್ವದಲ್ಲಿ "ಮುತ್ತು-ಹವಳ" ಎಂಬ ಮತ್ತೊಂದು ಸಂಕಲನ ಗ್ರಂಥವೂ ಪ್ರಕಟವಾದುವು. ಪ್ರಕೃತದಲ್ಲಿ, ಕನ್ನಡದ ಸುಪ್ರಸಿದ್ಧ ಲೇಖಕರಾದ ಶ್ರೀ ಗೊರೂರು ರಾಮಸ್ವಾಮಿ ಐಯಂಗಾರ್ಯರು, ಸಾಹಿತ್ಯ ಅಕಾಡೆಮಿಯ ಆಶ್ರಯದಲ್ಲಿ ಮೂವತ್ತು ಪ್ರಬಂಧಗಳನ್ನು ಒಂದು ಕಡೆ ಜೋಡಿಸಿ ನೀಡಿರುವುದು ಪ್ರಶಂಸನೀಯವಾದ ಸಂಗತಿ. "ಪ್ರಸ್ತಾವನೆ"ಯಲ್ಲಿ ಪ್ರಬಂಧದ ಸ್ವರೂಪ, ಕನ್ನಡ ರಚನೆಗಳ ಇತಿಹಾಸ ಮತ್ತು ಪ್ರಕೃತ ಸಂಕಲನದ ಸೂಕ್ಷ್ಮ ಅವಲೋಕನವನ್ನೂ ಕಡೆಯಲ್ಲಿ ಲೇಖಕರ ವ್ಯಕ್ತಿ ಪರಿಚಯವನ್ನೂ ಮಾಡಿ ಕೊಟ್ಟಿರುತ್ತಾರೆ. ಸಂಪಾದಕರ ಈ ಕಾರ್ಯಭಾಗವೆಲ್ಲ ಬಹುಮಟ್ಟಿಗೆ ಯಶಸ್ವಿಯಾಗಿಯೇ ನೆರವೇರಿದೆಯೆನ್ನಬಹುದು. ಇಲ್ಲಿ ಅಡಕವಾಗಿರುವ ಪ್ರಬಂಧಗಳ ವಿಷಯಕ್ಕೆ ಬಂದರೆ ಒಂದೆರಡು ಅಂಶಗಳನ್ನು ಕುರಿತು ಪ್ರಸ್ತಾಪಿಸಬೇಕೆನ್ನಿಸುತ್ತದೆ. ಮೊದಲನೆಯದಾಗಿ ಇಲ್ಲಿ ಆರಿಸಿರುವ ಕೆಲವು ಪ್ರಬಂಧಗಳು, ಈ ಮೊದಲೇ ಮೇಲೆ ಸೂಚಿಸಿರುವ ಸಂಕಲನ ಗ್ರಂಥಗಳಲ್ಲಿ ಬಂದಿರತಕ್ಕವು. ಈ ಪುನರಾವರ್ತನೆಯನ್ನು ನಿವಾರಿಸಿದ್ದರೆ ಈ ಹೊಸ ಸಂಕಲನವು ಮತ್ತಷ್ಟು ಸಾರ್ಥಕವಾಗುತ್ತಿತ್ತು. ಅನಂತರ, ಇಲ್ಲಿ ಆರಿಸಲಾಗಿರುವ ಎಲ್ಲ ಕೃತಿಗಳೂ ಪ್ರಬಂಧದ ಪರಿಮಿತಿಗೆ ಒಳಪಟ್ಟಿವೆ ಎನ್ನಲಾಗುವುದಿಲ್ಲ. ಕೆಲವು ವ್ಯಕ್ತಿ ಚಿತ್ರಗಳೆನ್ನಿಸಿದರೆ, ಉಳಿದವು ಸಣ್ಣಕತೆಯಂತಿರುವ ಅನುಭವಪ್ರಧಾನವಾದ ಚಿತ್ರಗಳಾಗಿವೆ. ಪ್ರಬಂಧಗಳಿಗೂ (Essays), ಈ ತೆರನಾದ ಚಿತ್ರಗಳಿಗೂ (Sketches) ಇರುವ ಅಂತರವನ್ನು ನಿರ್ದೇಶಿಸುವುದು ಸ್ವಲ್ಪ ಕಷ್ಟವೆನ್ನಿಸಿದರೂ ಸಾಧ್ಯವಾದಷ್ಟುಮಟ್ಟಿಗೆ ಇಂಥ ಸಂಕಲನವನ್ನು ಸಿದ್ಧಪಡಿಸುವಾಗ ಸಂಪಾದಕರು ಈ ಕೆಲಸವನ್ನು ಮಾಡಿಕೊಡುವುದು ಮೇಲು. ಈ ಎರಡು ಕೊರತೆಗಳನ್ನು ಬಿಟ್ಟರೆ, ಕಡೆಯದಾಗಿ ನಮ್ಮ ಮನಸ್ಸನ್ನು ಬಾಧಿಸುವ ಮತ್ತೊಂದು ಪ್ರಶ್ನೆಯೆಂದರೆ, ಹಿಂದೆ ಹೇಳಿದ ಸಂಕಲನ ಗ್ರಂಥಗಳು ಪ್ರಕಟವಾದಂದಿನಿಂದ ಈಚೆಗೆ ಈ ಕ್ಷೇತ್ರದಲ್ಲಿ ಶ್ರಮಿಸಿರುವ ಹೊಸ ಲೇಖಕರ ಬರೆಹಗಳಾವುವೂ ಇಲ್ಲಿ ಕಂಡುಬಾರದಿರುವುದು. ವಿನೋದಪ್ರಧಾನವಾದ ಪ್ರಬಂಧಗಳನ್ನು ಬರೆದಿರುವ ಶ್ರೀಯುತರುಗಳಾದ ನಾಡಿಗೇರ ಕೃಷ್ಣರಾವ್, ನಾಡಿಗೇರ ಗೋವಿಂದರಾವ್, ಬಳ್ಳಾರಿ ಬೀಚಿ ಅವರ ರಚನೆಗಳಾಗಲಿ, ಈಚೀಚೆಗೆ ವಿಚಾರಪ್ರದವಾಗಿ ಹಾಗೂ ಉಲ್ಲಾಸದಾಯಕವಾಗಿ ಕೆಲವು ಪ್ರಬಂಧಗಳನ್ನು ರಚಿಸಿರುವ ಶ್ರೀ ಎಂ. ರಾಮರಾವ್, ಶ್ರೀ

ಎಸ್. ಮಂಜುನಾಥ್ ಮುಂತಾದವರ ಕೃತಿಗಳಾಗಲಿ ಕಂಡುಬಾರದಿರುವುದು ಒಂದು ಸೋಜಿಗವೇ ಸರಿ. ಇಂಥ ಸಂಕಲನ ಗ್ರಂಥಗಳಲ್ಲಿ ಹಿರಿಯರೊಂದಿಗೆ ಆದಷ್ಟುಮಟ್ಟಿಗೆ ಪ್ರವರ್ಧಮಾನಕ್ಕೆ ಬರುತ್ತಿರುವ ನೂತನ ಸಾಹಿತಿಗಳನ್ನೂ ಲಕ್ಷ್ಯದಲ್ಲಿಡಬೇಕಾದದ್ದು ಆಯಾ ಪ್ರಭೇದದ ಬೆಳವಣಿಗೆಯ ದೃಷ್ಟಿಯಿಂದ ಅತ್ಯಗತ್ಯ.

ಪ್ರಕೃತ ಸಂಕಲನದಲ್ಲಿ ನಮ್ಮ ಗಮನಕ್ಕೆ ಬರುವ ಕೆಲವು ಹೊಸ ಲೇಖಕರಲ್ಲಿ 'ಶ್ರೀ ಎನ್ಕೆ' ಅವರ ' ಮೋಡಕಾ ಬಾಜಾರ ", ಶ್ರೀ ರಾ. ಕು. ಅವರ ' ಪಾದತ್ರಾಣ" ಶ್ರೀ ಎನ್. ಎಸ್. ಗದಗಕರ್ ಅವರ ' ಗಿಳಿ', ಶ್ರೀ ದ. ಬಾ. ಕುಲಕರ್ಣಿ ಅವರ ' ಸಾಹಿತ್ಯ ಭಂಡಾರಿ' ಎಂಬ ಬರೆಹಗಳು ಆಶಾದಾಯಕವಾಗಿವೆ. ಹಳಬರಲ್ಲಿ ಶ್ರೀ ಕಸ್ತೂರಿ ಅವರ ತಿಳಿಹಾಸ್ಯ, ಶ್ರೀ ಗೊರೂರು ಅವರ ವಿಡಂಬನಾತ್ಮಕ ಸರಣಿ, ಶ್ರೀ ಜಿ. ಪಿ. ರಾಜರತ್ನಂ ಅವರ ವ್ಯಾಖ್ಯಾನ ಚಾತುರ್ಯಗಳು ಮನಸೆಳೆಯುವಂತಿವೆ. ಶ್ರೀ ಡಿ. ಎಲ್. ನರಸಿಂಹಾಚಾರ್ ಅವರ ವಿಚಾರ ವೈಖರಿ, ಶ್ರೀ ಪು. ತಿ. ನರಸಿಂಹಾಚಾರ್ಯರ, ಚಿಂತನಾಲಹರಿ, ಶ್ರೀ ತೀ. ನಂ. ಶ್ರೀಕಂಠಯ್ಯನವರ ಮೃದುವಿನೋದಗಳು ಗಮನಾರ್ಹವಾಗಿವೆ. ಕನ್ನಡದ ಪ್ರತಿಷ್ಠಾವಂತರಾದ ಲೇಖಕರ ಈ ಮೂವತ್ತು ರಚನೆಗಳೂ ರಸಿಕರಿಗೆ ಒಂದಿಲ್ಲ ಒಂದು ಬಗೆಯಲ್ಲಿ ಆನಂದವನ್ನೋ, ಆಲೋಚನೆಯನ್ನೋ ಉಂಟುಮಾಡಿ ಮನಸ್ಸಿಗೆ ತೃಪ್ತಿಯನ್ನು ನೀಡುವುದರಲ್ಲಿ ಸಂದೇಹವಿಲ್ಲ. ಇಂಥ ಸ್ತುತ್ಯ ಕೆಲಸವನ್ನು ಅಚ್ಚುಕಟ್ಟಾಗಿ ಅಣಿಮಾಡಿಕೊಟ್ಟಿರುವ ಸಂಪಾದಕರಿಗೂ, ಈ ಕೆಲಸಕ್ಕೆ ಉತ್ತೇಜನವಿತ್ತು ಸಹಕರಿಸಿದ ಪ್ರಕಾಶನ ವರ್ಗದವರಿಗೂ ನಮ್ಮ ಅಭಿನಂದನೆಗಳು.

ದೇಗುಲಗಳ ದಾರಿಯಲ್ಲಿ: ಲೇಖಕರು: ಶ್ರೀ ಕೆ. ಬಿ. ಪ್ರಭುಪ್ರಸಾದ ಎಂ.ಎ.; ಪ್ರಕಾಶಕರು: ಸಾರಸವಿಹಾರ, ಸರಸ್ವತೀಪುರ, ಮೈಸೂರು; ಕಿರೀಟ ಅಷ್ಟದಳ; ಪು. vii+೧೫೦ ; ಬೆಲೆ: ರೂ. ೨=೦೦.

ಕನ್ನಡ ಸಾಹಿತ್ಯದ ಗದ್ಯಭಾಗವು ದಿನದಿನಕ್ಕೂ ಬಹುಮುಖವಾಗಿ ಬೆಳೆಯುತ್ತಿರುವುದು ಬಹು ಹರ್ಷದಾಯಕವಾದ ಸಂಗತಿ. ಸಣ್ಣಕತೆ, ಕಾದಂಬರಿಗಳಂತೆಯೇ ಪ್ರವಾಸಕಥನಗಳೂ ಸಹ ವಿಶಿಷ್ಟವಾಗಿ ತಮ್ಮ ನೂತನ ವಿನ್ಯಾಸವನ್ನು ಇಡತೊಡಗಿವೆ. ಶ್ರೀ ವಿ. ಸೀ. ಅವರ " ಪಂಪಾಯಾತ್ರೆ "ಯೇ ಈ ಬಗೆಯ ಲೇಖನಕ್ಕೆ ನಾಂದಿ ಎನ್ನಬಹುದು. ಅಲ್ಲಿಂದೀಚೆಗೆ ಪತ್ರಗಳ ಮೂಲಕ ತಮ್ಮ ವಿದೇಶದ ಅನುಭವ ಸಾರವನ್ನೇ ಚಿತ್ರಿಸಿರುವ ಶ್ರೀ ವಿ. ಕೃ. ಗೋಕಾಕರ " ಸಮುದ್ರದಾಚೆಯಿಂದ " ಎಂಬ ಕೃತಿಯು ಉಲ್ಲೇಖನಾರ್ಹವಾಗಿದೆ. ಇದೇ ತೆರನಾಗಿ ಇತರ ಕೆಲವು ಲೇಖಕರು ವಿಚಾರ ಪೂರಿತವಾಗಿಯೋ, ವಿನೋದ ಪೂರ್ಣವಾಗಿಯೋ ಇಂಥ ಸಾಹಿತ್ಯವನ್ನು ಆಗಿಂದಾಗ್ಗೆ ನಿರ್ಮಿಸಿರುವುದುಂಟು. ಪ್ರಕೃತದಲ್ಲಿ, ಶ್ರೀ ಕೆ. ಬಿ. ಪ್ರಭುಪ್ರಸಾದರವರು ತಮ್ಮ ಮಿತ್ರರೊಂದಿಗೆ ಕೂಡಿ ದಕ್ಷಿಣಭಾರತದ ಯಾತ್ರಾಸ್ಥಳಗಳಿಗೆ ತಾವು ಪ್ರಯಾಣ

ಮಾಡಿ ಬಂದ ಅನುಭವವನ್ನು ಆಹ್ಲಾದದಾಯಕವಾಗುವಂತೆ ಇಲ್ಲಿ ನಿರೂಪಿಸಿರುತ್ತಾರೆ. ತಮ್ಮ ಮಿತ್ರರ ನಡೆನುಡಿಗಳ ಚಿತ್ರಣದೊಂದಿಗೆ ಇಲ್ಲಿ ಮಾಡಿರುವ ಆಯಾ ಸ್ಥಳಗಳ ಸನ್ನಿವೇಶ ವರ್ಣನೆ, ದಾರಿಯುದ್ದಕ್ಕೂ ತಮಗಾದ ಪ್ರಕೃತಿ ಸೌಂದರ್ಯದ ಅನುಭವ ನಿರೂಪಣೆ, ಅನಿರೀಕ್ಷಿತವಾಗಿ ಒದಗಿ ಬಂದ ಸ್ವಾರಸ್ಯಪೂರ್ಣವಾದ ಸಂದರ್ಭಗಳ ಸಮೀಕ್ಷೆಗಳು ಬಹು ಹಿತವಾಗಿ ಮೂಡಿ ಬಂದಿವೆ. ಲೇಖಕರು ಒಂದೊಂದು ಅಧ್ಯಾಯಕ್ಕೂ ಮಾಡಿರುವ ನಾಮಕರಣವೇ ಸಾಕು, ಎಂಥ ಮಂದ ಮತಿಯವನನ್ನಾದರೂ ಜಾಗೃತಗೊಳಿಸಬಲ್ಲುದು ! ಪ್ರಯಾಣ ಸಿದ್ಧತೆಯ ವೈಭವ ಒಂದು ತೆರನಾದರೆ, ದಾರಿಯುದ್ದಕ್ಕೂ ನಡೆದ ತಿಂಡಿ ತೀರ್ಥಗಳ ವಿತರಣೆ, ಗೆಳೆಯರ ಮಾತುಕತೆಗಳು, ಮನುಷ್ಯ ಸಹಜವಾದ ಸರಸ, ಸಂಭ್ರಮಗಳು, ಯಾತ್ರಾಸ್ಥಳದ ಅಪೂರ್ವ ದೃಶ್ಯಗಳು, ಊಹಿಸಲಾರದ ಸ್ವಾರಸ್ಯಕರವಾದ ಪ್ರಸಂಗಗಳು ಮೊದಲಾದುವುಗಳನ್ನು ಲೇಖಕರು ಚಿತ್ತಾಕರ್ಷಕವಾಗಿ ಚಿತ್ರಿಸಿರುತ್ತಾರೆ. ಇಲ್ಲಿನ ನಿರೂಪಣೆಯಲ್ಲಿ ಸ್ಥಳಪುರಾಣವಿದೆ; ಸ್ಥಳ ವರ್ಣನೆಯಿದೆ. ಸ್ವಭಾವ ಚಿತ್ರಣವಿದೆ; ಸನ್ನಿವೇಶಗಳನ್ನು ತಿಳಿಯಾಗಿ ಚಿತ್ರಿಸಬಲ್ಲ ಅನುಪಮ ಕೌಶಲವಿದೆ. ನಗೆಯೂ, ಗಾಂಭೀರ್ಯವೂ ಜೊತೆಗೂಡಿ ಸಾಗುವ ಈ ಪ್ರವಾಸಕಥನದಲ್ಲಿ, ಅಲ್ಲಲ್ಲಿಯೇ ಕ್ಷಣಕಾಲ ತಂಗಿ, ತಂಗಾಳಿಯನ್ನೋ, ತಣ್ಣೆಳಲನ್ನೋ ಸೇವಿಸಿ, ದೇವತೆಯ ಆರಾಧನೆಯಲ್ಲಿಯೋ ನೀಲಿಗಿರಿಯಂತಹ ಪ್ರಕೃತಿಮಾತೆಯ ಮಡಿಲಿನ ಸವಿಸುಖದಲ್ಲಿಯೋ ಲೇಖಕರೊಂದಿಗೆ ನಾವೂ ಭಾಗವಹಿಸಿ, ಹಾಯಾಗಿ ಅಡ್ಡಾಡಿಕೊಂಡು ಬಂದ ಒಂದು ದಿವ್ಯಾನುಭವವು ನಮಗೆ ಲಭಿಸುತ್ತದೆ. ಹಗುರವಾದ ಹಾಸ್ಯ, ತಿಳಿಯಾದ ಭಾಷೆ, ಮನೋಹರವಾದ ನಿರೂಪಣೆ, ನೈಜವಾದ ಅನುಭವಗಳಿಂದ ಕೂಡಿದ ಈ ಪ್ರವಾಸಕಥನವು ರುಚಿ ಶುಚಿಗಳೆರಡನ್ನೂ ಒಳಗೊಂಡು ವಾಚಕರಿಗೆ ಈ ರೀತಿಯ ಸಾಹಿತ್ಯದಲ್ಲಿ ಹೆಚ್ಚು ಹೆಚ್ಚಾದ ಅಭಿರುಚಿಯನ್ನುಂಟುಮಾಡುವುದರಲ್ಲಿ ಸಂದೇಹವಿಲ್ಲ. ಲೇಖಕರ ಪ್ರಯತ್ನವು ಇಷ್ಟುಮಟ್ಟಿಗೆ ಸಾರ್ಥಕವಾಗಿರುವುದಕ್ಕಾಗಿ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಕನ್ನಡ ಗಾದೆಗಳು : ಸಂಗ್ರಹಕಾರರು : ಶ್ರೀ ಹೆಚ್. ಎಸ್. ಅಚ್ಚಪ್ಪ; ಪ್ರಕಾಶಕರು : ಶ್ರೀ ಹೆಚ್. ಎಸ್. ಅಚ್ಚಪ್ಪ, ೨೮೪೭/೧೨, ಜಯನಗರ, ಮೈಸೂರು ; ಕಿರೀಟ ಅಷ್ಟದಳ : ಪು. viii+೧೪೨; ಬೆಲೆ : ಸಾದಾ ಪ್ರತಿ, ರೂ. ೧.೫೦ (ಕ್ಯಾಲಿಕೊ ಪ್ರತಿ ರೂ. ೩.೦೦).

ಜನ ಪ್ರಚುರವಾದ ಜನಪದಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸುವಂತೆಯೇ ಜನರ ನಾಲಿಗೆಯ ಮೇಲೆ ಮಾತ್ರವೇ ಬಾಳುತ್ತಿರುವ ನಾಣ್ಣುಡಿಗಳನ್ನು ಸಂಗ್ರಹಿಸಿ ಪ್ರಕಾಶಗೊಳಿಸುವುದೂ ಒಂದು ಕಷ್ಟಸಾಧ್ಯವಾದ ಕಲೆ. ಪ್ರಕೃತ ಸಂಗ್ರಹಕಾರರಾದ ಶ್ರೀ ಹೆಚ್. ಎಸ್. ಅಚ್ಚಪ್ಪನವರು ಈ ಸ್ತುತ್ಯಕಾರ್ಯವನ್ನು ಬಹಳ ಹಿಂದೆಯೇ ಕೈಕೊಂಡು ಬಹುಮಟ್ಟಿಗೆ ಯಶಸ್ವಿಯಾಗಿರುವುದಲ್ಲದೆ, ಪ್ರಸ್ತುತ

ಕೃತಿಯು ಎರಡನೆಯ ಆವೃತ್ತಿಯೆಂದು ಮನಗಂಡರೆ, ಇಂಥ ಕೆಲಸಕ್ಕೆ ಎಷ್ಟು ಮನ್ನಣೆಯಿದೆಯೆಂಬುದು ಸ್ವವಿದಿತವಾಗುತ್ತದೆ. ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯುತ್ತಾ ಶ್ರೀ. ಎಸ್. ಕಸ್ತೂರಿ ಅವರು, "ನಮ್ಮ ಸಮಾಜ ರಚನೆಯಲ್ಲಿ ಹಾಸು ಹೊಕ್ಕಾಗಿ ಸೇರಿಕೊಂಡಿರುವ ಮೇಲು ಕೀಳುಗಳೂ ಬೇವು ಬೆಲ್ಲಗಳೂ, ಕಟ್ಟುನಿಟ್ಟುಗಳೂ, ನಮ್ಮ ಸಂಸಾರ ಜೀವನದಲ್ಲಿ ತುಂಬಿರುವ ರೀತಿ ನೀತಿಗಳೂ, ಪ್ರೀತಿ ಗೌರವಗಳೂ ಅನೇಕ ಗಾದೆಗಳ ವಿಷಯವಾಗಿವೆ. ಇವುಗಳನ್ನು ಮನನಮಾಡಿದರೆ ನಮ್ಮ ಜನರ ಧರ್ಮದೃಷ್ಟಿ ಎತ್ತ ಕಡೆ ಬಾಗಿದೆ, ಅವರ ನ್ಯಾಯಾನ್ಯಾಯ ವಿಮರ್ಶೆ ಯಾವ ಆಧಾರಗಳ ಮೇಲೆ ನೆಲೆಸಿದೆ, ಅವರನ್ನು ತಿವಿದೆಚ್ಚರಿಸುತ್ತಿರುವ ಗೊತ್ತು ಗುರಿಗಳು ಯಾವುವು ಎಂಬುದೆಲ್ಲ ಮನದಟ್ಟಾಗುತ್ತದೆ" ಎಂದು ಹೇಳಿರುವ ಮಾತು ಅಕ್ಷರಶಃ ಸತ್ಯ.

ಜನಜೀವನದಲ್ಲಿ ಗಾದೆಗಳ ಪಾತ್ರ ಬಹು ಹಿರಿದು. ಅವು ಅನುಭವದ ರಸಘಟ್ಟಿಗಳು. ಕೆಲವು ಕಲ್ಲುಸಕ್ಕರೆಯಂತೆ ಚಪ್ಪರಿಸಿದಷ್ಟೂ ಸವಿಯೆನ್ನಿಸಿದರೆ, ಮತ್ತೆ ಕೆಲವು ಬೇವಿನ ಗುಳಿಗೆಯಂತೆ ನುಂಗುವುದೇ ಪ್ರಯಾಸಕರ. ಸಮಾಜದಲ್ಲಿಯೂ ಅಂತಸ್ತಿಗನುಸಾರವಾಗಿ ಈ ಗಾದೆಯ ಬಳಕೆ ಬೇರೆ ಬೇರೆಯಾಗಿ ಕಂಡು ಬರುವುದುಂಟು. ಆಯಾ ದೇಶದ ಆಚಾರ, ವಿಚಾರ, ವ್ಯವಹಾರಗಳಿಗೆ ಈ ಗಾದೆಗಳು ಕೈಗನ್ನಡಿಯಂತೆ ಇರುತ್ತವೆ. "ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಎಂಬ ಗಾದೆಯ ಮೂಲಕವೇ ಈ ರಚನೆಯ ಮಹತ್ವವೇನು ಎನ್ನುವುದು ವಿದಿತವಾಗುತ್ತದೆ. ಅಜ್ಞಾತ ಕರ್ತೃಗಳಿಂದ ನಿರ್ಮಿತವಾದ ಈ ಆಣಿಮುತ್ತುಗಳನ್ನು ಹಾಳಾಗದಂತೆ ರಕ್ಷಿಸಿಕೊಳ್ಳುವುದು ನಮ್ಮ ಕರ್ತವ್ಯ. ಈ ಕಾರ್ಯವನ್ನು ಶ್ರೀ ಹೆಚ್. ಎಸ್. ಅಚ್ಚಪ್ಪನವರು ಕೈಕೊಂಡು, ತಾವು ಸಂಗ್ರಹಿಸಿರುವ ಸರಕನ್ನು ಅಕಾರಾದಿಯಾಗಿ ವಿಂಗಡಿಸಿ ಕೊಟ್ಟಿರುವುದು ಪ್ರಶಂಸನೀಯವಾದುದು.

ಸಂಗ್ರಹಕಾರನ ಕೆಲಸ ಮುಗಿದ ಮೇಲೆ ಇಂಥ ಸಾರಸ್ವತ ಸಂಪತ್ತಿನ ವ್ಯಾಸಂಗ ಮತ್ತೂ ಮುಂದುವರೆಯಬೇಕಾದುದು ಸಹಜವಷ್ಟೆ. ಆದರೆ, ಕನ್ನಡದಲ್ಲಿ ಈ ಬಗ್ಗೆ ಹೆಚ್ಚು ಕೆಲಸ ನಡೆದಿಲ್ಲ ಎಂದು ಹೇಳಲು ವ್ಯಥೆಯಾಗುತ್ತದೆ. ಶ್ರೀ ಎ. ಕೆ. ರಾಮಾನುಜಮ್ ಅವರು "ಕನ್ನಡ ಗಾದೆಗಳು" ಎಂಬ ತಮ್ಮ ಪುಸ್ತಿಕೆಯೊಂದರಲ್ಲಿ ಸ್ವಲ್ಪಮಟ್ಟಿಗೆ ಈ ಕೆಲಸವನ್ನು ಮಾಡಿಕೊಟ್ಟಿರುತ್ತಾರೆ. ನಮ್ಮ ನೆರೆಹೊರೆಯ ಭಾಷೆಗಳಲ್ಲಿ ಕಂಡುಬರುವ ಏಕರೀತಿಯಾದ ಗಾದೆಗಳ ತೋಲನಾತ್ಮಕ ವಿವೇಚನೆ, ದೇಶವಿದೇಶಗಳಲ್ಲಿ ಪ್ರಚುರವಾಗಿರುವ ನಾಣ್ಣುಡಿಗಳ ಸಾರ್ವತ್ರಿಕ ಲಕ್ಷಣಗಳು, ಒಂದೇ ಅಭಿಪ್ರಾಯ ನಿರೂಪಣೆಯಲ್ಲಿ ವ್ಯಕ್ತವಾಗುವ ಭಿನ್ನ ಭಿನ್ನ ರೀತಿಗಳು, ಒಂದೇ ಭಾಷೆಯಲ್ಲಿಯೇ ಸ್ಥಳದಿಂದ ಸ್ಥಳಕ್ಕೆ ಕಂಡುಬರುವ ಪಾಠಾಂತರಗಳು, ಇವೇ ಮೊದಲಾದುವು ಗಾದೆಗಳನ್ನು ವ್ಯಾಸಂಗಮಾಡುವಾಗ ಉಂಟಾಗುವ ಕುತೂಹಲಗಳು. ಇಂಥ ಶಾಸ್ತ್ರೀಯವಾದ ವ್ಯಾಸಂಗವನ್ನು ಕೈಕೊಳ್ಳುವವರಿಗೆ ಶ್ರೀ. ಹೆಚ್.

ಎಸ್. ಅಚ್ಚಪ್ಪನವರು ತುಂಬ ಉಪಕಾರಮಾಡಿರುತ್ತಾರೆ. ಶ್ರೀಯುತರ ಈ ಸಂಗ್ರಹಕಾರ್ಯವು ಹೆಚ್ಚು ಹೆಚ್ಚು ಮುಂದುವರಿಯುವಂತೆ ಅವರಿಗೆ ತಕ್ಕ ಉತ್ತೇಜನವು ದೊರೆಯಲೆಂದು ಹಾರೈಸುತ್ತೇವೆ. ಇದೇ ಲೇಖಕರು "The Way to Success and Happiness" ಎಂಬ ತಮ್ಮ ಇಂಗ್ಲಿಷ್ ಕೃತಿಯೊಂದರಲ್ಲಿ ಸುಪ್ರಸಿದ್ಧವಾದ ಸೂಕ್ತಿಗಳನ್ನು ಸಂಗ್ರಹಿಸಿಕೊಟ್ಟಿರುವುದಾಗಿ ತಿಳಿದುಬರುತ್ತದೆ. ಅಂಥ ಪ್ರಯತ್ನವು ಕನ್ನಡದಲ್ಲಿಯೂ ಆಗಬೇಕಾಗಿದೆ. ಗಾದೆಗಳ ಮಹತ್ವವನ್ನು ಮನಗಂಡಿರುವ ಈ ಸಂಗ್ರಾಹಕರೇ ನಮ್ಮ ಪ್ರಾಚೀನ ಕವಿವಾಣಿಯಲ್ಲಿ ಕೇಳಿಬರುವ ಸಾಮತಿಗಳನ್ನೂ, ರಸವತ್ತಾದ ಸೂಕ್ತಿಗಳನ್ನೂ ಸಂಗ್ರಹಿಸಿ ಕೊಡಲೆಂದು ಆಶಿಸುತ್ತೇವೆ.

—ಜಿ. ವಿ. ಆರ್.

ಕಮ್ಮಟದ ಕಿಡಿಗಳು

' ಚಕ್ಕಣಂ '

ಪಂಪಭಾರತದ ೪-೮೭ರ ಮುಂದಿನ ವಚನಭಾಗದ ಈ ಕೊನೆಯ ಸಾಲುಗಳನ್ನು ನೋಡಿ:

'....ಧರ್ಮಗಳ್ಕುಡಿವರ್ಗೆಲ್ಲಂ ಮಿಾಸಲ್ಗಳ್ಳನೆಱೆದು, ಪೊನ್ನ ಬೆಳ್ಳಿಯ ಸಿಪ್ಪುಗಳೊಳ್ ಕಿಱುಕಿಱಿದನೆಱೆದು ಕುಡಿಬಿದಿರ ಕುಡಿಯ ಮಾವಿನ ಮಿಡಿಯ ಮಾರುದಿನ ಮೆಣಸುಗಡಲೆಯ ಪುಡಿಯೊಳಡಸಿದಲ್ಲವಲ್ಲಣಿಗೆಯ ಚಕ್ಕಣಂಗಳಂ ಸವಿಸವಿದು—'

ಈ ವಾಕ್ಯದ ಸರಣಿ ಮುಂದಿನ ವೃತ್ತದಲ್ಲಿ ಮುಂದುವರಿದು '....ಕಳ್ಳಪ್ಪುದು ತಪ್ಪದೆಂದು ಕುಡಿದರ್ ಕಾಮಾಂಗಮಂ ಕಾಂತೆಯರ್' ಎಂಬ ಮಾತಿನಿಂದ ಕೊನೆಗೊಳ್ಳುತ್ತದೆ.

ಸೂಳೆಗೇರಿಯ ಒಂದೆಡೆಯಲ್ಲಿ ನಡೆದ ಮಧುಪಾನ ವೈಖರಿಯ ವರ್ಣನಾಂಶವನ್ನು ಮೇಲೆ ಉದ್ಧರಿಸಿದೆ. ಕಳ್ಳುಡಿಯಲೆಂದು ವಿಧಿವತ್ತಾಗಿ ಪಾತ್ರೆಗಳಿಗೆ ಕಳ್ಳೆರೆವ ಪರುಠವಣೆಯಾದ ಮೇಲೆ, ಕೆಲ ಸಾಮಗ್ರಿಗಳ ಪಾಕವಾದ ಚಕ್ಕಣಗಳನ್ನು ಸವಿದು, ಕಳ್ಳಿನ ರುಚಿಯನ್ನು ಬಣ್ಣಿಸುತ್ತ ಕಾಂತೆಯರು ಕಳ್ಳುಡಿದರೆಂಬುದು ಒಟ್ಟು ವಚನ ಮತ್ತು ವೃತ್ತದ ತಾತ್ಪರ್ಯ.

ಮೇಲಣ ವಚನಭಾಗದಲ್ಲಿ, ಅರ್ಥಕ್ಲೇಶವಿರುವ ಶಬ್ದಗಳಲ್ಲಿ, ' ಚಕ್ಕಣಂ ' ಎಂಬುದು ಸದ್ಯದ ವಿಚಾರಕ್ಕೆ ವಿಷಯ. ಪಂಪಭಾರತದ ಎರಡನೆಯ (ಹೊಸ) ಮುದ್ರಣದಲ್ಲಿ ಮಾತ್ರ ಈ ಶಬ್ದವು ಕಾಣುತ್ತದೆ. ಹಿಂದಿನ ಎಲ್ಲ ಮುದ್ರಣಗಳಲ್ಲಿಯೂ ಈಯೆಡೆಯಲ್ಲಿ ' ಚಿಕ್ಕಣಂ ' ಎಂಬ ಶಬ್ದವಿದೆ. ಈ ಶಬ್ದಗಳು ಒಂದಕ್ಕೊಂದು ಪಾಠಾಂತರ. ಅರ್ಥ ಸಮಂಜಸತೆಯ ದೃಷ್ಟಿಯಿಂದ ಈಚಿನ ಪ್ರತಿಯಲ್ಲಿ 'ಚಕ್ಕಣಂ' ಎಂಬುದೇ ಸಂಪಾದಕರಿಗೆ ಗ್ರಾಹ್ಯಪಾಠವಾಗಿ ಕಂಡಿರಬಹುದು. 'ಚಿಕ್ಕಣಂ' ಶಬ್ದಕ್ಕೆ ಪಂಪಭಾರತದ ನಿಘಂಟಿನಲ್ಲಿ ಪ್ರಶ್ನೆ ಚಿಹ್ನೆಯಿದೆ. ಕಿಟೆಲ್ ನಿಘಂಟಿನಲ್ಲಿಯೂ, ಸಂಸ್ಕೃತ ಮತ್ತು ಇತರ ಭಾಷೆಯ ಕೋಶಗಳಲ್ಲಿಯೂ ಈ ಶಬ್ದಕ್ಕೆ ' ಸ್ನಿಗ್ಧವಾದ್ದು, ಜಿಗುಟಾದ್ದು ' ಎಂಬರ್ಥದ ಮಾತುಗಳಿವೆ. ಈ ಅರ್ಥವನ್ನಿಟ್ಟುಕೊಂಡು ಕೆಲವು ಪದಾರ್ಥಗಳ ಮಿಶ್ರಣದ ಲೇಹ್ಯಪಾಕವನ್ನೋ ಸ್ನಿಗ್ಧಪಾಕವನ್ನೋ ಸವಿದರೆಂದು ಹೇಳಲಾಗದೇ ? ಇದು ಸಂಪಾದಕರಿಗೆ ಸಮ್ಮತವಾಗಿದ್ದರೆ ಪ್ರಶ್ನೆ ಚಿಹ್ನೆಯನ್ನು ಹಾಕುತ್ತಿರಲಿಲ್ಲ. ಹೋಗಲಿ, ಪಾಠಾಂತರದ ಸವರಣೆಯಿಂದ ಅರ್ಥದ ತೊಡಕು ಪರಿಹಾರವಾಯಿತೆ ?

ಈಗ ಪಂಪಭಾರತದ ೭-೯೦ನೆಯ ಈ ಪದ್ಯವನ್ನು ನೋಡಿ :

ಒದವಿದ ಕೆತ್ತ ಕಂಕಣದ ಪುರ್ವಿನ ಜರ್ವು ಲಯಕ್ಕೆ ಲಕ್ಕ ಲೆ
ಕ್ಕದ ಗತಿ ನಾಟಕಾಭಿನಯಮಾಯ್ತೆನೆ ಗೇಯದೊಳೀಕೆ ಸೊರ್ಕನಿ
ಕ್ಕಿದಳೆನೆ ಕಳ್ಗೆ ಚಕ್ಕಣಮೆನಿಪ್ಪುದು ಸಾಗೆನಿಸಲ್ಕೆ ಸಾಲ್ವ ಸ
ಗ್ಗದ ಪೊಸದೇಸಿಯೋಳಿಗಳನೊರ್ವಳೊಱಲ್ದು ನೆಱಲ್ದು ಪಾಡಿದಳ್

ಇಂದ್ರಕೀಲ ನಗೇಂದ್ರದಲ್ಲಿ ತಪೋನಿಯಮನಿಯಮಿತನಾಗಿ ನಿಂತ ನರೇಂದ್ರ ತಾಪಸನಾದ ಅರ್ಜುನನ ತಪೋವಿಘಾತವನ್ನು ಮಾಡಲೆಂದು ಇಂದ್ರನಪ್ಪಣೆಯಂತೆ ಬಂದ ದೇವಾಪ್ಸರೆಯರ ವೃಂದದಲ್ಲಿ ಒಬ್ಬಳು ಅವನೆದುರಿನಲ್ಲಿ ಕಾಣಿಸಿಕೊಂಡ ಪರಿಯನ್ನು ಇಲ್ಲಿ ಹೇಳಿದೆ. "ಕೈಬಳೆಗಳ ಮತ್ತು ಹುಬ್ಬುಗಳ ಮಿಡುಕಾಟ, ಲಯಾನುಸಾರಿಯಾದ ತ್ವರಿತ ಪದಗತಿ, ನೃತ್ಯಾಭಿನಯವಾಯಿತೆಂಬಂತೆ ಇತ್ತು; ಹಾಡಿದ ಹಾಡಿನಲ್ಲಿ ಮಾದಕತೆಯನ್ನು ತುಂಬಿದಂತೆ ಇತ್ತು; ಅವಳ ಸಾಗು* ಎಂದರೆ ಮುಂಬರಿವು (?) ಕಳ್ಳಿಗೆ ಚಕ್ಕಣವೆನಿಸುವುದು–ಎಂದು ಹೇಳಬಹುದಾದ ಸ್ವರ್ಗದ ಹಲವು ಸೊಗಸುಗಳನ್ನು ಒಬ್ಬಳು ಪ್ರೀತಿಯಿಂದಲೂ ತನ್ಮಯತೆಯಿಂದಲೂ ಹಾಡಿದಳು"–ಎಂಬುದು ಈ ಪದ್ಯದ ಸಾರಾಂಶ.

ಪಂಪಭಾರತದ ಎರಡನೆಯ (ಹೊಸ) ಮುದ್ರಣದಲ್ಲಿ ಮಾತ್ರ 'ಕಳ್ಗೆ ಚಕ್ಕಣಮೆನಿಪ್ಪುದು–' ಎಂದಿದೆ. ಹಿಂದಿನ ಎಲ್ಲ ಮುದ್ರಣಗಳಲ್ಲಿಯೂ 'ಕಳ್ಗೆ' ಎಂಬೆಡೆಯಲ್ಲಿ 'ಕಣ್ಗೆ' ಎಂದಿದೆ. ಈ ಮಾರ್ಪಾಟಿನಿಂದ ಅರ್ಥ ಸುಕರವಾಯಿತೆ? ಕಣ್ಗೆ ಅಥವಾ ಕಳ್ಗೆ 'ಚಕ್ಕಣಮೆನಿಪ್ಪುದು ಸಾಗು' ಎಂದರೇನು? 'ಪಂಪಭಾ. ನಿಘಂಟೆ'ನಲ್ಲಿ 'ಚಕ್ಕಣಂ' ಶಬ್ದಕ್ಕೆ ಪ್ರಶ್ನಚಿಹ್ನೆಯಿದೆ. ಕಿಟೆಲ್‌ಕೋಶದಲ್ಲಿ ಈ ಶಬ್ದವಿಲ್ಲ. ಸನ್ನಿವೇಶ ಬಲದಿಂದ ಇಲ್ಲಿ ಶಬ್ದಾರ್ಥವನ್ನು ಊಹಿಸುವುದು ಕಷ್ಟ. ಅರ್ಥಾನುಕೂಲ್ಯದ ದೃಷ್ಟಿಯಿಂದ ಸಂಪಾದಕರು ಯೋಚಿಸಿರಬಹುದಾದ ಈ ಪಾಠಾಂತರ(?)ದ ಔಚಿತ್ಯವನ್ನು ಮನಗಾಣಬೇಕಾಗಿದೆ.

೪–೮೭ವ.ದ ಮಧುಪಾನ ಸಂದರ್ಭದಲ್ಲಿ 'ಚಿಕ್ಕಣ'ವು 'ಚಕ್ಕಣ'ವಾದುದನ್ನು, ೭–೯೦ರಲ್ಲಿ 'ಕಣ್ಗೆ'ಯು 'ಕಳ್ಗೆ' ಆದುದನ್ನೂ, ಸನ್ನಿವೇಶಬಲದಿಂದ ನೋಡಿದರೆ ಕಳ್ಳಿಗೂ ಚಕ್ಕಣಕ್ಕೂ ಜಾತಿಸಂಬಂಧವಿರಬಹುದೆಂದು ತೋರುತ್ತದೆ. ೨ನೇ ನಾಗವರ್ಮನ 'ಅಭಿಧಾನ ವಸ್ತುಕೋಶ'ದ ಈ ತ್ರಿಪದಿಯಲ್ಲಿ ಈ ಸಂಬಂಧವನ್ನು ಕಾಣಬಹುದು :

---

* 'ಪಂಪಭಾ. ನಿಘಂಟೆ'ನಲ್ಲಿ ಈ ಶಬ್ದಕ್ಕೂ ಪ್ರಶ್ನಚಿಹ್ನೆಯಿದೆ. ಇದು 'ಮುಂದುವರಿ' ಎಂಬ ರೂಢಿಯ ಅರ್ಥದ ಶಬ್ದವಿರಲಾರದೇನೋ? 'ವೇಷ' ಎಂಬರ್ಥದ 'ಸೋಗು' ಎಂದೋ, ಮಡಿಲು ಅರ್ಥದ 'ಸೋಗೆ' ಎಂದೋ, 'ಪೋಗು' 'ಬಾಗು' ಎಂಬಂತೆ ಸಹಜ ಭಾವನಾಮವಾಗಿ 'ಮುಂದುವರಿ' ಎಂಬರ್ಥದಲ್ಲಿಯೇ 'ಸಾಗು' ಎಂದೋ, ವಿಶೇಷವಾದ ಬೇರೆ ಅರ್ಥವುಳ್ಳ ಶಬ್ದವೋ, ಏನಿರಬಹುದೆಂದು ಇಲ್ಲಿ ಹೇಳುವುದು ಕಷ್ಟ. 'ಚಕ್ಕಣಂ' ಶಬ್ದದ ಅರ್ಥನಿರ್ಣಯಕ್ಕೆ ಹೇಗೂ ಬಾಧಕವಿಲ್ಲ.

ಪಾನಂ ಗೋಷ್ಠಿಕೆಯುದಾಪಾನಂ ಶುಂಡಾ ಪ್ರ
ಪಾನಂ ಕಳ್ಗುಡಿಹ ಕಡುಸೊರ್ಕು ಚರ್ಕ್ಕಣಂ
ತಾನದು ಪೆಸರೊಳಿದುಂ (೯೩–೬)

ಇಲ್ಲಿ ಬಂದಿರುವ 'ಚರ್ಕ್ಕಣಂ' 'ಚಕ್ಕಣಂ' ಎಂಬುದರ ಮೊದಲ ರೂಪವಿರಲು ಸಾಧ್ಯ. ಬಹುಶಃ ಪಂಪನಲ್ಲಿ, ರೂಢಿಯ ಶಬ್ದವಾಗಿದ್ದ ತರುವಾಯದ ರೂಪ, ಬಳಕೆಯಾಗಿರಬಹುದು. ಈ ಪದ್ಯದಿಂದ ಚಕ್ಕಣವು ಕಳ್ಳಿನ ಅನುಬಂಧಿ ಶಬ್ದವೆಂದು ತಿಳಿಯಬಹುದಲ್ಲದೆ ಈ ಪದಾರ್ಥವಿಶೇಷದ ಪಾತ್ರವೇನೆಂದು ಸ್ಪಷ್ಟಪಡುವುದಿಲ್ಲ.

ಹಳಗನ್ನಡ ಕಾವ್ಯಗಳಲ್ಲಿ ಸಾದೃಶ್ಯಕ್ಕಾಗಿ ಎತ್ತಿಕೊಳ್ಳಲು ಈ ಶಬ್ದಗಳ ಅನ್ಯ ಪ್ರಯೋಗಗಳು ದೊರೆಯುಂತೆ ಕಾಣುವುದಿಲ್ಲ. ಕನ್ನಡ, ತೆಲುಗು ಮತ್ತು ತುಳು ನುಡಿಗಳ ಪ್ರಮಾಣಿತ ನಿಘಂಟುಗಳಲ್ಲಿ 'ಚಕ್ಕಣಂ' ಶಬ್ದದ ಯಥಾರೂಪವಾಗಲಿ, ವಿಕೃತರೂಪವಾಗಲಿ ಕಾಣುವಂತೆ ತೋರಲಿಲ್ಲ. ತಮಿಳು ಕೋಶದಲ್ಲಿ (Tamil Lexicon) ಇದರ ವಿಕೃತರೂಪವನ್ನು ಕಾಣಬಹುದು. 'ಚಾಕ್ಕಣಾಕ್ಕಱಿ' ಎಂಬ ಒಂದು ಮಾತನ್ನು ಇಲ್ಲಿ ಕೊಟ್ಟು, ಅದಕ್ಕೆ 'Meat prepared and sold at taverns to be taken by drunkards along with the drink' ಎಂದು ಅರ್ಥವನ್ನು ಬರೆದಿದೆ. ಕೋಶಕಾರರು ರೂಢಿಯಿಂದ ಈ ಮಾತನ್ನು ಸಂಗ್ರಹಿಸಿ ದಂತಿದೆ. ಇದು 'ಚಾಖನಾ' ಎಂಬ ಉರ್ದುಧಾತುವಿನಿಂದ ಜನ್ಯವಾದುದೆಂದು ಸೂಚಿಸಿ, 'ಜಕ್ಷಣ' ಎಂಬ ಸಂಸ್ಕೃತ ಶಬ್ದವನ್ನು ಹೋಲಿಕೆಗೆ ಕೊಟ್ಟಿದೆ.

ಗ್ರಂಥಾಧಾರಗಳು ಮತ್ತು ನಿಘಂಟುವಿನ ಉಲ್ಲೇಖ ದುರ್ಲಭವಾಗಿರುವ ಈ ಶಬ್ದ ಕಳ್ಳಂಗಡಿಯಲ್ಲಿ ಕಳ್ಳಿನಷ್ಟೇ ಸುಪರಿಚಿತ. ಪಡಖಾನೆಯಿರುವಲ್ಲಿ ಕಳ್ಳಿರುವಂತೆ, ಕಳ್ಳಿರುವೆಡೆ ಚಕ್ಕಣವಿರುತ್ತದೆ. ರೂಢಿಯಲ್ಲಿ ಇದನ್ನು 'ಚಾಕಣ' ಎನ್ನುತ್ತಾರೆ. ಕನ್ನಡಿಗರೂ, ತಮಿಳರೂ, ತೆಲುಗರೂ ತುಳುವರೂ ಸಮಾನವಾಗಿ ಈ ಶಬ್ದವನ್ನು ಬಳಸುತ್ತಾರೆ. ಉರ್ದು ತಾಯಿನುಡಿಯ ಜನರೂ ಹೇಳುತ್ತಾರೆ. ಕಳ್ಳಂಗಡಿಯ ವಿತರಣೆಗಾರರಾದ ನನ್ನ ಪರಿಚಯದ ಮಹನೀಯರೊಬ್ಬರು ಇದರ ಬಗೆಗೆ ಹೀಗೆ ಹೇಳುತ್ತಾರೆ. 'ಕಳ್ಳು ವ್ಯಾಪಾರದಲ್ಲಿ ಚಾಕಣದ ಪಾತ್ರ ಹಿರಿದು. ಆ ವ್ಯಾಪಾರ ಸುಸೂತ್ರವಾಗಿ ನಡೆದುಕೊಂಡು ಹೋಗಲು ಇದು ಇರಲೇಬೇಕು. ಇದನ್ನು ಸಾಮಾನ್ಯವಾಗಿ ಮಾಂಸವ್ಯಾಪಾರಿಗಳು ಒದಗಿಸುತ್ತಾರೆ. ಕಳ್ಳಿನ ರುಚಿಯನ್ನು ಹೆಚ್ಚಿಸಲು ಚಾಕಣವು ಇಷ್ಟವಾದೊಂದು ವ್ಯಂಜಕದ್ರವ್ಯ. ಬಿರಿಯಾನಿಯಂತಹ ಉತ್ತಮದರ್ಜೆಯ ಮಾಂಸ ವ್ಯಂಜನಗಳಿಗಿಂತ ಚಾಕಣವನ್ನೇ ಕಳ್ಳಿನೊಡನೆ ಹೆಚ್ಚಾಗಿ ಕುಡುಕರು ಅಪೇಕ್ಷಿಸುತ್ತಾರೆ. ಚಾಕಣವು ಮೂರನೆಯ ದರ್ಜೆ ವ್ಯಂಜನ ವಾದರೂ ಬಳಸುವ ಸಾಮಗ್ರಿಗಳೇನೋ ಒಳ್ಳೆಯವೆ! ಪ್ರಾಣಿಗಳ ಕಣ್ಣು, ನಾಲಿಗೆ, ಕರುಳು, ಕಾಲು ಮುಂತಾದ ಸೂಕ್ಷ್ಮಾಂಗಗಳನ್ನು ಕೆಲವು ಸಂಬಾರ ಪದಾರ್ಥಗಳೊಡನೆ ಬೇಯಿಸಿ ಮಾಡಲಾಗುತ್ತದೆ. ವಿಶೇಷವಾಗಿ ಖಾರದ ರುಚಿಗಾಗಿ ಮೆಣಸು,

ಕಡಲೆಗಳನ್ನು ಇದರೊಂದಿಗೆ ಸೇರಿಸಲಾಗುತ್ತದೆ (ನೋಡಿ: 'ಮೆಣಸುಗಡಲೆಯ ಪುಡಿಯೊಳಡಸಿದ....'). ಇದನ್ನು ಕಳ್ಳಿನೊಡನೆ ಯಾವಾಗ ಬೇಕೆನಿಸಿದರೂ ಸ್ವೇಚ್ಛೆಯಿಂದ ಕುಡುಕರು ಉಪಯೋಗಿಸುತ್ತಾರೆ. ಆಗಾಗ ಇತರ ಸಂದರ್ಭಗಳಲ್ಲಿಯೂ ಚಾಕಣವನ್ನು ಮನೆಯಲ್ಲಿಯೂ ತಯಾರಿಸಿ ಬಳಸುವುದುಂಟು.*

ಈ ಹೇಳಿಕೆಗಳಿಂದ ನಾವು 'ಚಕ್ಕಣ' ಎಂದರೆ 'ಕಳ್ಳಿನೊಡನೆ ರುಚಿಗಾಗಿ ನೆಂಜಿಕೊಳ್ಳುವ ಮಾಂಸದ ಒಂದು ವ್ಯಂಜಕದ್ರವ್ಯ' ಎಂದು ತಿಳಿಯಬಹುದು. ಮೇಲೆ ಉದ್ಧರಿಸಿದ ಕಾವ್ಯಭಾಗಗಳಲ್ಲಿ ಈ ಶಬ್ದವು ಈ ಅರ್ಥದಲ್ಲಿಯೇ ಬಂದಿರುವುದೆಂದು ಹೇಳಬಹುದು. ಸೂಳೆಗೇರಿಯ ಒಂದೆಡೆಯಲ್ಲಿ ಕಾಂತೆಯರು ಮೊದಲು ಬಾಯಿಯ ರುಚಿ ಪಟ್ಟುಗೊಳ್ಳಲು 'ಚಕ್ಕಣ'ವನ್ನು ಸವಿದು, ಆಮೇಲೆ ಕಳ್ಳನ್ನು ಕುಡಿದರು ಎಂಬುದು ಸರಿ. ಅರ್ಜುನನ ಮುಂದೆ ಹಲವು ಹೊಸ ಸೊಗಸುಗಳನ್ನು ಹಾಡಿ ತೋರಿದ ಒಬ್ಬಳು ಮೋಹಕವಾಗಿ ಗೀತೆಯನ್ನು ಹಾಡಿದ ಪರಿ ಕಳ್ಳಿನ ಸೊಕ್ಕು ಹಿಡಿಯುವಂತೆ, ಸಾರಿ ಬಂದ ಪರಿ (?) ಗೀತೆಯ ಮೋಹಕತೆಗೂ ಮಿಗಿಲಾಗಿ ಕಳ್ಳಿನೊಡನೆ ಚಕ್ಕಣವನ್ನು ಸವಿದಂತೆ ಇದ್ದಿತೆಂಬುದು ಬಣ್ಣನೆಗೆ ಸಹಜ.

ಎರಡನೆಯ ನಿದರ್ಶನದಲ್ಲಿ ಪರಿಹಾರವಾಗಬೇಕಾದ ಒಂದು ಸಣ್ಣ ತೊಡಕುಂಟು. ಅಕ್ಷರಂ>ಅಕ್ಕರಂ, ಲಕ್ಷಣಂ>ಲಕ್ಕಣಂ ಎಂಬ ತದ್ಭವಶಬ್ದಗಳಂತೆ ಚಕ್ಷಣಂ>ಚಕ್ಕಣಂ ಆಗಬಹುದು. 'ಚಕ್ಷಣಂ' ಶಬ್ದಕ್ಕೆ ಸಂಸ್ಕೃತ ನಿಘಂಟಿನಲ್ಲಿ ತೋರುವಿಕೆ, ಕಾಣುವಿಕೆ ಎಂಬರ್ಥವೂ ಉಂಟು. 'ಕಣ್ಗೆ' ಎಂಬ ಪಾಠವನ್ನು ಈಯರ್ಥದ ಚಕ್ಕಣದೊಂದಿಗೆ ಹೊಂದಿಸಿದರೆ ಸರಿಹೊಂದದೆ? ಆದರೆ ಇಲ್ಲಿ ಪುನರುಕ್ತಿಯ ಆಕ್ಷೇಪವಿರಲಿ, 'ಗೇಯದೊಳೀಕೆ ಸೊರ್ಕನಿಕ್ಕಿದಳೆನೆ' ಎಂಬ ಮಾತಿನ ಸ್ವಾರಸ್ಯವು ಅರ್ಥದಲ್ಲಿಯೇ ಕಡಿದಂತಾಗುತ್ತದೆ. 'ಚಕ್ಷಣಂ' ಶಬ್ದಕ್ಕೆ ಸಂಸ್ಕೃತ ನಿಘಂಟಿನಲ್ಲಿ 'Eating a relish to promote appetite' ಎಂದೂ (Apte's), 'Eating a relish to promote drinking' ಎಂದೂ (Monier Williams') ಅರ್ಥಗಳನ್ನು ಹೇಳಿರುವುದು ನಮ್ಮ ಪೂರ್ವ ನಿರ್ಧಾರಕ್ಕೆ ಪೋಷಕವಾಗುತ್ತದೆ. ಅಲ್ಲದೆ ೪-೮೭ವ. ದಲ್ಲಿ ಈ ಶಬ್ದದ ಔಚಿತ್ಯವನ್ನು ನಾವು

---

* ತೋರ್ಕೆ, ಕಾಣ್ಕೆಯೆಂಬರ್ಥದಲ್ಲಿ (?) ಸಮಯ ಪರೀಕ್ಷೆಯ ೧೨–೨೪ರಲ್ಲಿ ಈ ಶಬ್ದವಿರುವುದು ಕಾಣುತ್ತದೆ. ಆದರೆ ಈ ಪದ್ಯಪಾಠ ಅಶುದ್ಧವೂ, ಅರ್ಥವು ಅಸ್ಪಷ್ಟವೂ ಆಗಿದೆ.

ಪಂಪಭಾರತದ ೪–೮೭ ವ. ದಲ್ಲಿ ಬಂದಿರುವ 'ಚಕ್ಕಣ' ವ್ಯಂಜನದ ಬಣ್ಣನೆಯಲ್ಲಿ ಸಂಬಾರ ಪದಾರ್ಥಗಳೆನ್ನಬಹುದಾದ ಪದಾರ್ಥಗಳನ್ನು ಮಾತ್ರ ಹೇಳಿರುವಂತಿದೆ. ಮಾಂಸೇತರ ಸಾಮಗ್ರಿಗಳಿಂದಲೂ ಈ ವ್ಯಂಜನವನ್ನು ತಯಾರಿಸುತ್ತಿದ್ದಿರಬಹುದು. ಈ ವಚನಭಾಗದಲ್ಲಿ ಬರುವ 'ಅಲ್ಲವಲ್ಲಣಿಗೆ' ಎಂಬ ಶಬ್ದಕ್ಕೆ ಪಂಪಭಾ. ನಿಘಂಟಿನಲ್ಲಿ ಪ್ರಶ್ನಚಿಹ್ನೆಯಿದೆ.

ಕಳ್ಳು ಕುಡಿವ ತುಳುವರಲ್ಲಿ 'ಚಾಕಣ'ವು ರೂಢಿಯ ಮಾತು. ಪಡಖಾನೆಯ ಬಳಿ ಇದನ್ನು ಮಾರುವಾತನನ್ನು 'ಚಾಕಣದ ಪೊರ್ಬು' ಎಂದು ಕರೆಯುವರೆಂದು ನನ್ನ ಮಿತ್ರರೊಬ್ಬರು ಹೇಳುತ್ತಾರೆ.

ಮನಗಂಡಿದ್ದೇವೆ. ಆದುದರಿಂದ ಇಲ್ಲಿ ಈ ಶಬ್ದವನ್ನು ಕವಿಯು ಕಳ್ಳಿನ ಸಲುವಾಗಿ ಬಳಸಿರುವನಲ್ಲದೆ ಕಾಣ್ಕೆಯ ಸಲುವಾಗಿ ಬಳಸಿಲ್ಲವೆಂದು ಒಪ್ಪಬೇಕಾಗುತ್ತದೆ. ‘ ಕಳ್ಗೆ ಚಕ್ಕಣಮೆನಿಪ್ಪುದು—’ ಎಂಬುದು ಉಚಿತ ಪಾಠವೆಂದು ಗ್ರಹಿಸಬೇಕು.

ಈ ಮಾರ್ಪು ೧೯೩೫ರ ಎರಡನೆಯ (ಹೊಸ) ಮುದ್ರಣದ ವೇಳೆಗೆ ಸಂಪಾದಕರಿಗೆ ಮನವರಿಕೆಯಾಗಿ ಹಿಂದಿನ ಪಾಠಗಳು ತಿದ್ದುಪಡಿಯಾಗಿವೆ. ಮತ್ತೆ ನಿಘಂಟಿನ ಪುನರ್ವಿಮರ್ಶೆಯಾಗಿ ಪೂರ್ಣಗ್ರಂಥದ ಹೊಸ ಮುದ್ರಣ ಹೊರಬೀಳದೆ, ೧೯೩೧ರ ‘ಪಂಪಭಾ. ನಿಘಂಟಿ’ನಲ್ಲಿ ‘ಚಕ್ಕಣ’ವು ಪ್ರಶ್ನಚಿಹ್ನೆಯ ಶಬ್ದವಾಗಿಯೇ ಉಳಿದುಕೊಂಡಿತು. ಈ ಟಿಪ್ಪಣಿಕಾರನಿಗೆ ಸತ್ತಹುಲಿಯ ಬಾಲವನ್ನೆಳೆದು ಶೂರನಾಗುವ ಪ್ರಸಂಗವೊಂದು ಹುಟ್ಟಿಕೊಂಡಿತು !

ಇನ್ನು ಈ ಶಬ್ದದ ವ್ಯುತ್ಪತ್ತಿಯನ್ನು ಕುರಿತು ತೋರಬಹುದಾದ ಒಂದೆರಡು ಸಂದೇಹಗಳು.

ಸಂಸ್ಕೃತ ನಿಘಂಟಿನಲ್ಲಿ “ಚಕ್ಷಣಂ” ಶಬ್ದಕ್ಕೆ ಧಾತುಮೂಲದ ಸೂಚನೆಯಾಗಲಿ ಪ್ರಯೋಗವಾಗಲಿ ಕಾಣುವುದಿಲ್ಲ. ಬೇರೆ ನಿಘಂಟುವಿನ ಆಧಾರದಿಂದ ಈ ಶಬ್ದಾರ್ಥವನ್ನು ಸೂಚಿಸಿರುವುದು ಕಾಣುತ್ತದೆ.* ಚರ್, ಚಷ್. ಜಕ್ಷ್ (= ಜಕ್ಷಣಂ) ಧಾತುಗಳಿಗೆ ‘ ತಿನ್ನು ’ ಎಂಬರ್ಥವಿದೆಯಾದರೂ ಈ ಶಬ್ದವು ಇವುಗಳಿಂದಾದ ಜನ್ಯ ಶಬ್ದವಾಗಿ ಕಾಣುವುದಿಲ್ಲ. ಉರ್ದು ಹಿಂದಿಗಳಲ್ಲಿ ಚಖ (ನ), ಚೌಖ (ನ) ಎಂಬ ಧಾತುಗಳು ‘ರುಚಿ ನೋಡು’ ಎಂಬರ್ಥದಲ್ಲಿದ್ದು ಇವುಗಳ ನಾಮರೂಪ ಚಿಖೌನಾ, ಚಿಖೌನೀ ಎಂದಾಗುತ್ತವೆ. ಸ್ವಾದಕ್ರಿಯೆ, ಸ್ವಾದವಸ್ತು ಎರಡರಲ್ಲಿಯೂ ಇವು ಪ್ರಯುಕ್ತ. ಸುರಾ ಸಹಚರಿಯಾದ ಈ ವ್ಯಂಜನಕ್ಕೆ ‘ಚಾಕಣ’ ಎಂಬ ಹೆಸರನ್ನು ದಾಕ್ಷಿಣಾತ್ಯರಾದ ಮುಸ್ಲಿಮರು ಹೇಳುವರಲ್ಲದೆ ಔತ್ತರೇಯರಾದವರು ಹೇಳುವುದಿಲ್ಲವೆಂದು ತಿಳಿದುಬರುತ್ತದೆ. ಉರ್ದು, ಪರ್ಶಿಯನ್, ಹಿಂದಿ ನಿಘಂಟುಗಳಲ್ಲಿ ಈ ಶಬ್ದ

---

* ಹಲಾಯುಧನ ‘ ಅಭಿಧಾನ ರತ್ನಮಾಲೆ ’ಯ ಈ ಪದ್ಯವನ್ನು ಟೀಕೆಯೊಡನೆ ನೆನೆದುಕೊಳ್ಳಬಹುದು :

ಅಪಾನಂ ಪಾನಗೋಷ್ಠೀಸ್ಯಾತ್ ಸಪೀತಿಃ ಸಹಪಾನಕಂ
ಉಪದಂಶಾವದಂಶೌಚ ಭ (ಚ) ಕ್ಷಣಂ ಸಂಪ್ರಚಕ್ಷತೇ (೫೪-೧೭೩)

ಟೀಕೆ॥ ಇದರಲ್ಲಿ ಆಪಾನಂ, ಪಾನಗೋಷ್ಠೀ—ಈ ೨ ಕಳ್ಳುಗುಡಿವುದು ; ಸಪೀತಿಃ, ಸಹಪಾನಕಂ- ಈ ೨ ಗೊಟ್ಟಿಗಳ್ಗುಡಿವುದು; ಉಪದಂಶಃ, ಅವದಂಶಃ, ಭಕ್ಷಣಂ—ಈ ೩ ಕುಡಿವುತ್ತೆ ಬಾಡಿಸುವುದು.

ಇಲ್ಲಿ ‘ಉಪದಂಶಃ’, ‘ಅವದಂಶಃ’-ಎಂಬ ಶಬ್ದಗಳ ಅರ್ಥಕ್ಕೆ ಅನುಗುಣವಾಗಿ ಇರಬೇಕಾದರೆ ಪದ್ಯದಲ್ಲಿಯೂ ಟೀಕೆಯಲ್ಲಿಯೂ ‘ ಚಕ್ಷಣಂ ’ ಎಂದಿರಬೇಕು. ಪದ್ಯಪಾಠದಲ್ಲಿ ಚಕಾರವು ಆವರಣ ಚಿಹ್ನೆಯಲ್ಲಿದೆ. ಚಕಾರವು ಭಕಾರವಾಗಿ ಟೀಕೆಯಲ್ಲಿ ತಪ್ಪಾಗಿ ಲಿಖಿತಗೊಂಡಿದೆಯೆನ್ನಬಹುದು.

ವಿದ್ದಂತಿಲ್ಲ. ಸಂ. 'ಚಕ್ಷಣ' ಶಬ್ದದ ತದ್ಭವರೂಪವೆಂದು 'ಚಕ್ಕಣ' ಶಬ್ದವನ್ನು ಒಪ್ಪಿಕೊಳ್ಳುವಲ್ಲಿ ನಾಗವರ್ಮನ ಪ್ರಯೋಗವಾದ 'ಚರ್ಕ್ಕಣ' ಶಬ್ದರೂಪ ಮಧ್ಯೆ ತೊಡಕಾಗಿ ನಿಲ್ಲುತ್ತದೆ. ಆದುದರಿಂದ ಇದು ದೇಶ್ಯವೇ, ತದ್ಭವರೂಪವೇ, ಅನ್ಯದೇಶ್ಯವೇ ಎಂಬುದು ತಿಳಿದವರು ನಿರ್ಧರಿಸಬೇಕಾದ ಅಂಶ.

—ಟಿ. ವಿ. ವೆಂಕಟಾಚಲ ಶಾಸ್ತ್ರೀ

ವಸ್ತುಕೋಶ

ಭಾರತ ಮತ್ತು ಕರ್ಣಾಟಕಗಳ ಇತಿಹಾಸ ರಚನೆ

ಧಾರವಾಡದ ಕರ್ಣಾಟಕ ಇತಿಹಾಸ ಸಂಶೋಧನ ಮಂಡಲದವರು, ಶ್ರೀ ಆರ್. ಎಸ್. ಪಂಚಮುಖಿಯವರ ಸಂಪಾದಕತ್ವದಲ್ಲಿ ಭರತಖಂಡದ ಚರಿತ್ರೆಯನ್ನು ಐದು ಸಂಪುಟಗಳಲ್ಲಿಯೂ, ಕರ್ಣಾಟಕದ ಚರಿತ್ರೆಯನ್ನು ಮೂರು ಸಂಪುಟಗಳಲ್ಲಿಯೂ ಪ್ರಕಟಿಸುವರೆಂದು ತಿಳಿದುಬರುತ್ತದೆ. ಈ ಪ್ರಯತ್ನವು ತುಂಬ ಶ್ಲಾಘನೀಯವಾದುದು. ಕರ್ಣಾಟಕವನ್ನು ಕುರಿತ ಮೊದಲನೆಯ ಸಂಪುಟವು ರಾಯಲ್ ಅಷ್ಟದಳದ ಆಕಾರದಲ್ಲಿ ೬೦೦ ಪುಟಗಳಷ್ಟುಳ್ಳದ್ದಾಗಿರುವುದೆಂದೂ, ಚಾರಿತ್ರಿಕಪೂರ್ವಕಾಲದಿಂದ ೧೦ನೆಯ ಶತಮಾನದವರೆಗೂ ವಿಷಯಗಳು ಅಡಕವಾಗಿರುವುದೆಂದೂ, ೧೯೬೧ನೆಯ ನವೆಂಬರ್ ೧ನೆಯ ತಾರೀಖಿನ ವೇಳೆಗೆ ಬೆಳಕಿಗೆ ಬರುವುದೆಂದೂ ನಿರೀಕ್ಷಿಸಲಾಗಿದೆ. ವಾಸ್ತವವಾಗಿ ಇಂಥ ಮಹತ್ಕಾರ್ಯವು ಬಹಳ ಹಿಂದೆಯೇ ಕನ್ನಡದಲ್ಲಿ ಆಗಬೇಕಾಗಿತ್ತು. ಕರ್ಣಾಟಕವನ್ನು ಕುರಿತ ಸಮಗ್ರವೂ ಸಮರ್ಪಕವೂ ಆದ ಕೃತಿಯೊಂದು ಈಗ ಯಾವುದೂ ಇಲ್ಲ. ಮೇಲ್ಕಂಡ ಸಂಸ್ಥೆಯವರ ಸ್ತುತ್ಯಪ್ರಯತ್ನದಿಂದ ಈ ಕೊರತೆಯು ನಿವಾರಣೆಯಾಗಲೆಂದು ಹಾರೈಸುತ್ತೇವೆ.

—"ಪಿ. ಇ. ಎನ್." ಪತ್ರಿಕೆಯಿಂದ
(ಸೆಪ್ಟೆಂಬರ್ ೧೯೬೧)

ದಿವಂಗತ ಜಾನ್ ರೂಪರ್ಟ್ ಫರ್ತ್

ಈ ಶತಮಾನದ ಸುಪ್ರಸಿದ್ಧ ಭಾಷಾವಿಜ್ಞಾನಿಗಳಲ್ಲಿ ಒಬ್ಬರಾದ ಜಾನ್ ರೂಪರ್ಟ್ ಫರ್ತ್ ಅವರ ಮರಣವಾರ್ತೆಯು ತುಂಬ ದುಃಖಕರವಾದುದು. ಶ್ರೀಯುತರು ೧೮೯೦ನೆಯ ಜೂನ್ ೧೭ರಂದು ಜನಿಸಿದರು. ಲೀಡ್ಸ್ ವಿಶ್ವವಿದ್ಯಾನಿಲಯದಲ್ಲಿ ತಮ್ಮ ವ್ಯಾಸಂಗವನ್ನು ನಡೆಸಿ, ಅನೇಕ ರೀತಿಗಳಲ್ಲಿ ಇಂದಿನ ಭಾಷಾವಿಜ್ಞಾನದ ಅಭಿವೃದ್ಧಿಗೆ ಶ್ರಮಿಸಿದರು. ಶ್ರೀಯುತರು ೧೯೬೦ನೆಯ ಡಿಸೆಂಬರ್ ೧೪ರಂದು ದೈವಾಧೀನರಾದರೆಂದು ತಿಳಿದುಬರುತ್ತದೆ. ಶ್ರೀಯುತರನ್ನು ಕುರಿತು, ಶ್ರೀ **ಎಕ್. ಸಿ. ಸ್ಕಾಟ್** ಎಂಬುವರು ಬರೆದಿರುವ ಜೀವನ ಪರಿಚಯದಿಂದ ಈ ಕೆಲವು ಸಂಗತಿಗಳನ್ನು ಸಂಗ್ರಹಿಸಿ ಕೊಟ್ಟಿರುತ್ತೇವೆ:—

ಜಾನ್‌ರೂಪರ್ಟ್ ಫರ್ತ್ ಅವರು ೧೯೧೩ರಲ್ಲಿ ಎಂ.ಎ. ಪದವಿಯನ್ನು ಪಡೆದ ಬಳಿಕ, ಸ್ವಲ್ಪ ಕಾಲ ಲೀಡ್ಸ್ ಪಟ್ಟಣದ ಟ್ರೈನಿಂಗ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಆ ತರುವಾಯ ಅವರು ಭಾರತದಲ್ಲಿ ವಿದ್ಯಾ ಇಲಾಖೆಯನ್ನು ಸೇರಿ, ೧೯೨೦ರಿಂದ ೧೯೨೮ರವರೆಗೆ ಲಾಹೋರಿನಲ್ಲಿರುವ ಪಂಜಾಬು ವಿಶ್ವವಿದ್ಯಾನಿಲಯದಲ್ಲಿ

ಇಂಗ್ಲಿಷಿನ ಪ್ರೊಫೆಸರಾಗಿದ್ದರು. ಶ್ರೀಯುತರು ಸ್ವದೇಶಕ್ಕೆ ಹಿಂತಿರುಗಲು ಅತ್ಯಂತ ಉತ್ಸುಕರಾಗಿದ್ದರು. ಈ ವೇಳೆಗೆ, ಮತ್ತೊಬ್ಬ ಪ್ರಸಿದ್ಧ ಭಾಷಾವಿಜ್ಞಾನಿಗಳಾದ ಡೇನಿಯಲ್ ಜೋನ್ಸ್ ಅವರ ಕೃಪೆಯಿಂದ ಲಂಡನ್ನಿನಲ್ಲಿ ಕಾಲೇಜಿನ ಭಾಷಾವಿಜ್ಞಾನದ ಇಲಾಖೆಯಲ್ಲಿ ಶ್ರೇಷ್ಠ ದರ್ಜೆಯ ಅಧ್ಯಾಪಕರಾಗಿ ನೇಮಿತರಾದರು. ಈ ಹುದ್ದೆಯಲ್ಲಿ ಶ್ರೀಯುತರು ೧೯೩೮ರವರೆಗೆ ಇದ್ದುದಲ್ಲದೆ, ಇತರ ಅನೇಕ ಉಪವೃತ್ತಿಗಳನ್ನೂ ಒಪ್ಪಿಕೊಂಡು ನಿರ್ವಹಿಸುತ್ತಿದ್ದರು. ಶ್ರೀಯುತರಿಗೆ ೧೯೩೭ರಲ್ಲಿ ವ್ಯಾಸಂಗ ವೇತನವೊಂದು ದೊರೆಯಲು ಸುಮಾರು ೧೫ ತಿಂಗಳುಗಳ ಕಾಲ ಭಾರತದಲ್ಲಿ ನೆಲೆಸಿ, ಗುಜರಾತಿ ಮತ್ತು ತೆಲುಗು ಭಾಷೆಗಳನ್ನು ಅಧ್ಯಯನ ಮಾಡಿದರು. ೧೯೪೦ರ ಹೊತ್ತಿಗೆ ಇವರು ಭಾಷಾವಿಜ್ಞಾನ ಮತ್ತು ಭಾರತೀಯ ಧ್ವನಿವಿಜ್ಞಾನದಲ್ಲಿ ರೀಡರ್ ಪದವಿಯನ್ನು ಗಳಿಸಿದರು. ಶ್ರೀ ಲಲಾಯ್ಡ್ ಜೇಮ್ಸಿನ ತರುವಾಯ ಭಾಷಾವಿಜ್ಞಾನದ ಇಲಾಖೆಯ ಮೇಲ್ವಿಚಾರಕರಾದರು. ಶ್ರೀಯುತರು ಅಧಿಕಾರಕ್ಕೆ ಬಂದಾಗ ಅವರ ಇಲಾಖೆಯಲ್ಲಿ ಕೇವಲ ಇಬ್ಬರು ಅಧ್ಯಾಪಕರಿದ್ದರು. ೧೯೫೬ರಲ್ಲಿ ಅವರು ನಿವೃತ್ತಿಯಾಗುವ ವೇಳೆಗೆ ಅದೇ ಇಲಾಖೆಯಲ್ಲಿ ಹನ್ನೆರಡು ಜನರಿದ್ದರು. ಎರಡನೆಯ ಮಹಾಯುದ್ಧ ಕಾಲದಲ್ಲಿ ಶ್ರೀಯುತರ ನೇತೃತ್ವದಲ್ಲಿ ಅನೇಕ ತರುಣ ಯೋಧರು ತರಬೇತಿಯನ್ನು ಪಡೆದರು. ಈ ಸ್ತುತ್ಯಕಾರ್ಯಕ್ಕಾಗಿಯೇ ಇವರಿಗೆ ೧೯೪೬ರಲ್ಲಿ ಓ. ಬಿ. ಇ. ಎಂಬ ಪ್ರಶಸ್ತಿಯು ಲಭಿಸಿತು.

ಜಾನ್ ರೂಪರ್ಟ್ ಫರ್ತ್ ಅವರು ಬಹುಮಟ್ಟಿಗೆ ಹಳೆಯ ಸಂಪ್ರದಾಯಕ್ಕೆ ಸೇರಿದವರು. ಆದರೂ ಆಧುನಿಕ ಭಾಷಾವಿಜ್ಞಾನವು ತಮ್ಮ ದೇಶದಲ್ಲಿಯೂ ಮಾನ್ಯತೆ ಪಡೆಯಬೇಕೆಂಬುದಾಗಿ ಪ್ರಯತ್ನಿಸಿ ಯಶಸ್ವಿಯಾದರು. ಪಾಣಿನಿ, ಎಲ್‌ಫ್ರಿಕ್, ಬೆಲ್ ಮತ್ತು ಸ್ವೀಟ್ ಮೊದಲಾದವರಲ್ಲಿ ಅವರಿಗೆ ಅಪಾರವಾದ ಪ್ರೀತಿ. ಶ್ರೀಯುತರು ಸ್ವಭಾವತಃ ಸ್ವತಂತ್ರವಾದ ದೃಷ್ಟಿಯನ್ನು ಬೆಳೆಸಿದ್ದರೂ, ಭಾಷೆಯ ವ್ಯಾಸಂಗವನ್ನು ಕೈಕೊಂಡವರ ಪಂಕ್ತಿಯಲ್ಲಿ ತಾವೂ ಒಬ್ಬರೆಂಬುದನ್ನು ಮರೆತಿರಲಿಲ್ಲ. ಆ ಭಾವನೆಯನ್ನೇ ತಮ್ಮ ಶಿಷ್ಯರಲ್ಲಿಯೂ ಉಂಟುಮಾಡುತ್ತಿದ್ದರು. ಅವರು ತಮ್ಮ ಅಭಿಪ್ರಾಯವನ್ನು "ಭಾಷಾವಿಜ್ಞಾನದ ನಿಯಮಗಳು" (Principles of Linguistics) ಎಂಬ ತಮ್ಮ ಗ್ರಂಥವೊಂದರಲ್ಲಿ ಸವಿಸ್ತಾರವಾಗಿ ಕೊಡಬೇಕೆಂದು ಯೋಚಿಸಿದ್ದರು. ಆದರೆ ಇದು ಕೈಗೂಡಲಿಲ್ಲ. ೧೯೫೭ರಲ್ಲಿ ಪ್ರಕಟವಾದ ಅವರ ಪುಸ್ತಕದಲ್ಲಿ (Papers in Linguistics), ೧೯೩೪ರಿಂದ ೧೯೫೧ರವರೆಗೆ ಅವರು ಬರೆದ ಲೇಖನಗಳನ್ನೆಲ್ಲ ಸಂಗ್ರಹಿಸಲಾಗಿದೆ. ಇದಲ್ಲದೆ, ೧೯೫೭ರಲ್ಲಿ "ಫಿಲೊಲಾಜಿಕಲ್ ಸೊಸೈಟಿ" (Philological Society) ಅವರು ಪ್ರಕಟಿಸಿದ "ಸ್ಟಡೀಸ್ ಇನ್ ಲಿಂಗ್ವಿಸ್ಟಿಕ್ ಅನಾಲಿಸಿಸ್" (Studies in Linguistic Analysis) ಎಂಬ ಗ್ರಂಥಕ್ಕೆ ಅವರು ಬರೆದುಕೊಟ್ಟಿರುವ ತಮ್ಮ ಲೇಖನವೊಂದರಲ್ಲಿ (A Synopsis of Linguistic Theory, 1930–1955) ತಮ್ಮ ಸ್ಥಾನಮಾನವೇನೆಂಬುದನ್ನೂ ನಿರ್ದೇಶಿ

ಸಿರುತ್ತಾರೆ. ಅವರ ಲೇಖನಗಳು ಅರ್ಥವತ್ತಾಗಿಯೂ ಪ್ರಚೋದನಾತ್ಮಕವಾಗಿಯೂ ಇವೆ. ಆದರೆ, ಅವರದೇ ಆದ ಆಲಂಕಾರಿಕ ಭಾಷೆಯ ಮೂಲಕ, ಅವರ ನಿಕಟವಾದ ಸಂಪರ್ಕವನ್ನು ಪಡೆದವರನ್ನುಳಿದು ಇತರರಿಗೆ ಅವು ಅರ್ಥವಾಗುವುದು ಸ್ವಲ್ಪ ಕಷ್ಟವಾದೀತು. ಅವರು ಸವಿಸ್ತಾರವಾಗಿ ಪ್ರತಿಪಾದಿಸಿರುವ ಅನೇಕ ಪರಿಪಕ್ವವಾದ ಅಭಿಪ್ರಾಯಗಳು ಈ ಬರೆಹಗಳಲ್ಲಿ ಸಾಕಷ್ಟು ವ್ಯಕ್ತವಾಗದಿರುವುದೂ ಉಂಟು. ತಮ್ಮ ಶಿಷ್ಯರು ಮತ್ತು ಮಿತ್ರರ ಮೇಲೆ ಅವರ ಪ್ರಭಾವವು ನೇರವಾಗಿ ಆಗಿರುವುದೇ ಹೆಚ್ಚು. ಪ್ರತಿ ಬುಧವಾರವೂ ಬೆಳಗ್ಗೆ ಅವರು ಮಾಡುತ್ತಿದ್ದ ಉಪನ್ಯಾಸಗಳು ತುಂಬ ಉಪಯುಕ್ತವಾಗಿದ್ದು ವಿದ್ವಾಂಸರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಿಯವೆನ್ನಿಸಿದ್ದವು. ಫರ್ತ್ ಅವರೊಂದಿಗೆ ಭಾಷಾವಿಜ್ಞಾನವನ್ನು ಕುರಿತ ಯಾವ ಚರ್ಚೆಯೇ ಆಗಲಿ ತುಂಬ ಫಲಪ್ರದವಾಗಿರುತ್ತಿತ್ತು. ಅರ್ಥದ ಸ್ವರೂಪವನ್ನು ಕುರಿತು ಅವರು ನಡೆಸಿರುವ ವ್ಯಾಸಂಗವೂ, ಧ್ವನಿಶಾಸ್ತ್ರದಲ್ಲಿ ಅವರು ಮಂಡಿಸಿರುವ ಕೆಲವು ಅಭಿಪ್ರಾಯಗಳೂ ತುಂಬ ಪ್ರಶಸ್ತವಾಗಿವೆ. ಫರ್ತ್ ಅವರಿಗೆ ಭಾಷೆಯ ವ್ಯಾಸಂಗದಲ್ಲಿ ಕಾಲ್ಪನಿಕವಾದ ಉದಾಹರಣೆಗಳನ್ನು ಕಂಡರೆ ಸಹಿಸುತ್ತಿರಲಿಲ್ಲ. ಅಂತೆಯೇ ನಿರ್ದಿಷ್ಟವಾದ ಉಚ್ಚಾರಣೆಯೇ ಎಲ್ಲಕ್ಕಿಂತಲೂ ಮುಖ್ಯವಾದ ತಳಹದಿ ಎಂದು ಭಾವಿಸಿದ್ದರು.

ಫರ್ತ್ ಅವರು, ಅಲೆಕ್ಸಾಂಡ್ರಿಯಾ, ಅಮೆರಿಕಾ ಮತ್ತು ಯೂರೋಪಿನ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರಾಗಿ ಕೆಲಸಮಾಡಿರುತ್ತಾರೆ. ಪ್ಯಾರಿಸ್ಸಿನಲ್ಲಿ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ವ್ಯಾಸಂಗಗೋಷ್ಠಿಯಲ್ಲಿಯೂ, "ಯುನೆಸ್ಕೊ" ಸಂಸ್ಥೆಯಲ್ಲಿಯೂ ಭಾಗವಹಿಸಿದ್ದರು. ಸ್ವದೇಶದಲ್ಲಿ, ಅವರು ಭಾಷೆಯ ವಿಚಾರಕ್ಕೆ ಸಂಬಂಧಿಸಿದ ಅನೇಕ ಸಮಿತಿಗಳಲ್ಲಿ ಸದಸ್ಯರಾಗಿದ್ದರು. ಫರ್ತ್ ಅವರಿಗೆ ಭಾರತೀಯ ಭಾಷೆಗಳನ್ನು ರೋಮನ್ ಲಿಪಿಗೆ ಅಳವಡಿಸಬೇಕೆಂಬ ಆಸಕ್ತಿ ವಿಶೇಷವಾಗಿತ್ತು. ಭಾರತವನ್ನು ಕಂಡರೆ ಅವರಿಗೆ ವಿಶೇಷವಾದ ಅಭಿಮಾನ. ಬ್ರಿಟಿಷ್ ಕೌನ್ಸಿಲ್ ಅವರ ಆಹ್ವಾನದ ಮೇರೆಗೆ, ೧೯೫೭ರಲ್ಲಿ ಅವರು ಪಾಕಿಸ್ತಾನಕ್ಕೆ ಭೇಟಿಯಿತ್ತು, ಅಲ್ಲಿನ ಭಾಷಾಸಮಸ್ಯೆಯನ್ನು ಕುರಿತು ತಮ್ಮ ಸಲಹೆಗಳನ್ನಿತ್ತುದಲ್ಲದೆ, ಆ ಕಾಲದಲ್ಲಿ ಅವರು ಅನೇಕ ವಿದ್ಯಾಸಂಸ್ಥೆಗಳನ್ನು ಸಂದರ್ಶಿಸಿ, ಇಂಗ್ಲಿಷಿನ ವ್ಯಾಸಂಗದ ಬಗ್ಗೆ ತಮ್ಮ ಅಭಿಪ್ರಾಯವನ್ನು ಸರ್ಕಾರದವರಿಗೆ ವರದಿ ಮಾಡಿದರು.

ಶ್ರೀಯುತರು ತಮ್ಮ ಹುದ್ದೆಯಿಂದ ನಿವೃತ್ತರಾದಮೇಲೂ ದೇಶವಿದೇಶಗಳಲ್ಲಿ ಸಂಚರಿಸಿ ತಮ್ಮ ಅಧ್ಯಯನದ ಫಲಿತಾಂಶಗಳನ್ನು ತಿಳಿಯಹೇಳುತ್ತಿದ್ದರು. ಭಾಷಾ ವಿಜ್ಞಾನದಲ್ಲಿ ಪ್ರಾಯೋಗಿಕ ವಿಭಾಗಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಅವರ ಅಭಿಮಾನ ಹೇಳತೀರದು. ಅವರು ೧೯೩೩ರಿಂದ "ಫಿಲೊಲಾಜಿಕಲ್ ಸೊಸೈಟಿ"ಯ ಸದಸ್ಯರಾಗಿದ್ದುಕೊಂಡು, ಅದರ ಕಾರ್ಯಕಲಾಪಗಳಲ್ಲಿ ತುಂಬ ಆಸಕ್ತಿಯನ್ನು

ವಹಿಸಿದ್ದರು. ಆ ಸಂಸ್ಥೆಯ ಅಧ್ಯಕ್ಷರೂ, ಉಪಾಧ್ಯಕ್ಷರೂ ಆಗಿ ಅಪಾರವಾಗಿ ಸೇವೆ ಸಲ್ಲಿಸಿರುತ್ತಾರೆ. ಫರ್ಸ್ಟ್ ಅವರಿಗೆ ವ್ಯಕ್ತಿಗಿಂತಲೂ ವಿಷಯ ಹಿರಿದೆಂಬ ಪರಿಜ್ಞಾನವು ಮಿಗಿಲಾಗಿತ್ತು. ಈ ದೃಷ್ಟಿಯಿಂದ ಅವರು ಅನೇಕ ಸತ್ಕಾರ್ಯಗಳನ್ನು ತುಂಬ ಶ್ರಮವಹಿಸಿ ಮಾಡಿರುತ್ತಾರೆ. ಸ್ವಭಾವತಃ ತುಂಬ ಆವೇಶಯುತರೂ, ಪ್ರಸನ್ನಚಿತ್ತರೂ ಆಗಿದ್ದರು. ಬಹಳ ಸೂಕ್ಷ್ಮಮತಿಗಳಾಗಿದ್ದುದರಿಂದ ಯಾರಾದರೂ ವಿಮರ್ಶಿಸಿದರೆ ಬಹುಬೇಗ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸದೆ ಇರುತ್ತಿರಲಿಲ್ಲ. ಆದರೆ ಅವರೊಂದಿಗೆ ಉಂಟಾದ ಇಂಥ ಪ್ರಸಂಗಗಳು ತುಂಬ ಫಲಪ್ರದವಾಗಿಯೇ ಇರುತ್ತಿದ್ದವು. ಅವರು ಒಳ್ಳೆಯ ಮಾತುಗಾರರೆನಿಸಿದ್ದರು. ಎಲ್ಲರೂ ಸೇರಿರುವಾಗ, ಅನೇಕವೇಳೆ ಅವರೇ ಹೆಚ್ಚು ಮಾತನಾಡುತ್ತಿದ್ದುದೂ ಉಂಟು. ಅತ್ಯಂತ ಪ್ರಶಸ್ತವಾದ ಸಂದರ್ಭಗಳು ಒದಗಿಬಂದಾಗ ತಾವು ಹೇಳಬೇಕೆಂದಿದ್ದ ವ್ಯಕ್ತಿಗಳು, ಸ್ಥಳಗಳು ಮತ್ತು ತಮ್ಮ ಜೀವನದ ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆಯೇ ಚಿತ್ರಿಸಬಲ್ಲವರಾಗಿದ್ದರು. ಅವುಗಳನ್ನು ಕೇಳುತ್ತಿದ್ದ ಅವರ ಮಿತ್ರರಿಗೂ ಶ್ರೀಯುತರಿಗಾದಷ್ಟು ಆನಂದವೇ ಆಗುತ್ತಿತ್ತು.

—From " BSOAS, XXIV, 2, 1961."

ಸಂಪಾದಕೀಯ

ದಿವಂಗತ ಆಸ್ಥಾನ ವಿದ್ವಾನ್ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು

ಸಂಸ್ಕೃತ ಪಾಂಡಿತ್ಯ, ಕನ್ನಡ ಅಭಿಮಾನ, ಅಭಿನಯ ಕೌಶಲ ಮತ್ತು ಅಪಾರವಾದ ಮೈತ್ರಿಗಳಿಗೆ ತವರುಮನೆಯಂತಿದ್ದ ಶ್ರೀ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ೩೦-೭-೧೯೬೧ರಂದು ದೈವಾಧೀನರಾದರೆಂಬ ಸುದ್ದಿಯನ್ನು ಕೇಳಿದ ಯಾರಿಗಾದರೂ ಸಂಕಟವಾಗದೆ ಇರದು. ಶ್ರೀ ಶಾಸ್ತ್ರಿಗಳಂಥ ವಿದ್ವನ್ಮಣಿಗಳು ಈಗಿನ ಕಾಲದಲ್ಲಿ ಬಹು ವಿರಳ. ಶ್ರೀಯುತರು ಒಳ್ಳೆಯ ವಿದ್ಯಾವಂತ ಮನೆತನದಲ್ಲಿ ಬೆಳೆದುಬಂದವರು. ಮೊದಲಿನಿಂದಲೂ ನಮ್ಮ ಹಳೆಯ ಸಂಪ್ರದಾಯದಂತೆ ಸಂಸ್ಕೃತ ಭಾಷೆಯನ್ನು ಅಧ್ಯಯನಮಾಡಿ ಅದರಲ್ಲಿ ಆಳವಾದ ಪಾಂಡಿತ್ಯವನ್ನು ಸಂಪಾದಿಸಿದ್ದರು. ವಾಲ್ಮೀಕಿ ರಾಮಾಯಣಕ್ಕೆ ಅವರು ಬರೆದಿರುವ ಕನ್ನಡ ಟಿಪ್ಪಣಿ, ಕಾಳಿದಾಸನ "ಮಾಳವಿಕಾಗ್ನಿಮಿತ್ರ"ದ ಕನ್ನಡ ಭಾಷಾಂತರ, ಚಿಕ್ಕದಾದರೂ ಬಹು ರಸವತ್ತಾಗಿ ಬರೆದಿರುವ ಸಂಸ್ಕೃತ ನಾಟಕಗಳ ಕಥಾಸಾರ, ಸ್ಕಾಂದ ಪುರಾಣದ ಕನ್ನಡ ಅನುವಾದ ಮೊದಲಾದವು ಅವರ ವಿದ್ವತ್ತನ್ನು ನಮಗೆ ಪರಿಚಯಮಾಡಿಕೊಡಬಲ್ಲವು. ಪದ್ಯವೇ ಆಗಲಿ, ಗದ್ಯವೇ ಆಗಲಿ ಅದು ಸಾಕಷ್ಟು ಬಿಗಿಯಾಗಿಯೂ, ನಿರ್ದುಷ್ಟವಾಗಿಯೂ, ಅರ್ಥವತ್ತಾಗಿಯೂ ಇರಬೇಕೆಂಬುದೇ ಅವರ ಆಶಯ. ಯಾವ ಬರಹವನ್ನೇ ಆಗಲಿ ಪುನಃ ಪುನಃ ಪರಿಶೀಲಿಸಿ, ತಮ್ಮ ಮನಸ್ಸಿಗೆ ತೃಪ್ತಿಯಾಗುವತನಕ ಅದನ್ನು ಪ್ರಕಟಿಸುತ್ತಿರಲಿಲ್ಲ. ಅವರು ಅಚ್ಚಿನ ಹುಚ್ಚಿಗೆ ಎಂದಿಗೂ ಗುರಿಯಾದವರಲ್ಲ. ಅವರು ಬರೆದ ಕಂದ, ವೃತ್ತ ಮತ್ತು ಗದ್ಯಗಳ ಸವಿಯನ್ನು ಎಷ್ಟು ಹೇಳಿದರೂ ಸಾಲದು. ಹಿತಮಿತವಾದ ಸಂಸ್ಕೃತದ ಪೋಂಭಾವಣೆ, ಸುಮಧುರವಾದ ಕನ್ನಡ ಶಬ್ದಗಳ ಪ್ರಯೋಗ, ಪ್ರಾಚೀನ ಮತ್ತು ನವೀನ ದೃಷ್ಟಿಗಳ ಸಮನ್ವಯ ಮೊದಲಾದ ಲಕ್ಷಣಗಳು ಪ್ರಶಂಸನೀಯವಾದುವು.

ಶ್ರೀ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ನಿಗರ್ವಿಗಳು ಮತ್ತು ನಿರಾಡಂಬರ ಸ್ವಭಾವದವರು. ಹಿರಿಯರು ಮತ್ತು ಕಿರಿಯರೊಡನೆ ಒಂದೇ ಬಗೆಯಾದ ಸೌಜನ್ಯದಿಂದ ವರ್ತಿಸುತ್ತಿದ್ದವರು. "ರಂಗಭೂಮಿ"ಯ ಸಂಪಾದಕರಾಗಿ ಅನೇಕ ವರ್ಷಗಳ ಕಾಲ ಶ್ರಮಿಸಿದ ಶ್ರೀಯುತರು ಬಹು ಮಂದಿ ತರುಣ ಲೇಖಕರಿಗೆ ನೀಡಿದ ಉತ್ತೇಜನವನ್ನೂ, ಮಾರ್ಗದರ್ಶನವನ್ನೂ ಮರೆಯುವಂತಿಲ್ಲ. ಅನಂತರ, "ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ" "ಕನ್ನಡ ನುಡಿ"ಗಳ ಸಂಪಾದಕರಾಗಿ ಕನ್ನಡ ನಾಡು ಮತ್ತು ನುಡಿಗಳಿಗೆ ಅವರು ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಶ್ರೀ ಶಾಸ್ತ್ರಿಗಳು ಬೆಂಗಳೂರಿನ ಅಮೆಚೂರು ನಾಟಕ ಮಂಡಲಿಯ ಗಣ್ಯ ಸದಸ್ಯರಲ್ಲಿ ಒಬ್ಬರಾಗಿದ್ದರು. ಸಂಸ್ಕೃತ ಮತ್ತು ಕನ್ನಡ ಪದ್ಯಗಳನ್ನು ಬಹು ಶ್ರಾವ್ಯವಾಗಿ

ಹಾಡಲು ಶಕ್ತರಾಗಿದ್ದವರು. ಶಾಸ್ತ್ರಿಗಳ ನಿಕಟವಾದ ಪರಿಚಯವುಳ್ಳವರು, ಅವರ ರಸಿಕತೆ, ಸರಸ ಸಂಭಾಷಣೆ, ಆದರ ವಿಶ್ವಾಸಗಳನ್ನು ಎಂದಿಗೂ ಮರೆಯುವಂತಿಲ್ಲ. ಇತರರ ಮೇಲ್ಮೆಯನ್ನು ಕಂಡು ಮನವಾರೆ ಮೆಚ್ಚಬಲ್ಲ ಅವರ ಔದಾರ್ಯ, ಎಷ್ಟೇ ಕಷ್ಟ ನಷ್ಟಗಳಿದ್ದರೂ ಅವುಗಳನ್ನು ನುಂಗಿಕೊಂಡು ಇತರರೊಂದಿಗೆ ಅವರು ವ್ಯಕ್ತಪಡಿಸುತ್ತಿದ್ದ ಪ್ರಸನ್ನತೆ, ಇತರ ಲೇಖಕರಲ್ಲಿ ಅವರು ತೋರಿಸುತ್ತಿದ್ದ ಗುಣಪಕ್ಷಪಾತ ಮೊದಲಾದವು ಶಾಸ್ತ್ರಿಗಳವರ ವ್ಯಕ್ತಿತ್ವದ ಕೆಲವು ಮುಖ್ಯಾಂಶಗಳು. ಇಂಥ ವಿದ್ವಾಂಸರೂ, ಕವಿಗಳೂ, ಸಹೃದಯರೂ, ನುರಿತ ಸಂಪಾದಕರೂ ಆಗಿದ್ದ ಶ್ರೀ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು ನಮ್ಮನ್ನು ಅಗಲಿದ್ದು ನಮ್ಮೆಲ್ಲರ ದುರ್ದೈವವೇ ಸರಿ. ಶ್ರೀಯುತರ ಬಾಳು ಸಂಸ್ಕೃತಿ ಸಂಪನ್ನವಾಗಿ ಸಾರ್ಥಕವೆನ್ನಿಸಿತು. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನುಂಟುಮಾಡಲಿ. ಅವರ ವಿಯೋಗದಿಂದ ನೊಂದಿರುವ ಬಂಧುಬಳಗದವರಿಗೂ, ಮಿತ್ರರಿಗೂ ನಮ್ಮ ಅನುತಾಪವನ್ನು ಈ ಮೂಲಕ ವ್ಯಕ್ತಪಡಿಸಲು ಬಯಸುತ್ತೇವೆ.

ಸಾದರ ಸ್ವೀಕಾರ

ದೇಗುಲಗಳ ದಾರಿಯಲ್ಲಿ (ಪ್ರವಾಸ ಸಾಹಿತ್ಯ) : ಲೇಖಕರು : ಶ್ರೀ ಪ್ರಭುಪ್ರಸಾದ ; ಪ್ರಕಾಶಕರು : ಸಾರಸ ವಿಹಾರ, ಸರಸ್ವತೀಪುರ, ಮೈಸೂರು ; ಕಿರೀಟ ಅಷ್ಟದಳ ; ಪು. vi+೧೫೦ ; ಬೆಲೆ : ಸಾಧಾರಣ ಪ್ರತಿ ರೂ. ೨.೦೦ (ಕ್ಯಾಲಿಕೊ ಪ್ರತಿ ರೂ. ೪.೦೦).

ಪಾಪಾ (ಶಿಶುಗೀತಗಳು) : ಲೇಖಕರು : ಶ್ರೀ ಈಶ್ವರ ಹಿರೇನಂದಿಹಳ್ಳಿ ; ಪ್ರಕಾಶಕರು : ಶ್ರೀ ಯೋಗೀಶ ಯಡ್ರಾವಿ, ಬಿ.ಎ. (ಆನರ್ಸ್), ಧಾರವಾಡ ; ಕಿರೀಟ ಅಷ್ಟದಳ ; ಪು. v+೩೦ ; ಬೆಲೆ. ನಪೈ. ೪೦.

ತೂಗುದೀವಿಗೆ (ಕವನ ಸಂಕಲನ) : ಲೇಖಕರು : ಶ್ರೀ ಟಿ. ಕೇಶವ ಭಟ್, ಎಂ.ಎ. ; ಪ್ರಕಾಶಕರು : ಅಭ್ಯುದಯ ಪ್ರಕಾಶನ, ತಾಳಿತ್ತಜೆ ಪೋಸ್ಟ್, ಚಿಪ್ಪಾರು, ಕಾಸರಗೋಡು ತಾಲ್ಲೂಕು ; ಕಿರೀಟ ಅಷ್ಟದಳ ; ಪು. ೩೫ ; ಬೆಲೆ : ಸಾಮಾನ್ಯ ಪ್ರತಿ ರೂ. ೧.೦೦ (ಕ್ಯಾಲಿಕೊ ಪ್ರತಿ ರೂ. ೨.೦೦).

ಹೊಸಗನ್ನಡ ಪ್ರಬಂಧ ಸಂಕಲನ : ಸಂಪಾದಕರು : ಶ್ರೀ ಗೋರೂರು ರಾಮಸ್ವಾಮಿ ಐಯಂಗಾರ್ ; ಪ್ರಕಾಶಕರು : ಸಾಹಿತ್ಯ ಅಕಾಡೆಮಿ, ಹೊಸದಿಲ್ಲಿ ; ಕನ್ನಡ ಕವಿ ಕಾವ್ಯಮಾಲೆ, ಮೈಸೂರು ೪ ; ಕಿರೀಟ ಅಷ್ಟದಳ ; ಪು. xiv+೨೭೧ ; ಬೆಲೆ ರೂ. ೪.೫೦.

ಇಬ್ಸೆನ್ ನಾಟಕಗಳು (ನಾಟಕ) : ಅನು : ಶ್ರೀ ಆದ್ಯ ರಂಗಾಚಾರ್ಯ ; ಪ್ರಕಾಶಕರು : ಉಷಾ ಸಾಹಿತ್ಯಮಾಲೆ, ಮೈಸೂರು ; ಕ್ರೌನ್ ಅಷ್ಟದಳ ; ಪು. x + ೨೯೨ ; ಬೆಲೆ ರೂ. ೩.೦೦

ರವೀಂದ್ರನಾಥ ಠಾಕೂರರು (ಜೀವನ ಚರಿತ್ರೆ) : ಲೇಖಕರು : ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ; ಪ್ರಕಾಶಕರು : ಉಷಾ ಸಾಹಿತ್ಯಮಾಲೆ, ಮೈಸೂರು ; ಕಿರೀಟ ಅಷ್ಟದಳ ; ಪು. ix+೨೧೩ ; ಬೆಲೆ : ರೂ. ೨.೧೦.

ಹಾಳು ದೇಗುಲ (ಆತ್ಮಕಥೆ) : ಅನು : ಶ್ರೀ ಆದ್ಯ ರಂಗಾಚಾರ್ಯ ; ಪ್ರಕಾಶಕರು ; ಉಷಾ ಸಾಹಿತ್ಯಮಾಲೆ, ಮೈಸೂರು ; ಕಿರೀಟ ಅಷ್ಟದಳ ; ಪು. ೧೨೯ ; ಬೆಲೆ : ರೂ. ೧.೧೦.

ಚಿತ್ರಲೇಖಾ (ಕಾದಂಬರಿ) : ಲೇಖಕರು : ಶ್ರೀ ವಿ. ಎಂ. ಇನಾಂದಾರ್ ; ಪ್ರಕಾಶಕರು : ಉಷಾಸಾಹಿತ್ಯಮಾಲೆ, ಮೈಸೂರು ; ಕಿರೀಟ ಅಷ್ಟದಳ ; ಪು. viii+೩೭೧ ; ಬೆಲೆ : ರೂ. ೪.೫೦ (ಕ್ಯಾಲಿಕೊ, ರೂ. ೬.೦೦).

ನಾಗಕನ್ನಿಕೆ ಮತ್ತು ಇತರ ಕತೆಗಳು (ಮಕ್ಕಳ ಕತೆಗಳು) : ಲೇಖಕರು : ಶ್ರೀ ಎಂ. ರಾಮರಾವ್, ಎಂ.ಎ., ಬಿ.ಟಿ; ಪ್ರಕಾಶಕರು : ಉಷಾ ಸಾಹಿತ್ಯಮಾಲೆ, ಮೈಸೂರು; ಪು. ೧೪೩; ಬೆಲೆ : ರೂ. ೧.೫೦.

ಸಂಧ್ಯಾಕಾಲ (ನಾಟಕ): ಲೇಖಕರು : ಶ್ರೀ ಶ್ರೀರಂಗ ; ಪ್ರಕಾಶಕರು : ಉಷಾ ಸಾಹಿತ್ಯ ಮಾಲೆ, ಮೈಸೂರು ; ಕಿರೀಟ ಅಷ್ಟದಳ; ಪು. ಲ೪ ; ಬೆಲೆ : ರೂ. ೧.೫೦.

ಬಾಲಗಂಗಾಧರ ತಿಲಕ್ (ಜೀವನ ಚರಿತ್ರೆ) : ಲೇಖಕರು : ಶ್ರೀ ಕೆ. ಟಿ. ರಾಮಸ್ವಾಮಿ ಅಯ್ಯಂಗಾರ್ ; ಪ್ರಕಾಶಕರು : ಉಷಾ ಸಾಹಿತ್ಯಮಾಲೆ, ಮೈಸೂರು ; ಕಿರೀಟ ಅಷ್ಟದಳ ; ಪು. ೬೩ ; ಬೆಲೆ : ರೂ. ೦.೭೫.

ಶೋಕಚಕ್ರ (ನಾಟಕ): ಲೇಖಕರು : ಶ್ರೀ ಶ್ರೀರಂಗ ; ಪ್ರಕಾಶಕರು : ಉಷಾ ಸಾಹಿತ್ಯ ಮಾಲೆ, ಮೈಸೂರು ; ಕಿರೀಟ ಅಷ್ಟದಳ ; ಪು. iv+೯೮ ; ಬೆಲೆ : ರೂ. ೧.೫೦.

ಯದುಪತಿ (ಕಥೆ) : ಲೇಖಕರು : ಶ್ರೀ ಸಾಲಿ ರಾಮಚಂದ್ರರಾಯರು ; ಪ್ರಕಾಶಕರು : ಉಷಾ ಸಾಹಿತ್ಯಮಾಲೆ, ಮೈಸೂರು ; ಕಿರೀಟ ಅಷ್ಟದಳ ; ಪು. x+೧೨೧ ; ಬೆಲೆ : ರೂ. ೧.೨೫.

ಶ್ರೀಹರಿಕಥಾಮೃತಸಾರ (ಕವಿತೆ) : ಸಂಪಾದಕರು : ಡಾ|| ಕೆ. ಎಂ. ಕೃಷ್ಣರಾವ್, ಎಂ.ಎ., ಪಿಎಚ್.ಡಿ ; ಪ್ರಕಾಶಕರು : ಉಷಾ ಸಾಹಿತ್ಯಮಾಲೆ, ಮೈಸೂರು; ಕಿರೀಟ ಅಷ್ಟದಳ ; ಪು. xiv+೫೧೪ ಬೆಲೆ : ರೂ. ೭.೫೦.

ಭಾವಾಂಜಲಿ (ಕವನ ಸಂಗ್ರಹ) : ವಿವಿಧ ಲೇಖಕರು : ಸಂಪಾದಕರು ಮತ್ತು ಪ್ರಕಾಶಕರು : ಲೋಕಸೇವಾವೃಂದ, ಅಳಿಕೆ, ದ.ಕ ; ಕಿರೀಟ ಅಷ್ಟದಳ ; ಪು. iv+೭೬ ;ಬೆಲೆ : ರೂ. ೧.೨೫.

ಮಂಜು ಮಣಿ (ಕವನ ಸಂಗ್ರಹ) : ಲೇಖಕರು : ಶ್ರೀ ನಿಂಬ, ಪಟ್ಟಣಶೆಟ್ಟಿ ; ಪ್ರಕಾಶಕರು; ಸ್ನೇಹ ಪ್ರಕಾಶನ, ಶಮನೇವಾಡಿ ; ಕಿರೀಟ ಅಷ್ಟದಳ; ಪು. ii+೩೮ ; ಬೆಲೆ : ರೂ. ೦.೫೦.

ಅಶ್ರು (ಕಾವ್ಯ) : ಅನು : ಶ್ರೀ ನಾಣಿ; ಪ್ರಕಾಶಕರು ಮತ್ತು ಮುದ್ರಕರು : ಶ್ರೀ ರಾಘವೇಂದ್ರ ಪ್ರೆಸ್, ತುಮಕೂರು ; ೧/೮ ಫೂಲ್ಸ್‌ಕ್ಯಾಪ್ ; ಪು. ೧೪+೪೦ ; ಬೆಲೆ : ರೂ. ೦.೫೦.

ಮಹಾಕವಿ ರಾಘವಾಂಕ ವಿರಚಿತ ಸೋಮನಾಥ ಚಾರಿತ್ರ (ಕಾವ್ಯ) : ಸಂ. ಡಾ|| ಆರ್. ಸಿ. ಹಿರೇಮಠ, ಎಂ.ಎ., ಪಿಎಚ್.ಡಿ. ಮತ್ತು ಡಾ|| ಎಮ್. ಎಸ್. ಸುಂಕಾಪುರ; ಎಂ.ಎ., ಪಿಎಚ್. ಡಿ ; ಪ್ರಕಾಶಕರು : ಕರ್ನಾಟಕ ವಿಶ್ವವಿದ್ಯಾಲಯ ಪ್ರಕಾಶನ, ಧಾರವಾಡ, ಡೆಮಿ ಆಕ್ಟ್ ; ಪು. Lxxv+ ೨೩೬ ; ಬೆಲೆ : ರೂ. ೫.೦೦

ಪ್ರಾಯೋಗಿಕ ರಸಾಯನಶಾಸ್ತ್ರ (ವಿಜ್ಞಾನ) : ಲೇಖಕರು : ಶ್ರೀ ಆರ್.ಬಿ. ಕಂಠಿ, ಎಂ.ಎಸ್‌ಸಿ, ಬಿ.ಟಿ. ; ಪ್ರಕಾಶಕರು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಕಿರೀಟ ಅಷ್ಟದಳ; ಪು. iv+೩೧೬ ; ಬೆಲೆ : ರೂ. ೩.೦೦.

ಅ. ನ. ಕೃಷ ರಾಯರು (ಜೀವನ ಪರಿಚಯ) : ಲೇಖಕರು : ಶ್ರೀ ಸೇವ ನಮಿರಾಜ ಮಲ್ಲ ; ಪ್ರಕಾಶಕರು : ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ ; ಫೂಲ್ಸ್ ಕ್ಯಾಪ್ ೧|೮ ; ಪು. ೭೨+೨೦ ; ಬೆಲೆ : ನಪೈ. ೪೦.

ಭಾವಪ್ರಕಾಶ (ಕಥಾಸಂಕಲನ) : ಲೇಖಕರು : ಶ್ರೀ ಬಿ. ಜಿ. ಸತ್ಯಮೂರ್ತಿ ಮತ್ತು ಶ್ರೀ ಎನ್. ನಾರಾಯಣ ಬಲ್ಲಾಳ್ ; ಪ್ರಕಾಶಕರು : ಶ್ರೀ ರಾಘವೇಂದ್ರ ಪ್ರಕಾಶನ, ಉಡುಪಿ ; ಕಿರೀಟ ಅಷ್ಟದಳ ; ಪು. ೪೫ ; ಬೆಲೆ : ರೂ. ೦.೫೦.

ಶ್ರೀಮಧ್ವಾಚಾರ್ಯರು (ಜೀವನ ಚರಿತ್ರೆ) : ಲೇಖಕರು : ಶ್ರೀ ಎಸ್. ಕೆ. ರಾಮಚಂದ್ರ ರಾವ್, ಎಂ.ಎ. ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಕಿರೀಟ ಅಷ್ಟದಳ ; ಪು. ೩೨ ; ಬೆಲೆ : ರೂ. ೦.೫೦.

ಈಸೋಪನ ನೀತಿಕಥೆಗಳು (ಮಕ್ಕಳ ಕಥೆಗಳು) : ಲೇಖಕರು : ಶ್ರೀ ಕೂಡಲಿ ಚಿದಂಬರಂ ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಕಿರೀಟ ಅಷ್ಟದಳ; ಪು. ೩೨ ; ಬೆಲೆ : ರೂ. ೦.೫೦.

ಪರಮಾಣು ವಿವರಣೆ (ವಿಜ್ಞಾನ) : ಅನು : ಶ್ರೀ ಡಿ. ವಿ. ರಾಘವೇಂದ್ರ ; ಪ್ರಕಾಶಕರು; ಕಾವ್ಯಾಲಯ, ಮೈಸೂರು ; ಕಿರೀಟ ಅಷ್ಟದಳ ; ಪು. xx+೨೮೪ ; ಬೆಲೆ : ರೂ. ೩.೦೦.

ಭಾರತಿಯುವರ ಕವಿತೆಗಳು (ಕವನ ಸಂಗ್ರಹ) : ಅನು : ಶ್ರೀ ಎಲ್. ಗುಂಡಪ್ಪ ; ಪ್ರಕಾಶಕರು : ಕಾವ್ಯಾಲಯ, ಮೈಸೂರು (ಸಾಹಿತ್ಯ ಅಕಾಡೆಮಿಯ ಪರವಾಗಿ) ; ಕಿರೀಟ ಅಷ್ಟದಳ ; ಪು. xxviii+೨೨೭ ; ಬೆಲೆ : ರೂ. ೫.೦೦.

ಕನ್ನಡ ಮಿತಾಕ್ಷರಾ: ಅನು : ಶ್ರೀ ಕೆ. ಕೃಷ್ಣಭಟ್ಟ ; ಪ್ರಕಾಶಕರು : ವಿಶ್ವರೂಪ ಸಾಹಿತ್ಯ ವಿಸ್ತರಣ, ಪುಂಡೂರು, ನೆಕ್ರಾಜೆ, ಕಾಸರಗೋಡು, ದ. ಭಾ. ; ಕಿರೀಟ ಅಷ್ಟದಳ ; ಪು. iii+೫೦ ; ಬೆಲೆ : ರೂ. ೦.೭೫.

ಕಪಿಲೆ (ಕಾದಂಬರಿ) : ಲೇಖಕರು : ಶ್ರೀ ಶೇಷನಾರಾಯಣ ; ಪ್ರಕಾಶಕರು : ಮೋಹನ ಪ್ರಕಾಶನ ; ಕೃಷ್ಣಮೂರ್ತಿಪುರಂ, ಮೈಸೂರು ; ಕಿರೀಟ ಅಷ್ಟದಳ ; ಪು. ೧೫೪ ; ಬೆಲೆ : ರೂ. ೨.೦೦.

ಮಹರ್ಷಿಗಳ ಜೀವನ ಚರಿತ್ರೆ (ಜೀವನ ಚಿತ್ರಗಳು) : ಮೂಲ ಲೇಖಕರು : ಶ್ರೀ ಕೆ. ಎಸ್. ರಾಮಸ್ವಾಮಿ ಶಾಸ್ತ್ರಿ ; ಅನು : ಶ್ರೀ ರಾ. ವೆಂ. ಶ್ರೀನಿವಾಸ ; ಪ್ರಕಾಶಕರು : ಮೋಹನ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು ; ಕಿರೀಟ ಅಷ್ಟದಳ ; ಪು. viii+೯೭ ; ಬೆಲೆ : ರೂ. ೦.೯೦.

ಎಂಬತ್ತು ದಿನಗಳಲ್ಲಿ ಭೂಪ್ರದಕ್ಷಿಣೆ (ಪ್ರವಾಸ ಸಾಹಿತ್ಯ) : ಮೂಲ ಲೇಖಕರು : ಜ್ಯಾಲ್ಸ್‌ವರ್ನ್ ; ಪ್ರಕಾಶಕರು : ಮೋಹನ ಪ್ರಕಾಶನ ; ಕೃಷ್ಣಮೂರ್ತಿಪುರಂ, ಮೈಸೂರು ; ಕಿರೀಟ ಅಷ್ಟದಳ ; ಪು. v+೧೨೦ ; ಬೆಲೆ : ರೂ. ೧.೫೦.

ಅಭೀಪ್ಸೆ (ಕವನ ಸಂಗ್ರಹ) : ಲೇಖಕರು : ಶ್ರೀ ಹೆಚ್. ಜಿ. ಸಣ್ಣಗುಡ್ಡಯ್ಯ ; ಪ್ರಕಾಶಕರು : ಸಿರಿಗನ್ನಡ ಪ್ರಕಾಶನ, ತುಮಕೂರು ; ಕಿರೀಟ ಅಷ್ಟದಳ ; ಪು. iv+೫೮ ; ಬೆಲೆ : ರೂ. ೧.೨೫.

ಒಂದು ಕತ್ತೆಯ ಆತ್ಮಕಥೆ (ವಿಡಂಬನಾತ್ಮಕ ಕಾದಂಬರಿ) : ಮೂಲಲೇಖಕರು : ಶ್ರೀ ಶ್ರೀಕೃಷ್ಣಚಂದ್ರ ; ಅನುವಾದಕರು : ಶ್ರೀ ಜಿ. ಜಿ. ಹೆಗಡೆ ; ಪ್ರಕಾಶಕರು : ಸಾಹಿತ್ಯ ಭಂಡಾರ, ಹುಬ್ಬಳ್ಳಿ ; ಕಿರೀಟ ಅಷ್ಟದಳ ; ಪು. ೧೩೫ ; ಬೆಲೆ : ರೂ. ೨.೦೦.

ಕವಿಲಕ್ಷ್ಮೀಶನ ಶಬ್ದಾಲಂಕಾರ ವೈಭವ (ಪದ್ಯ ಸಂಚಯ) : ಲೇಖಕರು : ಶ್ರೀ. ರಾ. ನ. ಮಳಗಿ ; ಪ್ರಕಾಶಕರು : ಸಾಹಿತ್ಯ ಭಂಡಾರ, ಹುಬ್ಬಳ್ಳಿ ; ಕಿರೀಟ ಅಷ್ಟದಳ ; ಪು. xvi+೨೯ ; ಬೆಲೆ : ರೂ. ೧.೨೫.

ಧರ್ಮಶ್ರೀ (ಕಾದಂಬರಿ) : ಲೇಖಕರು : ಶ್ರೀ ಎಸ್. ಎಲ್. ಭೈರಪ್ಪ ; ಪ್ರಕಾಶಕರು : ಸಾಹಿತ್ಯ ಭಂಡಾರ, ಹುಬ್ಬಳ್ಳಿ ; ಕಿರೀಟ ಅಷ್ಟದಳ ; ಪು. iv+೩೪೦ ; ಬೆಲೆ : ರೂ. ೪.೨೫.

The Structure of Kannada (Linguistics) : By Dr. R. C. Hiremath, M.A., Ph.D. ; Pub : Karnatak University, Dharwar : Double foolscap ; PP. IV+135 ; Price : Rs. 5.00.

The Literary Half-yearly (Magazine); Vol II, No. 2 (July 1961); Ed. Sri. H. H. Anniah Gowda, M.A. M. Litt. (Durham); Department of Post-Graduate Studies in English, University of Mysore, Mysore; PP. 90; Annual Subscription Rs. 3. 50.

WO 502—MUPM—1,000+25—30-11-61

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

ಇಂಗ್ಲಿಷ್ ಪತ್ರಿಕೆಗಳು

Annals of Oriental Research University of Madras ; *Bramhavidya*, Adyar, Madras ; *Bulletin of the School of Oriental and African Studies*, London ; *Journal of the Andhra Historical Research Society*, Rajahmundry ; *Journal of the Karnataka Historical Research Society*, Dharwar ; *Quarterly Journal of the Mythic Society*, Bangalore ; *The Indian P.E.N.* Bombay; *Annals of the Venkateswara Oriental Institute*, Tirupati ; *The Jaina Siddhanta Bhaskara and the Jaina Gazette*, Arrah ; *Bulletin of the Deccan College Research Institute*, Poona ; *Publication of the Kannada Research Office*, Dharwar ; *Annals of the Bhandarkar Oriental Research Institute*, Poona.

ವಾರಪತ್ರಿಕೆಗಳು

'ಕಂಠೀರವ', ಮಂಗಳೂರು ; 'ಚೇತನಾ', ಬೆಂಗಳೂರು ; 'ಪ್ರಭಾತ', ಮಂಗಳೂರು; 'ಪ್ರಪಂಚ', ಹುಬ್ಬಳ್ಳಿ ; 'ಕರ್ಮವೀರ', ಹುಬ್ಬಳಿ.

ಮಾಸಪತ್ರಿಕೆಗಳು

'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು), ಕಾಕಿನಾಡ ; 'ಕತೆಗಾರ', ಬೆಂಗಳೂರು ; 'ಕನ್ನಡ ಸಹಕಾರಿ', ಮಂಗಳೂರು ; 'ಜಯಕರ್ನಾಟಕ', ಧಾರವಾಡ ; 'ಜಯಂತಿ', ಧಾರವಾಡ ; 'ಮಕ್ಕಳ ಪುಸ್ತಕ', ಬೆಂಗಳೂರು ; 'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು ; 'ವಿದ್ಯಾದಾಯಿನಿ', ಮೈಸೂರು ; 'ವಿವೇಕಾಭ್ಯುದಯ', ಮೈಸೂರು ; 'ಶರಣಸಾಹಿತ್ಯ', ಬೆಂಗಳೂರು ; 'ಶಿವಾನುಭವ', ಬಿಜಾಪುರ ; 'ಸರಸ್ವತಿ', ಬೆಂಗಳೂರು ; 'ಸುಬೋಧ', ಬೆಂಗಳೂರು ; 'ಜೀವನ', ಬೆಂಗಳೂರು ; 'ಕಥಾವಳಿ', ಬೆಂಗಳೂರು ; 'ಪುಸ್ತಕ ಪ್ರಪಂಚ', ಮೈಸೂರು ; 'ಕನ್ನಡ ನುಡಿ' ಬೆಂಗಳೂರು.

ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು.

ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ', ಧಾರವಾಡ ; 'ಮಿಂಚಿನಬಳ್ಳಿ' ಧಾರವಾಡ.

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟಣೆಗಳು

೧. **ನಾಗಾನಂದ ನಾಟಕ**—ಅನಂತನಾರಾಯಣ ಶಾಸ್ತ್ರಿ; ಬೆಲೆ: ರೂ. ೧-೦-೦.

೨. **ಕರ್ಣಾಟಕ ಮೃಚ್ಛಕಟಿಕ ಪ್ರಕರಣಂ**—ಆಸ್ಥಾನ ಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ; ರೂ. ೧-೧೨-೦.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಕೆಲವು ಪ್ರಕಟಣೆಗಳು

೧. **ಲಿಯೊನಾರ್ಡ್ಡಾ**—ಎಸ್. ಜಿ. ಶಾಸ್ತ್ರೀ .... ರೂ. ೧-೫೦
(ಬ್‌ಯೋರನ್‌ಸನ್ ಬರೆದ ನಾಲ್ಕಂಕದ ನಾಟಕ)

೨. **ಸಂಸಕವಿ**—ಹಲವು ಲೇಖಕರು .... ರೂ. ೩-೭೫
('ವಿಗಡವಿಕ್ರಮರಾಯ' ಬರೆದ ಕವಿಯ ಕಾವ್ಯಜೀವನ)

೩. **ಧರ್ಮಪದ ಪ್ರವೇಶಿಕಾ**—ಜಿ. ಪಿ. ರಾಜರತ್ನಂ .... ರೂ. ೧-೦೦
(ಬುದ್ಧವಚನ, ಬಸವವಚನಗಳ ಹೋಲಿಕೆಗಳು)

೪. **ನಮ್ಮ ಬೇಂದ್ರೆಯವರು**—ವಿದ್ಯಾರ್ಥಿಗಳಿಂದ .... ರೂ. ೧-೨೫
(ಬೇಂದ್ರೆಯವರ ಕವನಗಳ ವಿಮರ್ಶೆ)

೫. **ಹೂವಿನ ಪೂಜೆ**—ವಿದ್ಯಾರ್ಥಿಗಳಿಂದ .... ರೂ. ೧-೨೫
(ಬುದ್ಧನಿಗೆ ಅರ್ಪಿಸಿದ ಬರಹಗಳು)

೬. **ಶ್ರೀ ರಾಮಚಂದ್ರ ಪ್ರಭು**—(ಜ್ಞಾಪಕರೂಪ) .... ರೂ. ೧-೫೦
(ಡಿ.ವಿ.ಜಿ. ಅವರ 'ಶ್ರೀರಾಮಪರೀಕ್ಷಣ'ದ ಸುಲಭರೂಪ)

೭. **ಬಿದನೂರಿನ ರಾಣಿ ವೀರಮ್ಮಾಜಿ**—(ಜ್ಞಾಪಕರೂಪ) .... ರೂ. ೧-೨೫

೮. **ಹೆಜ್ಜೆಪಾಡು** (ಕವನಗಳು)—ವಿ. ಸೀ. .... ರೂ. ೧-೭೫

೯. **ದೀಪಗಳು** (ಕವನಗಳು)—ವಿ. ಸೀ. .... ರೂ. ೧-೨೫

೧೦. **ಅಭಿಜ್ಞಾನ ಶಾಕುಂತಲ ನಾಟಕ**—ವಿ. ಸೀ. .... ರೂ. ೨-೫೦
(ವಿಮರ್ಶಾತ್ಮಕ ಪರಿಚಯ)

ಅಚ್ಚಿನಲ್ಲಿ

೧೧. **ಗಿಳಿವಿಂಡು** (ಕವನಗಳು)—ಎಂ. ಗೋವಿಂದ ಪೈ

೧೨. **ಸೊಹ್ರಾಬ್-ರುಸ್ತುಂ** (ನಾಟಕ)—ವಿ. ಸೀ.

೧೩. **ಪಂಚಕಲಶ ಗೋಪುರ** (ಚಿತ್ರಗಳು)—ಬಿ. ಜಿ. ಎಲ್. ಸ್ವಾಮಿ

ಸಂಪಾದಕರು: ಎಸ್. ನಾರಾಯಣಶೆಟ್ಟಿ, ಎಂ.ಎ.; ಜಿ. ವರದರಾಜರಾವ್, ಎಂ.ಎ.
ಪ್ರಕಾಶಕರು: ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ.
ಡೈರೆಕ್ಟರ್, 'ಪ್ರಸಾರಾಂಗ', ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು